ಸಂಪುಟ : ೨೪
ಸಂಚಿಕೆ : ೪

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ

ಮೇ, ೧೯೯೨

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ.

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೨೪ ಸಂಚಿಕೆ : ೪

ಗೌರವ ಸಂಪಾದಕರು :

ಡಾ. ಎಸ್. ರಾಮೇಗೌಡ

ಕುಲಪತಿಗಳು

ಸಂಪಾದಕರು :

ಡಾ. ವೀರಣ್ಣ ರಾಜೂರ–ಡಾ. ಬಿ. ಆರ್. ಹಿರೇಮಠ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೪ ಸಂಚಿಕೆ : ೪

ಮೇ, ೧೯೯೨

ಅಕ್ಷಯ ತೃತೀಯಾ ಸಂಚಿಕೆ

ಪ್ರಕಾಶಕರು :

ಶ್ರೀ ಸದಾನಂದ ಕನವಳ್ಳಿ
ನಿರ್ದೇಶಕರು, ಪ್ರಸಾರಾಂಗ, ಕ. ವಿ. ವಿ., ಧಾರವಾಡ

ಮುದ್ರಕರು :

ವಿಶಾಲ ಪ್ರಿಂಟ್ಸ
ಮಹೇಂದ್ರಕರ ಸರ್ಕಲ್, ಗದಗ

ಪರಿವಿಡಿ

●●

ಎಜ್ರಾ ಪೌಂಡ್ ಅವರ ಎರಡು ಕವಿತೆಗಳು

ಅನುವಾದ : ಬಿ. ಬಿ. ಹಿಂಗಮಿರೆ

ದುಃಖಾಂಜಲಿ

೧

ನಾ ಸತ್ತರೆ ಸುಖಪಡಬಹುದು ಥಿಯೊಡೊರಸ್,
ಹಾಗೆ ಯಾರಾದರೂ ಸುಖಪಡಬಹುದು ಸತ್ತರೆ ಥಿಯೊಡೊರಸ್
ಹೇಳುವರು ಪ್ರತಿಯೊಬ್ಬರೂ ಮೃತ್ಯು ಕೆಟ್ಟದ್ದೆಂದು.

೨

ಸೈಪ್ರಿಯನ್‌ಗೆ ಸಂಬಂಧಿಸಿದ್ದು ಈ ಸ್ಥಳ ಯಾಕೆಂದರೆ
ಇಲ್ಲಿಂದ ದೃಷ್ಟಿಸುವಳಾಕೆ ಹೊಳೆ ಹೊಳೆವ ಸಮುದ್ರವನ್ನು,
ಆದ್ದರಿಂದ ಸಂತೋಷಿಸುವರು ನಾವಿಕರು; ಕಿರಿದಾಗುವವು
ಸಮುದ್ರದಲೆಗಳು ದೃಷ್ಟಿಸುತ ಅವಳ ಪ್ರತಿಮೆಯನ್ನು.

೩

ದುಃಖದಾಯಕ ಮತ್ತು ಕೆಟ್ಟದ್ದು ಆಹ್ವಾನಿಸುವದು ಮೃತ್ಯುವನ್ನು
ಇದ್ದೆ ಇರುವದು ಸತ್ತವರಿಗೆ ಅಂತ್ಯಯಾತ್ರೆಯ ವ್ಯರ್ಥ ಖರ್ಚಿನ ಬಾಬು,
ಆದ್ದರಿಂದ ನಿಲ್ಲಿಸಬೇಕು. ನಾವು ಸತ್ತವರಿಗೆ ಕರುಣೆತೋರುವದನ್ನು,
ಯಾಕೆಂದರೆ ಯಾವ ವಿನಾಶವೂ ಬರಲಾರದು ಮೃತ್ಯುವಿನ ತರುವಾಯ.

೪

ಓ ನಗರವೆ ಎಲ್ಲಿ ನಿನ್ನ ಲಾಭ ಹಾಗೂ ಬೆಲೆಯುಳ್ಳ ಗದ್ದುಗೆಗಳು;
ಸುಗಂಧದ್ರವ್ಯ ಲೇಪಿಸಿಕೊಂಡು ಅಲೆಯುತ್ತಿದ್ದ ಕರಡಿಕೆಗಳು;
ನಿನ್ನ ಬೀದಿ ಮೇಲೆ ನಡೆದ ನೀಳ ಮಹಿಳೆಯರೆಲ್ಲ ಎಲ್ಲಿ ?
ನಿನ್ನ ಮನೆಯಲ್ಲಿ ಹುಟ್ಟಿ ಬೆಳೆದ ಕಲಾಕೃತಿಗಳೆಲ್ಲಿ ?
ಹಲ್ಲ ಮಸೆಯುತ್ತಿದೆ ಕಾಲ. ಯುದ್ಧಗಳು, ಅದೃಷ್ಟ
ದ್ವೇಷಾಸೂಯೆ ನುಂಗಿದೆ ಎಲ್ಲವನ್ನೂ.
ಇದು ನಿನ್ನ ದುಃಖದ ಕತೆ.

೫

ಹೆಂಗಸು ? ಓ, ಅವಳು ರೋಷದ ಬೆಂಕಿ
ಸತ್ತಿರಲಿ ಅಥವಾ ನಿದ್ರಿಸಿರಲಿ ಕೊಡುವಳಾನಂದವನು.
ಅವಳನೊಯ್ಯು, ಎರಡು ವೈಭವದ ಋತುಗಳಿವೆ ಅವಳಿಗೆ,

೬

ಫಿದೋನ್, ಕರಗಲಿಲ್ಲ ನನ್ನೊಂದಿಗೆ, ಸ್ಪರ್ಶಿಸಲಿಲ್ಲ ನನ್ನನ್ನು,
ನೆನಪಿಸಿದೆ ಜ್ವರಬಾಧೆಯ ಔಷಧಿಯನ್ನು ಮತ್ತೆ ಸತ್ತೆ.

ನೋಡುವ ಕಣ್ಣು

ನೋಡುತ್ತಿರುತ್ತವೆ ಕುತೂಹಲದಿಂದ ಕುನ್ನಿಗಳು ದೊಡ್ಡ ನಾಯಿಗಳನ್ನು,
ದೃಷ್ಟಿಸುತ್ತವೆ ಬೇಕಾದ ಬೇಡಾದ ಮಗ್ಗುಲಗಳನ್ನು
ಆಘ್ರಾಣಿಸುತ್ತವೆ ವಿಚಿತ್ರವಾಗಿ ಮೂಗಿಗೆ ಬಡಿವ ವಾಸನೆಯನ್ನು,
ಇಲ್ಲಿದೆ ಯಥಾಪ್ರಕಾರ ಹಿರಿಯ ಗಂಡುನಾಯಿಗಳ ಗುಂಪೊಂದು,
ತಿಳಿಯಲೆತ್ನಿಸುತ್ತವೆ ಕುನ್ನಿಗಳು ದೊಡ್ಡನಾಯಿಗಳ ಮನಸ್ಸನ್ನು,
ದೃಷ್ಟಿಸುತ್ತವೆ ಬೇರ್ಪಡಿಸಲಾಗದ ಸಹಸಂಬಂಧಗಳ ಕುರಿತು.
ಹೇಳುತ್ತಾನೆ ತ್ಸಿನ್-ತ್ಸು :
ಕುನ್ನಿಗಳು ಮತ್ತು ತರುಣನಾಯಿಗಳಲ್ಲಿ ಮಾತ್ರ
ಕಾಣುತ್ತೇವೆ ನಾವು ಸೂಕ್ಷ್ಮದೃಷ್ಟಿಯನ್ನು.

* *

ಭಾಗವತ ಕವಿಗಳ ವಚನಾಭ್ಯಾಸ

-ಜಿ.ಎ. ಶಿವಲಿಂಗಯ್ಯ

'ಕವಿಯೇ ಸರ್ವರೊಳುತ್ತಮಂ' ಎಂದು ಪುಲಿಗೆರೆಯ ಸೋಮನು ತನ್ನ ಸೋಮೇಶ್ವರ ಶತಕದಲ್ಲಿ ನಿರ್ಣಯಾತ್ಮಕವಾಗಿ ತಿಳಿಸಿದ್ದಾನೆ. ಪ್ರಸಿದ್ಧ ಕವಿಗಳಿಗಂತೂ ಈ ಮಾತು ಸಂಪೂರ್ಣಸತ್ಯವಾಗಿ ಅನ್ವಯಿಸೇ ತೀರುತ್ತದೆ. ಪ್ರಸಿದ್ಧ ಕವಿಗಳು ಸರ್ವಧರ್ಮ ಸಮನ್ವಯಿಗಳು. ಸಮಸ್ತ ಧರ್ಮವನ್ನು ಮುಕ್ತಮನಸ್ಸಿನಿಂದ ನೋಡುತ್ತಾರೆ. ಅವುಗಳಲ್ಲಿ ಶ್ರೇಷ್ಠವಾದವುಗಳನ್ನು ಸ್ವೀಕರಿಸುತ್ತಾರೆ. ನಂತರ ತಮ್ಮ ಕಲಾವಾಣಿಯಲ್ಲಿ ಅವುಗಳನ್ನು ಮರುಹುಟ್ಟುಗೊಳಿಸುತ್ತಾರೆ. ಹೀಗೆ ಮಾಡುವುದರಿಂದ ಅವರ ಕೃತಿಗಳು ಅಮರವಾಗುವುದರಲ್ಲಿ ಸಂಶಯವಿಲ್ಲ. ಜನಪ್ರಿಯವಾಗುವುದರಲ್ಲಿ ಅನುಮಾನವಿಲ್ಲ. ಇದು ಕವಿಧರ್ಮವೂ ಅಹುದು, ಸಾಹಿತ್ಯದ ಮರ್ಮವೂ ಅಹುದು.

ಪ್ರಸಿದ್ಧ ಕವಿಗಳಾದ ಕುಮಾರವ್ಯಾಸ ಮತ್ತು ಕನಕದಾಸರು ತಮ್ಮ ಕಾಲಕ್ಕೆ ಹಿಂದೆ ರಚಿತವಾಗಿದ್ದ ಎಲ್ಲ ಧರ್ಮದ ಸಾರವನ್ನು ಅರಿತವರಾಗಿರಲೇಬೇಕು. ಶಿವಶರಣರ ವಚನಗಳನ್ನಂತೂ ಶ್ರದ್ಧಾಪೂರ್ವಕವಾಗಿ ಅಧ್ಯಯನಮಾಡಿರಬಹುದೆಂದು ನಮಗೆ ಅನ್ನಿಸುತ್ತದೆ. ಈ ಬಗ್ಗೆ ಅವರ ಕಾವ್ಯಗಳಾದ ಕರ್ಣಾಟಕ ಭಾರತ ಕಥಾಮಂಜರಿ ಮತ್ತು ಮೋಹನ ತರಂಗಿಣಿಯಿಂದ ನಮ್ಮ ಅಭಿಪ್ರಾಯವನ್ನು ಖಚಿತಪಡಿಸುತ್ತೇವೆ.

ಗದುಗಿನ ಭಾರತದ ಆದಿಪರ್ವದಲ್ಲಿನ ಆರನೇ ಸಂಧಿಯ ೩೩ನೇ ಪದ್ಯವನ್ನು ಗಮನಿಸೋಣ. ಇದರ ಸಂದರ್ಭ ಇಂತಿದೆ: ಕಡುದಾರಿದ್ರ್ಯಕ್ಕೆ ಪಕ್ಕಾದ ದ್ರೋಣಾಚಾರ್ಯರು, ತಮ್ಮ ಬಾಲ್ಯಕಾಲದಲ್ಲಿ ಒಡನೋದಿದ, ಒಡನಾಡಿದ ಅರಸುಕುವರನಾದ ದ್ರುಪದನನ್ನು ನೆನೆದುಕೊಂಡು, ಅವನಿಂದ ತಮ್ಮ ಬಡತನವನ್ನು ನೀಗಿಕೊಳ್ಳಲು ಇಲ್ಲವೆ ತಾತ್ಕಾಲಿಕ ಸಹಾಯವನ್ನಾದರೂ ಪಡೆಯಲೋಸುಗ ದ್ರುಪದನ ಬಳಿಗೆ ಬಂದು, ಬಾಲ್ಯದ ಗೆಳೆಯನಾದ ದ್ರೋಣನೆಂಬುವರು ಬಂದಿದ್ದಾರೆಂದು ದ್ರುಪದಮಹಾರಾಜನಿಗೆ ತಿಳಿಸುವಂತೆ ರಾಜಭಟರಿಗೆ ಹೇಳಿಕಳುಹಿಸುತ್ತಾರೆ. ರಾಜ್ಯಮದದಿಂದ ಕೊಬ್ಬಿದ ದ್ರುಪದ ಮಹಾರಾಜನು "ದ್ರೋಣನೆಂಬುವನು ಯಾರೋ ಗೊತ್ತಿಲ್ಲ" ಎಂದು ಪ್ರತ್ಯುತ್ತರವಾಗಿ ಹೇಳಿಕಳುಹಿಸುತ್ತಾನೆ. ಈ ಮಾತನ್ನು ಕೇಳಿ ಕೋಪಗೊಂಡ ದ್ರೋಣನು ಕಾವಲಿನಲ್ಲಿದ್ದ ದ್ವಾರಪಾಲಕರೇ ಮೊದಲಾದ ಭಟರನ್ನು ಲೆಕ್ಕಿಸದೆ ದ್ರುಪದನಿದ್ದ ಸಭಾಭವನಕ್ಕೆ ನುಗ್ಗಿ ಈ ಮಾತುಗಳನ್ನಾಡುತ್ತಾನೆ :

ಏನೆಲವೊ ಪಾಂಚಾಲ ಚಿಕ್ಕಂ
ದಾನು ನೀನೊಂದಾಗಿ ತಂದೆಯೊ
ಳೇನನರಿದೆವು ಮರದು ಕಳೆದಾ ಹಾ ಮಹಾದೇವಾ |
ಏನು ಬಂದಿರಿಯೆಂಬ ಗುಣವಚ
ನಾನುರಾಗವು ಸಾಲದೇ ಧನ
ವೇನುಫಲ ಕಕ್ಕುಲಿತೆಯೆಮಗಿಲ್ಲ.............. ||

ಚಿಕ್ಕಂದಿನಲ್ಲಿ ನಾನು ನೀನು ಒಂದುಗೂಡಿ ಗುರುಗಳಾದ ಅಗ್ನಿವೇಶರ ಬಳಿಯಲ್ಲಿ ಕಲಿತ ವಿದ್ಯವನ್ನು ಮರೆತುಬಿಟ್ಟೆಯಾ. ಅಯ್ಯೋ ದೇವರೇ, ಹೀಗೂ ಉಂಟೇ, ಮರೆಯ ಬಹುದೇ ? ಹೋಗಲಿ, ವಿದ್ಯಾವಂತನಾದ ಮೇಲೆ ಯಾರಾದರೂ ಬಳಿಗೆ ಬಂದಾಗ ಏನು ಬಂದಿರಿ, ಆರೋಗ್ಯವೇ ಎಂದು ಕೇಳಬೇಕೆಂಬ ಆರ್ಯೋಕ್ತಿಯ ಮೇಲಿನ ವಿಶ್ವಾಸವೂ ನಿನಗೆ ಇಲ್ಲವಾಯಿತೇ. ಐಶ್ವರ್ಯವಿದ್ದರೇನು ಸಾರ್ಥಕವಾಯಿತು, ಸದ್ಗುಣ ವಿಲ್ಲದಿದ್ದಲ್ಲಿ. ನೀನು ಚನ್ನಾಗಿ ಬದುಕುತ್ತಿರುವುದನ್ನು ನೋಡಿ ನಮಗೆ ಸಂಕಟವಾಗಲೀ, ತಳಮಳವಾಗಲೀ,ಅಸೂಯೆಯಾಗಲೀ ಇಲ್ಲ ಎಂಬುದಾಗಿ ಹೇಳುತ್ತಾನೆ.

ಈ ಮೇಲಿನ ಪದ್ಯದ ಉತ್ತರಾರ್ಧದಲ್ಲಿ :

"ಏನು ಬಂದಿರಿಯೆಂಬ ಗುಣವಚನಾನುರಾಗವು..........."

ಎಂಬ ಪ್ರಾರಂಭವೇ ಅದ್ಭುತವಾಗಿದೆ. ಇದರಲ್ಲಿನ ಏನು ಬಂದಿರಿ ವಚನಾನುರಾಗ ಎಂಬ ಪದಗಳು ಅತಿಮುಖ್ಯವಾದವುಗಳಾಗಿವೆ. 'ಏನುಬಂದಿರಿ' ಎಂಬ ಮಾತೇ ಸಾಕು, ಬಸವಣ್ಣನವರ

ಏನುಬಂದಿರಿ ಹದುಳವಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿಹೋಹುದೆ ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೆ ?
ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದರೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ
ಕೂಡಲಸಂಗಮ ದೇವರು

(ಬಸವಣ್ಣನವರ ವಚನಗಳು ವ.ಸಂ. ೨೪೧ ಕರ್ನಾಟಕ ವಿಶ್ವವಿದ್ಯಾಲಯ ೧೯೬೮) ಎಂಬ ವಚನವು ಈ ಸಂದರ್ಭದಲ್ಲಿ ನೆನಪಿಗೆ ಬರಬೇಕಾದದ್ದು ಸಹಜ. ಅಷ್ಟೇ ಅಲ್ಲ, ಈ ವಚನದ ಅರ್ಥ, ಭಾವಗಳು ದ್ರುಪದನಿಗೆ ಎಷ್ಟು ಚನ್ನಾಗಿ ಸಮೀಕರಣಗೊಂಡಿವೆ ಎಂಬುದಂತೂ ನಿಚ್ಚಳವಾಗಿದೆ. ಈ ವಚನದಲ್ಲಿ ಬಂದಿರುವ ಆರಂಭದ ಏನುಬಂದಿರಿ ಎಂಬುದೂ, ವಚನದ ಉತ್ತರಾರ್ಧದಲ್ಲಿ ಬರುವ ಗುಣ ಈ ಎರಡು ಮಾತುಗಳನ್ನು

ಕುಮಾರವ್ಯಾಸನು ಉದ್ದೇಶ್ಯವಾಗಿಯೇ ಬಳಸಿಕೊಂಡಿದ್ದಾನೆ. ಇದನ್ನು ಕವಿಯು ಆಕಸ್ಮಿಕವಾಗಿ ತಂದಿದ್ದಾನೆ ಎಂದರೆ ಅದು ಉಚಿತವಾಗಲಾರದು. ಈ ವಚನವು ಗುಣಭರಿತವಾಗಿದೆಯೆಂದೇ ಮನಸ್ಸಿನಲ್ಲಿ ಇಟ್ಟುಕೊಂಡು ಕುಮಾರವ್ಯಾಸನು "ಏನು ಬಂದಿರಿ" (ಎಂಬ) ಗುಣಭರಿತವಾದ ಬಸವಣ್ಣನವರ ವಚನವನ್ನೇ ಕುರಿತು ತನ್ನ ಅಭಿಮಾನವನ್ನು ವ್ಯಕ್ತಪಡಿಸಿದ್ದಾನೆ. 'ವಚನ' ಎಂಬ ಶಬ್ದವೂ ಬಸವಣ್ಣನವರ ವಚನವನ್ನೇ ಕುರಿತದ್ದು ಎಂದು ಬೇರೆ ಹೇಳಬೇಕಿಲ್ಲ. ಅಷ್ಟೈಶ್ವರ್ಯಮದದಿಂದ ಕೂಡಿದ ದೃಪದನೇ ಆಗಲಿ ಅಥವಾ ಯಾರೇ ಆಗಿರಲಿ ಅಂತಹವರು "ಏನು ಬಂದಿರಿ...." ಎಂಬ ವಚನವನ್ನು (ಆರ್ಯೋಕ್ತಿಯನ್ನು) ನೋಡಿ ತಿಳಿದು ಗುಣವಚನಿಗಳಾಗಬೇಕು. ಇಲ್ಲದಿದ್ದರೆ ಮನುಷ್ಯನಾಗಿ ಏನು ಸಾರ್ಥಕ ಎಂಬ ಭಾವನೆಯಿಂದಲೇ ಈ ಪದ್ಯರಚಿತ ವಾಗಿದೆಯೆಂದೇ ಹೇಳಬೇಕು. ಮಾನವ ಧರ್ಮದ ತಿರುಳು ಎಂತಹುದು ಎಂಬುದನ್ನು ಕುಮಾರವ್ಯಾಸನು ಎಷ್ಟು ಸೂಕ್ಷ್ಮವಾಗಿ ತಿಳಿಸಿದ್ದಾನೆ ಎಂಬುದು ಇಲ್ಲಿ ಗಮನಾರ್ಹ ವಾಗಿದೆ.

ಕನಕದಾಸರು ಕೀರ್ತನಕಾರರೂ ಅಹುದು, ಕವಿಗಳೂ ಅಹುದು. ಕೀರ್ತನ ಕಾರರಾಗಿ ಹರಿಭಕ್ತಿ ಸುಧೆಯನ್ನು ಕನ್ನಡನಾಡಿನ ಉದ್ದಗಲಕ್ಕೂ ಹರಿಯ ಬಿಟ್ಟಿ ದ್ದಾರೆ. ಸಾವಿರಾರು ಕೀರ್ತನೆಗಳನ್ನು ರಚಿಸಿ ದಾಸಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನಿತ್ತಿದ್ದಾರೆ. ಕವಿಗಳಾಗಿ ಹರಿಭಕ್ತಿಸಾರ, ನಳಚರಿತ್ರೆ, ರಾಮಧಾನ್ಯ ಚರಿತೆ ಮತ್ತು ಮೋಹನತರಂಗಿಣಿಗಳೆಂಬ ಕಾವ್ಯಗಳನ್ನು ಬರೆದು ಕನ್ನಡ ಸಾಹಿತ್ಯ ಲೋಕದಲ್ಲಿ ಕೀರ್ತಿವಂತರಾಗಿದ್ದಾರೆ. ಇವರ 'ಮೋಹನತರಂಗಿಣಿ' ಕೃತಿಯು ರಸಭರಿತವಾಗಿದೆ.

ಶಿವನ ಉರಿಗಣ್ಣಿನಿಂದ ಬೆಂದ ಮನ್ಮಥನು ಶ್ರೀಕೃಷ್ಣನ ಪ್ರಿಯೆ ರುಕ್ಮಿಣಿಯ ಬಸುರಿನಲ್ಲಿ ಪ್ರದ್ಯುಮ್ನನೆಂಬ ಹೆಸರಿನಿಂದ ಹುಟ್ಟಿದನು. ಶಂಬರಾಸುರನನ್ನು ಕೊಂದು ರತಿಯೊಡಗೂಡಿ ದ್ವಾರಕೆಗೆ ಮನ್ಮಥನು ಬಂದನು. ಶ್ರೀಕೃಷ್ಣನು ಅವರೀರ್ವರಿಗೂ ವಿವಾಹವನ್ನು ಮಾಡಿ ಸಂಭ್ರಮದಿಂದ ಮನೆದುಂಬಿಸಿಕೊಳ್ಳುತ್ತಾನೆ. ಈ ಸಂದರ್ಭ ದಲ್ಲಿ ಮನ್ಮಥನು ಆಸನಾರೂಢನಾಗಿರಲು ಹೇಮದಂಡಾನ್ವಿತೆಯರಾದ ಕೋಮಲಾಂಗಿ ಯರು ಶಂಬರಾರಿಯನ್ನು ಈ ರೀತಿಯಾಗಿ ಹೊಗಳುತ್ತಾರೆ. ಆ ಹೊಗಳಿಕೆಯಲ್ಲಿನ ಒಂದು ಸಾಂಗತ್ಯ ಈ ರೀತಿ ಇದೆ:

ನಾಡೊಳು ಹನುಮಂತ ಶುಕ ಸಿದ್ಧರಾಮರ
ಕೋಡಗ ಮರುಳ್ಗಳೆಂದುಬಿಡು
ಗೂಢ ನಿರ್ಜರ ನರೋರಗರ ಭಂಗಿಸುತಿರ್ಪ
ಗಾಡಿಕಾರನ ಹೊಗಳಿದರು (ಸಂಧಿ. ೧೬ ಪದ್ಯ ೭)

ಈ ಪದ್ಯದಲ್ಲಿ ಬರುವ ಗಾಡಿಕಾರ ಶ್ರೀಕೃಷ್ಣನ ಪುತ್ರನಾದ ಪ್ರದ್ಯುಮ್ನ ಅಥವಾ ಮನ್ಮಥ. ಮನ್ಮಥನ ಪ್ರಭಾವ ಎಷ್ಟರ ಮಟ್ಟಿನದೆಂದು ಹೇಳಬೇಕಿಲ್ಲ. ಅವನ ಪುಷ್ಪ ಬಾಣದ ಏಟಿಗೆ ಸಿಕ್ಕದವರು ಮೂರೂ ಲೋಕದಲಿಲ್ಲ. ಜಗತ್ತಿನಲ್ಲಿ ಮೂವರು ಮಾತ್ರ (ಬ್ರಹ್ಮಚಾರಿ) ಮದುವೆಯಾಗದವರಿದ್ದಾರೆ. ಅವರಲ್ಲಿ ಹನುಮಂತ ರಾಮಾಯಣದ ಕಾಲದವನು. ಇವನೊಬ್ಬ ಕೋತಿ. ಶುಕಮಹರ್ಷಿಗಳು ವ್ಯಾಸಮುನಿಗಳ ಪುತ್ರರು. ಸಿದ್ಧರಾಮ,ಈತನೊಬ್ಬ ಶಿವಶರಣ ೧೨ ನೇ ಶತಮಾನದವನು. ಒಬ್ಬ ವಚನಕಾರನೂ ಆಗಿದ್ದಾನೆ. ಶುಕಮಹರ್ಷಿ ಮತ್ತು ಸಿದ್ಧರಾಮರನ್ನು ಹುಚ್ಚರೆಂದೂ, ಹನುಮಂತ ನನ್ನು ಕೋತಿಯೆಂದೂ ಇವರ ಗೊಡವೆಗೆ ಮನ್ಮಥನು ಹೋಗಲಿಲ್ಲವಂತೆ. ಇನ್ನುಳಿದವ ರೆಲ್ಲರಿಗೂ ತನ್ನ ಪುಷ್ಪ ಬಾಣದ ಬಿಸಿಯನ್ನು ಮುಟ್ಟಿಸಿದ್ದಾನೆ, ಸೋಲಿಸಿದ್ದಾನೆ ಎಂದು ಸಭೆಯಲ್ಲಿ ಲಲನೆಯರು ಹೊಗಳುತ್ತಿದ್ದರು.

ಮೇಲುನೋಟಕ್ಕೆ ಈ ಪದ್ಯದಲ್ಲಿ ಮನ್ಮಥನ ಹೊಗಳಿಕೆಯಿದ್ದರೂ ಹನುಮಂತ, ಶುಕಮಹರ್ಷಿ, ಸಿದ್ಧರಾಮರ ಬ್ರಹ್ಮಚರ್ಯದ ಬಗೆಗೆ ಧ್ವನಿಯಲ್ಲಿ ಗೌರವವಿದೆ. ಹನುಮಂತ ಮತ್ತು ಶುಕಮಹರ್ಷಿಗಳು ಪುರಾಣ ವ್ಯಕ್ತಿಗಳು ಹಾಗೂ ಮಹಿಮಾನ್ವಿತರು. ಅವರಿಗೆ ಸರಿಸಮಾನನಾಗಿ ಶಿವಶರಣ ಸಿದ್ಧರಾಮನು ಬ್ರಹ್ಮಚಾರಿಯೂ ಮಹಿಮಾನ್ವಿತನೂ ಆಗಿದ್ದನೆಂಬುದು ಪ್ರಸಿದ್ಧವಾದ ವಿಷಯವಾಗಿತ್ತು. ಆದ್ದರಿಂದಲೇ ಸಿದ್ಧರಾಮನ ಬಗೆಗೆ ಪ್ರತಿಯೊಬ್ಬ ಶರಣರೂ ಭಕ್ತಿಯನ್ನು ತೋರುತ್ತಿದ್ದರು. ಸಿದ್ಧ ರಾಮಯ್ಯಗಳ ಬ್ರಹ್ಮಚರ್ಯದ ಬಗೆಗೆ ಬಸವಣ್ಣನವರ ಒಂದು ವಚನವಿದೆ.

ದೇವರು ಕಾಮನ ಕೊಂದನೆಂಬರು, ದೇವಂಗಿಬ್ಬರು ಹೆಂಡಿರುಂಟು.
ದೇವರು ಕಾಮನ ಕೊಂದುದಿಲ್ಲ ಕಾಣಿಭೋ.
ಕಾಮ ವೈರಿಗಳು, ಕಾಮನ ಕೊಂದ ಮೂವರಿತ್ತಲೈದಾರೆ.
ಕೂಡಲ ಸಂಗಯ್ಯನಲ್ಲಿ ಶುಕನು, ಸೊನ್ನಲಿಗೆಯ ಸಿದ್ಧರಾಮಯ್ಯನು, ಹನುಮಂತನು.
(ಬಸವಣ್ಣನವರ ವಚನಗಳು ವಚನ ಸಂಖ್ಯೆ ೧೨೮೮
ಕರ್ನಾಟಕ ವಿಶ್ವವಿದ್ಯಾಲಯ ೧೯೬೮)

ಈ ವಚನದಲ್ಲಿ, ಶುಕಮಹರ್ಷಿಗಳು, ಹನುಮಂತ ಮತ್ತು ಸಿದ್ಧರಾಮ ಇವರು ಜಗವರಿಯೆ ಬ್ರಹ್ಮಚಾರಿಗಳು. ಸಿದ್ಧರಾಮಯ್ಯಗಳು ಶುಕಮಹರ್ಷಿಯಷ್ಟೇ,ಹನುಮಂತ ನಷ್ಟೇ ನೈಷ್ಠಿಕ ಬ್ರಹ್ಮಚಾರಿ ಎಂದು ಬಸವಣ್ಣನವರು ಸಿದ್ಧರಾಮನ ಬಗೆಗೆ ತಮ್ಮ ಗೌರವವನ್ನು ವ್ಯಕ್ತಪಡಿಸಿದ್ದಾರೆ.

ಬಸವಣ್ಣನವರ ಈ ಒಂದು ವಚನ, ಕವಿಗಳಾದ ಕನಕದಾಸರ ಮೋಹನ ತರಂಗಿಣಿಯಲ್ಲಿ ಯಾವ ರೀತಿಯಲ್ಲಿ ಸಾಂಗತ್ಯಕ್ಕೆ ಒಳಪಟ್ಟಿದೆ ಎಂಬುದು ಮೆಚ್ಚುವ

ವಿಷಯವಾಗಿದೆ. ಶಿವಶರಣ ಸಿದ್ಧರಾಮನ ಘನತೆಗೆ ಕಿಂಚಿತ್ತೂ ಊನವಾಗದಂತೆ ಈ ಸಾಂಗತ್ಯ ರಚಿತವಾಗಿದೆ. ಎಂದರೆ ಸಿದ್ಧರಾಮನ ಬಗೆಗೆ, ಶಿವಶರಣರ ಬಗೆಗೆ ಕನಕ ದಾಸರಲ್ಲಿ ಎಂತಹ ಅಭಿಮಾನ, ವಿಶ್ವಾಸ, ಪೂಜ್ಯತೆಯಿತ್ತು ಎಂಬುದಕ್ಕೆ ಈ ಮೇಲಿನ ಸಾಂಗತ್ಯ ಜೀವಂತ ನಿದರ್ಶನವಾಗಿದೆ.

ಭಾಗವತ ಪಂಥದವರಿಗೆ ವಿಷ್ಣುವೇ ಆರಾಧ್ಯದೈವವಾದರೂ ಶಿವನೊಡನೆ ಭಿನ್ನಭಾವವಿರಲಿಲ್ಲ. ಅದರಂತೆ ಭಾಗವತ ಪಂಥದ ಕವಿಗಳಿಗೆ ಹರಭಕ್ತರಿಗೂ ಹರಿ ಭಕ್ತರಿಗೂ ಭೇದವಿರಲಿಲ್ಲವೆಂಬುದು ಈ ಮೇಲಿನ ಅಂಶಗಳಿಂದ ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಭಾಗವತ ಕವಿಗಳಾದ ಕುಮಾರವ್ಯಾಸ ಮತ್ತು ಕನಕದಾಸರು ಬಹು ದೊಡ್ಡ ಹೃದಯದವರು.ಜ್ಞಾನವು ಯಾವ ಕಡೆಯಿಂದ ಬಂದರೂ ಅದನ್ನು ಸ್ವೀಕರಿಸು ವುದು ಜಾಣನ ಲಕ್ಷಣವೆಂಬ ವೇದದ ಮಾತನ್ನು ನಂಬಿದ ದೊಡ್ಡಜೀವಿಗಳೆಂದು ಭಾವಿಸಬಹುದು. ಆದ್ದರಿಂದಲೇ ಇವರು ಶಿವಶರಣರ ವಚನಗಳನ್ನು ಅನಸೂಯರಾಗಿ ಅಧ್ಯಯನ ಮಾಡಿದ್ದಾರೆಂದು ಖಚಿತವಾಗಿ ಹೇಳಬಹುದು.

**

ಕಾರವಾರ ಜಿಲ್ಲೆಯ ಮಾಸ್ತಿಸ್ಮಾರಕಗಳು

– ಬಿ. ಎಸ್. ಶೇಠ

'ಮಾಸ್ತಿ' ಎಂಬ ಪದ 'ಮಹಾಸತಿ' ಎಂಬುದರಿಂದ ರೂಪುಗೊಂಡಿದ್ದರೂ ಅರ್ಥವ್ಯಾಪ್ತಿಯಲ್ಲಿ ಎರಡೂ ಸಮನಾಗಿಲ್ಲ. ರಾಮಾಯಣ-ಮಹಾಭಾರತದ ಸೀತೆ-ದ್ರೌಪದಿಯರನ್ನು, ಕನ್ನಡ ನಾಡಿನ ಅತ್ತಿಮಬ್ಬೆ-ಶಾಂತಲೆಯರನ್ನು "ಮಹಾಸತಿ"ಯರೆಂದು ಗುರುತಿಸುವಂತೆ" ಮಾಸ್ತಿಯರೆಂದು ಗುರುತಿಸುವಂತಿಲ್ಲ. ಗಂಡನ ಮರಣದ ನಂತರ ಸತಿ ತಾನೂ ಜೀವಂತ ಮರಣವನ್ನಪ್ಪಿದಾಗ, ಅವಳನ್ನು "ಮಾಸ್ತಿ" ಎಂದು ಗುರುತಿಸಲಾಗುತ್ತದೆ. ಮಾಸ್ತಿಯಾದವರನ್ನೆಲ್ಲ ಮಹಾಸತಿಯರೆಂದು ಕರೆಯಬಹುದಾದಂತೆ ಮಹಾಸತಿಯರನ್ನೆಲ್ಲ ಮಾಸ್ತಿಯರೆಂದು ಕರೆಯುವಂತಿಲ್ಲ.

ಕರ್ನಾಟಕದ ಕಡಲ ತೀರದ ಭಾಗವಾದ ಕಾರವಾರ ಜಿಲ್ಲೆಯಲ್ಲಿ ಮಾಸ್ತಿ ಕುರಿತಾದ ಸ್ಮಾರಕಗಳು ಪ್ರಮಾಣ ಮತ್ತು ಭಿನ್ನತೆ ದೃಷ್ಟಿಯಿಂದ ವಿಶೇಷವಾಗಿವೆ. ಮಾಸ್ತಿಕಲ್ಲು, ಮಾಸ್ತಿಗುಡಿ, ಮಾಸ್ತಿಕಟ್ಟೆ, ಮಾಸ್ತಿಕೊಂಡ, ಮಾಸ್ತಿಗದ್ದೆ, ಮಾಸ್ತಿಬ್ಯಾಣ-ಮಾಸ್ತಿಕಾನ, ಮಾಸ್ತಿಬೊಂಬೆ ಮೊದಲಾದ ಕುರುಹುಗಳಲ್ಲಿ ಮಾಸ್ತಿ ಇತಿಹಾಸ ಸಾಧ್ಯವಾದಷ್ಟು ಬಗೆಯಲ್ಲಿ ಸುರಕ್ಷಿತವಾಗಿದೆ. ಘಟನೆಗಳ ಕಾಲದ ಖಚಿತತೆಯ ಕೊರತೆ ಇವುಗಳಲ್ಲಿ ಕಂಡುಬಂದರೂ, ಸತಿ ಪದ್ಧತಿಯ ಹಲವಾರು ವಿಷಯಗಳನ್ನು ಇವು ಧ್ವನಿಸುತ್ತವೆ. ಇಂಥ ಕುರುಹುಗಳ ಸುತ್ತ ಹೆಣೆಯಲ್ಪಟ್ಟ ಕತೆ, ಐತಿಹ್ಯಗಳು ನಂಬಲನರ್ಹವಾದ ಸಂಗತಿಗಳನ್ನು ತಿಳಿಸುತ್ತಿದ್ದರೂ ಅವುಗಳಲ್ಲಿ ಅಂತರ್ಗತವಾದ ಇತಿಹಾಸದ ಸತ್ಯ ಅಮೂಲ್ಯವಾದ ದಾಖಲೆ ಎಂದೇ ಹೇಳಬೇಕು. ಕರ್ನಾಟಕದ ಮಾಸ್ತಿಕಲ್ಲುಗಳ ಶಾಸನಗಳು ವಿಸ್ತಾರವಾಗಿ ವಿಷಯ ನಿರೂಪಿಸದಿರುವ ಕೊರತೆಯನ್ನು, ಈ ಆಕರಗಳಿಂದ ತುಂಬಿಕೊಳ್ಳಬಹುದಾಗಿದೆ. ಕರ್ನಾಟಕದ ವೀರರ ಇತಿಹಾಸ ಹೆಚ್ಚಾಗಿ ವೀರಗಲ್ಲುಗಳಲ್ಲಿ ಉಳಿದುಕೊಂಡು ಬಂದಿದ್ದರೆ, ಮಹಾಸತಿಯರ ವಿಷಯ ಮಾಸ್ತಿಕಲ್ಲುಗಳಿಗಿಂತ ಹೆಚ್ಚಾಗಿ ಕನ್ನಡ ನಾಡಿನ ಜನತೆಯ ನಾಲಗೆಯ ಮೇಲೆ ಉಳಿದುಕೊಂಡು ಬಂದಿದೆ. ಅದನ್ನು ಇತಿಹಾಸ ದೃಷ್ಟಿಯಿಂದ ಕಂಡುಕೊಳ್ಳುವುದು ಈ ಲೇಖನದ ಪ್ರಯತ್ನವಾಗಿದೆ.

ಕಾರವಾರ ಜಿಲ್ಲೆಯಲ್ಲಿ ಬಹುತರವಾಗಿ ಶಾಸನಗಳುಳ್ಳ ಮಾಸ್ತಿಕಲ್ಲುಗಳು ಕಾಣಬರುವದಿಲ್ಲ. ಶಿಲ್ಪವಿಲ್ಲದ ಮಾಸ್ತಿಕಲ್ಲುಗಳು ಕೆಲವು ಮತ್ತು ಶಿಲ್ಪವುಳ್ಳ ಮಾಸ್ತಿಕಲ್ಲುಗಳು ಹಲವು ದೊರಕುತ್ತವೆ. ಹೊನ್ನಾವರ ತಾಲೂಕಿನ ಅನಿಲಗೋಡಹಳ್ಳಿಯಲ್ಲಿಯ ಮಾಳಮಾಸ್ತಿಗುತ್ತದ ಮಾಸ್ತಿಕಲ್ಲು ಮತ್ತು ಕೆಂಡದ ಮಾಸ್ತಿಗುತ್ತದ

ಮಾಸ್ತಿಕಲ್ಲು, ಕುಮಟಾ ತಾಲೂಕಿನ ಮಾಸ್ತಿಹಳ್ಳದ ಮಾಸ್ತಿಕಟ್ಟೆಯ ಮೇಲಿರುವ ಮೂರು ಮಾಸ್ತಿಕಲ್ಲುಗಳು, ಅಂಕೋಲೆಯ ನೀಲಂಕಟ್ಟಾದ ಮೇಲಿರುವ ಮಾಸ್ತಿಕಲ್ಲು ಇವುಗಳೆಲ್ಲ ಶಿಲ್ಪವಿಲ್ಲದ ಮಾಸ್ತಿಕಲ್ಲುಗಳು. ಸು.೧ ಫೂಟು ಎತ್ತರದ ಸ್ವಲ್ಪ ಚೂಪಾದ ಕಲ್ಲುಗಳ ರಚನೆಯನ್ನು ಇವು ಹೊಂದಿವೆ. ಶಿರಾಲಿಯಲ್ಲಿ ದೊರಕುವ ಮಾಸ್ತಿಕಲ್ಲುಗಳು ಶಿಲ್ಪದ ದೃಷ್ಟಿಯಿಂದ ವಿಶೇಷವಾಗಿ ಗಮನಿಸುವಂಥವುಗಳು. ಮಾಸ್ತಿಗುಡಿಯಲ್ಲಿರುವ ಜಟ್ಟಿಮಾಸ್ತಿ ಎಂದು ಕರೆಯಲ್ಪಡುವ ಮಾಸ್ತಿಕಲ್ಲಿನ ಸತಿ, ಎರಡೂ ಕೈಗಳನ್ನು ಎತ್ತಿ, ನಗುಮುಖದಿಂದ ಕುಣಿಯುವ ಭಂಗಿಯಲ್ಲಿದ್ದಾಳೆ. ಸತಿಯ ಬಲ ಭಾಗದಲ್ಲಿ ವೀರ ಬಿಲ್ಲು-ಕತ್ತಿ ಹಿಡಿದು ನಿಂತಿದ್ದಾನೆ. ಇದೇರೀತಿ, ಗುಡಿಯ ಮುಂದೆ ಬಲಭಾಗದಲ್ಲಿರುವ ಇನ್ನೊಂದು ಚಿಕ್ಕಗುಡಿಯಲ್ಲಿಯೂ ಮಾಸ್ತಿಕಲ್ಲಿನ ಶಿಲ್ಪವಿದೆ. ತಲೆಯ ಸುತ್ತಲೂ ದಂಡೆ ಹಾಕಿದ ಸತಿ ಸುಂದರವಾಗಿ ಕುಣಿಯುವ ಭಂಗಿಯಲ್ಲಿದ್ದಾಳೆ. ಈ ಶಿಲ್ಪಗಳನ್ನು ಗಮನಿಸಿದಾಗ ಸ್ತ್ರೀಯರು ಸಂತೋಷದಿಂದ ಕುಣಿಯುತ್ತ ಸತಿಯಾಗುತ್ತಿದ್ದರೆಂದು ತೋರುತ್ತದೆ.

ಕರ್ನಾಟಕದಲ್ಲಿಯೇ ಅಪರೂಪದ ಮಾಸ್ತಿಶಿಲ್ಪ ಹೊನ್ನಾವರ ಭಾಗಕ್ಕೆ ಸೇರಿದ ಮಾರುಕಟ್ಟೆಯಲ್ಲಿದೆ. ಸು. ೧ ಫೂಟು ಎತ್ತರದ ಕಲ್ಲನ್ನು ಮಾಸ್ತಿಗೊಂಬೆಯಂತೆ ಕಂಡಿರಿಸಿದ್ದನ್ನು ಕಾಣುತ್ತೇವೆ. ಒಂದೇ ಕಲ್ಲಿನಲ್ಲಿ ಹಿಂದೆ-ಮುಂದೆ ಹೊಂದಿಕೊಂಡಂತೆ ಸುಂದರವಾಗಿರುವ ಮಾಸ್ತಿಯರನ್ನು ಶಿಲ್ಪಿ ನಿರ್ಮಿಸಿದ್ದು ವಿಶೇಷವಾಗಿದೆ. ಬಲಗೈ ಟೊಂಕದ ಮೇಲ್ಭಾಗದವರೆಗೂ ಇಳಿಬಿಟ್ಟು, ಮುಂದೆ ಕೈಭಾಗ ಚಾಚಿಕೊಂಡು, ಮುಷ್ಟಿ ಕಟ್ಟಿಕೊಂಡಂತೆ ಚಿತ್ರಿಸಲಾಗಿದೆ. ಎಡಗೈಯೂ ಇಳಿಬಿಟ್ಟು ಟೊಂಕಿನೆಡೆಗೆ ಬೆರಳುಗಳು ಮುಖಮಾಡಿ ಮುಷ್ಟಿಕಟ್ಟಿದಂತಿದೆ. ತಲೆಗೂದಲು, ದಂಡೆ ಸುಂದರವಾಗಿ ಬಿಡಿಸಲಾಗಿದೆ. ಟೊಂಕದ ಕೆಳಗೆ ಲಂಗಾ ತೊಟ್ಟಂತೆ ಚಿತ್ರಿಸಲಾಗಿದೆ. ಮುಂದಿನ ಮಾಸ್ತಿ ಶಿಲ್ಪದಷ್ಟು ಅದಕ್ಕೆ ಹೊಂದಿ ಹಿಂದಿರುವ ಮಾಸ್ತಿಶಿಲ್ಪ ಸ್ಪಷ್ಟವಾಗಿಲ್ಲ. ಹಿಂದಿನ ಮಾಸ್ತಿ ಶಿಲ್ಪದ ಮುಖ, ಕೈ, ಕಾಲು ಪೂರ್ಣವಾಗಿ ಗಮನಿಸಲು ಶಕ್ಯವಾಗದಿದ್ದರೂ ಇದೊಂದು ಬೇರೆ ಸ್ತ್ರೀ ಚಿತ್ರವೆಂಬಂತೆ ಶಿಲ್ಪಿ ಚಿತ್ರಿಸಿದ್ದು, ಆತನ ವಿಶೇಷ ಕಲೆಗಾರಿಕೆಯಾಗಿದೆ. ಈ ಶಿಲ್ಪದ ಮೇಲೆ ಈ ಪ್ರದೇಶದಲ್ಲಿ ದಟ್ಟವಾಗಿ ಬೆಳೆದು ನಿಂತ ಮಾಸ್ತಿಗೊಂಬೆಗಳ ಪ್ರಭಾವವಿದೆಯೆಂಬುದನ್ನು ಮತ್ತು ಈ ಶಿಲ್ಪದ ರಚನೆ ತೀರ ಇತ್ತೀಚಿನದೆಂದು ಸರಳವಾಗಿ ಊಹಿಸಬಹುದಾಗಿದೆ. ಈ ಮಾಸ್ತಿಯನ್ನು 'ಮಾರುಕಟ್ಟೆ ಮಾಸ್ತಿ' ಎಂದೇ ಜನ ಕರೆಯುತ್ತಾರೆ.

ಬಲಗೈ ಎತ್ತಿದ, "ಎರಡೂ ಕೈ ಇಳಿಬಿಟ್ಟ", ಎರಡೂ ಕೈ ಎತ್ತಿದ ಅಥವಾ ಎರಡೂ ಕೈ ಮುಗಿದ ಸತಿಯರ ಶಿಲ್ಪಗಳು ಈ ಪ್ರದೇಶದಲ್ಲಿ ದೊರಕುತ್ತವೆ. ನಿಂಬೆಯ ಹಣ್ಣನ್ನು ಸತಿಯ ಬಲ ಅಥವಾ ಎಡಗೈಯ ಅಂಗೈಯಲ್ಲಿಯೋ ಅಥವಾ ಹೆಬ್ಬಟ್ಟು

ಮತ್ತು ನಾಲ್ಕು ಬೆರಳುಗಳ ನಡುವೆಯೋ ಅಥವಾ ಎರಡೂ ಕೈಯಲ್ಲಿಯೋ ಕಂಡರಿಸಿ ದಂತೆ ಶಿಲ್ಪಗಳಿವೆ. ನಿಂಬೆಹಣ್ಣು ಹಿಡಿಯದೆ ಇದ್ದ ಸತಿಯರ ಶಿಲ್ಪಗಳೂ ಉಂಟು.

ಜನಮನ ಗೆದ್ದಿರುವ, ಜನರಲ್ಲಿ ಪ್ರಭಾವ ಬೀರಿರುವ "ಮಾಸ್ತಿ ಗುಡಿ"ಗಳು ವಾಸ್ತುಶಿಲ್ಪ ದೃಷ್ಟಿಯಿಂದ ಯಾವ ಮಹತಿಯನ್ನೂ ಪಡೆದಿಲ್ಲ ಮಾಸ್ತಿಗುಡಿಗಳನ್ನು "ಮಾಸ್ತಿಮನೆ" ಎಂದು ಕರೆಯುುವದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಕಾರವಾರ ಪರಿಸರದ ಮಾಸ್ತಿಗುಡಿಗಳ ರಚನೆ, ಅವುಗಳ ಸ್ಥಿತಿ-ಗತಿಗಳನ್ನು ಗಮನಿಸಿದರೆ ಅವುಗಳನ್ನು ಒಂದು ಶತಮಾನದ ಇತ್ತೀಚಿನ ಕಟ್ಟಡಗಳೆಂದೇ ಹೇಳಬೇಕು. ಪ್ರಾಚೀನ ಕಾಲದ್ದೆಂದು ಹೇಳಲಾಗುತ್ತಿದ್ದ ಚಿಕ್ಕಗುಡಿಯೊಂದು ಕುಮಟಾದ ನೆಲ್ಲಿಕೇರಿ ಪ್ರದೇಶ ದಲ್ಲಿ ಇತ್ತೆಂದು ತಿಳಿದುಬರುತ್ತದೆ. ಆದರೆ ಈಗ ಆ ಸ್ಥಾನದಲ್ಲಿ ದೊಡ್ಡಗುಡಿಯನ್ನು ಹೊಸದಾಗಿ ಕಟ್ಟಲಾಗಿದೆ. 'ಅರಗ'ದ ಈಗಿರುವ ಮಾಸ್ತಿಗುಡಿಯ ಸ್ಥಾನದಲ್ಲಿ ಎರಡು ತಲೆಮಾರುಗಳ ಹಿಂದೆ ಹುಲ್ಲಿನ ಗುಡಿಸಲಿನ ಮಾಸ್ತಿಮನೆ ಇತ್ತೆಂದೂ ನಂತರದ ತಲೆಮಾರಿನ ಜನರು ಗಂವಟಿ (ಹಳ್ಳಿಯವರೇ ತಯಾರಿಸಿದ) ಹಂಚಿನ ಮಾಸ್ತಿಮನೆಯನ್ನು ಕಟ್ಟಿಸಿದರೆಂದೂ ಈಗಿರುವ ಊರಿನ ಜನರು ಕಲ್ಲು-ಮಣ್ಣು, ಹಂಚು-ಕಟ್ಟಿಗೆಗಳನ್ನು ಅಚ್ಚುಕಟ್ಟಾಗಿ ಬಳಸಿಕೊಂಡು ಎರಡು ಭಾಗ ಗಳನ್ನು ಒಳಗೊಂಡಿರುವ ಮತ್ತು ನಕ್ಷತ್ರಾಕಾರದ ಗರ್ಭಗುಡಿ ಹೊಂದಿರುವ ಮಾಸ್ತಿಗುಡಿಯನ್ನು ಹೊಸದಾಗಿ ಕಟ್ಟಿಸಿದರೆಂದೂ ಹೇಳಲಾಗುತ್ತದೆ. ಕೆಲವು ಗುಡಿಗಳನ್ನು ಮಾಸ್ತಿ ಕನಸಿನಲ್ಲಿ ಅಥವಾ ಪ್ರತ್ಯಕ್ಷವಾಗಿ ಕಾಣಿಸಿಕೊಂಡು ಸೇವೆ ಸಲ್ಲಿಸಲು ಹೇಳಿದ ನಂತರದಲ್ಲಿ ನಿರ್ಮಿಸಲಾಯಿತೆಂದು ಹೇಳಲಾಗುತ್ತಿವೆ. ಇನ್ನೂ ಕೆಲವು ಗುಡಿಗಳನ್ನು ವೈಯಕ್ತಿಕವಾಗಿ ಲಾಭವಾದಾಗ ಕೆಲವರು ನಿರ್ಮಿಸಿದ್ದಾಗಿ ತಿಳಿದುಬರುತ್ತದೆ. ಹಲವಡೆಗಳಲ್ಲಿ, ಚಿಕ್ಕ ಕಟ್ಟೆಗಳ ಮೇಲೆ ಮಾಸ್ತಿಕಲ್ಲುಗಳು ಪೂಜಿಸಿ ಕೊಳ್ಳುತ್ತ ಇದ್ದು, ಬಹುದಿನಗಳ ನಂತರದಲ್ಲಿ ಅವುಗಳ ಪ್ರಭಾವದ ಕಾರಣದಿಂದಾಗಿ ಆ ಸ್ಥಾನಗಳಲ್ಲಿ ಮಾಸ್ತಿಗುಡಿಗಳು ನಿರ್ಮಾಣಗೊಂಡದ್ದನ್ನು ಕಾಣುತ್ತೇವೆ. ಈ ಸಂಗತಿಗಳನ್ನು ಗಮನಿಸಿದಾಗ, ಗಂಡನೊಡನೆ ಮರಣವನ್ನಪ್ಪಿದ ಸತಿಯ ನೆನಪು ಇನ್ನೂ ತೀವ್ರ ಜೀವಂತವಿರುವ ಸಂದರ್ಭದಲ್ಲಿಯೇ ನಿರ್ಮಾಣಗೊಂಡ ಮಾಸ್ತಿಗುಡಿ ಗಳನ್ನು ಇಲ್ಲಿ ಬಹುತರವಾಗಿ ಕಾಣಲಾಗುವದಿಲ್ಲವೆನಿಸುತ್ತದೆ. ಈ ಭಾಗದಲ್ಲಿ ಆಧುನಿಕ ರೀತಿಯಲ್ಲಿ ಇತ್ತೀಚೆಗೆ ಕಟ್ಟಿರುವ ಮಾಸ್ತಿಕಟ್ಟಾ-ಮಾಸ್ತಿಗುಡಿ ಅತಿ ದೊಡ್ಡ ಮಾಸ್ತಿಗುಡಿಯಾಗಿ ಕಂಡುಬಂದರೆ, ಸಾಗಡಿಬೇಣದ ಮಾಸ್ತಿಗುಡಿ ಅತಿ ಚಿಕ್ಕಮಾಸ್ತಿ ಗುಡಿಯಾಗಿ ಕಂಡುಬರುತ್ತದೆ. ಗರ್ಭಗುಡಿಯೊಂದನ್ನೇ ಉಳ್ಳ ಮಾಸ್ತಿಗುಡಿಗಳು ಈ ಭಾಗದಲ್ಲಿ ಹೆಚ್ಚು ದೊರಕುತ್ತಿದ್ದರೂ, ಎರಡೂ ಭಾಗಗಳುಳ್ಳ, ಮೂರು ಭಾಗ ಗಳುಳ್ಳ ಮಾಸ್ತಿಗುಡಿಗಳೂ ಉಂಟು. ಮೇಲ್ಭಾಗ ಹಂಚಿನಿಂದ ಕೂಡಿಕೊಂಡು ಗೋಪು ರಾಕಾರವುಳ್ಳ ಅಥವಾ ಇಳಿಜಾರವಾದ ರಚನೆಯುಳ್ಳ ಮಾಸ್ತಿಗುಡಿಗಳು, ಸಿಮೆಂಟು ಬಳಸಿದ್ದು ಮೇಲ್ಭಾಗ ಕಮಾನಿನಾಕಾರದಲ್ಲಿದ್ದ ಮಾಸ್ತಿಗುಡಿಗಳು, ಶಿಖರವಿಲ್ಲದ

ಮಾಸ್ತಿಗುಡಿಗಳು, ಶಿಖರವುಳ್ಳ ಮಾಸ್ತಿಗುಡಿಗಳು ಇಲ್ಲಿಲ್ಲ ಕಂಡುಬರುತ್ತವೆ. ಶಿರಾಲಿಯಲ್ಲಿಯ ಮಾಸ್ತಿಗುಡಿ ಈ ಪ್ರದೇಶದ ಮಾಸ್ತಿಗುಡಿಗಳಲೆಲ್ಲ ಅತೀ ಸುಂದರವಾದುದು. ಗುಡಿಯ ಮುಂದೆ ಎದೆಗಾರಿಕೆಯ ಶೈಲಿಯಲ್ಲಿ ನಿಂತಿರುವ ಸಿಂಹಾಕೃತಿಗಳೆರಡು, ಗುಡಿಯ ಬಾಗಿಲ ಕಂಬಗಳ ಮೇಲೆ ನಡುವಿನ ಮೇಲೆ ಕೈಯಿಟ್ಟು ಇನ್ನೊಂದು ಕೈಯನ್ನು ಎತ್ತಿನಿಂತ ವಿಗ್ರಹಗಳೆರಡು ಮನಮೋಹಕವಾಗಿವೆ. ಗುಡಿಯ ಒಳಭಾಗದಲ್ಲಿ ಗೋಡೆಗೆ ಹೊಂದಿರುವ ಕಂಬಗಳು, ಅವುಗಳ ಮೇಲೆ ಹೂವಿನ ರಚನೆಗಳು ಸುಂದರವಾಗಿವೆ. ಗರ್ಭಗುಡಿಗೆ ಪ್ರದಕ್ಷಿಣೆ ಪಥವಿದೆ. ಮುಖ್ಯ ಬಾಗಿಲ ತಲೆಕಟ್ಟಿನ ಮೇಲೆ ಆನೆಗಳೆರಡರ ನಡುವೆ ಕುಳಿತ ದೇವತೆ ವಿಗ್ರಹ ಮನಸೆಳೆಯುತ್ತದೆ. ಮೇಲ್ಭಾಗದಲ್ಲಿ ಬಲದಿಂದ ಎಡಕ್ಕೆ ಕ್ರಮವಾಗಿ ತಾಳಬಡಿಯುವ ದೇವತೆ, ವೀಣಾಪಾಣಿ, ವಾದ್ಯ ಬಾರಿಸುವ ದೇವತೆ, ತ್ರಿಶೂಲಧಾರಿ, ನಡುವಿನ ಮೇಲೆ ಕೈ ಇಟ್ಟು ನಿಂತಿರುವ ಇಬ್ಬರು ದೇವತೆಗಳು, ಅಭಯಹಸ್ತದ ದೇವತೆ, ನಡುವಿನ ಮೇಲೆ ಕೈ ಇಟ್ಟ ದೇವತೆ, ಕೈಯಲ್ಲಿ ಗಿಳಿ ಹಿಡಿದ ಪುರುಷ, ನಾಲ್ಕು ಕೈಗಳುಳ್ಳ ದೇವತೆ, ದೀಪಧಾರಿ ದೇವತೆ, ಅಭಯಹಸ್ತದ ದೇವತೆ, ಕುದುರೆಯ ಮೇಲೆ ಕುಳಿತ ವೀರ–ಈ ಮೊದಲಾದ ವಿಗ್ರಹಗಳು ಆಕರ್ಷಿಸುತ್ತವೆ. ದ್ರಾವಿಡ ಶೈಲಿಯನ್ನು ಅನುಕರಿಸಲು ಪ್ರಯತ್ನಿಸಿರುವ ಶಿಖರದ ಮೇಲೆ ಹಾರುತ್ತಿರುವ ದೇವತೆಗಳು, ವಾದ್ಯ ನುಡಿಸುವ ದೇವತೆಗಳು, ಅಭಯಹಸ್ತದ ದೇವತೆಗಳು, ಕೃಷ್ಣ, ತ್ರಿಮೂರ್ತಿ–ಗದಾಧಾರಿ–ಶಂಖಪಾಣಿ, ಮೊದಲಾದ ವಿಗ್ರಹಗಳು ಅಲಂಕರಿಸಿವೆ. ಬಣ್ಣದ ಲೇಪನದಿಂದಾಗಿ ಇವು ಇನ್ನೂ ಸುಂದರವಾಗಿ ಕಾಣುತ್ತಿವೆ. ಈ ಕರಾವಳಿ ಭಾಗದಲ್ಲೆಲ್ಲ ಹೆಚ್ಚು ಪ್ರಭಾವ ಬೀರಿದ ಮತ್ತು ಪ್ರಚಾರಗೊಂಡ ಮಾಸ್ತಿಗುಡಿಯೆಂದರೆ ಮಾಸ್ತಿಕಟ್ಟಾದ ಮಾಸ್ತಿಗುಡಿ ಎಂದೇ ಹೇಳಬೇಕು. ಮುರ್ಡೇಶ್ವರದ ಮಾಸ್ತಿಗುಡಿ, ಅಂಕೋಲೆಯ ಮಾಸ್ತಿಗುಡಿ, ಉಪ್ಪಿನಗೊಳಿಯ ಮಾಸ್ತಿಗುಡಿ-ಇವು ಎರಡನೆಯ ಸ್ಥಾನದಲ್ಲಿ ನಿಲ್ಲುತ್ತವೆ. ಉಳಿದ ಮಾಸ್ತಿ ಗುಡಿಗಳಲ್ಲಿ ಕೆಲವು ಗ್ರಾಮಕ್ಕೆ ಸಂಬಂಧಪಟ್ಟವುಗಳಾಗಿ ಇಲ್ಲವೆ ಕೆಲವು ನಿರ್ದಿಷ್ಟ ಜಾತಿ ಅಥವಾ ಮನೆತನಗಳಿಗೆ ಸಂಬಂಧಪಟ್ಟವುಗಳಾಗಿ ಇವೆ. ಕೆಲವು ಮಾಸ್ತಿಗುಡಿಗಳಿಗೆ ಜಾತ್ರೆ–ಉತ್ಸವಗಳು ನಡೆದರೆ, ಹಲವು ಮಾಸ್ತಿ ಗುಡಿಗಳಿಗೆ ಜಾತ್ರೆ–ಉತ್ಸವಗಳಿಲ್ಲ. ಹೆಚ್ಚು ಮಾಸ್ತಿಗುಡಿಗಳಲ್ಲಿ ದಿನಕ್ಕೆ ಒಂದು ಸಮಯ ಮಾತ್ರ ಪೂಜೆ ನಡೆದರೆ, ಕೆಲವು ಗುಡಿಗಳಲ್ಲಿ ಮಾತ್ರ ಎರಡು ಸಮಯ ಪೂಜೆ ನಡೆಯುತ್ತದೆ. ಕೆಲವು ಗುಡಿಗಳಲ್ಲಿ ದಿನನಿತ್ಯ ಪೂಜೆಯೂ ಇಲ್ಲ. ಕೆಲವು ಗುಡಿಗಳಲ್ಲಿ ರಕ್ತಬಲಿ, ಹಲವು ಗುಡಿಗಳಲ್ಲಿ ಎಡೆ (ಆಹಾರ–ಪದಾರ್ಥ ಕೂಡಿರುವ) ನೈವೇದ್ಯ, ಇತರ ಕೆಲವು ಗುಡಿಗಳಲ್ಲಿ ಹೂ-ಹಣ್ಣು–ಕಾಯಿಗಳನ್ನು ಮಾತ್ರ ಅರ್ಪಿಸಲಾಗುತ್ತದೆ. ಪೂಜಾರಿಗಳ ಮೈಯಲ್ಲಿ ಮಾಸ್ತಿ ಪ್ರವೇಶ ಹಲವೆಡೆ ಉಂಟು. ಮಾಸ್ತಿ ಮೈಯಲ್ಲಿ ಬಂದು ದೇವರು ಹೇಳುವದಾಗಲೀ ಭೂತಪಿಶಾಚಿಗಳನ್ನು ಬಿಡಿಸುವುದಾಗಲೀ ನಡೆಯುತ್ತದೆ. ಹರಕೆಗಳನ್ನು ಹೊತ್ತ ಮಾಸ್ತಿ ಭಕ್ತವರ್ಗ ಹರಕೆಯ

ಮಾಸ್ತಿಗೊಂಬೆಗಳನ್ನು ಮಾಸ್ತಿಗುಡಿಗಳಲ್ಲಿ ತಂದಿರಿಸುವುದು ಈ ಪ್ರದೇಶದಲ್ಲೆಲ್ಲ ಸಾಮಾನ್ಯವಾಗಿದೆ.

ಕೆಲವು ಮಾಸ್ತಿಗುಡಿಗಳಲ್ಲಿ ಮಾಸ್ತಿದೇವಿಯೆಂದು ಪೂಜೆಗೊಳ್ಳುವ ವಿಗ್ರಹಗಳು ವಿಶಿಷ್ಟವಾಗಿವೆ. ಬೆಣಗಾ, ಚಂದಾವರ ಗುಡಿಗಳಲ್ಲಿ ಪುರುಷ ಶಿಲ್ಪಗಳನ್ನೇ ಮಾಸ್ತಿಯರೆಂದು ಕರೆಯಲಾಗುತ್ತದೆ. ಕಿರೀಟ ಧರಿಸಿದ, ನಾಲ್ಕು ಕೈಗಳುಳ್ಳ ಪುರುಷ ವಿಗ್ರಹ ಬೆಣಗಾದಲ್ಲಿ ಮಾಸ್ತಿಯೆಂದೂ, ಚಂದಾವರದ ವೀರಭದ್ರದೇವಸ್ಥಾನದಲ್ಲಿರುವ ವೀರಗಲ್ಲೊಂದು ಮಾಸ್ತಿಯೆಂದೂ ಪೂಜಿಸಿಕೊಳ್ಳುತ್ತವೆ. ಅರಗಾದ ಮಾಸ್ತಿ ಗುಡಿಯಲ್ಲಿರುವ ಶಿವಲಿಂಗವನ್ನೇ ಜನರು ಮಾಸ್ತಿದೇವಿ ಎಂದು ನಂಬಿಕೊಂಡು ಬಂದಿದ್ದಾರೆ. ಚಾಮರ ಹಿಡಿದಿರುವ, ಅಭಯಹಸ್ತದ ಸ್ತ್ರೀವಿಗ್ರಹ ದೇವಿಮನೆಯಲ್ಲಿ. ಎಡಗಾಲನ್ನು ಮಡಚಿಕೊಂಡು ಮತ್ತು ಬಲಗೈಯಲ್ಲಿ ಅಗಲವಾದ ಖಡ್ಗ ಹಾಗೂ ಎಡಗೈಯಲ್ಲಿ ಕೂಸನ್ನು ಎತ್ತಿಕೊಂಡ ಸ್ತ್ರೀವಿಗ್ರಹ ಅಂಕೋಲೆಯಲ್ಲಿ ಮಾಸ್ತಿಯರು ಎಂದು ಪೂಜಿಸಿಕೊಳ್ಳುತ್ತಿವೆ. ನಾಲ್ಕು ಕೈಗಳುಳ್ಳ ಕಂಚಿನ ಮಾಸ್ತಿ ವಿಗ್ರಹ ಮಾಸ್ತಿಕಟ್ಟಾ ಮಾಸ್ತಿಗುಡಿಯಲ್ಲಿದೆ. ಬಲಗೈಯಲ್ಲಿ ಡಮರು ಮತ್ತು ಎಡಗೈಯಲ್ಲಿ ಶಂಖಗಳನ್ನು ಕಂಡರಿಸಲಾಗಿದೆ. ಎಡದ ಇನ್ನೊಂದು ಕೈ ಬಾಗಿ ಚಾಚಿಕೊಂಡಿದ್ದರೆ, ಬಲದ ಇನ್ನೊಂದು ಕೈ ಅಭಯಹಸ್ತಯುಳ್ಳದ್ದಾಗಿದೆ. ತಲೆಯ ಮೇಲೆ ಕಿರೀಟದ ರಚನೆ ಇದೆ. ಸಿಮೆಂಟಿನಲ್ಲಿ ಅತೀ ಸುಂದರವಾಗಿ ಕಂಡಿರಿಸಲ್ಪಟ್ಟ ಮಾಸ್ತಿವಿಗ್ರಹವೊಂದು ಶಿರಾಲಿಯಲ್ಲಿದೆ. ನಾಲ್ಕು ಕೈಗಳುಳ್ಳ ಮಹಾಸತಿ ಮೂರ್ತಿ ನಗುಮುಖದಿಂದ ಆಕರ್ಷಣೀಯವಾಗಿದೆ. ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಗದೆಗಳನ್ನು ಕಂಡರಿಸಲಾಗಿದೆ. ಇನ್ನೊಂದು ಕೈ ಅಭಯಹಸ್ತದ್ದಾಗಿದ್ದರೆ, ಮತ್ತೊಂದು ಕೈ ನೀಟಾಗಿ ಇಳಿಬಿಟ್ಟಿದೆ. ತಲೆಯ ಮೇಲೆ ಕಿರೀಟ, ಹಣೆಯಲ್ಲಿ ಕುಂಕುಮ, ಮೂಗಿನಲ್ಲಿ ನತ್ತು, ಕೈಯಲ್ಲಿ ಬಳೆ,ನಡುವಿನಲ್ಲಿ ಬೆಳ್ಳಿಯ ಡಾಬು, ಮೈತುಂಬ ರೇಶಿಮೆಯ ಸೀರೆ – ಇವುಗಳನ್ನೆಲ್ಲ ಸುಂದರವಾಗಿ ತೊಡಿಸಲಾಗಿದೆ. ಈ ವಿಗ್ರಹಗಳನ್ನು ಗಮನಿಸಿದಾಗ ಇವು ಮಾಸ್ತಿಯಾದವರ ಮೂಲವಿಗ್ರಹಗಳಲ್ಲವೆಂದು ಸ್ಪಷ್ಟವಾಗುತ್ತದೆ. ಈ ಪ್ರದೇಶದಲ್ಲಿರುವ ಮಾಸ್ತಿ ಪ್ರಭಾವದ ಹಿನ್ನೆಲೆಯಲ್ಲಿ ಶಿವಲಿಂಗ, ಸ್ತ್ರೀ–ಪುರುಷ ವಿಗ್ರಹಗಳು ಮಾಸ್ತಿಯರು ಎಂದು ಕರೆಯಲ್ಪಟ್ಟಿರಬೇಕು. ಮಾಸ್ತಿಕಟ್ಟಾ ಮತ್ತು ಶಿರಾಲಿಯಲ್ಲಿರುವ ಪೌರಾಣಿಕ ದೇವತೆಗಳ ರೀತಿಯ ಮಾಸ್ತಿವಿಗ್ರಹಗಳು ಮೂಲದಲ್ಲಿದ್ದ ಮಾಸ್ತಿಕಲ್ಲುಗಳ ಬದಲಾಗಿ ಹೊಸದಾಗಿ ನಿರ್ಮಿಸಿದವುಗಳಾಗಿವೆ. ಕರ್ನಾಟಕದಲ್ಲಿ ಸತಿಯಾದವರನ್ನು ದೇವತೆಗಳಂತೆ ಕಂಡುಕೊಳ್ಳುವ ನಂಬಿಕೆ ಸತಿಪದ್ಧತಿಯ ಪೋಷಣೆಯನ್ನು ಮಾಡಿರಬೇಕು.

ಹಲವು ಮಾಸ್ತಿಗುಡಿಗಳಲ್ಲಿ ಮಾಸ್ತಿಗೊಂಬೆಗಳನ್ನು ಮಾಸ್ತಿಯರೆಂದು ಪೂಜಿಸುತ್ತಾರೆ. ಅನಿಲಗೋಡಹಳ್ಳಿಯಲ್ಲಿ ಕುಮಾರರಾಮನ ಸತಿಯರೆಂದು ಹೇಳಲಾಗುತ್ತಿರುವ

ನಾಗಮ್ಮ, ಮಾಳಮ್ಮ, ಹೊನ್ನಮ್ಮ, ಕೆಂಡದಮ್ಮರ ಮಾಸ್ತಿಗೊಂಬೆಗಳು ತುಂಬ ಪ್ರಭಾವವುಳ್ಳ ಮಾಸ್ತಿದೇವಿಯರೆನಿಸಿಕೊಂಡಿವೆ. ಭಾಸ್ಕೇರಿ. ಮತ್ತು ಭಟ್ಕಳದ ಕೋಗತಿಕಟ್ಟೆಯಲ್ಲಿರುವ ಮಾಸ್ತಿಗುಡಿಗಳಲ್ಲಿ ಮಾಸ್ತಿಗೊಂಬೆಗಳನ್ನೇ ಮಾಸ್ತಿಯರು ಎನ್ನಲಾಗುತ್ತಿದೆ. ಪ್ರಾಚೀನವೆಂದು ಹೇಳಲಾಗುತ್ತಿರುವ ಮಾಸ್ತಿಗೊಂಬೆಗಳು ಮುರ್ಡೇಶ್ವರ ಮಾಸ್ತಿಗುಡಿಯಲ್ಲಿ ನೇತ್ರಾಣಿ, ಜಟ್ಟಿಗಾ, ಮಳ್ಳಮಾಸ್ತಿ, ಮಾಮಾಸ್ತಿ, ಯಕ್ಷಿಮಾಸ್ತಿ, ನಾಗಮಾಸ್ತಿ, ಕೆಂಡದ ಮಾಸ್ತಿ, ಹೊನ್ನಮಾಸ್ತಿ, ಚೌಡಿಮಾಸ್ತಿ, ಮೊದಲಾದ ಮಾಸ್ತಿಗೊಂಬೆಗಳನ್ನು ಮರದಿಂದ ಮಾಡಲಾಗಿದೆ. ಇವುಗಳಲ್ಲಿ ಕೆಲವನ್ನು ಗುರುತಿಸಿ" ಇವು ಹಿಂದೆ ಯಾವಾಗಲೋ ಮಡಿದ ವೀರರ ಸ್ಮಾರಕಗಳಾಗಿರಬಹುದೆಂದು ಶ್ರೀ ಆರ್. ಎಸ್. ಪಂಚಮುಖಿಯವರು ಊಹಿಸುತ್ತಾರೆ.[೧] ಅವರ ಊಹೆ ಸರಿಯಾದುದೆಂದು ತೋರುತ್ತದೆ" ಎಂದು ಡಾ. ಆರ್. ಶೇಷಶಾಸ್ತ್ರಿ ಅವರು ಹೇಳುತ್ತಾರೆ.[೨] ನಮಗೆ ಮಾತ್ರ ಅವರು ಗುರುತಿಸಿರುವ ಗೊಂಬೆಗಳೆಲ್ಲ ವೀರರ ಸ್ಮಾರಕಗಳೆಂದು ಹೇಳುವದು ಒಪ್ಪುವದಾಗುವದಿಲ್ಲ. ಇಲ್ಲಿರುವ ವೀರಮಾಸ್ತಿ, ಮಾಮಾಸ್ತಿಯರ ಗೊಂಬೆಗಳು ಯಾವುದೋ ಕಾಲದಲ್ಲಿ ಸತಿಯಾದವರ ಸ್ಮಾರಕಗಳಾಗಿರಬೇಕು. ಇಲ್ಲಿಯ ಕೆಲವು ಗೊಂಬೆಗಳು ಸ್ತ್ರೀರೂಪದಲ್ಲಿದ್ದು ಅವುಗಳಿಗೆ ಸೀರೆ, ಬಳೆಗಳನ್ನು ತೊಡಿಸಿರುವದನ್ನು ನೋಡಿದರೆ, ಮತ್ತು ವರ್ಷಕ್ಕೊಮ್ಮೆ ನಡೆಯುವ ಐದು ದಿನಗಳ ಜಾತ್ರೆಯಲ್ಲಿ ಹೆಣ್ಣು ಮಕ್ಕಳು ಹರಕೆಯ ಸೀರೆಗಳನ್ನು ಮತ್ತು ಮಾಸ್ತಿಗೊಂಬೆಗಳನ್ನು ಕೊಡುವದನ್ನು ನೋಡಿದರೆ, ಸಹಜವಾಗಿ ಸತಿಯರ ನೆನಪು ಮೂಡುತ್ತದೆ. ಅಸಿಲ ಗೋಡಹಳ್ಳಿಯಲ್ಲಿ ಕುಮಾರರಾಮನೊಡನೆ ಅವನ ಪತ್ನಿಯರ ಮರದ ಗೊಂಬೆಗಳಿದ್ದಂತೆ, ಇಲ್ಲಿಯೂ ವೀರರ ಗೊಂಬೆಗಳೊಡನೆ ಸತಿಯಾದವರ ಗೊಂಬೆಗಳೂ ಸ್ಮಾರಕವಾಗಿ ಇರಬೇಕು.

ಕಾರವಾರ ಪ್ರದೇಶದಲ್ಲಿ ಚೌಕ ಅಥವಾ ದುಂಡಾಗಿದ್ದು ಕಡಿಮೆ ಅಥವಾ ಹೆಚ್ಚು ಎತ್ತರದಲ್ಲಿ ನಿರ್ಮಾಣಗೊಂಡ ಮಾಸ್ತಿಕಟ್ಟೆಗಳನ್ನು ಕಾಣುತ್ತೇವೆ. ಮಾರಕಟ್ಟೆಮಾಸ್ತಿ, ಮಾಸ್ತಿಕಟ್ಟ್ಯಾದ ಮಾಸ್ತಿಕಟ್ಟೆ, ಹೊನ್ನಾವರ ಮಾಸ್ತಿಕಟ್ಟೆ, ಮಾಸ್ತಿಹಳ್ಳದ ಮಾಸ್ತಿಕಟ್ಟೆ, ನೀಲಂಕಟ್ಟಾ ಈ ಮೊದಲಾದ ಕಟ್ಟೆಗಳು ಯಾವದೋ ಕಾಲದಲ್ಲಿ ಸತಿ ಹೋದವರನ್ನು ನೆನಪಿಸುತ್ತವೆ. ಈ ಕಟ್ಟೆಗಳ ಮೇಲೆ ಮಾಸ್ತಿಕಲ್ಲುಗಳಿದ್ದು ಅವುಗಳನ್ನು ಪೂಜಿಸಲಾಗುತ್ತಿದೆ. ಮಾಸ್ತಿಕಲ್ಲುಗಳಿಗೆ ಗುಡಿಕಟ್ಟುವಂತೆ, ಅವುಗಳಿಗೆ ಕಟ್ಟೆಕಟ್ಟುವ ಪದ್ಧತಿಯನ್ನು ಈ ಭಾಗದಲ್ಲೆಲ್ಲ ಕಾಣುತ್ತೇವೆ. ನೀಲಮ್ಮ

---

೧. R. S. Panchmukhi : Archaeological Report on Kannada Research in Bombay Provlince for the year 1939-40. p. 24.

೨. ಡಾ. ಆರ್. ಶೇಷಶಾಸ್ತ್ರಿ : ಕರ್ನಾಟಕದ ವೀರಗಲ್ಲುಗಳು, ಪು. 16

ಎಂಬ ಸ್ತ್ರೀ ಗೋಕರ್ಣದ ಯಾತ್ರೆಗೆ ಹೋದ ತನ್ನ ಗಂಡ ಬಹುದಿನಗಳ ವರೆಗೆ ಬಾರದೇ ಇದ್ದಾಗ ಆತನನ್ನು ಕಾಣಬೇಕೆಂದು ಹುಡುಕುತ್ತ ಬರುತ್ತಿರುವಾಗ, ಜನರಿಂದ ಗಂಡನ ಮರಣವನ್ನು ಕೇಳಿ ಹಾಲಕ್ಕಿ ಒಕ್ಕಲಿಗರ ಕಟ್ಟಿಗೆಗಳನ್ನು ತೆಗೆದುಕೊಂಡು ಚಿತೆ ಮಾಡಿ, ಹಾರಿಕೊಂಡು ಪ್ರಾಣಬಿಟ್ಟಳು. ಈ ನೀಲಂಕಟ್ಟಾ ನೀಲಮ್ಮನ ಅನುಗಮನ ವನ್ನು ಸೂಚಿಸುತ್ತದೆ. ಇಲ್ಲಿರುವ ಪ್ರದೇಶಕ್ಕೆಲ್ಲ 'ನೀಲಂಕಟ್ಟಾ' ಎಂಬ ಹೆಸರೇ ಪ್ರಚಲಿತದಲ್ಲಿದೆ. ನೀಲಮ್ಮನ ಮನೆತನಕ್ಕೆ ಸೇರಿದ ಮೂರು "ಐಗಳ ಮನೆಗಳು" ಇವತ್ತಿಗೂ ಅಂಕೋಲೆಯಲ್ಲಿವೆ. "ಐಗಳ ಮನೆಯ ಮೊದಲ ಮಕ್ಕಳಿಗೆ ನೀಲಮ್ಮ ಎಂಬ ಹೆಸರನ್ನು ತಪ್ಪದೇ ಇಡುತ್ತಲಿರುವವುದು ಕಂಡುಬರುತ್ತದೆ"[೩] ಎಂದು ಡಾ. ಚೆನ್ನಕ್ಕ ಎಲಿಗಾರ ಅವರು ತಿಳಿಸಿದರೂ, ಐಗಳರ ಮನೆಯ ಮಕ್ಕಳಿಗಾರಿಗೂ ಮೊದ ಲಾಗಲೀ, ಈಗಾಗಲೀ ನೀಲಮ್ಮ ಎಂಬ ಹೆಸರನ್ನಿಟ್ಟದ್ದು ಕಂಡುಬರುವದಿಲ್ಲ. ಅಂಕೋಲಾ ತಾಲೂಕಿನಲ್ಲಿರುವ ಮಾಸ್ತಿಕಟ್ಟಾ ಗ್ರಾಮಕ್ಕೆ ಈ ಹೆಸರು ಮಾಸ್ತಿಕಟ್ಟೆ ಯಿಂದಲೇ ಬಂದಿರುವದು ಸ್ಪಷ್ಟವಾಗುತ್ತದೆ. ಕಾಡಿನಲ್ಲಿದ್ದ ಮಾಸ್ತಿಕಲ್ಲಿನ ಸತಿ ಕಾಡಿನ ಜನರಿಗೆ ಕನಸಿನಲ್ಲಿ ಬಂದಳೆಂದು, ಅವರು ಬೀದಿಯ ಪಕ್ಕಕ್ಕೆ ಮಾಸ್ತಿಕಲ್ಲನ್ನು ತಂದು ಕಟ್ಟೆಯ ಮೇಲೆ ಸ್ಥಾಪಿಸಿದರೆಂದೂ ಹೇಳಲಾಗುತ್ತಿದೆ. ಆದೇ ಕಾಲಕ್ಕೆ ಅಲ್ಲಿಗೆ ನಾರಾಯಣ ಸ್ವಾಮಿಗಳು ಬಂದು ವಾಸಿಸಲು ಪ್ರಾರಂಭಿಸಿದಾಗ, ಅವರೊಡನೆ ಇನ್ನೂ ಮೂರ್ನಾಲ್ಕು ಜನ ಸಾಧುಗಳು ಇರತೊಡಗಿದರೆಂದೂ ತಿಳಿದುಬರುತ್ತದೆ. ಬರುಬರುತ್ತ ಜನರೂ ವಾಸಿಸಲು ಪ್ರಾರಂಭಿಸಿದರು. ಈಗ ಸುಮಾರು ಐವತ್ತು ಮನೆಗಳ "ಮಾಸ್ತಿ ಕಟ್ಟಾ ಗ್ರಾಮ" ಬೆಳೆದು ನಿಂತಿದ್ದನ್ನು ಕಾಣಬಹುದಾಗಿದೆ. ಈ ಪ್ರದೇಶದಲ್ಲೆಲ್ಲ ಈ ಗ್ರಾಮದ ಹೆಸರು ತುಂಬ ಪ್ರಸಿದ್ಧವಾಗಿದೆ.

ಮಾಸ್ತಿಕಲ್ಲುಗಳಿದ್ದ ಪ್ರದೇಶಗಳನ್ನು ಮಾಸ್ತಿ ಹೆಸರಿನಿಂದ ಮಾಸ್ತಿಬ್ಯಾಣ, ವೀರಮಾಸ್ತಿಬ್ಯಾಣ ಅಥವಾ ರಣಮಾಸ್ತಿಬ್ಯಾಣ, ಮಾಸ್ತಿಮಳ ಅಥವಾ ಮಾಸ್ತಿಗದ್ದೆ, ಮಾಸ್ತಿಹಳ್ಳ ಮಾಸ್ತಿಕಾನ ಈ ಮುಂತಾಗಿ ಕರೆಯುವುದು ತುಂಬ ವಾಡಿಕೆಯಲ್ಲಿದೆ. ಈ ಪ್ರದೇಶಗಳ ಕುರಿತಾಗಿ ಜನರಲ್ಲಿ ಭಯ-ಭಕ್ತಿಗಳಿವೆ. ರಣಮಾಸ್ತಿಬ್ಯಾಣದಲ್ಲಿ ಮಧ್ಯಾಹ್ನದಲ್ಲಿ ಯಾರೂ ತಿರುಗಾಡುವಂತಿಲ್ಲ. ಈ ಸಮಯದಲ್ಲಿ ಕಲ್ಲುಗಳು ಬೀಳುತ್ತವೆ ಎಂದೂ, ಭಯಂಕರವಾದ ಸಪ್ಪಳಗಳು ಕೇಳಿಬರುತ್ತವೆ ಎಂದೂ ಜನರು ನಂಬಿಕೊಂಡಿ ದ್ದಾರೆ. ಮಾಸ್ತಿ ಹೆಸರಿನಿಂದ ಪ್ರದೇಶಗಳನ್ನು ಗುರುತಿಸುವಂತೆ ಊರುಗಳ ಹೆಸರಿನಿಂದ ಮಾಸ್ತಿಯನ್ನು ಮುರ್ಡೇಶ್ವರ ಮಾಸ್ತಿ, ಅರಗಾ ಮಾಸ್ತಿ, ಹೊನ್ನಾವರ ಮಾಸ್ತಿ, ಅಂಕೋಲಾ ಮಾಸ್ತಿ, ಮಾಸ್ತಿಕಟ್ಟಾ ಮಾಸ್ತಿ ಈ ಮೊದಲಾಗಿ ಗುರುತಿಸಲಾಗುತ್ತಿದೆ. ಕೆಲವು ಭಾಗಗಳಲ್ಲಿ ಮಾಸ್ತಿಯರನ್ನು ಸ್ವಭಾವಗಳ ಹಿನ್ನೆಲೆಯಲ್ಲಿ, ಉಗ್ರಸ್ವಭಾ ವದ ಮಾಸ್ತಿಯನ್ನು ಯೀರ ಅಥವಾ ರಣಮಾಸ್ತಿ ಎಂದೂ, ಕೆಂಡ ಹಾಯುವ ಮಾಸ್ತಿ

---

೩. ಡಾ॥ ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪು. 249.

ಯನ್ನು ಕೆಂಡದ ಮಾಸ್ತಿ ಎಂದೂ ಕರೆಯುಲಾಗುತ್ತಿದೆ. ಶಿಲ್ಪಗಳನ್ನು ಆಧರಿಸಿ ಕಂಬದ ಮಾಸ್ತಿ, ನಾಗಮಾಸ್ತಿ, ಜೈನಮಾಸ್ತಿ ಎಂದೂ ಕರೆಯಲಾಗುತ್ತಿದೆ. ಸತಿ ಹೋದವರ ಹೆಸರಿನಿಂದ ಕರೆಯುವ ಒಂದೇ ಒಂದು ಅಪರೂಪದ ನಿದರ್ಶನವೆಂದರೆ "ನೀಲಂಕಟ್ಟಾ" ಎಂದೇ ಹೇಳಬೇಕು. ಸತಿ ಕೊಂಡಕ್ಕೆ ಬೀಳುವ ಸಂದರ್ಭದಲ್ಲಿ ನಡೆದ ಆಚರಣೆಗಳನ್ನು ಕಾರವಾರದ ಹಲವು ಭಾಗಗಳಲ್ಲಿ ಇನ್ನೂ ಜೀವಂತವಾಗಿ ಉಳಿಸಿಕೊಂಡು ಬರಲಾಗಿದೆ. ವೀರನಿಗೂ ಇನ್ನಿತರರಿಗೂ ನಡೆದ ಹೋರಾಟವನ್ನು ಬಂಡಿಹಬ್ಬದ ಕಾಲಕ್ಕೆ ಅಂಕೋಲೆಯ ಆಡುಕಟ್ಟೆಯಲ್ಲಿ ರಾತ್ರಿ ಆಡಿತೋರಿಸಲಾಗುತ್ತದೆ. ಹೋರಾಟದಲ್ಲಿ ವೀರ ಮಡಿಯುತ್ತಾನೆ. ವೀರನ ಪತ್ನಿಯನ್ನು ಕುರಿತು ಸುತ್ತಲಿನ ಜನರು, ನೀನು ಯಾರು ? ಎಂದು ಹಾಸ್ಯ ಮಾಡುತ್ತಾರೆ. ಸತಿ ತನ್ನ ಗಂಡ ವೀರನೆಂದೂ ಮಡಿಯುವದಿಲ್ಲವೆಂದು ಹೇಳಿದರೂ ಜನರು ಮತ್ತೆ ಮತ್ತೆ ಟೀಕಿಸುತ್ತಾರೆ. ಆಗ ಸತಿ ಇನ್ನು ಕುಂಕುಮ ಇಟ್ಟುಕೊಳ್ಳುವಂತಿಲ್ಲ, ಓಲೆ ಹಾಕುವಂತಿಲ್ಲ, ಬಳೆ ತೊಡುವಂತಿಲ್ಲ. ನಾನೇಕೆ ಇರಬೇಕು ? ಸತಿಯರೇ ನಾನು ಕೊಂಡಕ್ಕೆ ಬೀಳುತ್ತೇನೆ ಎಂದು ತನ್ನ ನಿರ್ಧಾರವನ್ನು ಹೇಳುತ್ತಾಳೆ. ಕರ್ನಾಟಕದಲ್ಲಿ ವಿಧವೆಯರು ಎದುರಿಸಬೇಕಾದ ಸ್ಥಿತಿ-ಗತಿಗಳನ್ನು ಇದು ಧ್ವನಿಸುತ್ತದೆ ! "ದಹನ ಮಾಡಿಕೊಳ್ಳದವಳು ಒರಟು ಬಟ್ಟೆಗಳನ್ನು ಧರಿಸಿ ತನ್ನ ಮನೆಯವರೊಡನೆ ನೆರೆಹೊರೆಯವರ ಚುಚ್ಚು ಮಾತುಗಳಿಗೊಳಗಾಗಿ ಕಷ್ಟದಲ್ಲಿ ಬಾಳಬೇಕಾಗುತ್ತದೆ" ಎಂದು ವಿದೇಶಿ ಪ್ರವಾಸಿ ಇಬೆ ನೆ ಬತುತಾ ಹೇಳಿದ ಮಾತುಗಳನ್ನು ಇಲ್ಲಿ ಸ್ಮರಿಸಬಹುದು.[೪] ವಿಧವೆಯ ಕಷ್ಟಕರ ಜೀವನಕ್ಕಿಂತ ಮರಣವನ್ನೇಸ್ವೀಕರಿಸುವಲ್ಲಿ ಕರ್ನಾಟಕದ ಸ್ತ್ರೀಯರು·ಮನಸ್ಸು ಮಾಡಿರಬೇಕೆನಿಸುತ್ತದೆ. ತಲೆಗೆ ಕೇದಗೆಯ ಗರಿಗಳನ್ನು ಕಟ್ಟಿಕೊಂಡು ಕೈಯಲ್ಲಿ ಬಳೆ, ಹಣೆಯಲ್ಲಿ ಕುಂಕುಮ, ಕೊರಳಲ್ಲಿ ತಾಳಿ, ಮೂಗಿನಲ್ಲಿ ನತ್ತು, ಕಾಲಲ್ಲಿ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತ ಸತಿ ಸೌಭಾಗ್ಯವತಿಯಾಗಿ ಕೊಂಡಕ್ಕೆ ಹೋಗುವ ಆಚರಣೆಯನ್ನು ಚಂದಾವರದ ಬಂಡಿ ಹಬ್ಬದಲ್ಲಿ ಕಾಣುತ್ತೇವೆ ಎರಡು ಕಾಲಿನ ಕಟ್ಟಿಗೆಗೆ ಲಂಗಾ ಉಡಿಸಿ, ಕೊರಳಿಗೆ ಹಾರ ಹಾಕಿ, ಮಾಸ್ತಿ ಮುಖವಾಡ ಇಟ್ಟು ಮಾಸ್ತಿಯಮ್ಮನನ್ನು ಸಿಂಗರಿಸುವವರನ್ನು ಅಂಕೋಲಾದಲ್ಲಿ ಕಾಣುತ್ತೇವೆ. ಸೌಭಾಗ್ಯವತಿಯರು ಮಾಸ್ತಿಯಮ್ಮನಿಗೆ ಆರತಿ ಬೆಳಗಿ, ಬಾಳೆಹಣ್ಣು, ಅಕ್ಕಿ, ಕಾಯಿ, ಸೀರೆ, ಕುಪ್ಪಸ ಮೊದಲಾದವುಗಳಿಂದ ಉಡಿತುಂಬಿ, ತಮ್ಮ ಹರಕೆಗಳನ್ನು ಸಲ್ಲಿಸುತ್ತಾರೆ. ಮಾಸ್ತಿ ಮುಖವಾಡ ಹಿಡಿದವರ ಮೈಯಲ್ಲಿ ಮಾಸ್ತಿ ಪ್ರವೇಶವಾಗಿ, ಆತ ಕುಣಿಯುತ್ತ ವಾದ್ಯಗಳೊಂದಿಗೆ ಕೊಂಡಕ್ಕೆ ನಡೆದು ಬಂದು, ಚಿತೆಗಾಗಿ ಇಟ್ಟ ಹುಲ್ಲಿನ ದಿಬ್ಬಕ್ಕೆ ಬೆಂಕಿ ಇಟ್ಟು, ಒಂದು ಸುತ್ತನ್ನು ಹಾಕಿ ಚಿತೆಯಲ್ಲಿ ಹಾರಿಕೊಳ್ಳುತ್ತಾನೆ. ಆಗ ಜೋರಾಗಿ ವಾದ್ಯಗಳನ್ನು ಬಾರಿಸುತ್ತಾರೆ. ಇದು ಹೋರಾಟದಲ್ಲಿ ಮಡಿದ ವೀರನೊಬ್ಬನ ಪತ್ನಿ, ಅನುಗಮನದ ಮೂಲಕ ಸತಿಯಾದ ಘಟನೆಯನ್ನು ಸೂಚಿಸುತ್ತದೆ. ವಿದೇಶಿ ಪ್ರವಾಸಿಗರು ಸತಿ

೪. ಎಚ್. ಎಲ್. ನಾಗೇಗೌಡ : ಪ್ರವಾಸಿ ಕಂಡ ಇಂಡಿಯಾ : ಸಂ-2 ಪು. 75.

ಯಾಗುವವರೊಡನೆ ವಾದ್ಯಗಳನ್ನು ಬಾರಿಸುವದನ್ನು, ಸುಮಂಗಲೆಯರು ಇರುವುದನ್ನು, ಸತಿ ಸಿಂಗರಿಸಿಕೊಂಡು ಕೊಂಡಕ್ಕೆ ಹೋಗುವುದನ್ನು, ಚಿತೆಗೆ ಪ್ರದಕ್ಷಿಣೆ ಹಾಕುವುದನ್ನು ಉಲ್ಲೇಖಿಸಿರುವುದನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬಹುದು.

ಮಾಸ್ತಿ ಕೊಂಡಕ್ಕೆ ಬೀಳುವಾಗ ಹುಲ್ಲಿನ ಚಿತೆ ನಿರ್ಮಿಸುವುದನ್ನು ಅಂಕೋಲಾದಲ್ಲಿ ಇಂದು ನಾವು ಕಾಣುತ್ತಿದ್ದರೂ, ಕೆಲವು ವರ್ಷಗಳ ಹಿಂದೆ ನೆಲವನ್ನು ವಿಸ್ತಾರವಾಗಿ ದುಂಡಾಗಿ ಅಗೆದು, ಕಟ್ಟಿಗೆ– ಕುಳ್ಳಿನಿಂದ ಚಿತೆ ಮಾಡಲಾಗುತ್ತಿತ್ತೆಂದು ಹೇಳಲಾಗುತ್ತಿದೆ. ಮಾಸ್ತಿ ಹಾಯುವ ತೀರ ಚಿಕ್ಕ ಮತ್ತು ಮುಂದಕ್ಕೆ ಸ್ವಲ್ಪ ಚಾಚಿಕೊಂಡ ದುಂಡಗಿನ ಕೊಂಡವೊಂದನ್ನು ಅರಗಾದಲ್ಲಿ ಕಾಣಬಹುದು. ಸಂತಗುಳಿಯಲ್ಲಿ ಕೆಂಡದ ಮಾಸ್ತಿ ಕೆಂಡ ಹಾಯುವುದನ್ನು ಇಲ್ಲಿ ಸ್ಮರಿಸಬಹುದು. ಈ ಭಾಗದ ಹಲವೆಡೆಗಳಲ್ಲಿ ಸತಿ ಕೆಂಡ ಹಾಯುವುದನ್ನು, ಇಲ್ಲಿ ಸತಿ ಕೊಂಡ ಬೀಳುವದನ್ನು ಗಮನಿಸಿದರೆ, ಕರ್ನಾಟಕದಲ್ಲಿ ನೆಲ ಅಗೆದು ಚಿತೆ ಮಾಡಿದ ಕೊಂಡದಲ್ಲಿ ಕೆಲವರು ಸತಿಯಾಗುತ್ತಿದ್ದರೆಂದು ಹೇಳಬಹುದು.

ಈ ರೀತಿಯಾಗಿ, ಕಾರವಾರ ಜಿಲ್ಲೆಯ ಮಾಸ್ತಿಸ್ಮಾರಕಗಳು ಗತಕಾಲದಲ್ಲಿ ನಡೆದ ಸತಿ ಘಟನೆಗಳನ್ನು ವಿರಳವಾಗಿ, ಕೆಲವೊಮ್ಮೆ ವಿಸ್ತಾರವಾಗಿ ರೂಪಿಸುವುದನ್ನು ಕಾಣುತ್ತೇವೆ. ಅವುಗಳನ್ನು ಸಾಧ್ಯವಾದ ಮಟ್ಟಿಗೆ ಸಂಗ್ರಹಿಸಿ, ಅವುಗಳಲ್ಲಿ ಅಡಗಿದ ಇತಿಹಾಸದ ಸತ್ಯವನ್ನು ಕಂಡುಕೊಳ್ಳುವ ಪ್ರಾಮಾಣಿಕ ಪ್ರಯತ್ನ ಇದಾಗಿದೆ.

**

ದ್ವಯುಗಳು ಮತ್ತು ತ್ರಯುಗಳು: ಒಂದು ಜಿಜ್ಞಾಸೆ

– ಎಚ್. ವಿ. ನಾಗೇಶ್

ಮೇಲುನೋಟಕ್ಕೆ ಸರಳ ಮತ್ತು ಸ್ವಯಂವೇದ್ಯವೆಂದು ಕಾಣುವ ಎಷ್ಟೋ ವಿಷಯುಗಳು ಆಳಕ್ಕಿಳಿದು ನೋಡಿದಾಗ ತಮ್ಮ ಸಂಕೀರ್ಣತೆಯನ್ನೂ ಮಹತ್ವವನ್ನೂ ಪದರು ಪದರಾಗಿ, ನಿಧಾನವಾಗಿ ತೆರೆದುಕೊಳ್ಳುತ್ತವೆಯೆಂಬುದು ಸುಳ್ಳಲ್ಲ. ಈ ಮಾತಿಗೊಂದು ಉತ್ತಮ ನಿದರ್ಶನವೆಂದರೆ ಎರಡು ಅಥವಾ ಮೂರು ಸದಸ್ಯರಿರುವ ಬಹು ಚಿಕ್ಕ ಗುಂಪುಗಳ ಅದ್ಭುತಲೋಕ. ಅವುಗಳನ್ನು ಕುರಿತು ಒಂದು ಚಿಕ್ಕ ಜಿಜ್ಞಾಸೆ ಇಲ್ಲಿದೆ.

೧

'ದ್ವಯು' (ಇಂಗ್ಲಿಷ್ : ಡಯಾಡ್) ಎಂಬುದು ಇಬ್ಬರೇ ವ್ಯಕ್ತಿಗಳಿರುವ ಸುಪರಿಚಿತವಾದ ಸಮೂಹ. ಇದನ್ನು ಜೋಡಿ, ಜೋಡಿಗುಂಪು ಅಥವಾ ಜೊತೆಗುಂಪು ಎಂದು ಕರೆಯುವುದು ವಾಡಿಕೆ ಪ್ರಸಂಗವಶಾತ್ ಎಲ್ಲೋ ಒಮ್ಮೆ ಸಂಧಿಸುವ, ಸಂಭಾಷಿಸುವ ಇಬ್ಬರನ್ನು ನಾವು ಜೋಡಿಗುಂಪು ಎಂದು ಕರೆಯುವುದಿಲ್ಲ. ಉದಾಹರಣೆಗೆ, ಸರಕುಗಳನ್ನು ಮಾರುವ ವ್ಯಾಪಾರಿ ಮತ್ತು ಅವನ ಸರಕುಗಳನ್ನು ಕೊಳ್ಳುವ ಗಿರಾಕಿ ತಮ್ಮೊಳಗೆ ಕ್ಷಣವೆರಡುಕ್ಷಣ ಸಂಬಂಧ-ಸಂಪರ್ಕ ಹೊಂದಬಹುದು; ಆದರೆ ಅವರದು ಒಂದು ಜೋಡಿ ಅಥವಾ ದ್ವಯು ಆಗುವುದಿಲ್ಲ: ಹಾದಿಯಲ್ಲಿ ಅಕಸ್ಮಾತ್ತಾಗಿ ಸಂಧಿಸುವ ಇಬ್ಬರು ಜೋಡಿಯಲ್ಲ. ಕ್ಯೂದಲ್ಲಿ ಒಬ್ಬರ ಹಿಂದೊಬ್ಬರಂತೆ ನಿಂತ ಇಬ್ಬರು ಜೋಡಿಯಲ್ಲ. ಜೋಡಿಯಾಗಬೇಕಾದರೆ ಇಬ್ಬರಿದ್ದರೆ ಸಾಲದು. ಆ ಇಬ್ಬರ ನಡುವೆ ನಿರಂತರವಾದ ಸಂಪರ್ಕ ಬೇಕು; ಸಾಹಚರ್ಯ ಮತ್ತು ಸಂಬಂಧಗಳು ಬೇಕು. ಒಟ್ಟಿನಲ್ಲಿ ನಿರಂತರವಾಗಿ ಸಂಪರ್ಕ ಹೊಂದಿದ, ನಿಕಟ ಸಂಬಂಧವುಳ್ಳ ಇಬ್ಬರು ಮಾತ್ರ ಜೋಡಿಯಾಗುತ್ತಾರೆ. ವಿವಾಹಿತ ದಂಪತಿಗಳು ಇಂಥ ಒಂದು ಜೋಡಿ. ವಿವಾಹಕ್ಕೆ ಅಣಿಯಾಗಿ ನಿಂತ ಇಬ್ಬರು ಪ್ರೇಮಿಗಳು ಇಂಥ ಇನ್ನೊಂದು ಜೋಡಿ. ಆತ್ಮೀಯ ಗೆಳೆಯರಿಬ್ಬರು, ಅಣ್ಣ-ತಮ್ಮ, ಅಕ್ಕ-ತಂಗಿ, ತಾಯಿ-ಮಗ, ತಂದೆ-ಮಗ, ವೃತ್ತಿ ಪಾಲುದಾರರಾದ ಇಬ್ಬರು ವೈದ್ಯರು, ವ್ಯಾಪಾರದ ಪಾಲುದಾರರಾದ ಇಬ್ಬರು, ಇಸ್ಪೀಟು ಆಟದ ಇಬ್ಬರು ಗೆಳೆಯರು, ಅವಳಿ-ಜವಳಿ ಸೋದರರು ಮುಂತಾದ ನೂರಾರು ದ್ವಯುಗಳು ನಮಗೆ ಸುಪರಿಚಿತವಾಗಿವೆ.

'ತ್ರಯು' (ಇಂಗ್ಲಿಷ್ : ಟ್ರಯಾಡ್) ಎಂಬುದು ಆ ಹೆಸರೇ ಸೂಚಿಸುವಂತೆ ಮೂವರು ಸದಸ್ಯರಿರುವ ಸಮೂಹ. ಸದಾ ಒಟ್ಟಿಗೆ ಇರುವ ಹಾಗೂ ನಿಕಟವಾದ

ಸಂಬಂಧವನ್ನು ಹೊಂದಿರುವ ಮೂವರ ಕೂಟ. ತಂದೆ-ತಾಯಿ-ಮಗ ಅತ್ತೆ-ಸೊಸೆ-ಮಗ, ಮೂವರು ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು, ಆಟದ ಗೆಳೆಯರು, ವ್ಯಾಪಾರದ ಮೂವರು ಪಾಲುದಾರರು, ತ್ರಿ-ಸದಸ್ಯ ಸಮಿತಿ ಇವೆಲ್ಲ ಪರಿಚಿತವಾದ ಉದಾಹರಣೆಗಳು.

ದ್ವಯಗಳು ಮತ್ತು ತ್ರಯಗಳು ನಮಗೆ ಪರಿಚಿತವಷ್ಟೇ ಅಲ್ಲ, ಅವು ಮಹತ್ವ ಪೂರ್ಣವಾದ ಗುಂಪುಗಳೂ ಹೌದು. ಚಾರ್ಲ್ಸ್ ಹಾರ್ಟನ್ ಕೂಲೆ ಎಂಬ ಸಮಾಜ ಶಾಸ್ತ್ರಜ್ಞನು ವರ್ಣಿಸಿದ 'ಪ್ರಾಥಮಿಕ ಸಮೂಹ'(ಪ್ರೈಮರಿ ಗ್ರೂಪ್)ದ ಜಾತಿಗೆ ಅವು ಸೇರಿವೆ. ಇಂಥ ಗುಂಪುಗಳನ್ನು ನಾವು ವ್ಯಕ್ತಿ ಜೀವನದ ಪ್ರಾರಂಭದಲ್ಲೇ ಸೇರಿ ಕೊಳ್ಳುತ್ತೇವೆ. ಅಷ್ಟೇ ಅಲ್ಲ, ಅವುಗಳಿಂದ ಬಹುವಿಧವಾಗಿ ಪ್ರಭಾವಿತರಾಗುತ್ತೇವೆ. ಹೀಗೆ ಅವು ಕಾಲ ಹಾಗೂ ಮಹತ್ವ ಇವೆರಡೂ ದೃಷ್ಟಿಗಳಿಂದ ಪ್ರಥಮ ಸಮೂಹಗಳು. ಕೂಲೆ ಹೇಳುವಂತೆ ಅವು ಪ್ರಾಥಮಿಕ ಸಮೂಹಗಳು.

ಇಷ್ಟು ಪರಿಚಿತವಾದ ಹಾಗೂ ವ್ಯಕ್ತಿತ್ವದ ರೂಪನೆಯಲ್ಲಿ ಮಹತ್ವ ಪಡೆದ ಈ ಕಿರುಗುಂಪುಗಳ ಬಗೆಗೆ ನಾವಿನ್ನೂ ಅಷ್ಟಾಗಿ ಗಮನಕೊಟ್ಟಿಲ್ಲ ಎಂದರೆ ತಪ್ಪಾಗ ಲಾರದು. ಇವುಗಳ ಅಧ್ಯಯನಕ್ಕೆ ಶ್ರೀಕಾರ ಹಾಕಿದ ಶ್ರೇಯಸ್ಸು ಜರ್ಮನ್ ದೇಶದ ಸಮಾಜ ವಿಜ್ಞಾನಿ ಜಾರ್ಜ ಸಿಮೆಲ್ (೧೮೫೮-೧೯೧೮). ಇವನ ನಂತರ ವಿವಿಧ ಪ್ರಾಥಮಿಕ ಸಮೂಹಗಳ ಅಧ್ಯಯನಕ್ಕೆ ತಳಪಾಯ ಹಾಕಿದವನೆಂದರೆ ಅಮೇರಿಕೆಯ ಸಮಾಜಶಾಸ್ತ್ರಜ್ಞನಾದ ಚಾರ್ಲ್ಸ್ ಹಾರ್ಟನ್ ಕೂಲೆ (೧೮೬೪-೧೯೨೯). ಜಾರ್ಜ ಸಿಮೆಲನು ದ್ವಯ ಮತ್ತು ತ್ರಯಗಳ ಕೌತುಕಪೂರ್ಣವಾದ ಲೋಕದ ಕಿರುಪರಿಚಯ ವನ್ನು ಮಾಡಿಸುತ್ತಾನೆಂಬುದು ನಿಜವಾದರೂ ಅವನ ಗಮನವು ಹೆಚ್ಚಾಗಿ ಸಮೂಹದ ಸದಸ್ಯರ ಸಂಖ್ಯೆ ಎಷ್ಟಿದೆ ಹಾಗೂ ಆ ಸಂಖ್ಯೆಯು ಸಮೂಹ ರಚನೆಯನ್ನು ಹೇಗೆ ನಿರ್ಧರಿಸುತ್ತದೆ ಎಂಬ ವಿಷಯದ ಕಡೆಗಿದೆ. ಅವನು ತನ್ನ ಪ್ರಬಂಧಕ್ಕೆ 'ಸಮೂಹದ ಪರಿಮಾಣಾತ್ಮಕ ಮುಖಗಳು' ಎಂದು ಕರೆದುದು ಅರ್ಥಪೂರ್ಣವಾಗಿದೆ.

ಕೂಲೆ ಪ್ರಾಥಮಿಕ ಸಮೂಹಗಳ ವಿವಿಧ ಗುಣಲಕ್ಷಣಗಳನ್ನು ಚೆನ್ನಾಗಿ ವಿವರಿ ಸಿದ್ದಾನಾದರೂ ಅವನಿಗೆ ದ್ವಯ ಮತ್ತು ತ್ರಯಗಳ ಬಗ್ಗೆ ವಿಶೇಷವಾದ ಮಮತೆ ಯೇನೂ ಇಲ್ಲ. ಆ ನಂತರದ ಲೇಖಕರು ಚಿಕ್ಕ ಸಮೂಹಗಳ ಬಗ್ಗೆ ಅನೇಕ ಸಂಶೋ ಧನಾತ್ಮಕ ಪ್ರಬಂಧಗಳನ್ನು ಬರೆದಿದ್ದಾರೆ. ಇವರಲ್ಲಿ ಕೆಲವರಾದರೂ ದ್ವಯ ಮತ್ತು ತ್ರಯಗಳ ಅದ್ಭುತ ಲೋಕಗಳನ್ನು ಅಸ್ಪಿಷ್ಟಾಗಿ ಪರಿಚಯ ಮಾಡಿಕೊಟ್ಟಿದ್ದಾರೆ. ಒಟ್ಟಿನಲ್ಲಿ, ಇದಿನ್ನೂ ಹೆಚ್ಚಾಗಿ ತುಳಿಯದ ಹಾದಿ. ಈ ತುಳಿಯದ ಹಾದಿಯನ್ನು ತುಳಿಯುವ ಹಾಗೂ ತಿಳಿದ ಕೆಲವು ಮೌಲಿಕ ಅಂಶಗಳನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುವ ಒಂದು ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೨

ದ್ವಯುವು ಹುಟ್ಟುವುದು ಹೇಗೆ ? ಎಲ್ಲ ವಿಧದ ಸಮೂಹಗಳು ಹುಟ್ಟುವ ರೀತಿಯಲ್ಲಿಯೇ ಅದು ಹುಟ್ಟುತ್ತದೆ. ಇಬ್ಬರು ವ್ಯಕ್ತಿಗಳ ಸಾಮಾನ್ಯ ಆಸ್ಥೆ, ಆಸಕ್ತಿಗಳನ್ನು ಅದು ತೃಪ್ತಿಪಡಿಸುತ್ತದೆ. ವಿವಾಹೇಚ್ಛು ಗಂಡು-ಹೆಣ್ಣು, ವ್ಯಾಪಾರದ ಪಾಲುಗಾರರು ಇವರೇ ಮೊದಲಾದವರು ತಮ್ಮ ಸಮಾನ ಉದ್ದೇಶಗಳನ್ನು ಆಕಸ್ಮಿಕವಾಗಿಯೋ ಅಥವಾ ಪ್ರಜ್ಞಾಪೂರ್ವಕವಾಗಿಯೋ ಗುರುತಿಸಿಕೊಂಡು ಮುಂದೆ ದೀರ್ಘಕಾಲದ ಒಡನಾಡಿಗಳಾಗಬಹುದು, ಅಥವಾ ನೆರೆಹೊರೆಯಲ್ಲಿ ಬೆಳೆದು ದೊಡ್ಡವರಾದ ಗೆಳೆಯರು, ಒಡಹುಟ್ಟಿದ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ತಮಗೆ ಗೊತ್ತಿಲ್ಲದಂತೆಯೇ ಆತ್ಮೀಯ ಜೊತೆಗುಂಪನ್ನು ಸೃಷ್ಟಿಸಿಕೊಳ್ಳಬಹುದು. ಈ ಜೋಡಿಗಳಲ್ಲಿ ಹೆಚ್ಚಿನವು ತಮ್ಮ ಸಮಾನ ಆಸಕ್ತಿ, ಅಭಿರುಚಿ, ಆಸ್ಥೆ ಅಥವಾ ಉದ್ದೇಶಗಳಿಂದ ಪ್ರೇರಿತವಾಗಿರುತ್ತವೆ. ಉದಾಹರಣೆಗೆ, ಇಸ್ಪೀಟು ಆಡುವ ಅಥವಾ ನಾಟಕ ನೋಡುವ ಅಭಿರುಚಿಯುಳ್ಳ ಇಬ್ಬರು ಕಾಲಕ್ರಮೇಣ ಬಿಡಲಾರದ ಜೋಡಿಯಾಗುತ್ತಾರೆ. ನಾವು ನಮ್ಮ ದೈನಂದಿನ ಜೀವನದಲ್ಲಿ ಆಟಗಾರರ ಜೋಡಿಗಳನ್ನೂ, ಗೆಳೆಯರ ಜೋಡಿಗುಂಪುಗಳನ್ನೂ, ಸಮಾನ ವ್ಯಸನಿಗಳ ಅಥವಾ ಸಮಾನ ಧರ್ಮಿಗಳ ಅನೇಕಾನೇಕ ದ್ವಯಗಳನ್ನೂ ಕಂಡಿದ್ದೇವೆ.

ದ್ವಯಗಳಲ್ಲಿ ಕೆಲವು ಇನ್ನೊಂದು ರೀತಿಯಲ್ಲಿ ಹುಟ್ಟಬಹುದು. ಇಬ್ಬರು ವ್ಯಕ್ತಿಗಳು ತಾವು ಒಬ್ಬರಿಗೊಬ್ಬರು ಪೂರಕವಾಗಿರುವುದನ್ನು ಗ್ರಹಿಸಿ ಜೋಡಿಗುಂಪನ್ನು ಸೃಷ್ಟಿಸಿಕೊಳ್ಳುತ್ತಾರೆ. ಉದಾಹರಣೆಗೆ, ದಾಂಪತ್ಯದ ಗಂಡು-ಹೆಣ್ಣು ಜೋಡಿಗಳು ಹೀಗೆ ಸೃಷ್ಟಿಯಾಗುತ್ತವೆ. ಸಂಗೀತಲೋಕದ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಅಲ್ಲಿ ಗಾಯಕನಿಗೆ ಅವನ ಅಚ್ಚುಮೆಚ್ಚಿನ 'ಸಾಥಿ' ಇರುತ್ತಾನೆ. ಹಾಗೆಯೇ ಸುಪ್ರಸಿದ್ಧ ಗಾಯಕಿಯೊಬ್ಬಳಿಗೆ ಆಕೆಯ ತಂಗಿ ಅಥವಾ ಮಗಳೇ ಬೇಕು. ಒಬ್ಬರು ಇನ್ನೊಬ್ಬರಿಗೆ ಪೂರಕವಾಗಿರುವುದು ಸಾಮಾನ್ಯ ಸಂಗತಿ. ಹಾಗೆಯೇ ವ್ಯಾಪಾರ ವಾಣಿಜ್ಯದಲ್ಲಿ ಹೆಚ್ಚು ಬಂಡವಳ ತೊಡಗಿಸುವ ಒಬ್ಬನಿಗೆ ವ್ಯವಹಾರ ಚತುರನಾದ ಪಾಲುದಾರನೊಬ್ಬನಿರುವುದನ್ನು ಕಾಣುತ್ತೇವೆ. ಅನೇಕ ಕೆಳೆಗುಂಪು (ಗೆಳೆತನದ ಗುಂಪು)ಗಳನ್ನು ನಾವು ಒಳಹೊಕ್ಕು ನೋಡಿದರೆ ಕಾಣುವ ಒಂದು ವಿಷಯವೆಂದರೆ ಆ ಜೋಡಿಗಳಲ್ಲಿ ಒಬ್ಬನು ಸಿದ್ಧಾಂತಪ್ರಿಯನಾದರೆ, ಇನ್ನೊಬ್ಬ ಕರ್ತವ್ಯಶಾಲಿಯಾಗಿರುತ್ತಾನೆ. ಒಬ್ಬನು ಮಿದುವಾಗಿದ್ದರೆ, ಇನ್ನೊಬ್ಬ ಗಡಸು. ಪ್ರಸಿದ್ಧವಾದ 'ಹಯವದನ' ನಾಟಕದಲ್ಲಿ ಬರುವ ಕಪಿಲ ಮತ್ತು ದೇವದತ್ತರು 'ಜೀವ-ಕೊರಳ' ಗೆಳೆಯರು. ಆ ಜೋಡಿಯಲ್ಲಿ ಮೊದಲನೆಯವನು ಮೈಯಲ್ಲಿ ಗಟ್ಟಿಗನಾದರೆ, ಎರಡನೆಯವನು ಮಿದುಳಲ್ಲಿ ಗಟ್ಟಿಗನು. ಜನರು ಮೆಚ್ಚುವ ವಿದೂಷಕರ ಜೋಡಿಯಲ್ಲಿ ಒಬ್ಬನು ಉದ್ದನೆಯ ಆಳು; ಇನ್ನೊಬ್ಬ ಗಿಡ್ಡರಲ್ಲಿ ಗಿಡ್ಡ ಅಥವಾ ಅಡ್ಡಗಲ ಅಸಡ್ಡಾಳ

ಬೆಳೆದ ಆಸಾಮಿ. ಸಿನಿಮಾ ಪ್ರಪಂಚದ ಲಾರೆಲ್-ಹಾರ್ಡಿ ಜೋಡಿ ಇಂಥ ಪೂರಕ ತತ್ವದ ಮೇಲೆಯೇ ಅವಲಂಬಿಸಿದೆ.

ದ್ವಯದ ವಿಶೇಷ ಗುಣವೇನು ? ಅಥವಾ ವಿಶೇಷ ಗುಣಗಳಾವುವು ? ಉತ್ತರ ರೂಪವಾಗಿ ಎಲ್ಲಕ್ಕೂ ಮೊದಲು ಒಂದು ವಿಶೇಷ ಗುಣವನ್ನು ಎತ್ತಿ ಹೇಳಬಹುದು. ಅದೇನೆಂದರೆ ಬೇರೆಲ್ಲ ಪ್ರಕಾರದ ಗುಂಪುಗಳಲ್ಲಿ ಒಂದು ಗುಂಪಿನ ಯಾವನೇ ಒಬ್ಬ ಸದಸ್ಯನು ಹೊರಗುಳಿದರೂ ಆ ಗುಂಪಿಗೆ ಸ್ವತಂತ್ರವಾದ ಅಸ್ತಿತ್ವ ಇರುತ್ತದೆ. ಉದಾಹರಣೆಗೆ, ನಟನೊಬ್ಬ ಹೊರಗೆ ಬಂದರೂ ನಾಟಕ ಕಂಪನಿ ಉಳಿಯುತ್ತದೆ. ದೊಡ್ಡ ಕುಟುಂಬದಲ್ಲಿ ಯಾವನೊಬ್ಬ ಹೊರಗೆ ಬಂದರೆ ಅಥವಾ ತೀರಿಕೊಂಡರೆ ಕುಟುಂಬವು ಅಳಿದುಹೋಗುವುದಿಲ್ಲ. ಕೆಲವು ವ್ಯಕ್ತಿಗಳು ಪಕ್ಷ ಬದಲಾಯಿಸಿದರೂ ರಾಜಕೀಯ ಪಕ್ಷವು ಮುಂದುವರಿಯುವುದನ್ನು ಕಾಣುತ್ತೇವೆ ಹೀಗೆ ಬೇರೆ ಎಲ್ಲ ರೀತಿಯ ಸಮೂಹಗಳಿಗೆ ಒಬ್ಬ ಅಥವಾ ಕೆಲವು ಸದಸ್ಯರನ್ನು ಮೀರಿ ನಿಲ್ಲುವ ಅತಿ ವೈಯಕ್ತಿಕ ಅಸ್ತಿತ್ವವಿದೆ. ಆದರೆ ದ್ವಯಕ್ಕೆ ಇಂಥ ಅಸ್ತಿತ್ವವಿಲ್ಲ. ಜೋಡಿಯಲ್ಲಿಯ ಒಬ್ಬನು ಹೊರಗೆ ಬಂದರೆ ಅಥವಾ ಸತ್ತರೆ ಆ ಗುಂಪು ಅಳಿದುಹೋಗುತ್ತದೆ. ಒಂದು ದಾಂಪತ್ಯದ ಜೋಡಿ ಅಥವಾ ಇಬ್ಬರು ಆತ್ಮೀಯ ಗೆಳೆಯರ ಜೋಡಿ ಅಥವಾ ಮತ್ತಾವುದೇ ಉದಾಹರಣೆಯನ್ನು ತೆಗೆದುಕೊಂಡರೂ ಈ ಮಾತು ಸ್ಪಷ್ಟವಾಗಿ ಗೋಚರಿಸುತ್ತದೆ. ಇಬ್ಬರಲ್ಲಿ ಒಬ್ಬರು ಇಲ್ಲದಾಗ ಗುಂಪೇ ಇಲ್ಲವಾಗುತ್ತದೆ. ಈ ಕಾರಣದಿಂದಲೇ ಸಿಮೆಲ್ "ದ್ವಯಕ್ಕೆ ಅದರ ಉಳಿವಿಗೆ ಇಬ್ಬರು ಬೇಕು; ಆದರೆ ಅದರ ಅಳಿವಿಗೆ ಒಬ್ಬರೇ ಸಾಕು" ಎಂದು ಹೇಳಿದ್ದು.

ದ್ವಯದ ಸದಸ್ಯರಿಗೆ ಅತಿ-ವೈಯಕ್ತಿಕವಾದ ಮತ್ತೊಂದು ಅಸ್ತಿತ್ವವಿಲ್ಲೆಂದು ನೋಡಿದೆವು. ಈ ಕಾರಣದಿಂದಾಗಿ ದ್ವಯವು ಬೇರೆ ಗುಂಪುಗಳು ಹೇರುವ ನಿರ್ಬಂಧಗಳನ್ನು ಹೇರಲಾರದು ಎಂಬ ಮಾತನ್ನು ನಾವು ಗಮನಿಸಬೇಕು. ರಾಷ್ಟ್ರದ ಹಿತ, ಪಕ್ಷದ ಹಿತ, ಸಮುದಾಯದ ಹಿತ ಮೊದಲಾದ ವ್ಯಕ್ತಿಗೆ ಮೀರಿದ ಗುರಿ-ಗಮ್ಯಗಳ ಗೊಂದಲವಿಲ್ಲ. ಅಲ್ಲದೆ ಗೆಲುವು ನನ್ನಿಂದಾಯಿತು, ಸೋಲು ಇನ್ನೊಬ್ಬನಿಂದಾಯಿತು ಎಂಬ ಜಗಳವಿಲ್ಲ. ಇಲ್ಲಿ ಹೊಣೆಗಾರಿಕೆಗಳು ಇಬ್ಬರವು; ಯಶಸ್ಸು ಅಪಯಶಸ್ಸು ಇಬ್ಬರವು.

ದ್ವಯವು ಪ್ರಚೋದಿಸುವ ಭಾವನೆಗಳಾವುವು ? ಸದಸ್ಯರ ಸಂಬಂಧಗಳು ಯಾವ ರೀತಿಯವು ? ಈ ಬಗ್ಗೆ ಕೆಲವು ಸಂಗತಿಗಳು ನಮಗೆಲ್ಲ ಗೊತ್ತು. ಜೋಡಿಯು ನಿಕಟವಾದ, ಅನ್ಯೋನ್ಯವಾದ, ತೀವ್ರವಾದ, ಭಾವನಾತ್ಮಕವಾದ ಸಂಬಂಧಗಳಿಂದ ಕೂಡಿರುತ್ತದೆ. 'ತನುವೆರಡು ಮನವೊಂದು' ಎಂಬ ಕಾವ್ಯದ ಮಾತು ಎಲ್ಲಾದರೂ ಅನ್ವಯಿಸುವದಾದರೆ ಅದು ದ್ವಯಕ್ಕೆ ಅನ್ವಯಿಸಲೇಬೇಕು. ಸಮಭಾವ, ಪರಸ್ಪರಾಶ್ರಯ, ಆತ್ಮೀಯತೆ, ಅನ್ಯೋನ್ಯತೆ ಇವೆಲ್ಲ ಪದಗಳು ಸದಸ್ಯರ ಸಂಬಂಧಗಳನ್ನು

ಸೂಚಿಸುತ್ತವೆ. ಸಾವು, ಅಗಲುವಿಕೆ, ಶಿಕ್ಷೆ ಅಥವಾ ಬೇರಾವುದೇ ಕಾರಣದಿಂದ ಜೋಡಿ ಗುಂಪು ಒಡೆದುಹೋದರೆ ವ್ಯಕ್ತಿಗಳು ಎಷ್ಟು ದುಃಖಪಡುತ್ತಾರೆ ಎಂಬುದನ್ನು ಕಾವ್ಯಗಳು ವರ್ಣಿಸಿ ಹೇಳಿವೆ. ಬಹು ದೀರ್ಘ ದಾಂಪತ್ಯದ ನಂತರ ಗಂಡ ಅಥವಾ ಹೆಂಡತಿ ತೀರಿಕೊಂಡಾಗ ಆಗುವ ವೇದನೆ ತೀವ್ರವಾದುದು. ಹಾಗೆಯೇ ಆತ್ಮೀಯ ಗೆಳೆಯನು ಇಲ್ಲದಾದಾಗ ಜೀವನವೆಲ್ಲ ಶೂನ್ಯ ಎಂದು ಹಲುಬಿದ ಗೆಳೆಯರಿದ್ದಾರೆ.

ಜೋಡಿ ಅಥವಾ ದ್ವಯಗಳು ಸದಸ್ಯರ ವ್ಯಕ್ತಿತ್ವದ ಮೇಲೆ ಗಾಢವಾದ ಪ್ರಭಾವವನ್ನು ಬೀರುತ್ತವೆ. ಗಂಡ–ಹೆಂಡತಿ, ತಾಯಿ–ಮಗ, ಅಣ್ಣ–ತಮ್ಮ, ಅಕ್ಕ–ತಂಗಿ, ಆತ್ಮೀಯ ಗೆಳೆಯರ ಗುಂಪುಗಳು ಇವೆಲ್ಲ ಎಲ್ಲ ಸಮಾಜಗಳಲ್ಲಿಯೂ ವ್ಯಕ್ತಿತ್ವವನ್ನು ರೂಪಿಸುವ ಗುಂಪುಗಳು. ಒಬ್ಬನಿಗಾಗಿ ಇನ್ನೊಬ್ಬನು ಸರ್ವಸ್ವವನ್ನು ಧಾರೆಯೆರೆದು ಕೊಡಬಲ್ಲ ಪರಸ್ಪರ ಪ್ರೇಮ, ಬಂಧುತ್ವ, ಸಹಕಾರ, ತ್ಯಾಗ ಇಂಥ ಗುಂಪುಗಳಲ್ಲಿ ಮಾತ್ರ ಸಾಧ್ಯ ಎಂದರೆ ಅತಿಶಯೋಕ್ತಿಯಲ್ಲ.

ದ್ವಯಗಳು ಸೃಷ್ಟಿಸುವ ಗಾಢಸ್ನೇಹ ಪ್ರೇಮಗಳು ಎಷ್ಟು ಸತ್ಯವೋ ಅವು ಸೃಷ್ಟಿಸುವ ಈರ್ಷ್ಯೆ, ಕ್ರೋಧಗಳು ಕೂಡ ಅಷ್ಟೇ ಸತ್ಯ. ಸದಸ್ಯರ ಸಂಬಂಧಗಳು ಕೆಟ್ಟರೆ ಉಂಟಾಗುವ ಕಹಿ ಅಷ್ಟಿಷ್ಟಲ್ಲ. ಸಂಬಂಧಗಳು ಮಧುರವಾಗಿದ್ದಾಗ ಸರ್ವ ತ್ಯಾಗಕ್ಕೆ ಸಿದ್ಧವಿರುವ ಆತ್ಮೀಯ ಗೆಳೆಯರಿಬ್ಬರು ಯಾವುದೋ ಕಾರಣದಿಂದ ವಿರಸ ಉಂಟಾದಾಗ ಪರಸ್ಪರ ಸರ್ವನಾಶಕ್ಕೂ ಸಿದ್ಧರಾಗುವುದನ್ನು ನಾವು ವ್ಯಾವಹಾರಿಕ ಜೀವನದಲ್ಲಿ ಕಾಣುತ್ತೇವೆ. ಅವರು ಆಜನ್ಮ ವೈರಿಗಳಂತೆ ವರ್ತಿಸುತ್ತಾರೆ. ಅದೇ ರೀತಿಯಲ್ಲಿ ವಿವಾಹಿತ ದಂಪತಿಗಳ ಸಂಬಂಧಗಳಿಗೆ ಹುಳಿ ಹಿಂಡಿದಾಗ ಅವರ ಬಾಳು ನರಕ ಸದೃಶವಾಗುವುದನ್ನೂ ನಾವು ಕಾಣುತ್ತೇವೆ. ಇಂಥ ಜೋಡಿಗಳು ಮುಂದುವರಿಯುವುದಕ್ಕಿಂತ ಮುರಿದು ಹೋಗುವುದೇ ವಾಸಿ.

ನಾವು ಗಮನಿಸಬಹುದಾದ ಇನ್ನೊಂದು ವಿಷಯವೆಂದರೆ ಈ ಜೋಡಿಗಳ ಹುಟ್ಟನ್ನೂ, ಮುಕ್ತಾಯವನ್ನೂ ಸಮುದಾಯಗಳು ನಿಯಂತ್ರಿಸುವದಿದೆ. ಉದಾಹರಣೆಗೆ, ವಿವಾಹಿತ ದಂಪತಿಗಳ ಜೋಡಿ ಸೃಷ್ಟಿಯಾಗಲು ಸಮಾಜದ ಅನುಮತಿ, ಆಶೀರ್ವಾದ ಬೇಕು. ವ್ಯಾಪಾರದ ಪಾಲುಗಾರಿಕೆ ನಿರಂತರವಾಗಿ ಮುಂದುವರಿಯಲು ಸಮಾಜದ ಮತ್ತು ಸರಕಾರದ ಮನ್ನಣೆ ಬೇಕು. ಅದೇರೀತಿ ದಾಂಪತ್ಯದ ಜೋಡಿಯನ್ನು ಮುರಿಯುವದಕ್ಕೂ ಸಮಾಜಪ್ರಣೀತವಾದ ನಿಯಮಗಳೂ, ನಿರ್ಬಂಧನೆಗಳೂ ಇವೆ. ಪಾಲುಗಾರರು ಬೇರೆಯಾಗುವ ವಿಧಾನವನ್ನು ಸಮಾಜಗಳು ನಿಯಮಬದ್ಧಗೊಳಿಸಿವೆ. ಯಾವ ಜೋಡಿಯು ಪ್ರಶಸ್ತವೆಂಬುದನ್ನೂ, ಯಾವುದು ನಿಷಿದ್ಧವೆಂಬುದನ್ನೂ ಸಮುದಾಯಗಳು ನಿರ್ಧರಿಸಬಹುದು. ಮ್ಯಾಲಿನಾಫ್‌ಸ್ಕಿಯ ಪ್ರಕಾರ

ಕೆಲವು ಆದಿವಾಸಿ ಸಮಾಜಗಳಲ್ಲಿ ವ್ಯಕ್ತಿಗಳು ಯಾರೊಡನೆ ಜೋಡಿ ಗುಂಪನ್ನು ನಿರ್ಮಿಸಬಹುದೆಂಬ ಬಗ್ಗೆ ಕಟ್ಟುನಿಟ್ಟಾದ ನಿಯಮಗಳಿವೆ. ರಕ್ತಸಂಬಂಧಿಗಳು, ದಾಯಾದಿಗಳು, ವಚನಬದ್ಧರಾದ ಸ್ನೇಹಿತರು ಮಾತ್ರ ಜೋಡಿಯನ್ನು ಕಟ್ಟಲು ಸಾಧ್ಯವಿದೆ. ಕೆಲವು ಆದಿವಾಸಿ ಜನಾಂಗಗಳು 'ಕುಲಾ' ಎಂಬ ವಿನಿಮಯ ಪದ್ಧತಿಯನ್ನು ಇಟ್ಟುಕೊಂಡಿವೆ. ಇಂಥ ವಿನಿಮಯಕ್ಕೆ ಯಾರು ಯಾರ ಜೋಡಿಯಾಗಬೇಕೆಂಬುದನ್ನು ಆ ಜನಾಂಗಗಳ ರೂಢಿಗಳೇ ನಿರ್ಧರಿಸುತ್ತವೆ ಎಂದು ಮ್ಯಾಲಿನಾಫ್‌ಸ್ಕಿ 'ಅನಾಗರಿಕ ಸಮಾಜದಲ್ಲಿ ಅಪರಾಧ ಮತ್ತು ರೂಢಿ-ರಿವಾಜುಗಳು' ಎಂಬ ಗ್ರಂಥದಲ್ಲಿ ಹೇಳಿದ್ದಾನೆ.

೩

ತ್ರಯವು ದ್ವಯದಂತೆಯೇ ಬಹಳ ಸ್ವಾರಸ್ಯಕರವಾದ ಇನ್ನೊಂದು ಪ್ರಕಾರ. ಹಿಂದೆ ಹೇಳಿದಂತೆ ಅದು ಮೂವರು ಸದಸ್ಯರಿರುವ ಸಮೂಹ. ದ್ವಯಕ್ಕೆ ಮೂರನೆಯವನೊಬ್ಬನು ಸೇರಿಕೊಂಡಾಗ ಅದು ತ್ರಯವಾಗುತ್ತದೆ ಎಂಬುದು ಬಹಳ ಸರಳವಾದ ಹೇಳಿಕೆ. ಮೇಲುನೋಟಕ್ಕೆ ಈ ಮೂರನೆಯವನ ಪ್ರವೇಶ ಅಷ್ಟೇನೂ ಮಹತ್ವದ್ದಲ್ಲ ಎನ್ನಿಸಬಹುದು. ಆದರೆ ಕೂಲಂಕಷವಾಗಿ ನೋಡಿದರೆ ಇಂಥ ಪ್ರವೇಶದಿಂದ ಸಮೂಹದಲ್ಲಿ ಗುಣಾತ್ಮಕವಾದ ಪರಿವರ್ತನೆ ಉಂಟಾಗುವದನ್ನು ನಾವು ಕಾಣಬಹುದು.

ದ್ವಯಗಳ ಒಂದು ವಿಶೇಷ ಲಕ್ಷಣವನ್ನು ಹಿಂದೆ ಗುರುತಿಸಿದ್ದೇವೆ. ಅದೇನೆಂದರೆ ದ್ವಯದ ಸದಸ್ಯರಲ್ಲಿ ಯಾರೇ ಒಬ್ಬರು ಹೊರಗೆ ಬಂದರೆ ದ್ವಯವೇ ಇಲ್ಲವಾಗುತ್ತದೆ. ಅಲ್ಲಿನ ವ್ಯಕ್ತಿಗಳಿಗೆ ಅತಿ ವೈಯಕ್ತಿಕ ಅಸ್ತಿತ್ವವಿಲ್ಲ. ಆದರೆ ದ್ವಯವು ತ್ರಯವಾದಾಗ ಕೆಲವು ನೂತನ ಲಕ್ಷಣಗಳು ಕಂಡುಬರುವವು. ತ್ರಯದ ಯಾವುದೇ ಒಬ್ಬ ಸದಸ್ಯನು ಗುಂಪಿನಿಂದ ಹೊರಗೆ ಬಂದರೂ ತ್ರಯವು ಒಂದು ಗುಂಪಾಗಿ (ಈಗ ಹೊಸದಾದ ದ್ವಯವಾಗಿ) ಮುಂದುವರೆಯಬಲ್ಲುದು. ಅಲ್ಲದೆ ಮೊದಲಬಾರಿಗೆ ವ್ಯಕ್ತಿಗೆ ತಾನು ಗುಂಪಿನಿಂದ ಅಥವಾ ಬಹುಮತದಿಂದ ಹೊರತಳ್ಳಲ್ಪಡಬಹುದೆಂಬ ಅರಿವು ಮೂಡುತ್ತದೆ. ತಾನು ಮೂವರಲ್ಲಿ ಒಬ್ಬ ಸದಸ್ಯ; ತಾನು ವ್ಯಕ್ತಿ; ಉಳಿದಿಬ್ಬರು ಕೂಡಿದ ಗುಂಪೊಂದು ಇದೆ ಹಾಗೂ ಆ ಗುಂಪು ತನ್ನನ್ನು ಮೀರಿ ಇರಬಲ್ಲುದು, ಕೆಲಸ ಮಾಡಬಲ್ಲುದು, ಮುಂದುವರಿಯಬಲ್ಲುದು ಎಂಬ ಭಾವನೆ ಬರುತ್ತದೆ. ಅಂದರೆ ತನ್ನನ್ನು ಮೀರಿದ ಗುಂಪಿದೆ; ಅದು ತನ್ನ ಮೇಲೆ ಒತ್ತಡ ಹೇರಬಲ್ಲುದು ಎಂಬುದನ್ನು ಗ್ರಹಿಸುತ್ತಾನೆ. ಈ ಭಾವನೆ ದ್ವಯಗಳಲ್ಲಿ ಇರುವುದಿಲ್ಲ. ಅದು ತ್ರಯದಲ್ಲಿ ಕಾಣಿಸಿಕೊಳ್ಳುತ್ತದೆ ಹಾಗೂ ಹೆಚ್ಚು ಸದಸ್ಯರಿರುವ ಎಲ್ಲ ಗುಂಪುಗಳಲ್ಲಿ ಇರುತ್ತದೆ.

ಮೂರನೆಯ ಸದಸ್ಯನ ಪ್ರವೇಶವಾದಾಗ ಉಂಟಾಗುವ ಸಮೂಹ ಪ್ರಕ್ರಿಯೆಗಳನ್ನು ಸಿಮೆಲ್ ಸಾದ್ಯಂತ ವಿವರಿಸಲಿಲ್ಲ. ಅವನು ಮುಖ್ಯವಾಗಿ ಮೂರು ಬಗೆಯ ಸಾಧ್ಯತೆಗಳನ್ನು ಗುರುತಿಸಿದ್ದಾನೆ:

೧. ಮೊದಲನೆಯದಾಗಿ, ಮೂರನೆಯವನು ಉಳಿದಿಬ್ಬರ ಜೊತೆಗೆ ತ್ರಯಸ್ಥನಾಗಿ ನಿಲ್ಲಬಹುದು. ನಿರ್ಣಯಕಾರ (ಅಂಪಾಯರ್) ತೀರ್ಪುಗಾರ ಅಥವಾ ನ್ಯಾಯಾಧೀಶನಂತೆ ವರ್ತಿಸಬಹುದು. ಕೆಲವೊಮ್ಮೆ ರಾಜಿಮಾಡಿಸುವ ಪಾತ್ರವಹಿಸಬಹುದು. ಗುಂಪು ಒಡೆಯುವದನ್ನು ತಡೆಯಬಹುದು.

೨. ಎರಡನೆಯದಾಗಿ ಆ ಮೂರನೆಯವನು 'ಇಬ್ಬರ ನ್ಯಾಯ ಮೂರನೆಯವನ ಆದಾಯ' ಎಂಬಂತೆ ವರ್ತಿಸಬಹುದು. ಅವನು ಉಳಿದಿಬ್ಬರನ್ನು ಜಗಳಕ್ಕೆ ಹಚ್ಚಿ ತಾನು ಸದಾ ಲಾಭ ಪಡೆಯುತ್ತಾನೆಂದಲ್ಲ; ಆದರೆ ಅವರ ಜಗಳವನ್ನು ಸುಮ್ಮನೆ ನೋಡುತ್ತಿದ್ದು ತನ್ನ ಬೇಳೆ ಬೇಯಿಸಿಕೊಳ್ಳಬಹುದು. ಹಳೆಯ ಕತೆಯೊಂದರಲ್ಲಿ ಎರಡು ಬೆಕ್ಕುಗಳು ಬೆಣ್ಣೆ ಪಾಲು ಮಾಡಿಕೊಳ್ಳಲು ಅಸಮರ್ಥವಾಗಿ ಕೋತಿಯೊಂದನ್ನು ಮೊರೆಹೊಕ್ಕು ಮೋಸಹೋದ ಪ್ರಸಂಗ ಇದೆಯಷ್ಟೆ. ಹಾಗೆ ಈ ಪರದುಃಖ ಸಂತೋಷ (ಟರ್ಷಿಯಸ್ ಗಾಡೆನ್ಸ) ಲಾಭ ಪಡೆಯಬಹುದು.

೩. ಮೂರನೆಯದಾಗಿ, ಅವನು ಉದ್ದೇಶಪೂರ್ವಕವಾಗಿ 'ವಿಭಜಿಸಿ ಆಳು' (ಡಿವೈಡ್ ಎಚ್ ಇಂಪೇರಾ) ಎಂಬ ತತ್ವವನ್ನು ಅನುಸರಿಸಬಹುದು. ತನ್ನ ಸ್ವಂತ ಲಾಭಕ್ಕಾಗಿ ಅಥವಾ ತನ್ನ ಸ್ಥಾನಭದ್ರತೆಗಾಗಿ ಅವನು ಉಳಿದಿಬ್ಬರನ್ನು ಸದಾ ದೂರ ವಿಡಲು ಯತ್ನಿಸುತ್ತಾನೆ. ವಿಭಜಿಸಿ ಆಳಲು ಯತ್ನಿಸುತ್ತಾನೆ.

ಸಿಮೆಲ್ ಕೇವಲ ಮೂರು ಸಾಧ್ಯತೆಗಳನ್ನು ಮಾತ್ರ ವಿವರಿಸಿದ್ದರೂ ಬೇರೆ ಅನೇಕ ಸಾಧ್ಯತೆಗಳಿವೆಯೆಂದು ಒಪ್ಪಿಕೊಂಡಿದ್ದಾನೆ. ಅವನ ನಂತರದ ಲೇಖಕರು ಅಂಥ ಅನೇಕ ಸಾಧ್ಯತೆಗಳನ್ನು ತೋರಿಸಿದ್ದಾರೆ.

ದ್ವಯಗಳ ಸದಸ್ಯರಲ್ಲಿರುವ ಐಕ್ಯಭಾವನೆ ಸಹಕಾರಗಳ ಬಗ್ಗೆ ಹಿಂದೆ ಪ್ರಸ್ತಾಪಿಸಲಾಗಿದೆ. ಅಂಥ ಐಕಮತ್ಯ ತ್ರಯಗಳಲ್ಲಿ ಕಂಡುಬರುವುದು ವಿರಳ ಅಥವಾ ಅದಕ್ಕೆ ಅಷ್ಟು ಐಕಮತ್ಯ ಬೇಕಾಗಿರಲಿಕ್ಕಿಲ್ಲ. ಮೂವರಲ್ಲಿ ಒಬ್ಬ ಹೊರಗುಳಿದರೂ ಇಬ್ಬರ ಜೋಡಿಗುಂಪು ಬದುಕಿ ಉಳಿಯಲು ಸಾಧ್ಯವಿರುವುದರಿಂದ ಮುಕ್ಕೂಟದ ಮೂವರು ಐಕಮತ್ಯದಿಂದ ಇರುವುದು ಅತ್ಯಾವಶ್ಯವೆಂದೇನೂ ಅಲ್ಲ. ಹೀಗಾಗಿ ಎಷ್ಟೋ ತ್ರಯಗಳು ಹೆಚ್ಚಾಗಿ ಒಬ್ಬನ ವಿರುದ್ಧವಿರುವ ಇಬ್ಬರ ತಾತ್ಪೂರ್ತಿಕ ಒಕ್ಕೂಟಗಳಂತೆ ಕಾಣುತ್ತವೆ. ಉದಾಹರಣೆಗೆ ತಾಯಿ–ಮಗ ಬಲು ಸೊಗಸಾದ ದ್ವಯ. ಹೊಸದಾಗಿ ಬಂದ ಮನೆಯ ಸೊಸೆ ಮೂರನೆಯವಳು. ಇವಳ ಪ್ರವೇಶದ ನಂತರ ತ್ರಯದಲ್ಲಿ

ಹೊಸ ಜೋಡಿಗುಂಪು ನಿರ್ಮಾಣವಾಗುವುದನ್ನು ಊಹಿಸಿಕೊಂಡರೆ, ಈ ಮಾತಿನ ಅರ್ಥವಾದೀತು.

ತ್ರಯಗಳನ್ನು ಸುದೀರ್ಘವಾಗಿ ಅಧ್ಯಯನ ಮಾಡಿದ ಥಿಯೊಡೋರ್ ಕ್ಯಾಪ್ಲೊವ್ 'ಒಬ್ಬನ ವಿರುದ್ಧ ಒಗ್ಗೂಡಿದ ಇಬ್ಬರು' ಎಂಬ ಗ್ರಂಥದಲ್ಲಿ ತ್ರಯಗಳ ಅನೇಕ ಮಹತ್ವದ ಉದಾಹರಣೆಗಳನ್ನು ಕೊಟ್ಟಿದ್ದಾನೆ.

ತ್ರಯವೆಂದರೆ ಯಾವಾಗಲೂ ಒಬ್ಬನ ವಿರುದ್ಧ ಒಗ್ಗೂಡಿದ ಇಬ್ಬರ ಗುಂಪೆಂದು ಭಾವಿಸಬಾರದು. ಅದೂ ದ್ವಯದಂತೆ ಸದಸ್ಯರ ಸಾಮಾನ್ಯ ಆಸ್ಥೆ, ಆಸಕ್ತಿಗಳನ್ನು ಪೂರೈಸಲೆಂದು ಹುಟ್ಟುವ ಸಮೂಹ. ಅದು ದ್ವಯವಾಗಿ ಪರ್ಯಾವಸಾನಗೊಳ್ಳುವ ಸಂದರ್ಭಗಳು ಅನೇಕವಿರಬಹುದೇನೋ ನಿಜ. ಆದಗೂ ಎಷ್ಟೋ ತ್ರಯಗಳು ತ್ರಯಗಳಾಗಿಯೇ ಬಹುಕಾಲ ಬಾಳಬಲ್ಲವು. ಐಕಮತ್ಯದಿಂದ ಇರಬಲ್ಲವು.

ತುಲನಾತ್ಮಕವಾಗಿ ನೋಡಿದರೆ ಜೋಡಿ ಗುಂಪುಗಳಲ್ಲಿ ಮುಕ್ಕೂಟಗಳಿಗಿಂತ ಹೆಚ್ಚಿನ ಐಕಮತ್ಯ ಸಾಧ್ಯ ಎಂದು ಕಂಡುಬರುತ್ತದೆ. ಅದೇರೀತಿಯಲ್ಲಿ ಕಾರ್ಯಸಾಧನೆ ಅಥವಾ ಕ್ಷಮತೆಯ ದೃಷ್ಟಿಯಿಂದಲೂ ಜೋಡಿಯೇ ಮೇಲೆಂದು ವಿವಿಧ ಪ್ರಯೋಗಗಳು ತೋರಿಸುತ್ತವೆ. ಆದರೆ ತ್ರಯಗಳು ಮತ್ತೆ ಕೆಲವು ವಿಷಯಗಳಿಗೆ ದ್ವಯಗಳಿಗಿಂತ ಮೇಲು ಎಂಬುದನ್ನು ಮರೆಯಬಾರದು. ಉದಾಹರಣೆಗೆ ಅವು ಚರ್ಚೆ, ಪರಾಮರ್ಶೆ ಜಾಗರೂಕತೆಗಳಲ್ಲಿ ಜೋಡಿಗಳಿಗಿಂತ ಮಿಗಿಲು. ಪ್ರಾಯಶಃ ಇದಕ್ಕಾಗಿಯೇ ಮಿತಿಗಳನ್ನು ನಿರ್ಮಿಸುವಾಗ ಮೂವರು ಸದಸ್ಯರನ್ನು ನೇಮಿಸುವುದು ಸರ್ವಸಾಮಾನ್ಯವಾಗಿದೆ. ಪರೀಕ್ಷಕರ ಸಮಿತಿಗಳು ಅಥವಾ ಸಂದರ್ಶನ ಸಮಿತಿಗಳು ಹೆಚ್ಚಾಗಿ ತ್ರಿ-ಸದಸ್ಯ ಸಮಿತಿಗಳು. ನ್ಯಾಯ ನಿರ್ಣಯದಲ್ಲಿ ಇಬ್ಬರಿಗಿಂತ ಅಥವಾ ನಾಲ್ವರಿಗಿಂತ ಮೂವರು ವಾಸಿ ಎಂಬುದು ಸಾಮಾನ್ಯ ಅನುಭವ.

೪

ಈ ಕೆಲವು ಪುಟಗಳಲ್ಲಿ ನಾವು ದ್ವಯ ಮತ್ತು ತ್ರಯಗಳೆಂಬ ಎರಡು ಪ್ರಕಾರದ ಸಾಮಾಜಿಕ ಸಮೂಹಗಳ ಬಗೆಗೆ ಸಮಾಜಶಾಸ್ತ್ರಜ್ಞರ ಗಮನ ಸೆಳೆದ ಕೆಲವು ವಿಷಯಗಳನ್ನು ಅವಲೋಕಿಸಿದೆವು. ಇಂಥ ಅಧ್ಯಯನವು ಎರಡು ರೀತಿಗಳಲ್ಲಿ ಉಪಯುಕ್ತವಾಗಿದೆ. ಮೊದಲನೆಯದಾಗಿ, ಇಬ್ಬರು ಮತ್ತು ಮೂವರಿಂದ ಕೂಡಿದ ದ್ವಯ ಹಾಗೂ ತ್ರಯಗಳು ನಮಗೆ ಅತಿ ಪರಿಚಿತವಾದ ಸಮೂಹಗಳು. ಸಮಾಜ ವಿಜ್ಞಾನಿಗಳು ಅವುಗಳ ಬಗೆಗೆ ಸಾಕಷ್ಟು ತಿಳಿದಿರುವುದು ಅವಶ್ಯಕವಾಗಿದೆ. ಅವುಗಳ ಅಧ್ಯಯನ ರೋಚಕವೂ ಹೌದು, ಲಾಭದಾಯಕವೂ ಹೌದು. ಎರಡನೆಯದಾಗಿ, ಈ ಅಧ್ಯಯನವು ಇತರ ಕಿರುಗುಂಪುಗಳ ಸಾರ್ಥಕವಾದ ಅಧ್ಯಯನಕ್ಕೆ ಬುನಾದಿಯನ್ನೊದಗಿಸುತ್ತದೆ. ಅಲ್ಲದೆ ಕಿರುಗುಂಪುಗಳ ಮತ್ತು ವಿಶಾಲ ಸಮೂಹಗಳ ನಡುವಿನ ಸಾಮ್ಯ-ವೈಷಮ್ಯಗಳನ್ನು ತಿಳಿದುಕೊಳ್ಳುವಲ್ಲಿ ಸಹಾಯ ಮಾಡುತ್ತವೆ.

ಈ ಪ್ರಬಂಧವನ್ನು ಮುಗಿಸುವ ಮೊದಲು ಇನ್ನೊಮ್ಮೆ ಒಂದು ಮಾತನ್ನು ಹೇಳಲೇಬೇಕು. ಸುಮಾರು ಎಂಬತ್ತು ವರುಷಗಳ ಹಿಂದೆ ಜಾರ್ಜ ಸಿಮೆಲ್ ಈ ಬಗೆಯ ಅಧ್ಯಯನಕ್ಕೆ ಶ್ರೀಕಾರ ಹಾಕಿದರೂ ಇಂದಿಗೂ ಈ ಕ್ಷೇತ್ರದಲ್ಲಿ ಸಾಕಷ್ಟು ಪರಿಶ್ರಮವಿಲ್ಲ, ಫಲವಿಲ್ಲ. ಕನ್ನಡದಲ್ಲಿ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಒಂದಿಷ್ಟೂ ಕೆಲಸವಾಗಿಲ್ಲ. ದ್ವಯಗಳು ಮತ್ತು ತ್ರಯಗಳ ಅಧ್ಯಯನ ನಮ್ಮ ಬದುಕಿನಲ್ಲಿ ಅಳಿವು-ಉಳಿವಿನ ಪ್ರಶ್ನೆಯಲ್ಲ. ಆದರೆ ಇಂಥ ಹಲವು ಸಾವಿರ ವಿಷಯಗಳ ಬಗೆಗೂ ನಾವು ದಿವ್ಯ ನಿರ್ಲಕ್ಷ್ಯ ತೋರಿಸಿದ್ದೇವೆ. ಹೀಗಾದರೆ ನಮ್ಮ ಬದುಕು, ವಿಚಾರ ಶ್ರೀಮಂತವಾಗುವುದಾದರೂ ಹೇಗೆ ?

* *

ಚೀಲಾಳ ಸಮಯ

-ಎಂ. ಎಂ. ಕಲಬುರ್ಗಿ

ವೀರಶೈವ ಗುರುವರ್ಗದಲ್ಲಿ ಐದು ಪೀಠಪರಂಪರೆಗಳಿರುವಂತೆ ವಿರಕ್ತವರ್ಗದಲ್ಲಿಯೂ ಐದು ಸಮಯಪರಂಪರೆಗಳಿವೆ.[೧] ಇವುಗಳಲ್ಲಿ ಕೆಂಪಿನಸಮಯ, ಸಂಪಾದನ ಸಮಯಗಳಿಗಿಂತ ಜಗದ್ಗುರು ಪ್ರತಿಷ್ಠೆಯ ಮುರುಗಾಸಮಯ, ಕುಮಾರಸಮಯ, ಚೀಲಾಳಸಮಯಗಳು ತುಂಬ ಪ್ರಸಿದ್ಧವಾಗಿವೆ. ಚಿತ್ರದುರ್ಗ, ಧಾರವಾಡ, ಮುಳಗುಂದ ಮೊದಲಾದ ಊರುಗಳಲ್ಲಿಯವು ಮುರುಗಾಸಮಯದ ಮಠಗಳು. ಹುಬ್ಬಳ್ಳಿ, ಹಾನುಗಲ್ಲು ಮೊದಲಾದ ಊರುಗಳಲ್ಲಿಯವು ಕುಮಾರಸಮಯದ ಮಠಗಳು, ಗದುಗಿನ ತೋಂಟದಾರ್ಯಮಠ-ಇಲಕಲ್ಲಿನ ಚಿತ್ತರಗಿಮಠ-ಕೊಪ್ಪಳದ ಗವಿಮಠ-ಉರುವಕೊಂಡ ಗವಿಮಠ ಮೊದಲಾದುವು ಚೀಲಾಳ ಸಮಯದವು. ಈ ಸಮಯದ ಪ್ರವರ್ತಕ ಚೀಲಾಳಸ್ವಾಮಿ.

ಎಡೆಯೂರಿನ ತೋಂಟದಾರ್ಯರ ಬಳಿಕ ಆ ಪರಂಪರೆಯಲ್ಲಿ ಕ್ರಮವಾಗಿ ಬೋಳ ಬಸವಾರ್ಯ, ಗುಮ್ಮಳಾಪುರ ಸಿದ್ಧಲಿಂಗ, ಗುಳೂರ ಸಿದ್ಧವೀರಣ್ಣ, ಗಗನಸ್ವಾಮಿ, ಕಟ್ಟಿಗೆಹಳ್ಳಿ ಸಿದ್ಧಲಿಂಗರ ತರುವಾಯದ ಮುರುಗಾ ಶಾಂತವೀರರಿಂದ (೧೬೫೬-೧೭೦೩) ಚಿತ್ರದುರ್ಗದಲ್ಲಿ ಬೃಹನ್ಮಠ ಅಸ್ತಿತ್ವಕ್ಕೆ ಬಂದು, "ಮುರುಗಾಸಮಯ" ಹುಟ್ಟಿಕೊಂಡಿತು. ಈ ಮುರುಗಾ ಶಾಂತವೀರರಿಗೆ ಇಮ್ಮಡಿ ಮುರುಗಾ ಗುರುಸಿದ್ಧ, ಕುಮಾರಸ್ವಾಮಿಗಳಲ್ಲದೆ ಚೀಲಾಳಸ್ವಾಮಿಗಳೂ ಶಿಷ್ಯರೆಂದು ಚಿತ್ರದುರ್ಗದ ಮುರುಗಾ ಮಠ ಪ್ರಕಟಿಸಿದ ಮಹಾಲಿಂಗೇಂದ್ರವಿಜಯ ಹೇಳುತ್ತದೆ. ಈ ಗುರು-ಶಿಷ್ಯ ಸಂಬಂಧದ ಬಗ್ಗೆ ಕನ್ನಡ ಅಧ್ಯಯನಪೀಠದ ೨೬೪೯ನೆಯ ನಂಬರಿನ ವೀರಶೈವಾಮೃತ ಮಹಾಪುರಾಣದ ತಾಳೆಪ್ರತಿಯ ಅಂತ್ಯಪ್ರಶಸ್ತಿ[೨] ಸ್ವಲ್ಪ ಬೇರೆ ವಿಷಯುವನ್ನು ಪೂರೈಸುತ್ತಿದ್ದು, ಅಲ್ಲಿಯ ಪಾಠ ಹೀಗಿದೆ :

"................ಶ್ರೀಮತು ಸತ್ತುಚಿತ್ತಾನಂದ ನಿತ್ಯ ಪರಿಪೂರ್ಣಮ ವಿರಳ ಪರಂಜ್ಯೋತಿಪ್ರಕಾಶಸ್ವರೂಪಿಗಳಾದಂಥ ಷಟ್ಸ್ಥಲಬ್ರಹ್ಮಿಗಳಾದ, ತೋಂಟದ ಸಿದ್ಧಲಿಂಗೇಶ್ವರನ ಸಂಪ್ರದಾಯಕರಾದ ಅಡಿಗೆರಗಿ ಬಂದ ಆತ್ಮರುಗಳಿಗೆ ಸುರುಚಿರದ

೧. ಒಟ್ಟು ೧೬ ಸಮಯಗಳನ್ನು ಮಹಾಲಿಂಗೇಂದ್ರ ವಿಜಯ ಸೂಚಿಸುತ್ತದೆ. ಇವುಗಳಲ್ಲಿ ಮುಖ್ಯವಾದುವುಮೇಲಿನ ಐದು.

೨. ಈ ಪುರಾಣ ಇತ್ತೀಚೆ ಬೆಳಗಾವಿಯ ಶ್ರೀ ನಾಗನೂರುಮಠದಿಂದ ಪ್ರಕಟವಾಗಿದೆ. ಇದರ ಮುನ್ನುಡಿಯಲ್ಲಿ ಈ ಅಂತ್ಯಪ್ರಶಸ್ತಿ ಪ್ರಕಟವಾಗಿದೆ.

ಪಿಂಡಾದಿ ಜ್ಞಾನಶೂನ್ಯಾಂತವಾದ ನೂರೊಂದು ಸ್ಥಳಕುಳಂಗಳ ಅರಿವಾಚರಣೆಯನು ಪ್ರತಿಪಾದಿತ ಮೂರ್ತ್ಯತೀತವಸ್ತು ಪರಬ್ರಹ್ಮ ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರನ ಚಿತ್ಕರಕಮಲೋದಯ ಸುಜ್ಞಾನಪುಂಜಪ್ರದ ಸುದ್ವರ್ಣಲೋಷ್ಟಾದಿ ಲೌಕಿಕ ಭೋಗ ತೃಣೀಕೃತಭಕ್ತಜನಬಂಧು ಆಚಾರಾಗ್ರಣಿ ಬಸವಪ್ರಭು ಚೀಲಾಳಸ್ವಾಮಿಗಳ ಪಾದಾರವಿಂದಕ್ಕೆ ಈ ವೀರಶೈವಾಮೃತ ಪುರಾಣವನ್ನು ಕನ್ನಡದೇಶದ ರನ್ನಗನ್ನಡಿ ಯಂತೆ ಶೋಭಿಸುತ್ತಿರ್ಪ ಕಾನಕಾನಹಳ್ಳಿ ವಳಲಯುದ ತುಂಗಣಿಗ್ರಾಮದ ಆರಾಧ್ಯ ಬರಹದ ಬಸವಲಿಂಗದೇವರು ಮಾರಸಮುದ್ರದ ಶರಣಯ್ಯನ ಗುರುಪಾದಸೆಟ್ಟಿಯ ಭಕ್ತಿಯೆಂದು, ವೀರಶೈವಾಮೃತ ಪುರಾಣವ ಸಮರ್ಪಿಸಿದರು. ಗುರುಪಾದಸೆಟ್ಟಿ ಭಕ್ತಿ, ಬಸವಲಿಂಗದೇವರ ಬರಹ, ಇದಕ್ಕೆ ಚೀಲಾಳಸ್ವಾಮಿಗಳೇ ಕರ್ತರು..........ಪುನರಪಿ ಈ ಶಾಸ್ತ್ರಮಂ ಚೀ[ಲಾ]ಳೇಶ್ವರನು ತಮ್ಮ ಕರಸರಸೀಜಾತ ಕಪಿಲಸಿದ್ಧಸ್ವಾಮಿಗಳಿಗೆ ಪಾಲಿಸಿದರು ಶ್ರೀ ಶ್ರೀ ಶ್ರೀ....".

ಮೇಲೆ ಹೇಳಿದ ಮಹಾಲಿಂಗೇಂದ್ರವಿಜಯದ ಪ್ರಕಾರ ಚೀಲಾಳಸ್ವಾಮಿಗಳು ಮುರುಗಾಶಾಂತವೀರರ ಶಿಷ್ಯರು,ಈ ಪ್ರಶಸ್ತಿಗದ್ಯದ ಪ್ರಕಾರ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಶಿಷ್ಯರು. ಇವುಗಳಲ್ಲಿ ಚೀಲಾಳಸ್ವಾಮಿಗಳ ಸಮಕಾಲೀನ ಬರವಣಿಗೆಯಾದ ಪ್ರಶಸ್ತಿ ಗದ್ಯವೇ ವಿಶ್ವಾಸಾರ್ಹವೆಂದು ಬೇರೆ ಹೇಳಬೇಕಿಲ್ಲ.ಹೀಗಾಗಿ ಮುರುಗಾ ಶಾಂತವೀರರೂ ಚೀಲಾಳಸ್ವಾಮಿಗಳೂ ಗುರುಶಿಷ್ಯರಲ್ಲ. ಇಬ್ಬರೂ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಶಿಷ್ಯ ರೆಂದು, ಸಮಕಾಲೀನರೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಈ ಗದ್ಯದಿಂದ ತಿಳಿದುಬರುವ ಎರಡನೆಯ ವಿಷಯವೆಂದರೆ ಚೀಲಾಳಸ್ವಾಮಿಗಳ ಇನ್ನೊಂದು ಹೆಸರು ಬಸವಪ್ರಭು. ಈ ಎರಡೂ ಸಂಗತಿಗಳನ್ನು ಮೈಸೂರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನಸಂಸ್ಥೆಯ "ಷಟ್ಸ್ಥಲಶಿವಾಯಣ" ಹೆಸರಿನ ಕೃತಿ ಬೆಂಬಲಿಸುತ್ತದೆ. ಬಹುಶಃ ಚೀಲಾಳಸ್ವಾಮಿಯ ಬೋಧೆಯನ್ನೇ ಕಿವಿಯಾರೆ ಕೇಳಿ, ಈ ಕೃತಿಯನ್ನು ಬರೆದವ ಶಿಷ್ಯ ಪುರಾಣದ ಸಿದ್ಧಲಿಂಗಾಚಾರ್ಯ. ಹೀಗಾಗಿ ಈ ಕೃತಿಯು (ಸು. ೧೭೦೦) ಚೀಲಾಳಸ್ವಾಮಿ ಜೀವಂತವಾಗಿರುವಾಗಲೇ, ಅವನ ಸಮ್ಮುಖದಲ್ಲಿ ಬರೆಯಲಾಗಿದ್ದು, ಚಿತ್ರದುರ್ಗದ ಬೃಹನ್ಮಠ ಪ್ರಕಟಿಸಿದ ಮಹಾ ಲಿಂಗೇಂದ್ರವಿಜಯ (೧೮೭೦)ಕ್ಕಿಂತ ಕಾಲದೃಷ್ಟಿಯಿಂದ ಇದು ೧೭೦ ವರ್ಷಗಳಷ್ಟು ಪ್ರಾಚೀನವಾದುದೆಂದೂ, ಆ ಕಾರಣಕ್ಕಾಗಿ ಇದರಲ್ಲಿಯ ಘಟನೆಗಳು ಹೆಚ್ಚು ವಿಶ್ವಾಸಾರ್ಹವೆಂದೂ ಹೇಳಬಹುದು. ಈ ಗ್ರಂಥದ ೧೭ ನೆಯ ಸಂಧಿಯಿಂದ ೨೨ನೆಯ ಸಂಧಿಯ ವರೆಗಿನ ಭಾಗದಲ್ಲಿ ಬರುವ ಚೀಲಾಳಸ್ವಾಮಿಯ ಚರಿತ್ರೆ ಹೀಗಿದೆ :

ಇಂದಿನ ತುಮಕೂರು ಜಿಲ್ಲೆಯ ಗುಬ್ಬಿ ಸುಪ್ರಸಿದ್ಧ ವೀರಶೈವಕೇಂದ್ರ. ಅಲ್ಲಿಯ ಜಲಾಶಯದ ತಟದ ಮೇಲಿರುವ ಮಲ್ಲಿಕಾರ್ಜುನದೇವರನ್ನು ಮಾಗುಡದ

ಮಲ್ಲಿಕಾರ್ಜುನ, ಅಥವಾ ಅಮರಗುಂಡದ ಮಲ್ಲಿಕಾರ್ಜುನ ಹೆಸರಿನಿಂದ ಕರೆಯುತ್ತಿದ್ದರು. ಹೀಗಾಗಿ ಗುಬ್ಬಿಗೆ ಕಾಲಕ್ರಮದಲ್ಲಿ ಅಮರಗುಂಡ ಎಂಬ ಹೆಸರೂ ಬಳಕೆಗೊಂಡಿತು. ಶ್ರೀಪತಿಪಂಡಿತ, ಮಲ್ಲಿಕಾರ್ಜುನಪಂಡಿತ, ಊರ್ಧ್ವಲೋಚನಪಂಡಿತ, ಪಾಲ್ಕುರಿಕೆ ಸೋಮರು ಈ ಗ್ರಾಮಕ್ಕೆ ಸಂಬಂಧಪಟ್ಟವರು. ಸಮೀಪದ ಊರ್ಧ್ವಗಿರಿ (ಮೇಗಣ ಗವಿ ?) ನಿವಾಸಿಗಳೂ, ಮಲ್ಲಿಕಾರ್ಜುನ ಪಂಡಿತಾ ರಾಧ್ಯರ ವಂಶೀಯರೂ, ಆರಾಧ್ಯಸಂಪ್ರದಾಯದವರೂ ಆದ ಮಲ್ಲಿಕಾರ್ಜುನಸ್ವಾಮಿ, ಮಹಾದೇವಮ್ಮ ದಂಪತಿಗಳಿಗೆ ಅಮರಗುಂಡದ ಮಲ್ಲಿಕಾರ್ಜುನದೇವರ ಕೃಪೆಯಿಂದ ಚೀಲಾಳಸ್ವಾಮಿ ಜನಿಸಿದ. ಅಲ್ಲಮಪ್ರಭುವಿನ ಮೂರನೆಯ ಅವತಾರ, ತೋಂಟದ ಸಿದ್ಧಲಿಂಗಯತಿಯ ಎರಡನೆಯ ಅವತಾರ ನೆನೆಸಿ ಧರೆಗಿಳಿದ (೧೭ ನೆಯ ಸಂಧಿ).

ಚೀಲಾಳಸ್ವಾಮಿ ಹುಟ್ಟಿದ್ದು ಆನಂದನಾಮ ಸಂವತ್ಸರದ ಕಾರ್ತಿಕಮಾಸದ ಸೋಮವಾರ ಮುಂಜಾನೆ. (ಸಮಕಾಲೀನ ಮೂರುಗಾ ಶಾಂತವೀರರ ಕಾಲ ೧೬೫೬–೧೭೦೩. ಈ ಅವಧಿಯಲ್ಲಿ ಆನಂದನಾಮ ಸಂವತ್ಸರವು ೧೬೧೫, ೧೬೭೫ ಈ ಕ್ರಿಸ್ತ ಕಗಳಲ್ಲಿ ಬರುತ್ತದೆ. ಇವುಗಳಲ್ಲಿ ಚೀಲಾಳಸ್ವಾಮಿಯ ಜನನ ಕ್ರಿ.ಶ. ೧೬೧೫ರಲ್ಲಿ ಸಂಭವಿಸಿರುವ ಸಾಧ್ಯತೆಯಿದೆ). ಏಳನೆಯ ವರ್ಷಕ್ಕೆ ಚೀಲಾಳಸ್ವಾಮಿಗೆ ಊರ್ಧ್ವಗಿರಿ ಸಿಂಹಾಸನದ ಗುರುಗದ್ದುಗೆಯ ಪಟ್ಟಾಭಿಷೇಕ ಜರುಗಿತು. (೧೮ ನೆಯ ಸಂಧಿ).

ಕೆಲವು ಕಾಲದ ಬಳಿಕ ಕೂಡಲಸಂಗಮಕ್ಕೆ ಬಂದು, ಅತ್ತಿಕಟ್ಟೆಗೆ ಹೊರಟು ನಿಂತಿದ್ದ ಚೀಲಾಳಸ್ವಾಮಿಗೆ ಸಂಗಮೇಶ್ವರನು ಪ್ರತ್ಯಕ್ಷನಾಗಿ, ಹರಪುರ (ಹರಪನಹಳ್ಳಿ) ದಲ್ಲಿ ಅವನು ಷಟ್ಸ್ಥಲ ಪಟ್ಟಾಧಿಕಾರಿಯಾಗುವುದನ್ನು ಸೂಚಿಸುತ್ತಾನೆ. ಮತ್ತು ಇವನನ್ನು ಕರೆತಂದು ಪಟ್ಟಕಟ್ಟಲು ಹರಪನಹಳ್ಳಿಯ ಶಮಿತಪುರಾಧೀಶ (=ಸಮಿಥೆ ಪುರಾಧೀಶ=ಕಟ್ಟಿಗೆಹಳ್ಳಿಸ್ವಾಮಿ)ನಿಗೆ ಓಲೆಯ ಮೂಲಕ ತಿಳಿಸುತ್ತಾನೆ. ಅದೇ ವೇಳೆಗೆ ಗಗನದಿಂದಿಳಿದ ಬೇರೊಂದು ಓಲೆಯೂ ಶಮಿತಪುರಾಧೀಶನ ಕೈಸೇರುತ್ತದೆ. ಅದರಲ್ಲಿ "ಪ್ರಥಮಪಟ್ಟ ನಿರಂಜನಪ್ರಭು (ಶಿವ), ದ್ವಿತೀಯ ಪಟ್ಟ ಅಲ್ಲಮಪ್ರಭು, ತೃತೀಯ ಪಟ್ಟ (ತೋಂಟದ) ಸಿದ್ಧ(ಲಿಂಗ), ಚತುರ್ಥ ಪಟ್ಟ ಬೋಳಬಸವೇಶ್ವರ, ಪಂಚಮಪಟ್ಟ ಚೆನ್ನಂಜೆದೇಶಿಕ, ಷಷ್ಠಮ ಪಟ್ಟ ಶಮಿತಾಪುರಾಧೀಶ (=ಕಟ್ಟಿಗೆಹಳ್ಳಿ ಸ್ವಾಮಿ), ಸಪ್ತಮಪಟ್ಟ ಚೀಲಾಳಸ್ವಾಮಿಗೆ ಸಲ್ಲುವುದರಿಂದ ಶಿಖಿನಿರೂಪ (ಸಿಕ್ಕಾ ಹಾಕಿದ ಪತ್ರ), ಉಡುಗೊರೆ ಸಹಿತ ಹರಪನಹಳ್ಳಿಯ ಅರಸು ಬಸವಂತರಾಯನನ್ನು ಕಳಿಸಿ, ಚೀಲಾಳಸ್ವಾಮಿಯನ್ನು ಕರೆತಂದು ಷಟ್ಸ್ಥಲಪಟ್ಟಕಟ್ಟಬೇಕು" ಎಂದು ಬರೆಯಲಾಗಿರುತ್ತದೆ. (ಈ ಕಾವ್ಯದಲ್ಲಿ ಶಮಿತಾಪುರೀಶನನ್ನು ಎಂದನಪುರಾಧೀಶ ಎಂದೂ ಕರೆಯಲಾಗಿದೆ. ಇದರ ಶುದ್ಧರೂಪ ಇಂಧನಪುರಾಧೀಶ. ಇದರ ಅರ್ಥ ಕಟ್ಟಿಗೆಹಳ್ಳಿ (ಸಿದ್ಧಲಿಂಗ)ಸ್ವಾಮಿ. ಈ ಕಾವ್ಯದ ಬೇರೆ ಸಂದರ್ಭಗಳಲ್ಲಿಯೂ ಕಟ್ಟಿಗೆ ಹಳ್ಳಿಸ್ವಾಮಿಯೆಂಬ ಪ್ರಯೋಗಗಳು ಇವೆ). ಆ ಓಲೆಯಲ್ಲಿಯ ನಿರೂಪದಂತೆ ಶಮಿತ

ಪುರಾಧೀಶನು ಬಸವಂತರಾಯನಿಗೆ ಚೀಲಾಳಸ್ವಾಮಿಯನ್ನು ಕರೆತರಲು ಆಜ್ಞಾಪಿಸುತ್ತಾನೆ. ಬಸವಂತರಾಯ ಸಮೀಪದ ಅತ್ತಿಕಟ್ಟೆಗೆ ಬರುತ್ತಾನೆ. ಅಲ್ಲಿ ಜಾಲಸಂಗ, ಬಾಲಬಸವ, ಚೋಳಬಸವ, ಗೋಣಿಬಸವ, ಮೇಳಾಪುರ ವೃಷ(ಭ), ಮಲೆಯ ಮಾದನ ಮಂಟಿದಯ್ಯ ಕೊಡೆಯಕಲ್ಲು ರಾಜ ಇವರಿಂದ (ಇವರ ಸಂಪ್ರದಾಯದವರಿಂದ ?) ಪೂಜಿಸಲ್ಪಡುತ್ತಿದ್ದ ಚೀಲಾಳಸ್ವಾಮಿಯನ್ನು ಕಂಡು, ಹರಪನಹಳ್ಳಿಗೆ ಆಗಮಿಸಲು ಅರಸು,ಬಸವಂತರಾಯ ಬಿನ್ನವಿಸಿಕೊಳ್ಳುತ್ತಾನೆ. ಮತ್ತು ಶರಣಸತಿ ಭಾವದಿಂದ ಕೈಗೆ ಬಳೆದೊಟ್ಟು ಚೀಲಾಳಸ್ವಾಮಿಯ ಪಾದಪೂಜೆ ಮಾಡುತ್ತಾನೆ. ಕಲ್ಯಾಣ, ಶ್ರೀಶೈಲ, ಸಂಗಮ, ಹಂಪೆ, ಹರಪನಹಳ್ಳಿ– ಈ ಐದು ವೀರಶೈವ ಪುಣ್ಯಕೇಂದ್ರಗಳೆಂದು ವಿವರಿಸುತ್ತಾನೆ. ಹರಪನಹಳ್ಳಿಗೆ ಬರಲು ಒಪ್ಪಿದ ಚೀಲಾಳಸ್ವಾಮಿ "ನೀವು ಮುಂದೆ ನಡೆಯಿರಿ, ನಾನು ಆಮೇಲೆ ಬರುವೆ" ಎಂದು ತಿಳಿಸುತ್ತಾನೆ. ಆ ಮೇರೆಗೆ ಮಾಘ ಮಾಸದ ಬಹುಳ ಚತುರ್ದಶಿ (ಶಿವರಾತ್ರಿ)ಯಂದು ಅತ್ತಿಕಟ್ಟೆಯಿಂದ ಪ್ರಯಾಣ ಬೆಳೆಸಿ ರಾಚರಟ್ಟೆ (ರಾಚೋಟಿ) ಗ್ರಾಮಕ್ಕೆ ಬರುತ್ತಾನೆ. ಚೀಲಾಳಸ್ವಾಮಿ ಫಾಲ್ಗುಣದ ಮುಂದಿನ ಚೈತ್ರದಲ್ಲಿ ಹರಪನಹಳ್ಳಿಗೆ ಬರುವನೆಂಬ ಸುದ್ದಿ ಕೇಳಿ ಶಮಿತಾಪುರೀಶ (ಕಟ್ಟಿಗೆಹಳ್ಳಿ ಸಿದ್ಧಲಿಂಗ) ಸಂತುಷ್ಟನಾಗುತ್ತಾನೆ (೧೯ ನೆಯ ಸಂಧಿ).

ಬಸವಂತರಾಯನು ಅತ್ತಿಕಟ್ಟೆಯಲ್ಲಿ ಸಲ್ಲಿಸಿದ್ದ ವೈಭವದ ಕಾಣಿಕೆಗಳೊಂದಿಗೆ ಪ್ರಯಾಣ ಮುಂದುವರಿಸಿದ್ದ ಚೀಲಾಳಸ್ವಾಮಿ ರಾಚೋಟಿಯಿಂದ ಹೊರಟು ಯಾಘಂಟಿ, ಕೊಲ್ಲಿಪಾಕಿ, ಬಾಗೋಡಿ, ಬಂಕನಗರಿ, ಮಕ್ಕೆ, ದಿಲ್ಲಿ, ಅವರಂಗಬಾದಿ, ಭಾಗನಗರ, ವಿಜಯಪುರ, ತೆಲುಗುದೇಶ, ಉಮ್ಮರಾಣಿ, ದೌಲತಾಬಾದಿ, ಏಳೂರು, ಮಸಳೆ, ಶಾಖಾಕೊಳ, ಮೈಲಾಪುರ, ಚೆನ್ನಪಟ್ಟಣ, ಕಾಳಹಸ್ತಿ, ಚೋಳಮಂಡಲ, ಆಡಮಂಡಲ, ಶಾಂತಮಂಡಲ, ಪಾಂಡ್ಯಮಂಡಲ, ರಾಮೇಶ್ವರ, ಮಧುರೆ, ಕಂಚಿ, ಚಂದೀವಾರ, ಅರುಣಾಚಲ, ಚಿದಂಬರ, ಕುಂಭಕೋಣ ಜಂಬುಕೇಶ್ವರ, ಪೆರೂರು, ಮಲೆಯಾಳ, ನೀಲಗಿರಿ, ಶಿವಗಂಗೆ, ವಾತುಲಪುರಗಳ ಮೂಲಕ ಎಡೆಯೂರಿಗೆ ಬರುತ್ತಾನೆ.

ಎಡೆಯೂರಿನಲ್ಲಿ ತೋಂಟದ ಸಿದ್ಧಲಿಂಗ ಪ್ರತ್ಯಕ್ಷನಾಗಿ ತನ್ನ ವಚನಾಮೃತ ಟೀಕೆಯನ್ನು ನೀಡಿ, ಬೀಳ್ಕೊಡುತ್ತಾನೆ. ಅಲ್ಲಿಂದ ಗರಳಪುರಿ (ನಂಜನಗೂಡು), ಬೆಟ್ಟದಪುರ, ಹದಿನಾಡುಸೀಮೆ, ಸೆಟ್ಟಿದೇಶ, ಮೊರಸನಾಡು, ಬೆಂಗಳೂರು, ಬಳ್ಳಪುರ, ಪುಂಗನೂರು, ಗುಮ್ಮಳಾಪುರ, ಹೊಸಕೋಟೆ, ನರಸಾಪುರ, ಬಾಮ್ಲೂರು, ನೆಲಮಂಗಲ, ಗುಬ್ಬಿ, ಹೊಸಹಳ್ಳಿ, ಹುಲಿಕಲ್ಲು, ಮಾಗಡಿ, ಗೂಳೂರು, ತುಮಕೂರು, ಚೆನ್ನಪಟ್ಟಣ, ಮಳವಳ್ಳಿ, ಶ್ರೀರಂಗಪಟ್ಟಣ, ಕಿಕ್ಕೇರಿ, ಸಾಸಲು, ಚೆನ್ನರಾಯ ಪಟ್ಟಣಗಳ ಮೂಲಕ ಹಾಸನಕ್ಕೆ ಬರುತ್ತಾನೆ. ಆಮೇಲೆ ಬೇಲೂರು, ತುರುವೇಕೆರೆ, ನಾಗಮಂಗಲ, ಅರಳಗುಪ್ಪೆ, ಹೊಸಕೆರೆ, ಹಾಗಲವಾಡಿ, ನಾಗರನವಿಲೆ, ಜಂಬೂರು, ಗಂಡಸಿ, ಗಾಳಿ

ಪೂಜೆ, ಸಕ್ಕರೆಪಟ್ಟಣ, ಎಕ್ಕಡಿ, ಶಿವಮೊಗ್ಗ, ಬೆಂಕಿಪುರ, ಚೆನ್ನಗಿರಿ, ತವನಿಧಿ, ಹೊನ್ನೂರು, ಹೊನ್ನಾಳಿ, ಲಕ್ಕವಳ್ಳಿ, ಹೊಳೆಯ ಸೋಮಪುರಗಳಿಗೆ ಬಂದನು. ಆಗ ಕೆಳದಿ ಅರಸು ಆನೆಯ ಮೇಲೆ ಮೆರವಣಿಗೆಯೊಂದಿಗೆ ಕರೆದೊಯ್ದು ಮಾಣಿಕದ ಪದಕ, ವಜ್ರಖಚಿತ ಯೋಗವಟ್ಟ, ಮುತ್ತಿನ ಸರ,ಹವಳದ ಲಾಕುಲ,ಬೀಸಣಿಕೆ,ಬೆಳ್ಳಿಹಾವುಗೆ ಮೊದಲಾದುವುಗಳನ್ನು ಅರ್ಪಿಸಿದನು. ಬಳಿಕ ಸಾಗರ, ಸೊರಬಗಳ ಮಾರ್ಗವಾಗಿ ಸೋದೆಗೆ ಪ್ರಯೋಗಿಸಿದನು.

ಸೋದೆಯ ಅರಸು ಪಾದಸರ, ಪಲ್ಲಕ್ಕಿ, ಕನಕಪಾತ್ರೆ ಇತ್ಯಾದಿಗಳನ್ನು ಸಲ್ಲಿಸಿದನು. ಅಲ್ಲಿಂದ ಉಳಿವೆ, ತಿಳವಳ್ಳಿ, ಬನವಸೆ, ಜಂಬೂರು, ಬಳ್ಳಿಗಾವೆ, ಹಾವೇರಿ, ಹಡಡಿ, ಲಕ್ಷ್ಮೇಶ್ವರ, ಶಿರಹಟ್ಟಿ, ಡಂಬಳ, ಹುನಗುಂದ, ಪಟ್ಟದಕಲ್ಲು, ಕೊಪ್ಪಳ, ಗದಗ, ಹನುಮಸಾಗರ, ಸುರಪುರ, ಕಲ್ಯಾಣ, ಕಲಬುರ್ಗಿ, ಮುದಗಲ್ಲು,ರಾಯಚೂರು, ಕಾಶಿ, ಕಾಶ್ಮೀರ, ಎಳಮಲೆ, ನೆಲುವಿಗೆ, ತಿಳಿಗಾವಿ, ನಾಗಾವಿ, ಬೋಳೆಯಗಾವಿ, ಸೂರೆಯಗಾವಿ, ಅಳವಂಡೆ, ತಳಕಲ್ಲು, ಕನಕಗಿರಿ, ಮಾನವಿ, ಬಳಗಾನೂರ, ಗುಡಿಯ ಕೋಟೆ, ರಾಯದುರ್ಗ, ಕಡಪೆ, ಹೋತೂರ, ಉರುವಕೊಂಡೆ, ಕೊಂಡಗುಂದಿ, ಗಲಗ, ಕಂದಗಲ್ಲು, ಬೂದಗುಪ್ಪೆ, ಆದವಾನಿ, ಆರಕಾಡ, ಲಾಲಾಪೇಟೆ, ಗುಡೂರು ಮಾರ್ಗವಾಗಿ ಅನಂತಪುರಕ್ಕೆ ಬಂದು ಪ್ರಸನ್ನ ಭೂಪಾಲನಿಂದ, ಬಳ್ಳಾರಿಗೆ ಬಂದು (ಹಂಡೆಯ) ಹನುಮಂತ ದೊರೆಯಿಂದ ಗೌರವ ಸ್ವೀಕರಿಸಿದನು.

ತರುವಾಯ ಜರಿಮಲೆ, ಉಜ್ಜಯಿನಿ ಮೂಲಕ ಚಿತ್ತರಕಲ್ಲು ಗ್ರಾಮಕ್ಕೆ ಬರಲು ಅಲ್ಲಿಯ ಸಂಪಿಗೆ ಸಿದ್ದೇಶ್ವರನು ಜಂಗಮನಾಗಿ ಬಂದು ಬೆಳ್ಳಿಯ ಪೀಠ, ಚಿನ್ನದ ಗದ್ದುಗೆ ಒಪ್ಪಿಸಿದನು. ಚೀಲಾಳಸ್ವಾಮಿ ಅಲ್ಲಿ ಆಳುವ ದೊರೆಗೆ ಆಶೀರ್ವದಿಸಿ ಹರಪನಹಳ್ಳಿ ಪ್ರಾಂತದ ಕೊನೆಯ ಗ್ರಾಮವಾದ ಅರಸಿಕೆರೆಗೆ ಬಂದನು. ಅಲ್ಲಿಯ ಕೋಲಶಾಂತೇಶ ಬಾಲಜಂಗಮನಾಗಿ ಬಂದು ಗೌರವಿಸಿದ ಬಳಿಕ ಶಿಬಿಪುರಕ್ಕೆ ಆಗಮಿಸಿ ಅಲ್ಲಿಯ ಮೂರುಕಲ್ಲು ಶಿವಾಲಯದಲ್ಲಿ ಬೀಡು ಬಿಟ್ಟನು. ಇದನ್ನು ಕೇಳಿದ ಬಸವಂತರಾಯನು ವೈಭವದಿಂದ ಹರಪನಹಳ್ಳಿಗೆ ಬರಮಾಡಿಕೊಂಡನು. ಹರಪನಹಳ್ಳಿಯಲ್ಲಿ ಎದುರು ನೋಡುತ್ತಿದ್ದ ಶಮಿತಪುರಾಧೀಶನ ದರ್ಶನವಾಯಿತು. ಆ ಗ್ರಾಮದ ಗುಡ್ಡದ ಓರೆಯಲ್ಲಿರುವ ಭವ್ಯಮಠದ ಕಮಲಮಂದಿರದಲ್ಲಿ ಚೀಲಾಳಸ್ವಾಮಿ ವಿರಾಜಿಸಿದರು (೨೦ ನೆಯ ಸಂಧಿ).

ಚೀಲಾಳಸ್ವಾಮಿಯು ಹರಪನಹಳ್ಳಿಯಲ್ಲಿ ಷಟ್ಸ್ಥಲಪೀಠಸ್ಥನಾಗಿ ಅನುಭವ ಮಂಟಪದಲ್ಲಿ ಶೋಭಿಸುತ್ತಿರಲು, "ಕೆಲವರು............ ಬೇರೆ ಸಮಯವ ಮಾಡಿಕೊಂಡರು". ಚೀಲಾಳಸ್ವಾಮಿ ಮೂರುಸಾವಿರ ಶಿಷ್ಯರಿಂದ ಶೋಭಿಸಿದನು. ಮುಮ್ಮಡಿ ಬಸವಂತಭೂಪಾಲ ಹಸ್ತಕ್ಕೆ ಬಳೆತೊಟ್ಟು 'ಶರಣಸತಿ' ಭಾವದಿಂದ ಸೇವೆಸಲ್ಲಿಸ ತೊಡಗಿದನು.

ಘಟಿಕಸ್ಥಳ ಹರಪುರದ ಗುಡ್ಡದ |
ಮಠದ, ಷಟ್ಸ್ಥಲ ತತ್ವಕುಳ ಸಂ |
ಘಟದ, ಶರಣರ ಮಕುಟ ಪರಶಿವಯೋಗ ಮಂಟಪದ ||
ಘಟಿತ ಸಿಂಹಾಸನದ ಪ್ರಣಮದ |
ಪಟಲ ಪೀಠದ ಮೇಲೆ ಕಮಲದಿ |
ನಿಟಿಲನೇತ್ರವತಾರ ಚೀಲಾಳಸ್ವಾಮಿಯೊಪ್ಪಿಹರು ||

ಹೀಗೆ ಕೆಲವು ಕಾಲ ಕಳೆಯಲು ಶಮಿತಪುರಾಧೀಶ (ಕಟ್ಟಿಗೆಹಳ್ಳಿ ಸಿದ್ಧಲಿಂಗ) ಐಕ್ಯವಾದನು. ಬಳಿಕ ಚೀಲಾಳ ಸ್ವಾಮಿ ಕಪಿಲಸಿದ್ಧೆಯತೀಶನಿಗೆ ಅನುಗ್ರಹ ದಯ ಪಾಲಿಸಿದ. (ಈ ಕಪಿಲಸಿದ್ಧಸ್ವಾಮಿಯ ಉಲ್ಲೇಖ ಮೇಲೆ ಹೇಳಿದ ವೀರಶೈವಾಮೃತ ಪುರಾಣದ ಅಂತ್ಯಪ್ರಶಸ್ತಿಯಲ್ಲಿಯೂ ಬರುವುದನ್ನು ಗಮನಿಸಬೇಕು). (೨೧ ನೆಯ ಸಂಧಿ).

"ದೇಶಿಕ ವಿರಕ್ತರಿಗೆ ಷಟ್ಸ್ಥಲಕರ್ತ....ಕಪಿಲಸಿದ್ದೇಶ"ನಾದನು. ಅವನಿಗೆ ಚೀಲಾಳಸ್ವಾಮಿಯು "ಉಪದೇಶ ಜ್ಞಾನಪ್ರಕಾಶ ಬೋಧೆಯ ತುಂಬಿ", 'ಷಟ್ಸ್ಥಲ ಪೀಠಪಟ್ಟದ ಸಾಮರಾಜ್ಯದ ಶಿಖಿಸಿರೂಪವ" ಒಪ್ಪಿಸಿದನು.

ಧರೆಗೆ ಧರ್ಮವ ಬೆಳೆಸಿ, ಷಟ್ಸ್ಥಲ |
ದೊರೆತನವ ಸ್ಥಿರಗೊಳಿಸಿ, ಸಮಯದ |
ಶರಣವಿರತರ ಪರಮಸುಖದೊಳಗಿರಿಸಿ, ಹರಪುರದ |
ದೊರೆಗೆ ಸ್ಥಿರಪಟ್ಟಗಳ ಕಟ್ಟಿಸಿ |
ಕರೆಸಿ, ಕರುಣದಿ ಹರಸಿ, ಭಕ್ತರ |
ನೆರವಿಗಭಯವನಿತ್ತು ಯೋಗಸಮಾಧಿಯೊಳಗಿಹನು ||

ಇಲ್ಲಿಗೆ ಚೀಲಾಳಸ್ವಾಮಿಯ ಚರಿತ್ರೆ ಮುಗಿಯುತ್ತದೆ. ಈ ವಿವರಗಳಿಂದ ನಿಷ್ಪನ್ನವಾಗುವ ಪ್ರಶ್ನೆಗಳು ಹೀಗಿವೆ :

೧. ಗುರು ಕಟ್ಟಿಗೆಹಳ್ಳಿಸ್ವಾಮಿ, ಶಿಷ್ಯ ಚೀಲಾಳಸ್ವಾಮಿ ಇಬ್ಬರೂ ಹರಪನಹಳ್ಳಿಯಲ್ಲಿ ಐಕ್ಯರಾದರೆಂಬಂತೆ, ಷಟ್ಸ್ಥಲ ಶಿವಾಯಣ ಹೇಳುತ್ತದೆ. ಆದರೆ ಕಟ್ಟಿಗೆಹಳ್ಳಿ ಸ್ವಾಮಿಗಳು ತಿಳಿವಳ್ಳಿಯಲ್ಲಿ ಐಕ್ಯರಾದರೆಂದು ಮಹಾಲಿಂಗೇಂದ್ರ ವಿಜಯ ಹೇಳಿದರೆ, ತಿಳಿವಳ್ಳಿಯ ಜನ ಅಲ್ಲಿಯ ಗದ್ದುಗೆಯನ್ನು ಚೀಲಾಳಸ್ವಾಮಿಯದೆಂದು ತೋರಿಸುತ್ತಾರೆ. ಇವುಗಳಲ್ಲಿ ಯಾವುದು ಸತ್ಯ ? ಶೋಧಿಸಬೇಕು.[೧]

೧. ಚಿತ್ರದುರ್ಗ ಪೀಠಪರಂಪರೆಯ ಒಪ್ಪೊತ್ತಿನ ಚೆನ್ನವೀರಸ್ವಾಮಿಗಳು ತಿಳಿವಳ್ಳಿಯಲ್ಲಿ ಐಕ್ಯರಾದರೆಂದು ಮಹಾಲಿಂಗೇಂದ್ರ ವಿಜಯ ಹೇಳುತ್ತದೆ. ಇದೂ ಜನರ ಗೊಂದಲಕ್ಕೆ ಕಾರಣವಾಗಿರಬಹುದು.

೨. ಇನ್ನೊಂದು ಮುಖ್ಯ ವಿಷಯ : ಮುರುಗಾ ಶಾಂತವೀರರು ಮುರುಗಾ ಗುರುಸಿದ್ಧರಿಗೆ ಪಟ್ಟಕಟ್ಟಲಾಗಿ, ಅಸಂತುಷ್ಟರಾದ ಚೀಲಾಳಸ್ವಾಮಿಗಳು ಹರಪನಹಳ್ಳಿಗೆ, ಕುಮಾರಸ್ವಾಮಿಗಳು ಸ್ವಾದಿಗೆ, ಅಲ್ಲಿಂದ ಹುಬ್ಬಳ್ಳಿಗೆ ಹೋದರೆಂದು ಮಹಾಲಿಂಗೇಂದ್ರವಿಜಯ ಹೇಳುತ್ತದೆ. ಆದರೆ ಕಟ್ಟಿಗೆ ಹಳ್ಳಿಸ್ವಾಮಿಗಳು ಹರಪನಹಳ್ಳಿಯಲ್ಲಿ ಚೀಲಾಳಸ್ವಾಮಿಗೆ ಪಟ್ಟಕಟ್ಟಲು, ಆಗ 'ಕೆಲವರು....ಬೇರೆ ಸಮಯವ ಮಾಡಿಕೊಂಡರು' ಎಂದು ಷಟ್ಸ್ಥಲ ಶಿವಾಯಣ ಹೇಳುವುದರಿಂದ, ಇಲ್ಲಿ ಮುನಿಸಿಕೊಂಡು ಹೋಗಿ ಬೇರೆ ಸಮಯವನ್ನು ಮಾಡಿಕೊಂಡವರು ಯಾರು ? ಎಂಬ ಪ್ರಶ್ನೆ ಏಳುತ್ತದೆ.

ಷಟ್ಸ್ಥಲಶಿವಾಯಣ ಹೇಳುವಂತೆ ಕಟ್ಟಿಗೆಹಳ್ಳಿ ಸ್ವಾಮಿಗಳು ಶಿಷ್ಯನಾದ ಚೀಲಾಳ ಸ್ವಾಮಿಯೊಂದಿಗೆ ಹರಪನಹಳ್ಳಿಯಲ್ಲಿಯೇ ಉಳಿದು, ಅಲ್ಲಿಯೇ ಐಕ್ಯರಾದುದು ನಿಜವಿದ್ದರೆ, ಮಿಕ್ಕವರೇ ಹರಪನಹಳ್ಳಿಯ ಮೂಲದಿಂದ ಮುನಿಸಿಕೊಂಡು ಹೊರಗೆ ಹೋದರೆ ? ಎನಿಸುತ್ತದೆ. ಚೀಲಾಳಸಮಯದ ಜಗದ್ಗುರುಪೀಠವಾದ ಗದುಗಿನ ತೋಂಟದಾರ್ಯ ಪರಂಪರೆಯವರು, ನಡುವೆ ಉದ್ಭವಿಸಿದ 'ಚೀಲಾಳ' ಎಂಬ ಸಮಯ ನಾಮಕ್ಕೆ ಅಷ್ಟು ಮಹತ್ವಕೊಡದೆ, ಮೂಲಗುರು ತೋಂಟದಾರ್ಯರ ಹೆಸರನ್ನೇ ತಮಗೂ ತಮ್ಮ ಮಠಕ್ಕೂ ಇಟ್ಟುಕೊಳ್ಳುತ್ತ ಬಂದರೆ, ಮಿಕ್ಕವರು ಹೊರಗೆ ಹೋಗಿ ಹೊಸ ಸಮಯ ಮಾಡಿಕೊಂಡರೆಂಬಂತೆ ಮೂಲ ತೋಂಟದಾರ್ಯರ ಹೆಸರನ್ನು ಕೈಬಿಟ್ಟು, ತಮ್ಮ ತಮ್ಮ ಸಮಯದ ಗುರುವಿನ ಹೆಸರನ್ನೇ ಪ್ರಧಾನವಾಗಿ ಬಳಸುತ್ತ ಬಂದಿದ್ದಾರೆ. ಇದರಿಂದ ತೋಂಟದ ಸಿದ್ಧಲಿಂಗಯತಿ, ಕಟ್ಟಿಗೆಹಳ್ಳಿ ಸಿದ್ಧಲಿಂಗ, ಚೀಲಾಳಸ್ವಾಮಿ-ಹೀಗೆ ಮುಂದುವರಿದ ಮೂಲಶಾಖೆಯೇ ಗದುಗಿನ ತೋಂಟದಾರ್ಯಮಠವಾಗಿದ್ದು, ಸಿಡಿದು ಹೋದುವು ಮಿಕ್ಕ ಶಾಖೆಗಳೇನೋ ಎನಿಸುತ್ತದೆ. ಶ್ರೀ ಬುದ್ಧಯ್ಯ ಪುರಾಣಿಕರು ಸಮಯಭೇದ ಸಂದರ್ಭದಲ್ಲಿ ಜರುಗಿದ ಘಟನೆಗಳನ್ನು ಕುರಿತ ಅನೇಕ ಹೇಳಿಕೆಗಳನ್ನು ಸಂಗ್ರಹಿಸಿದ್ದು, ಅವುಗಳಲ್ಲಿ ಒಂದು ಹೇಳಿಕೆ ಮೇಲಿನ ಅಭಿಪ್ರಾಯವನ್ನು ಬೆಂಬಲಿಸುವುದೆಂಬುದನ್ನು ಇಲ್ಲಿ ನೆನೆಯಬಹುದು.[೧]

೩. ಚೀಲಾಳಸ್ವಾಮಿಗೆ ಗುರು ಕಟ್ಟಿಗೆಹಳ್ಳಿ ಸ್ವಾಮಿಗಳು "ಶಿಖಾ"ಸಹಿತ ಪಟ್ಟ ಕಟ್ಟಿದರೆಂದು ಷಟ್ಸ್ಥಲ ಶಿವಾಯಣ ಹೇಳುತ್ತದೆ. ಇದರ ಉಲ್ಲೇಖ ಈ ಕಾವ್ಯದಲ್ಲಿ ಮತ್ತೆ ಮತ್ತೆ ಬರುತ್ತದೆ. ಬಹುಶಃ ಈ ಶಿಖಾ ಮತ್ತೇನೂ ಅಲ್ಲ, ಶೂನ್ಯಪೀಠದ ಅಧಿಕಾರ ಚಿಹ್ನೆಯಾದ ಸಿಕ್ಕಾ ಇರಬಹುದು. ಈ ಕಾವ್ಯವೂ ಇದೇ ಅರ್ಥದಲ್ಲಿ ಈ ಪದವನ್ನು ಬಳಸಿದಂತಿದೆ. ಮೇಲೆ ಹೇಳಿದಂತೆ ಈ ಶಿಖಾ(ಸಿಕ್ಕಾ) ಗುರುವಿನಿಂದ ಪಟ್ಟ ಕಟ್ಟಿಸಿಕೊಂಡ ಚೀಲಾಳಸ್ವಾಮಿಯ ವಶದಲ್ಲಿ ಉಳಿಯಿತೆಂದು ಕಾಣುತ್ತದೆ. ಈ ಕಾರಣ

---

೧. ತೇರದಾಳ ಶ್ರೀಮನ್ನಿರಂಜನ ಜಗದ್ಗುರು ಶ್ರೀಮದನಾದಿ ಅಲ್ಲಮಪ್ರಭು (೧೯೩೭) ಪುಟ ೧೨೩-೧೨೭

ದಿಂದಾಗಿಯೇ ದಿಲ್ಲಿಯ ಮಲ್ಲೂಖಾನನ ಹತ್ತಿರ ಚೆನ್ನಬಸವಣ್ಣನವರು ಇಟ್ಟಿದ್ದ ಶಿಖೆಯನ್ನು ಮುರಿಗಾಶಾಂತವೀರರು ತಂದರೆಂಬ ಕಥೆ ಹುಟ್ಟಿಕೊಂಡಿರಬಹುದು. ಚೆನ್ನಬಸವಣ್ಣನಂಥವರು ಸಿಕ್ಕಾದಂತಹ ಉಪಕರಣ ಸೃಷ್ಟಿಸಿಕೊಳ್ಳುವುದಾಗಲೀ, ವಿಧರ್ಮೀಯನಾದ ಮಲ್ಲೂಖಾನನ ವಶಕ್ಕೆ ಒಪ್ಪಿಸುವುದಾಗಲೀ ಕಟ್ಟುಕಥೆಯಲ್ಲದೆ ಮತ್ತೇನು? ಮಲ್ಲೂಖಾನ ಐತಿಹಾಸಿಕ ವ್ಯಕ್ತಿಯೇ ಅಲ್ಲವೆಂದು ಎಲ್ಲ ಮೂಲಗಳು ಖಚಿತಪಡಿಸಿವೆ.

ಎರಡನೆಯದಾಗಿ ಇಂದು ಚಿತ್ರದುರ್ಗಮಠದಲ್ಲಿ ಧಾರ್ಮಿಕ ಅಧಿಕಾರದ ಚಿಹ್ನೆಗಳಾದ ಶಿಖಾ-ಶೈಲಗಳಿವೆಯೆಂದು ಕೇಳಿಬರುತ್ತದೆ. ಇಲ್ಲಿ ಶಿಖಾ ಎಂಬುದು ಸಿಕ್ಕಾ ಆಗಿದ್ದರೆ, ಬಹುಶಃ ಶೈಲವೆಂಬುದು ಸೀಲ (Seal) ಆಗಿರಬಹುದು. ಹಿಂದೆ ಪ್ರಮುಖ ಮಠಗಳು ತಮ್ಮದೇ ಆದ ಸಿಕ್ಕಾ, ಸೀಲು ಬಳಸುತ್ತಿದ್ದರೆಂಬುದನ್ನು ನೆನೆಯಬಹುದು.[೧]

೪. ಇಲ್ಲಿ ಮುರುಗಾ, ಚೀಲಾಳ ಹೆಸರುಗಳ ಅರ್ಥ ಸ್ಪಷ್ಟವಾಗುವುದಿಲ್ಲ. ಮೈಮೇಲೆ ಮುರಿಮುರಿಯಾಗಿ ವಸ್ತ್ರಧರಿಸುತ್ತಿದ್ದ ಕಾರಣ, ಕೈಯಲ್ಲಿ ಮುರಿಮುರಿಯಾದ ದಂಡ ಹಿಡಿಯುತ್ತಿದ್ದ ಕಾರಣ, ಚಿತ್ರದುರ್ಗದ ಶಾಂತವೀರಸ್ವಾಮಿಗಳಿಗೆ ಮುರಗಾಶಾಂತವೀರಸ್ವಾಮಿಯೆಂಬ ಹೆಸರು ಬಂದಿತೆಂದು ಮಹಾಲಿಂಗೇಂದ್ರವಿಜಯ ಹೇಳಿದರೆ, ಷಣ್ಮುಖ ನಾಮದ ಮುರುಘ ಮೂಲದಿಂದ ಈ ಹೆಸರು ಬಂದಿದೆಯೆಂದು ಕೆಲವರು ಹೇಳುತ್ತಾರೆ. ಇದು ಜನಪದ ಮತ್ತು ಶಿಷ್ಟಪದ ನಿರುಕ್ತಿಯೆಂದು ಬೇರೆ ಹೇಳಬೇಕಿಲ್ಲ. ನನಗೇನೋ ಮುರುಗಾ ಎಂಬುದು ಗ್ರಾಮನಾಮವಾಗಿರಬಹುದೆನಿಸುತ್ತದೆ. ಸ್ವಾಮಿಗಳನ್ನು ಅಂಕಿತನಾಮಕ್ಕಿಂತ ಗ್ರಾಮನಾಮದಿಂದ ಕರೆಯುವ ಪದ್ಧತಿ ವೀರಶೈವರಲ್ಲಿ ಹೆಚ್ಚು. ಸ್ವತಃ ಮುರಗಾಶಾಂತವೀರರ ಗುರು ಕಟ್ಟಿಗೆಹಳ್ಳಿ ಸಿದ್ಧಲಿಂಗರನ್ನು ಕಟ್ಟಿಗೆಹಳ್ಳಿಸ್ವಾಮಿ ಎಂದು ಕರೆದುದು ಇದಕ್ಕೆ ಉದಾಹರಣೆಯಾಗಿದೆ. (ಈ ಹೆಸರಿನ ನಿಜರೂಪ ಕಟ್ಟಿಗನಹಳ್ಳಿ ಇರಬಹುದು). ಇಂದಿಗೂ ಅಥಣಿಯ ಮುರುಗೇಂದ್ರಸ್ವಾಮಿಗಳನ್ನು 'ಅಥಣಿ ಶಿವಯೋಗಿಗಳು' ಎಂದೇ ಗೌರವದಿಂದ ಕರೆಯಲಾಗುತ್ತಿದೆ. ಇದೇ ರೀತಿ ಶಾಂತವೀರರನ್ನು ಅವರ ಸ್ವಗ್ರಾಮನಾಮದಿಂದ ಮುರಿಗಾಸ್ವಾಮಿಯೆಂದೋ, ಮುರಿಗಾಶಾಂತವೀರನೆಂದೋ ಕರೆಯುತ್ತಿರಬಹುದು. ಈ ಊರು ಎಲ್ಲಿದೆ? ಶೋಧಿಸಬೇಕು. ಇದಲ್ಲದೆ ಬಾಚಿಗ, ಬೂತುಗಗಳಂತೆ ಮುರುಗ ಎಂಬುದು ವ್ಯಕ್ತಿನಾಮವಾಗಿದ್ದು, ಆ ವ್ಯಕ್ತಿಗೆ ಸಂಬಂಧಪಟ್ಟ ಶಾಂತವೀರ ಎಂಬ ಅರ್ಥದಲ್ಲಿಯೂ ಈ ಹೆಸರು ಪ್ರಚಾರಕ್ಕೆ ಬಂದಿರಬಹುದು. ನನಗೇನೋ ಮೊದಲಿನದೇ ಸರಿ ಎನಿಸುತ್ತದೆ.

---

೧. ಡಾ॥ ಎಂ. ಚಿದಾನಂದಮೂರ್ತಿ ಅವರ ಅಭಿಪ್ರಾಯವೂ ಇದೇ ಆಗಿದೆ. ಈ ವಿಷಯವಾಗಿ ನಾವಿಬ್ಬರೂ ಅನೇಕ ಸಲ ಮಾತನಾಡಿದ್ದೇವೆ.

ಇದೇರೀತಿ ಚೀಲನಹಳ್ಳಿ, ಚೀಲೇನಹಳ್ಳಿ ಇತ್ಯಾದಿ ಗ್ರಾಮನಾಮಗಳು ಕರ್ನಾಟಕದಲ್ಲಿವೆ. ಇಂಥ ಯಾವುದೋ ಒಂದು ಗ್ರಾಮದ ಸಂಬಂಧವಿಟ್ಟುಕೊಂಡಿದ್ದ ಬಸವಪ್ರಭುವು ಚೀಲಾಳಸ್ವಾಮಿಯೆಂದು ಪ್ರಸಿದ್ಧಿಗೆ ಬಂದಿರಬಹುದೇ? ಅಥವಾ ಚೀಲಾಳಶೆಟ್ಟಿ, ಚೀಲೆಯನಾಯಕ ಇತ್ಯಾದಿ ಅಂಕಿತನಾಮಗಳು ಶಾಸನದಲ್ಲಿ ಸಿಗುತ್ತಿದ್ದು, ಇದೇ ಬಗೆಯಲ್ಲಿ ಚೀಲಾಳಸ್ವಾಮಿಯೆಂಬುದು ಮೂಲನಾಮವಾಗಿದ್ದು, ಬಸವಪ್ರಭುವೆಂಬುದು ಆಮೇಲೆ ಬಳಕೆಗೆ ಬಂದಿರಬಹುದೇ? ವಿಚಾರಿಸಬೇಕು. "ಷಟ್ಸ್ಥಲಶಿವಾಯಣ" ಈ ಎರಡನೆಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

೫. ಚೀಲಾಳಸ್ವಾಮಿಯ ಶಿಷ್ಯ ಕಪಿಲಸಿದ್ಧನೆಂದು ಷಟ್ಸ್ಥಲಶಿವಾಯಣ ಹೇಳುತ್ತದೆ. ವೀರಶೈವಾಮೃತ ಪುರಾಣದ ಪ್ರಶಸ್ತಿಗದ್ಯ ಇದನ್ನು ಸಮರ್ಥಿಸುತ್ತದೆ. ಆದುದರಿಂದ ಕಪಿಲಸಿದ್ಧನು ಐತಿಹಾಸಿಕ ವ್ಯಕ್ತಿಯೆಂಬುದು ನಿಜ. ಆದರೆ ಈ ಹೆಸರು ಆಮೇಲೆ ಯಾವುದೇ ಗುರು ಪರಂಪರೆಯಲ್ಲಿ ಕಾಣದುದಕ್ಕೆ ಕಾರಣ ಹುಡುಕಬೇಕು.

೬. ಹರಪನಹಳ್ಳಿಯ ಗುಡ್ಡದ ಓರೆಯನ್ನು ಚೀಲಾಳಸ್ವಾಮಿಯ ಭವ್ಯ ಮಠವಿದ್ದುದಾಗಿ ಷಟ್ಸ್ಥಲಶಿವಾಯಣ ಹೇಳುತ್ತದೆ. ಆದರೆ ಇಂದು ಅಲ್ಲಿ ಮಠವಿಲ್ಲ, ಹಾಳಾಗಿದೆಯೆಂದು ಜನ ಹೇಳುತ್ತಾರೆ. ಬಹುಶಃ ಆಶ್ರಯ ನೀಡಿದ್ದ ಅರಸು ಮನೆತನ ನಾಶವಾಗಲು ಮಠವೂ ನಾಶವಾಗಿರಬೇಕು. ಈಗ ಈ ಮಠ ಮತ್ತು ಸುತ್ತಲಿನ ಪರಿಸರದಲ್ಲಿ ಹರಡಿಕೊಂಡಿದ್ದ ಶಾಖಾಮಠಗಳನ್ನು ಕುರಿತು ಅಧ್ಯಯನ ನಡೆಯಬೇಕಾಗಿದೆ. ದೂಗದ ಕೊಡಗಿನ ದನಗಲ್ಲು ಗ್ರಾಮದ ಶಾಸನದಲ್ಲಿ" ಇವ ಸಂವತ್ಸರದ ಜೇಷ್ಠ ಶುದ್ಧ ೫ ರಲ್ಲು ಚೀಲಾಳಷಾಕ ಸ್ವಾಮಿಗಳ ವಿರಕ್ತಮಟ್ಟ"[೧] ಎಂಬ ಉಲ್ಲೇಖವಿದೆ. ಹೀಗೆಯೇ ಬೇರೆಡೆಗಳಲ್ಲಿರುವ ಶಾಖಾಮಠಗಳನ್ನು ಶೋಧಿಸಬೇಕು.

೭. "ಚೀಲಾಳಸ್ವಾಮಿ" ಅಂಕಿತದಲ್ಲಿ ನೂರಾರು ಸ್ವರವಚನಗಳು ಸಿಗುತ್ತಿದ್ದು (ಬಸವಸಪು ೩-೯, ಶರಣ ಸಂತಾನ ೪-೨) ಇವುಗಳ ಸಮಗ್ರಶೋಧ ಅವಶ್ಯವಿದೆ.

೮. ಇತಿಹಾಸವೆಂಬ ಕಾಲವಾಹಿನಿಯಲ್ಲಿ ಹಿಮಾಲಯದಂಥ ಸತ್ಯಗಳು ಮುಚ್ಚಿಹೋಗಿರುವ ಇಲ್ಲವೆ ಮುಚ್ಚಿಹಾಕಿರುವ ಸಾಧ್ಯತೆಗಳಿರುವುದರಿಂದ ಷಟ್ಸ್ಥಲ ಶಿವಾಯಣ ವ್ಯಕ್ತಿಪಡಿಸುವ ಸಂಗತಿಗಳನ್ನು ಸಾರಾಸಗಟು ಮಗ್ಗಲಿಗೆ ಸರಿಸಬಾರದು.

ಷಟ್ಸ್ಥಲಶಿವಾಯಣವಾಗಲೀ, ಮಹಾಲಿಂಗೇಂದ್ರವಿಜಯವಾಗಲೀ ಮೂಲತಃ ಪುರಾಣಗಳು, ಅದರಲ್ಲಿಯೂ ಉತ್ತರಾಧಿಕಾರಿತ್ವಕ್ಕಾಗಿ ನಡೆದ ಘರ್ಷಣೆ ಸಂದರ್ಭದ ಸೃಷ್ಟಿಗಳು. ಹೀಗಾಗಿ ಇವು ವ್ಯಕ್ತಪಡಿಸುವ ವಿಷಯಗಳನ್ನು ಪ್ರಾಮಾಣಿಕ ಅನ್ಯ ಆಧಾರಗಳಿಂದ ಪರೀಕ್ಷಿಸುವುದು ಅವಶ್ಯವಿದೆ.

* *

---

೧. EC.I. ೧೦೩. ದನಗಲ್ಲು (ವಿರಾಜಪೇಟೆ ತಾಲೂಕು)

ವೃತ್ತಿಪದಕೋಶಗಳ ರಚನಾ ಕ್ರಮ

-ಆರ್. ವಾಯ್. ಕುಲಕರ್ಣಿ

ಭಾರತದಲ್ಲಿ ನಿಘಂಟುಗಳ ಉಗಮವನ್ನು ವೇದ ಕಾಲದಲ್ಲಿಯೇ ಕಾಣಬಹುದು. ಯಾಸ್ಕನ ನಿರುಕ್ತ ಮತ್ತು ಪದಪಾಠಗಳೇ ಇದಕ್ಕೆ ಸಾಕ್ಷಿ. ನಂತರ ೧೫ ರಿಂದ ೧೭ ನೆಯ ಶತಮಾನದ ವರೆಗೆ ನಡೆದ ನಿರಂತರ ನಿಘಂಟು ರಚನಾ ಕ್ರಿಯೆಯು ಇಂಡೋ-ಆರ್ಯನ್ ಹಾಗೂ ದ್ರಾವಿಡ ಭಾಷಾ ನಿಘಂಟುಗಳ ರಚನೆಗಳಿಗೆ ಮಾದರಿಯಾಯಿತು. ಇದನ್ನು ಹಿನ್ನೆಲೆಯಾಗಿರಿಸಿಕೊಂಡು ಕನ್ನಡ ನಿಘಂಟುಗಳಿಗೆ ಬಂದರೆ, ಇಲ್ಲಿಯವರೆಗೆ ಕನ್ನಡದಲ್ಲಿ ಪ್ರಕಟವಾದ, ಅಲ್ಲದೇ ಹಸ್ತಪ್ರತಿಯಲ್ಲಿ ಉಳಿದುಕೊಂಡಿದ್ದ ನಿಘಂಟುಗಳೆಲ್ಲ ಲಿಖಿತ ಸಾಹಿತ್ಯವನ್ನಾಧರಿಸಿ, ಅಂದರೆ ಮುಖ್ಯವಾಗಿ ಸಂಸ್ಕೃತದಿಂದ ಭಾಷಾಂತರಗೊಂಡ ಮಹಾಕಾವ್ಯ ಮತ್ತು ಪುರಾಣಗಳನ್ನು ಆಯ್ದುಕೊಂಡು, ಅವುಗಳಿಂದ ಪದಶೇಖರಣೆ ಮಾಡಿ ರಚಿಸಿದವುಗಳು. ಇತ್ತೀಚೆಗೆ ರಚನೆಗೊಂಡ ನಿಘಂಟುಗಳಲ್ಲಿ ಕನ್ನಡ ಸಾಹಿತ್ಯಿಕ ಕೃತಿಗಳಿಂದಲೂ ಪದಶೇಖರಣೆ ನಡೆದಿದೆ ಎನ್ನುವುದನ್ನು ಮರೆಯುವಂತಿಲ್ಲ.

ಈ ಲೇಖನದ ಉದ್ದೇಶ ಕೇವಲ ವೃತ್ತಿಪದಕೋಶಗಳ ರಚನಾ ಕ್ರಮಕ್ಕೆ ಸೀಮಿತವಾಗಿರುವದರಿಂದ, ಇಲ್ಲಿ ಹಲವು ಪ್ರಕಾರಗಳ ನಿಘಂಟುಗಳ ಬಗ್ಗೆ ಯಾವುದೇ ತೆರನಾದ ಮಾಹಿತಿಯನ್ನು ಕೊಟ್ಟಿಲ್ಲ. ಕನ್ನಡದಲ್ಲಿ ಇಲ್ಲಿಯ ವರೆಗೆ ರಚಿತವಾದ ಕನ್ನಡ ನಿಘಂಟುಗಳಿಂದ ನಾವು ಪಾರಂಪರಿಕ ವೃತ್ತಿಗಳಿಗೆ ಸಂಬಂಧಪಟ್ಟ ಪದಗಳನ್ನು ಬೆರಳ ಮೇಲೆ ಎಣಿಸುವಷ್ಟು ಮಾತ್ರ ಪಡೆಯಬಹುದು. ಇಂಥ ಪರಿಸ್ಥಿತಿ ಎಲ್ಲ ಭಾರತೀಯ ಭಾಷೆಗಳಿಗೂ ಅನ್ವಯಿಸುತ್ತದೆ. ಪ್ರತಿಯೊಂದು ವೃತ್ತಿಗೂ ತನ್ನದೇ ಆದ ಅಪಾರ ಶಬ್ದ ಸಂಪತ್ತಿದೆ. ಆ ಸಮಗ್ರ ಸಂಪತ್ತನ್ನು ಈ ಮೇಲೆ ಹೇಳಿದ ನಿಘಂಟುಗಳಲ್ಲಿ ಬಯಸುವುದು ಅಸಾಧ್ಯ.

ದಿನಗಳೆದಂತೆ ಅಗಾಧವಾಗಿ ಬೆಳೆಯುತ್ತಿರುವ ವಿಜ್ಞಾನ ಮತ್ತು ಔದ್ಯೋಗೀಕರಣ ನಮ್ಮ ಪಾರಂಪರಿಕ ವೃತ್ತಿಗಳನ್ನು ಕಣ್ಮರೆಯಾಗಿಸುತ್ತಿವೆ. ಹೀಗಿದ್ದಾಗ ಅದರೊಡನೆ ಹೊಂದಿಕೊಂಡಿದ್ದ ಶಬ್ದ ಭಂಡಾರ ಕೂಡ ಕಣ್ಮರೆಯಾಗುತ್ತದೆಂದು ಬೇರೆ ಹೇಳಬೇಕಿಲ್ಲ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ನಾವು ಪದ ಸಂಗ್ರಹಣೆ ಮಾಡದೇ ಹೋದರೆ, ಮುಂದೆ ಬರುವ ಜನಾಂಗಕ್ಕೆ ಪಾರಂಪರಿಕ ವೃತ್ತಿಗಳಿದ್ದವು ಎಂಬುದು ತಿಳಿಯದೇ ಹೋಗುವ ಪ್ರಸಂಗ ಬರಬಹುದು. ಆದ್ದರಿಂದ ಈ ಅಪಾರವಾದ ಶಬ್ದ ಸಂಪತ್ತನ್ನು ಸಂಗ್ರಹಿಸಲು ಮತ್ತು ನಿಘಂಟನ್ನು ರಚಿಸಲು ಒಂದು ಅಚ್ಚುಕಟ್ಟಾದ ಅಭ್ಯಾಸಕ್ರಮವನ್ನು ರಚಿಸುವುದು ಅವಶ್ಯವಿದೆ. ಪದ ಸಂಗ್ರಹಣ ಕಾರ್ಯವನ್ನು

ತ್ವರಿತವಾಗಿ ಮಾಡಬೇಕು. ಈ ಕಾರ್ಯವನ್ನು ಮಾಡದೇ ಹೋದಲ್ಲಿ ನಮ್ಮ ಸಂಸ್ಕೃತಿಯ ಬಹುತರ ಭಾಗ ಕೊಚ್ಚಿ ಹೋಗುವುದು.

ಭಾರತವು ಹಲವಾರು ಹಳ್ಳಿಗಳಿಂದ ಕೂಡಿಕೊಂಡ ದೇಶ. ಹಳ್ಳಿಗಳೇ ಭಾರತೀಯ ಸಂಸ್ಕೃತಿಯ ಆಗರಗಳು. ಪಟ್ಟಣಿಗರು ಆಧುನೀಕರಣಕ್ಕೆ ಒಳಗಾಗಿ ತಮ್ಮೊಡನೆ ಬೆಳಸಿಕೊಂಡು ಬರಬೇಕಾದ ಸಂಸ್ಕೃತಿಯನ್ನು ಮರೆತುಬಿಟ್ಟಿದ್ದಾರೆ. ಅಂದ ಮೇಲೆ ಪಾರಂಪರಿಕ ವೃತ್ತಿಗಳ ಮಾತು ದೂರವೇ ಉಳಿಯಿತಲ್ಲವೇ ? ಭಾರತದಲ್ಲಿ ಈಗ ಪಾರಂಪರಿಕ ವೃತ್ತಿಗಳನ್ನು ಹಳ್ಳಿಗಳಲ್ಲಿ ಮಾತ್ರ ಕಾಣಬಹುದು. ಹಳ್ಳಿಗಾಡಿನ ಜನಸಮುದಾಯವೇ ಇಂಥ ವೃತ್ತಿಗಳನ್ನು ಮುಂದೆವರಿಸಿಕೊಂಡು ಬರುತ್ತಿರುವದರಿಂದ, ಆ ಜನಗಳು ಒಂದೇ ಹಳ್ಳಿಯಲ್ಲಿ ಸತತವಾಗಿ ವಾಸವಾಗಿರುವದರಿಂದ, ನಾಲ್ಕು ಗೋಡೆಗಳ ಮಧ್ಯ ನಾವು ಕೊಡುವ ವಿದ್ಯಾಭ್ಯಾಸ ಮಾಡದೇ ಇರುವ ಕಾರಣ, ಅವರಲ್ಲಿ ನಾವು ಹಲವಾರು ಉಪಭಾಷೆಗಳನ್ನು ಕಾಣಬಹುದು. ಈ ಕ್ರಿಯೆ ಸಹಜ ಮತ್ತು ಸ್ವಾಭಾವಿಕ. ಐತಿಹಾಸಿಕವಾಗಿ, ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಭಾವ ಹಾಗೂ ಅವುಗಳ ಸಂಬಂಧವನ್ನು ಅವರ ಭಾಷೆಯಾಗಲಿ, ಉಪಭಾಷೆಯಾಗಲಿ ನಿರರ್ಗಳವಾಗಿ ವ್ಯಕ್ತಪಡಿಸುತ್ತದೆ. ಇಂಥ ಅಮೂಲ್ಯವಾದ ದತ್ತವನ್ನು ನಾವಿನ್ನೂ ಅಭ್ಯಸಿಸಿಲ್ಲ. ಅಭ್ಯಸಿಸಿದ್ದರೂ ಅದು ಇಳಿಯಬೇಕಾದ ಆಳಕ್ಕೆ ಇಳಿದಿಲ್ಲ. ಇಂಥ ಅಭ್ಯಾಸ ಕೇವಲ ಭಾಷಾಭ್ಯಾಸ ದೃಷ್ಟಿಯಿಂದ ಮಹತ್ವದ್ದಾಗದೆ, ಸಾಮಾಜಿಕ ವಿಜ್ಞಾನ, ಜಾನಪದ ವಿಜ್ಞಾನ, ಮತ್ತು ಮಾನವ ವಿಜ್ಞಾನ ಮೊದಲಾದವುಗಳ ದೃಷ್ಟಿಯಿಂದ ಕೂಡ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತಿದೆ.

ವೃತ್ತಿಪದಗಳನ್ನು ಅಭ್ಯಸಿಸುವ ಕ್ರಮ

ವೃತ್ತಿಪದಗಳನ್ನು ಅಭ್ಯಸಿಸುವಾಗ ಮೊಟ್ಟಮೊದಲು ಪೂರ್ವಭಾವಿ ಕ್ಷೇತ್ರ ಕಾರ್ಯವನ್ನು ಮಾಡಬೇಕು. ಅದನ್ನು ಕುರಿತು ಹೀಗೆ ವಿವೇಚಿಸಬಹುದು.

ಪೂರ್ವಭಾವಿ ಕ್ಷೇತ್ರಕಾರ್ಯ :

ಪೂರ್ವಭಾವಿ ಕ್ಷೇತ್ರಕಾರ್ಯವನ್ನು ಪ್ರಶ್ನಾವಳಿ ತಯಾರಿಸಲು ನಿರ್ವಹಿಸಬೇಕು. ಈ ಕ್ಷೇತ್ರಕಾರ್ಯದಲ್ಲಿ ವೃತ್ತಿಗಳ ಆಯಾಮಗಳ ಬಗ್ಗೆ ಬಾತ್ಮಿದಾರರಲ್ಲಿ ವಿಚಾರ ವಿನಿಮಯ ಮಾಡಬೇಕು.ಇಂಥ ವಿಚಾರ ವಿನಿಮಯದಿಂದ ಪ್ರಶ್ನಾವಳಿಯನ್ನು ತಯಾರಿಸಲು ಅನುಕೂಲವಾಗುತ್ತದೆ. ಪೂರ್ವಭಾವಿ ಕ್ಷೇತ್ರಕಾರ್ಯದಿಂದ ರಚಿಸಿದ ಪ್ರಶ್ನಾವಳಿ ಆ ವೃತ್ತಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಒಳಗೊಂಡಿರದೇ ಕೇವಲ ಪ್ರಮುಖವಾದ ವಿಷಯಗಳನ್ನು ಮಾತ್ರ ಹೊಂದಿರುತ್ತದೆ. ಏಕೆಂದರೆ ಈ ಕಾರ್ಯ ಸರ್ವೇಕ್ಷಣೆಯ ಮೊದಲ ಘಟ್ಟ ಮಾತ್ರವಾಗಿರುತ್ತದೆ. ಉದಾಹರಣೆಗೆ ನಾನು ನೇಕಾರ ವೃತ್ತಿಪದಕೋಶವನ್ನು ತಯಾರಿಸುವಾಗ ಪೂರ್ವಭಾವಿ ಕ್ಷೇತ್ರಕಾರ್ಯದಿಂದ ತಯಾರಿಸಿದ ಮೊದಲ ಪ್ರಶ್ನಾವಳಿಯ ಮುಖ್ಯ ಅಂಶಗಳು ಈ ಕೆಳಗಿನಂತಿವೆ :

ಅ. ಕಚ್ಚಾಮಾಲು : ನೂಲು ಮತ್ತು ನೂಲಿನ ಪ್ರಕಾರಗಳು.

ಬ. ಬಣ್ಣ : ಬಣ್ಣಗಳು, ಬಣ್ಣಗಳ ಪ್ರಕಾರಗಳು, ಮತ್ತು ಅವುಗಳ ತಯಾರಿಕೆ.

ಕ. ಮಗ್ಗ : ಮಗ್ಗಗಳ ಪ್ರಕಾರಗಳು ಮತ್ತು ಅವುಗಳ ಭಾಗಗಳು.

ಡ. ನೇಯ್ಗೆ : ನೇಯುವ ಹಂತಗಳು

ಇ. ಸೀರೆ, ಖಣ : ಅವುಗಳ ದಡಿ (ಅಂಚು), ಸೆರಗು, ಅವುಗಳಲ್ಲಿರುವ ಪ್ರಕಾರ, ಮುಂತಾದವುಗಳು.
(ಕುಲಕರ್ಣಿ ೧೯೭೮; ೧೬೨)

ತದನಂತರದಲ್ಲಿ ಕ್ಷೇತ್ರಕಾರ್ಯವನ್ನು ಮಾಡುತ್ತಿರುವಾಗ ಬೇರೆ ಬೇರೆ ಸ್ಥಳಗಳಲ್ಲಿ ದೊರೆತ ಅವಶ್ಯಕವಾದ ಅಂಶಗಳನ್ನು ಪ್ರಶ್ನಾವಳಿಯಲ್ಲಿ ಸೇರಿಸುತ್ತ ಹೋಗಬೇಕು. ಆಗ ಪ್ರಶ್ನಾವಳಿಯಲ್ಲಿ ಕಂಡುಬರುವ ಕುಂದುಕೊರತೆಗಳೆಲ್ಲ ತನ್ನಷ್ಟಕ್ಕೆ ತಾನೇ ಮಾಯವಾಗುತ್ತ ಹೋಗುತ್ತವೆ. ಪ್ರತಿಯೊಂದು ಕ್ಷೇತ್ರದಲ್ಲಿ ಆ ವೃತ್ತಿಗೆ ಸಂಬಂಧಪಟ್ಟ ಊರುಗಳು ಮತ್ತು ಯಾವ ಹಳ್ಳಿಗಳು ಕೇವಲಇಂಥ ವೃತ್ತಿಗಳನ್ನು ಅವಲಂಬಿಸಿವೆ ಎಂಬ ಮಾಹಿತಿಯನ್ನು ಸಂಗ್ರಹಿಸಬೇಕು. ಇದರಿಂದ ಯಾವ ಯಾವ ಸ್ಥಳಗಳನ್ನು ಕ್ಷೇತ್ರಕಾರ್ಯಕ್ಕಾಗಿ ಆಯ್ಕೆ ಮಾಡಬೇಕು ಎಂಬುದರ ತಿಳುವಳಿಕೆಯಾಗುತ್ತದೆ.

ಕ್ಷೇತ್ರಗಳ ಆಯ್ಕೆ :

ಕ್ಷೇತ್ರಗಳ ಆಯ್ಕೆ ಮಾಡುವಾಗ ಮುಖ್ಯವಾಗಿ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಅವಶ್ಯಕ:

೧. ನಾವು ಆಯ್ಕೆ ಮಾಡುವ ಕ್ಷೇತ್ರದಲ್ಲಿ ಎಷ್ಟು ಜನ ತಮ್ಮ ಉಪಜೀವನಕ್ಕಾಗಿ ಈ ವೃತ್ತಿಯನ್ನು ಅವಲಂಬಿಸಿದ್ದಾರೆ. ಬಹಳ ಜನ ಆ ವೃತ್ತಿಯನ್ನು ಅವಲಂಬಿಸಿಕೊಂಡಿದ್ದರೆ ಒಳ್ಳೆಯದು. ಆದರೆ ಕೆಲ ವೃತ್ತಿಗಳಲ್ಲಿ ಈ ಅಂಶವನ್ನು ಸಡಲಿಸುವುದು ಅವಶ್ಯವಾಗುತ್ತದೆ. ಉದಾಹರಣೆಗೆ— ಬಡಗಿ, ಕಮ್ಮಾರ, ಚಮ್ಮಾರ ಮುಂತಾದವುಗಳು.

೨. ಆ ಕ್ಷೇತ್ರದಿಂದ ಬರುವ ಉತ್ಪಾದನೆ ಹಾಗೂ ಇತರ ಸ್ಥಳಗಳಲ್ಲಿ ಆ ವಸ್ತುವಿಗೆ ಇರುವ ಬೇಡಿಕೆ.

೩ ಆಯ್ಕೆ ಮಾಡುವ ಪ್ರತಿಯೊಂದು ಕ್ಷೇತ್ರದ ನಡುವೆ ೩೦ ರಿಂದ ೪೦ ಕಿಲೋಮೀಟರ ಅಂತರವಿರಬೇಕು. ಈ ತೆರನಾದ ಅಂತರವನ್ನಿಟ್ಟುಕೊಂಡರೆ ಭಾಷಾ ವೈವಿಧ್ಯತೆಯನ್ನು ಸಲೀಸಾಗಿ ತೋರಿಸಬಹುದು.

ವಿಸ್ತೃತ ಕ್ಷೇತ್ರಕಾರ್ಯ

ಪ್ರಶ್ನಾವಳಿ :

ದತ್ತವನ್ನು ಸಂಗ್ರಹಿಸಲು ಪ್ರಶ್ನಾವಳಿಯನ್ನು ಪ್ರಾದೇಶಿಕ ಭಾಷೆಯಲ್ಲಿಯೇ ತಯಾರಿಸಬೇಕು. ವಿಸ್ತೃತ ಕ್ಷೇತ್ರಕಾರ್ಯದ ಪ್ರಶ್ನಾವಳಿ ಆ ಆ ವೃತ್ತಿಗೆ ಸಂಬಂಧ ಪಟ್ಟ ಎಲ್ಲ ಆಯಾಮಗಳನ್ನು ಒಳಗೊಂಡಿರಬೇಕು. ಸಿದ್ಧಪಡಿಸಿದ ಪ್ರಶ್ನಾವಳಿಯಲ್ಲಿ ಹೊಸ ಹೊಸ ವಿಷಯಗಳನ್ನು ಸೇರಿಸುವ ಅವಶ್ಯಕತೆ ಕಂಡುಬಂದಲ್ಲಿ ಕ್ಷೇತ್ರಕಾರ್ಯ ಮಾಡುತ್ತಿರುವಾಗಲೇ ಸೇರಿಸಿಕೊಳ್ಳಬೇಕು.

ಬಾತ್ಮಿದಾರನ ಆಯ್ಕೆ :

ಪ್ರತಿಯೊಂದು ಕ್ಷೇತ್ರದಿಂದ ಒಬ್ಬರು ಅಥವಾ ಇಬ್ಬರು ಬಾತ್ಮಿದಾರರನ್ನು ಮಾತ್ರ ಆಯ್ಕೆ ಮಾಡಬೇಕು. ನಾವು ಅಭ್ಯಸಿಸುವ ವೃತ್ತಿ ಆ ಕುಟುಂಬದ ವಂಶ ಪಾರಂಪರಿಕ ವೃತ್ತಿಯಾಗಿರಬೇಕು. ಕನಿಷ್ಠಪಕ್ಷ ಎರಡು-ಮೂರು ತಲೆಮಾರು ಗಳಿಂದಾದರೂ ಆ ಕುಟುಂಬ ಆ ವೃತ್ತಿಯನ್ನು ಅವಲಂಬಿಸಿರಬೇಕು. ಬಾತ್ಮಿದಾರ ಅದೇ ಊರಲ್ಲಿ ಹುಟ್ಟಿ ಬೆಳೆದವನಾಗಿರಬೇಕು. ಬಹುಭಾಷಾಜ್ಞಾನವಿರಕೂಡದು. ಅವನಿಗೆ ಶಾಲಾ ಶಿಕ್ಷಣವಿರಕೂಡದು. ವಯಸ್ಸು ೫೦ ರಿಂದ ೭೦ ರ ವರೆಗೆ ಮಾತ್ರ; ಹೆಚ್ಚಿಗೆ ಇರಕೂಡದು; ಅಲ್ಲದೇ ಆತನಿಗೆ ಒಳ್ಳೆಯ ಸ್ಮರಣಶಕ್ತಿ; ಮಾತಿನಲ್ಲಿ ಸ್ಪಷ್ಟತೆ ಇರಬೇಕು. ಹಲ್ಲುಗಳು ಬಿದ್ದಿರಬಾರದು; ಬಿದ್ದಿದ್ದರೆ ಉಚ್ಚಾರಣಾ ಸಾಮರ್ಥ್ಯವಿರದು. ಕಿವಿಗಳು ಚೆನ್ನಾಗಿ ಕೇಳಿಸುತ್ತಿರಬೇಕು. ಇವೆಲ್ಲವುಗಳು ಬಾತ್ಮಿ ದಾರನಿಗೆ ಇರಲೇಬೇಕಾದ ಸಂಗತಿಗಳು.

ಸಂದರ್ಶಕ ಮತ್ತು ಸಂದರ್ಶನ :

ಸಂದರ್ಶಕನಿಗೆ ಭಾಷಾ ವಿಜ್ಞಾನದ, ಮುಖ್ಯವಾಗಿ ಧ್ವನಿ ವಿಜ್ಞಾನದ ಜ್ಞಾನ ಚೆನ್ನಾಗಿರಬೇಕು. ಕ್ಷೇತ್ರಕಾರ್ಯದ ಯಶಸ್ಸು ಬಾತ್ಮಿದಾರರನ್ನು ಅವಲಂಬಿಸಿರು ತ್ತದೆ. ಆದ್ದರಿಂದ ಸಂದರ್ಶಕನು ಬಾತ್ಮಿದಾರನೊಂದಿಗೆ ಸ್ನೇಹಪರತೆಯಿಂದಿರಬೇಕು. ಬಾತ್ಮಿದಾರನ ವಿಚಾರಧಾರೆಗೆ ಅಡ್ಡ ಬರಕೂಡದು. ಸಂದರ್ಶನ ಮಾಡುವಾಗ ಬಾತ್ಮಿ ದಾರ ಕೆಲವೆಡೆ ತಪ್ಪು ಮಾಹಿತಿ ನೀಡುವ ಸಂಭವವೂ ಇರುತ್ತದೆ ಆತ ತಪ್ಪು ಹೇಳಿ ದಲ್ಲಿ ಅಲ್ಲಲ್ಲಿ ಗುರುತು ಹಾಕಿಕೊಂಡು ನಂತರದ ಕ್ಷೇತ್ರಕಾರ್ಯದಲ್ಲಿ ಇನ್ನೊಬ್ಬ ಬಾತ್ಮಿ ದಾರನಿಂದ ಸಂಶಯಗಳನ್ನು ಬಗೆಹರಿಸಿಕೊಳ್ಳಬೇಕು. ಬಾತ್ಮಿದಾರನಿಗೆ ನೀನು ಹೇಳಿದ್ದು ತಪ್ಪು ಎಂದು ಸರ್ವಥಃ ಹೇಳಕೂಡದು. ಹಾಗೆ ಹೇಳಿದಲ್ಲಿ ಆತ ಕೋಪ ಗೊಳ್ಳಬಹುದು. ಇಲ್ಲದಿದ್ದರೆ ತನಗೆ ಏನೂ ಗೊತ್ತಿಲ್ಲವೆಂದು ಜಾರಿ ಹೋಗುವ ಸಂಭವವಿರುತ್ತದೆ. ಇನ್ನೊಂದು ಮುಖ್ಯವಾದ ಸಂಗತಿ- ಕ್ಷೇತ್ರಕಾರ್ಯಕ್ಕೆ ಹೋದಾಗ ಬಾತ್ಮಿದಾರರು ಪ್ರಶ್ನೆಗಳ ಸುರಿಮಳೆ ಗೈಯಬಹುದು. ಮುಖ್ಯವಾಗಿ ವೃತ್ತಿಗಳನ್ನು ಅಭ್ಯಸಿಸುವಾಗ ಇಂತಹ ಪ್ರಶ್ನೆಗಳಿಗೆ ಎಡೆ ಇರುತ್ತದೆ. ಉದಾಹರಣೆಗೆ- ನೀವು ಇದೇ

ವೃತ್ತಿಯನ್ನು ಅಭ್ಯಸಿಸುವದಕ್ಕೆ ಆಯ್ಕೆ ಮಾಡಿದುದೇಕೆ ? ನೀವು ಮಾಡುವ ಕೆಲಸದಿಂದ ನಮಗಾಗಲಿ; ನಮ್ಮ ವೃತ್ತಿಗಾಗಲಿ ಆಗುವ ಲಾಭವೇನು ? ಈ ವೃತ್ತಿಯನ್ನು ಅಭ್ಯಸಿಸುವದರಿಂದ ನಿಮಗಾಗುವ ಲಾಭವೇನು ? ನಿಮಗೆ ಈ ವೃತ್ತಿಯನ್ನು ಪ್ರಾರಂಭಿಸುವ ಉದ್ದೇಶವೇನಾದರೂ ಇದೆಯೆ ? ಅಥವಾ ನೀವು ಯಾವುದಾದರೂ ಸರಕಾರಿ ಕಚೇರಿ ಮೂಲಕ ಒಂದು ನಮ್ಮ ವೃತ್ತಿಯನ್ನು ಅಭ್ಯಸಿಸಿ ನಮ್ಮ ಬಗ್ಗೆ ದೂರಲು ಬಂದಿರುವಿರಾ ? ಇಂಥ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಿಸಿ, ನೈಪುಣ್ಯದಿಂದ ಬಾತ್ಮಿದಾರನೊಡನೆ ಬೆರೆತು ಅವನ ವಿಶ್ವಾಸ ಗಳಿಸಿಕೊಳ್ಳಬೇಕು. ಕೋಪಗೊಳ್ಳಕೂಡದು. ತಾನು ಕೇವಲ ಅಕಾಡೆಮಿಕ್ ದೃಷ್ಟಿಯಿಂದ ಕೆಲಸ ಮಾಡುವವನೆಂದು ಮನವರಿಕೆ ಆಗುವಂತೆ ವಿವರಿಸಬೇಕು.

ಧ್ವನಿ ಮುದ್ರಣ ಮತ್ತು ದತ್ತ ಸಂಗ್ರಹಣೆ :

ಧ್ವನಿ ಮುದ್ರಣ ಮಾಡಿಕೊಳ್ಳಲು ಅನುಕೂಲತೆ ಇದ್ದರೆ ಮುದ್ರಿಸಿಕೊಳ್ಳಬಹುದು ಬಾತ್ಮಿದಾರ ಹೆದರಿಕೊಂಡರೆ ಧ್ವನಿ ಮುದ್ರಣವನ್ನು ತಪ್ಪಿಸಬೇಕು. ಒಂದು ಸಾರೆ ಒಬ್ಬ ಬಾತ್ಮಿದಾರನನ್ನು ಮಾತ್ರ ಸಂದರ್ಶಿಸಬೇಕು. ಹೀಗೆಂದು ಕೃತಕ ಸನ್ನಿವೇಶವನ್ನುಂಟುಮಾಡಬಾರದು. ಧ್ವನಿಮುದ್ರಣವನ್ನು ತಪ್ಪಿಸಿದರೆ ದತ್ತವನ್ನು ಬರೆದುಕೊಳ್ಳಬೇಕು. ದತ್ತ ಸಂಗ್ರಹಕ್ಕೆ ಕನ್ನಡ ಲಿಪಿಯನ್ನೇ ಬಳಸಿಕೊಳ್ಳಬಹುದು. ಧ್ವನಿಗಳನ್ನು ಸೂಚಿಸಲು ಲಿಪಿಯಲ್ಲಿ ಕೊರತೆ ಉಂಟಾದರೆ ಅಂತಹ ಧ್ವನಿಗಳನ್ನು ಸೂಚಿಸಲು ಲಿಪಿಯಲ್ಲಿ ವಿಶೇಷ ಚಿಹ್ನೆಗಳನ್ನು ಉಪಯೋಗಿಸಿಕೊಳ್ಳಬಹುದು. ದತ್ತವನ್ನು ಸಂಗ್ರಹಿಸುವಾಗ ಕ್ಷೇತ್ರಕಾರ್ಯ ನಿರ್ವಾಹಕನು ಪದಗಳನ್ನು ಸೂಚಿಸಬಾರದು. ಆ ಆ ವಸ್ತುಗಳನ್ನು ತೋರಿಸಿ, ಇದೇನು ? ಇದಕ್ಕೇನು ಹೇಳುವಿರಿ ? ಇದರ ಹೆಸರೇನು ? ಮುಂತಾದ ಪ್ರಶ್ನೆಗಳನ್ನು ಕೇಳಿ, ದತ್ತವನ್ನು ಬರೆದುಕೊಳ್ಳಬೇಕು. ಅದರೊಡನೆ ವಿವರವಾದ ಅರ್ಥವನ್ನು ಬರೆದುಕೊಳ್ಳಬೇಕು. ಬಾತ್ಮಿದಾರನ ಸಂಕ್ಷಿಪ್ತ ಬಯೋ–ಡೇಟಾ ಬರೆದುಕೊಳ್ಳುವುದು ಅವಶ್ಯಕ. ಇದರಲ್ಲಿ ಬಾತ್ಮಿದಾರನ ಹೆಸರು, ಕುಟುಂಬದ ಹಿನ್ನೆಲೆ, ಮುಖ್ಯ ವೃತ್ತಿ, ಶಿಕ್ಷಣ ಮತ್ತು ವಯಸ್ಸು ಇವೇ ಮೊದಲಾದವುಗಳನ್ನು ಸಂಗ್ರಹಿಸಬೇಕು.

ನಮೂದನೆ :

ಕ್ಷೇತ್ರಕಾರ್ಯವನ್ನು ಯಶಸ್ವಿಯಾಗಿ ಮುಗಿಸಿದ ನಂತರ ಪ್ರತಿಯೊಂದು ಪದವನ್ನು ಒಂದೊಂದು ಕಾರ್ಡಿನಲ್ಲಿ ಬರೆಯಬೇಕು. ಆ ಪದದ ಮುಂದೆ ಅದರ ವ್ಯಾಕರಣ ಮಾಹಿತಿಯನ್ನು ನಮೂದಿಸಿ, ಅರ್ಥವನ್ನು ಬರೆಯಬೇಕು. ಎರಡನೆಯ ಹಂತದಲ್ಲಿ ಪ್ರತಿಯೊಂದು ಪದದ ಸಮಾಜಿಕ ಮತ್ತು ಪ್ರಾದೇಶಿಕ ರೂಪಗಳನ್ನು ನಿಶ್ಚಿತ ಸರಣಿಯಲ್ಲಿ ಬರೆದುಕೊಳ್ಳಬೇಕು. ಪರ್ಯಾಯ ಪದಗಳನ್ನು ಮತ್ತು ರೂಪಾಂತರಗಳನ್ನು ಜಾಗರೂಕತೆಯಿಂದ ಪರಿಶೋಧಿಸಬೇಕು. ನಿಘಂಟಿನಲ್ಲಿ ಮುಖ್ಯವಾಗಿ ನಮೂದಿಸುವ

(main entry) ಪದವನ್ನು ಆಯ್ಕೆಮಾಡುವಾಗ ಆ ವೃತ್ತಿಯಲ್ಲಿ ಆ ಪದದ ವ್ಯಾಪಕತೆಯನ್ನು, ಬಳಕೆಯನ್ನು ಮತ್ತು ಅದರ ಆ ವೃತ್ತಿಯನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಪ್ರತಿಯೊಂದು ನಮೂದನೆಗೆ ಇರುವ ಎಲ್ಲ ಉಚ್ಚಾರಣಾ ಭೇದಗಳನ್ನು ತಪ್ಪದೇ ಕೊಡಬೇಕು. ಉಚ್ಚಾರಣಾಭೇದಗಳಿಗೆ ಮುಖ್ಯ ನಮೂದನೆಯನ್ನು ಕೊಡಬಾರದು.

ಮಾದರಿ :

Variants indexed from field work	Item selected for main entry	Variants
1. UDaatra, UTaatra, UDaala, UDeetla "instrument used for drying and removing knots of yarns"	UDaatra, n.	Utaatra UDaatla UDeetla
2. CaTTu, CeTTi. CeTTu, CaTli "frame of a Crude dobby"	CaTTu, n.	CeTTi CeTTu CaTli
3. iLakalla daDi, ilakalla daDi irakalla daDi "Saree having two rows of triangles in the border (manufactured in the town, Ilkal)	iLakalla daDi, n.	ilakalla daDi irakalla daDi

ಮೂರನೆಯ ಹಂತದಲ್ಲಿ ಪದಗಳ ಅಕಾರಾದಿ ಪಟ್ಟಿಯನ್ನು ತಯಾರಿಸಬೇಕು. ಅರ್ಥ ವನ್ನು ಸಾಧ್ಯವಾದ ಮಟ್ಟಿಗೆ ವಿವರವಾಗಿ ಕೊಡಬೇಕು. ಅರ್ಥಕ್ಕೆ ಹೆಚ್ಚಿನ ವಿವರವನ್ನು

ಕೊಡಬೇಕಾದಲ್ಲಿ, ಈ ಮೇಲೆ ತೋರಿಸಿದಂತೆ ಕಂಸದಲ್ಲಿ ಕೊಡಬೇಕು. ಅರ್ಥವನ್ನು ಸರಳಭಾಷೆಯಲ್ಲಿ ಕೊಡಬೇಕು.[೧]

ನಿಘಂಟಿನಲ್ಲಿ ಪದಗಳನ್ನು ನಮೂದಿಸುವ ಕ್ರಮ :

aDiica, num.	two and a half (< Mar. aDiic)
embla, n.	two days old gruel Syn. nuli
KukDi, n.	Yarn spun on the guill or **Dabbi**
Keccu, v.	to fasten
giira haldi, n.	a kind of yellow yarn (used for Weaving the border) Syn nimbi null, nimbi kalara lemanna.
jiro reesmi, n	art silk (< Eng. Zero-) syn. sawataa TaaNa kooraa, naarayaNapeeTi
PadareLi n.	red colour yarn used for **Toopu**
SeeDu, n.	Shade (< Eng. shade)

೧. ಪ್ರತಿಯೊಂದು ಪದದ ವ್ಯಾಕರಣ ಮಾಹಿತಿಯನ್ನು ಸಂಜ್ಞೆಗಳ ಮೂಲಕ ಸೂಚಿಸಬೇಕು. ಉದಾಹರಣೆಗೆ- num. = number, n=noun, v = verb, Eng = English, Mar = Marathi etc.

೨. ಈ ಮೇಲೆ ತೋರಿಸಿದಂತೆ ಪದವನ್ನು ಅನ್ಯಭಾಷೆಯಿಂದ ಎರವಲು ಪಡೆದಿದ್ದರೆ, ಆ ಪದದ ಅರ್ಥವನ್ನು ಕೊಟ್ಟನಂತರ ಕಂಸದಲ್ಲಿ ಮೂಲಭಾಷೆಯನ್ನು, ಸೂಚಿಸಿ, ಮೂಲಪದವನ್ನು ಕೊಡಬೇಕು.

೩. ಪದದ ಅರ್ಥವನ್ನು ಕೊಡುವಾಗ ಅದೇ ವೃತ್ತಿಯಲ್ಲಿ ಬರುವ ಪದಗಳನ್ನು ಬಳಸಿಕೊಂಡರೆ, ಅಂತಹ ಪದಗಳನ್ನು ಯಾವುದಾದರೊಂದು ಚಿಹ್ನೆಯಿಂದ ಗುರುತಿಸಬೇಕು (ಉದಾ : ಈ ಮೇಲೆ ತೋರಿಸಿದಂತೆ **Dabbi Toopu** ಮುಂತಾಗಿ). ಇದರಿಂದ ಓದುಗ ಸರಳವಾಗಿ ಆ ಪದಗಳನ್ನು ಗುರುತಿಸಬಲ್ಲ.

೪. ಪರ್ಯಾಯವಾಗಿ ಬರುವ ಪದಗಳ ಅರ್ಥವನ್ನು ವಿವರಿಸಿದ ನಂತರ syn. ಎಂದು ಸೂಚಿಸಿ ಆ ಪದಗಳನ್ನು ಕೊಡಬೇಕು.

೫. ಒಂದೇ ಪದಕ್ಕೆ ಎರಡು ರೂಪಗಳಿದ್ದರೆ, ಒಂದು ಸ್ಥಳದಲ್ಲಿ ಮಾತ್ರ ಪದವನ್ನು ನಮೂದಿಸಿ, ನಂತರ Var. ಎಂದು ಸೂಚಿಸಿ, ಆ ಪದದ ವಿವರವಾದ ಅರ್ಥ

ವನ್ನು ಹಾಗೂ ಎಲ್ಲ ರೂಪಗಳನ್ನು ಉಲ್ಲೇಖಿಸಿ, ಮುಂದೆ ಬರುವ ಎಲ್ಲ ನಮೂದನೆಗಳಲ್ಲಿ 'ನೋಡು' (See) ಎಂದು ಸೂಚಿಸಬೇಕು.

ಮಾದರಿ :

gaaDa, var. gaaDe, n. see gaDDi
cakra naayi, n. see cakra cuuri
Sakri kaani, n. see. kapili
rumaalu, n. see. PaTagaa.
haligi, n. see. hattaa.

೬. ಒಂದು ಪದಕ್ಕೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಅರ್ಥಗಳಿದ್ದರೆ, ಪ್ರತಿಯೊಂದು ಅರ್ಥವನ್ನು ಬೇರೆ ಬೇರೆಯಾಗಿ ಕೊಡಬೇಕು.

ಮಾದರಿ :

ODla, n. ground of saree ; the yarn used to fasten the ground of saree.

Kambi, n. red colour yarn used to weave saree, red stripe running parallel with the border of saree ; pole which supports the frame of loom, rod used to hold the wrap ; rod used to beat yarns to remove knots and in equalities.

maDaki, var. maDiki, n. fold of a saree ; the wrap, ready for being introduced into a loom.

ಅಡಿಟಿಪ್ಪಣಿಗಳು :

೧ ಇಲ್ಲಿ ಕೊಟ್ಟಿರುವ ಎಲ್ಲ ಉದಾಹರಣೆಗಳನ್ನು ನನ್ನ ಎಮ್. ಫಿಲ್. ಪ್ರಬಂಧದಿಂದ ಎತ್ತಿಕೊಳ್ಳಲಾಗಿದೆ ; ಆದ್ದರಿಂದ ಅವುಗಳನ್ನು ಇಂಗ್ಲೀಷದಲ್ಲಿ ನಮೂದಿಸಲಾಗಿದೆ. ಮತ್ತು ಬೆರಳಚ್ಚು ಸಮಸ್ಯೆಯನ್ನು ತಪ್ಪಿಸಲು ಡೈಯಾಕ್ರಟಿಕ್ ಸಂಕೇತಗಳನ್ನು ಉಪಯೋಗಿಸದೆ, ದೀರ್ಘ ಸ್ವರಗಳಿಗೆ ಎರಡು ಸ್ವರಗಳನ್ನು ಮೂರ್ಧನ್ಯಗಳಿಗೆ ಕ್ಯಾಪಿಟಲ್, ಅಕ್ಷರಗಳನ್ನು ಉಪಯೋಗಿಸಲಾಗಿದೆ.

೨. ಪ್ರಬಂಧ ಇಂಗ್ಲೀಷದಲ್ಲಿ ಇದ್ದುದರಿಂದ ಅರ್ಥವನ್ನು ಸಹ ಅಲ್ಲಿಂದಲೇ ಎತ್ತಿ ಕೊಳ್ಳಲಾಗಿದೆ. ಕನ್ನಡದಲ್ಲಿ ವೃತ್ತಿಪದಕೋಶಗಳನ್ನು ರಚಿಸುವಾಗ ಸರಳವಾದ ಕನ್ನಡದಲ್ಲಿ ಅರ್ಥ ವಿವರಣೆಯನ್ನು ಕೊಡಬೇಕು.

ಆಧಾರ ಗ್ರಂಥಗಳು

Krishnamurti, Bh. 1962. A Telugu dialect dictionary of Occupational vocabulary, Vol. I. Agriculture, Hyderabad, Andhra Pradesh Sahitya Academi

—1982. A Survey of Telugu dialect vocabulory used in native occupations. Paper presented to the working group × at the 13th International Congress of Linguists, Tokyo, Japan.

Kulkarni, R. Y. 1984. A linguistic analysis of weavers' Occupational Vocabulary in Kannada. (Unpublished M. Phil. dissertation submitted to Osmania University, Hyderabad).

—೧೯೮೯ ಕನ್ನಡದಲ್ಲಿ ವೃತ್ತಿಪದಕೋಶಗಳು–ಕರ್ನಾಟಕ ಭಾರತಿ, ಸಂಪುಟ ೨೦ ಸಂಚಿಕೆ ೩, ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ.

**

ರಾಯಚೂರು ಜಿಲ್ಲೆಯ ಶಾಸನಗಳು: ಒಂದು ಅಧ್ಯಯನ*

–ಚೆನ್ನಬಸವ ಹಿರೇಮಠ

ಶಾಸನಗಳ ಅಧ್ಯಯನ, ಪಾಶ್ಚಾತ್ಯದೇಶದವರು ನಮಗೆ ನೀಡಿದ ಮಹತ್ವದ ಕೊಡುಗೆಗಳಲ್ಲಿ ಒಂದು. ಅದು ಕ್ರಿ. ಶ. ೧೭೯೧ ರಷ್ಟು ಹಿಂದೆಯೇ ಕರ್ನಲ್ ಮೆಕೆಂಝಿಯವರಿಂದ ಆರಂಭವಾಯಿತು. ಆದರೆ ಕನ್ನಡ ನಾಡಿನಲ್ಲಿ ದೊರೆತ ಹಾಗೂ ಕನ್ನಡ ಭಾಷೆಯಲ್ಲಿಯ ಮೊದಲ ಶಾಸನ ಪ್ರಕಟಗೊಂಡದ್ದು ೧೮೦೭ರಲ್ಲಿ. ಮೆಕೆಂಝಿಯ ನಂತರದಲ್ಲಿ ಸರ್ ವಾಲ್ಟರ್ ಇಲಿಯಟ್, ಜೆ. ಎಫ್. ಫ್ಲೀಟ್, ಬಿ. ಎಲ್. ರೈಸ್ ಮುಂತಾದ ಪಾಶ್ಚಾತ್ಯರಲ್ಲದೆ ತೆಲಂಗ, ಭಾವುದಾಜಿ, ಆರ್. ರಾಮರಾವ್, ಎಸ್. ಸಿ. ನಂದೀಮಠ, ಕೆ. ಜಿ. ಕುಂದಣಗಾರ ಪಂಚಮುಖಿ, ಜಿ. ಎಸ್. ಗಾಯಿ, ಆರ್. ನರಸಿಂಹಾಚಾರ್, ಡಾ|| ಬಿ. ಆರ್. ಗೋಪಾಲ ಮುಂತಾದ ಭಾರತೀಯರು ಕನ್ನಡ ನಾಡಿನ ಶಾಸನಗಳ ಸಂಗ್ರಹ ಹಾಗೂ ಪ್ರಕಟಣೆಯಲ್ಲಿ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ಈ ಎಲ್ಲಾ ಮಹನೀಯರ ಕಾರ್ಯ ಕೇವಲ ಕನ್ನಡ ನಾಡಿನ ಮುಕ್ಕಾಲು ಭಾಗಕ್ಕೆ ಮಾತ್ರ ಸಂದಿದೆ. ಅಂದರೆ ಇತಿಹಾಸದ ಪೂರ್ಣ ಅರಿವಿಗೆ ನೆರವಾಗಬಹುದಾದ ಕರ್ನಾಟಕದ ಶಿರೋಭಾಗವನ್ನೇ ಅವರು ಅಲಕ್ಷಿಸಿದ್ದಾರೆ. ಹೀಗಾಗಿ ಕನ್ನಡ ನಾಡಿನ ಶಾಸನಗಳು ಎಂದರೆ ದಕ್ಷಿಣ ಕರ್ನಾಟಕದ ಮತ್ತು ಮುಂಬೈ ಕರ್ನಾಟಕದ ಶಾಸನಗಳೇ ಎಂಬ ಭಾವನೆ ಮೂಡುವಂತಾಗಿದೆ.

ಶಾಸನಗಳ ಅನ್ವೇಷಣೆಯ ಕಾರ್ಯದಿಂದ ಸಂಪೂರ್ಣ ಅಲಕ್ಷ್ಯಕ್ಕೆ ಒಳಗಾದ ಹೈದ್ರಾಬಾದ್ ಕರ್ನಾಟಕದ ಕಡೆಗೆ ಶಾಸನ ತಜ್ಞರ ಗಮನವನ್ನು ಮೊಟ್ಟ ಮೊದಲಿಗೆ ಸೆಳೆದವರು 'ಬೀಡನ್' ಎಂಬ ಇಂಜನೀಯರ್. ಮಸ್ಕಿಯ ಗುಡ್ಡಗಳಲ್ಲಿ ಲೋಹ ನಿಕ್ಷೇಪಗಳನ್ನು ಪತ್ತೆ ಹಚ್ಚಲು ಸಂಚರಿಸುತ್ತಿದ್ದ ಅವರಿಗೆ ಆಕಸ್ಮಿಕವೆಂಬಂತೆ ಅಶೋಕನ ಶಾಸನ ಗೋಚರಿಸಿತು. ೧೯೧೫ ರಲ್ಲಿ ಕಂಡುಹಿಡಿಯಲಾದ ಈ ಶಾಸನ, ಇತಿಹಾಸದಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿದೆ. ಅದುವರೆಗೆ 'ದೇವನಾಂ ಪ್ರಿಯ', 'ಪ್ರಿಯದರ್ಶಿ ರಾಜಾ' ಹಾಗೂ 'ದೇವನಾಂ ಪ್ರಿಯ ರಾಜಾ' ಎಂಬ ಬಿರುದು ಯಾರಿಗಿದ್ದಿತೆಂಬ ಬಗೆಗಿನ ಅನುಮಾನಕ್ಕೆ ಹಾಗೂ ಬಹುಶಃ ಅಶೋಕನಿಗಿರಬಹುದೆಂಬ ಊಹೆಗೆ ಖಚಿತವಾದ ಆಧಾರವನ್ನು ಅದು ಒದಗಿಸಿತು. ಅಂದಿನಿಂದ ಮೊದಲ್ಗೊಂಡು ಈ ಭಾಗದ ಶಾಸನ

* ರಾಯಚೂರಿನಲ್ಲಿ ಜನವರಿ ೩೦-೩೧ ರಂದು ನಡೆದ ರಾಯಚೂರ ಜಿಲ್ಲಾ ಎರಡನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಲಾದ ಪ್ರಬಂಧ.

ಗಳ ಕಡೆಗೆ ವಿದ್ವಾಂಸರು ತಮ್ಮ ಗಮನ ಹರಿಯಬಿಟ್ಟರು. ಇಲ್ಲಿ ರಾಯಚೂರು ಜಿಲ್ಲೆಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಶಾಸನಗಳನ್ನು ವಿವೇಚಿಸಲಾಗಿದೆ.

ಶಾಸನಾಧ್ಯಯನದ ಇತಿಹಾಸ :

ರಾಯಚೂರು ಜಿಲ್ಲೆಯ ಶಾಸನಗಳನ್ನು ಕರ್ನಾಟಕದ ಇತರ ಕಡೆಯಲ್ಲಿ ಸಂಗ್ರಹಿಸಿರುವ ರೀತಿಯಲ್ಲಿ, ಅಂದರೆ ಅದರ ಲಿಪಿ-ಭಾಷೆ-ಚಾರಿತ್ರಿಕ ವಿಷಯಗಳ ತೌಲನಿಕ ವಿವರಗಳೊಂದಿಗೆ ವ್ಯವಸ್ಥಿತವಾಗಿ ಮಾಡಿರದಿದ್ದರೂ ಮೂಲ ಶಾಸನಗಳನ್ನು ಯಥಾವತ್ತಾಗಿ ಸಂಗ್ರಹಿಸಿ, ಪ್ರಕಟಿಸುವ ಪ್ರಯತ್ನ ಮಾತ್ರ ಕೆಲ ಮಟ್ಟಿಗೆ ನಡೆದಿದೆ. ಹೀಗೆ ನಡೆದ ಈ ಭಾಗದ ಶಾಸನಾಧ್ಯಯನದ ಇತಿಹಾಸವನ್ನು ಆರು ಭಾಗಗಳಲ್ಲಿ ವಿಂಗಡಿಸಬಹುದು:

೧. ಫ್ಲೀಟರ ಕಾಲ (೧೮೭೦-೧೯೧೫)
೨. ಬೀಡನ್ ಹಾಗೂ ಎಚ್. ಕೃಷ್ಣಶಾಸ್ತ್ರಿಗಳ ಕಾಲ (೧೯೧೫-೧೯೩೦)
೩. ಆರ್. ಎಲ್. ಟರ್ನರ್‌ರ ಕಾಲ (೧೯೩೦-೧೯೩೪)
೪. ಸಿ. ಆರ್. ಕೃಷ್ಣಮಾಚಾರಿಗಳ ಕಾಲ (೧೯೩೪-೧೯೩೫)
೫. ಡಾ|| ಪಿ. ಬಿ. ದೇಸಾಯಿಯವರ ಕಾಲ (೧೯೩೫-೧೯೫೭)
೬. ಡಾ|| ಶ್ರೀನಿವಾಸ್ ರಿತ್ತಿಯವರ ಕಾಲ (೧೯೫೭-೧೯೬೪)

೧. ಫ್ಲೀಟರ ಕಾಲ : ಫ್ಲೀಟರು ಹೈದ್ರಾಬಾದ್ ಕರ್ನಾಟಕದ ಪಶ್ಚಿಮ ಭಾಗದಲ್ಲಿಯ ಕೆಲವು ಶಾಸನಗಳನ್ನು ಸಂಗ್ರಹಿಸಿ, ಅವುಗಳ ಸಾರವನ್ನು ದಕ್ಷಿಣ ಭಾರತದ ವಾರ್ಷಿಕ ವರದಿಗಳಲ್ಲಿ ಪ್ರಕಟಿಸಿದ್ದಾರೆ. ಆದರೆ ಇವರಿಂದ ಈ ಭಾಗದ ಶಾಸನಾಧ್ಯಯನ ಹೆಚ್ಚಾಗಿ ನಡೆಯಲಿಲ್ಲ.

೨. ಬೀಡನ್ ಹಾಗೂ ಎಚ್. ಕೃಷ್ಣಶಾಸ್ತ್ರಿಗಳ ಕಾಲ : ಬೀಡನ್ ಇಂಜನೀಯರರು ಮಸ್ಕಿಯಲ್ಲಿ ಅಶೋಕನ ಶಾಸನಗಳನ್ನು ಪತ್ತೆ ಹಚ್ಚಿದ ಮೇಲೆ ಹೊಸಕೋಟೆ ಕೃಷ್ಣಶಾಸ್ತ್ರಿಗಳು ಅದನ್ನು ೧೯೧೫ ರಲ್ಲಿ ಮೊದಲಬಾರಿಗೆ ಪ್ರಕಟಿಸಿದರು. ಇದಲ್ಲದೆ ಕೃಷ್ಣಶಾಸ್ತ್ರಿಗಳು ಮುನಿರಾಬಾದಿನ ತ್ರಿಭುವನಮಲ್ಲನ ಶಾಸನವನ್ನೂ ಪ್ರಕಟಿಸಿದ್ದಾರೆ.

೩. ಆರ್. ಎಲ್. ಟರ್ನರ್‌ರ ಕಾಲ : ಕೊಪ್ಪಳದ ಅಶೋಕನ ಮತ್ತೆ ಎರಡು ಶಾಸನಗಳು ಸಿಕ್ಕಿವೆ. ಕ್ರಿ. ಶ. ೧೯೩೧ ರಲ್ಲಿ ಕಂಡುಹಿಡಿದ ಇವುಗಳನ್ನು ಪ್ರೊ. ಆರ್. ಎಲ್. ಟರ್ನರ್‌ರವರು ಪ್ರಕಟಿಸಿದ್ದಾರೆ.

೪. ಸಿ. ಆರ್. ಕೃಷ್ಣಮಾಚಾರಿಗಳ ಕಾಲ : ಕೃಷ್ಣಮಾಚಾರ್ಯರು ಯಲಬುರ್ಗಿ ತಾಲೂಕಿನ ಕುಕನೂರು, ಕಲ್ಲೂರುಗಳ ಕೆಲವು ಶಾಸನಗಳನ್ನು ಮತ್ತು ಕೊಪ್ಪಳದ ೧೦ ಶಾಸನಗಳನ್ನು ಪ್ರಕಟಿಸಿದ್ದಾರೆ.

೫. ಡಾ|| ಪಿ. ಬಿ. ದೇಸಾಯಿಯವರ ಕಾಲ : ರಾಯಚೂರು ಜಿಲ್ಲೆಯ ಶಾಸನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸಿ, ಪ್ರಕಟಿಸಿದವರು ಡಾ|| ಪಿ. ಬಿ. ದೇಸಾಯಿಯವರು. ಇವರು ಪ್ರಕಟಿಸಿದ ಶಾಸನ ಗ್ರಂಥಗಳು :

i. ಹೈದರಾಬಾದ್ ಪುರಾತತ್ವ ಮಾಲಿಕೆ ಸಂಪುಟ ೯ (೧೦ ಶಾಸನಗಳು)

ii. ಅದೇ ಸಂಪುಟ-೧೮ (೧೮ ಶಾಸನಗಳು)

iii. ಜೈನಿಜಂ ಇನ್ ಸೌಥ್ ಇಂಡಿಯಾ ಆ್ಯಂಡ್ ಸಮ್ ಜೈನ್ ಎಪಿಗ್ರಾಫ್ಸ್.

iv. ಶಾಸನ ಪರಿಚಯ (೫೩ ಶಾಸನಗಳು) (೩೦ ಜೈನ ಶಾಸನಗಳು)

ಇದಲ್ಲದೆ 'ಕರ್ನಾಟಕ ಹಿಸ್ಟಾರಿಕಲ್ ರಿವ್ಹೀವ್' ಸಂಪುಟ ೩ ನಂ. ೩ (೧೯೩೩ ಜನವರಿ) ರಲ್ಲಿ ಕೊಪ್ಪಳದ ೧೬ ಮತ್ತು ಹಲಗೇರಿಯ ೩ ಶಾಸನಗಳ ಪರಿಚಯ ನೀಡಿರುವುದರ ಜೊತೆಗೆ ೧೯೩೦ ರಿಂದ ೧೯೩೩ ರ ವರೆಗೆ ತಾವು ಈ ಭಾಗದಲ್ಲಿ ಸಂಚರಿಸಿ ಸಂಗ್ರಹಿಸಿರುವ ಶಾಸನಗಳ ವರದಿಯನ್ನೂ ನೀಡಿದ್ದಾರೆ. ಇದರಲ್ಲಿ ರಾಯಚೂರು ಜಿಲ್ಲೆಯ ೮೮ ಶಾಸನಗಳ ಸಂಕ್ಷಿಪ್ತ ಪರಿಚಯವಿದೆ.

v. **ಶಾಸನ ಪರಿಚಯ :** ಇದು ದೇಸಾಯಿಯವರ ವೈಯಕ್ತಿಕ ಸಂಗ್ರಹ. ಇದರಲ್ಲಿ ಕೊಪ್ಪಳ ಮತ್ತು ಯಲಬುರ್ಗಾ ತಾಲೂಕುಗಳ ೫೩ ಶಾಸನಗಳಿವೆ. ಇವರು ಸಂಗ್ರಹಿಸಿದ ಒಟ್ಟು ಶಾಸನಗಳು ಸುಮಾರು ೩೦೦. ಡಾ|| ಎಮ್. ಎಮ್. ಕಲಬುರ್ಗಿಯವರು ಸಿಂಧನೂರು ತಾಲೂಕಿನ ದೇವರ ಗುಡಿಯ ಹುಳಿಯಮೇಶ್ವರ ಚಿಕ್ಕಯ್ಯನ ಶಾಸನವನ್ನು[೧] ಮೊದಲ ಬಾರಿಗೆ ಪರಿಚಯಿಸಿ ಕೊಟ್ಟಿದ್ದಾರೆ.

೬. ಡಾ|| ಶ್ರೀನಿವಾಸ ರಿತ್ತಿಯವರ ಕಾಲ : ಶ್ರೀನಿವಾಸ ರಿತ್ತಿಯವರು ೧೯೫೭ ರಿಂದ ೧೯೬೪ ರ ವರೆಗಿನ ಅವಧಿಯಲ್ಲಿ ರಾಯಚೂರು ಜಿಲ್ಲೆಯ ಲಿಂಗಸಗೂರು, ಮಾನ್ವಿ ತಾಲೂಕುಗಳಲ್ಲಿ ಸಂಚರಿಸಿ, ಒಟ್ಟು ೩೩೦ ಶಾಸನಗಳನ್ನು ಸಂಗ್ರಹಿಸಿದ್ದಾರೆ. ಆದರೆ ಇವರು ಸಂಗ್ರಹಿಸಿದ ಶಾಸನಗಳ ಸಂಕ್ಷಿಪ್ತ ಪರಿಚಯ ಮಾತ್ರ ಶಾಸನ ಇಲಾಖೆಯ ಆಯಾ ವರ್ಷಗಳ ವರದಿಗಳಲ್ಲಿ ಪ್ರಕಟವಾಗಿವೆ. ಶಾಸನಗಳ ಪೂರ್ಣಪಾಠ ಮಾತ್ರ ಪ್ರಕಟಗೊಂಡಿಲ್ಲ. ಆದರೆ ಬನ್ನಿಗೋಳ ಮತ್ತು ಕೀಲಾರಟ್ಟಿಯ ಒಂದೊಂದು ಶಾಸನಗಳು ಮಾತ್ರ ಎಪಿಗ್ರಾಫಿಯ ಇಂಡಿಕಾದಲ್ಲಿ ಪ್ರಕಟಗೊಂಡಿವೆ.

ಡಾ|| ರಿತ್ತಿಯವರ ನಂತರದಲ್ಲಿ ಡಾ|| ಬಿ. ಆರ್. ಗೋಪಾಲರು ಕ್ವಚಿತ್ತಾಗಿ ಈ ಭಾಗದ ಶಾಸನ ಸಂಗ್ರಹದಲ್ಲಿ ತೊಡಗಿದರಾದರೂ ಅವರಿಂದ ಈ ಜಿಲ್ಲೆಯ ಶಾಸನ ಸಂಗ್ರಹ ಹೆಚ್ಚಾಗಿ ನಡೆಯಲಿಲ್ಲ. ಇವರ ನಂತರದಲ್ಲಿ ಈ ಭಾಗದ ಶಾಸನ ಸಂಗ್ರಹ ಕಾರ್ಯ ಮುಂದುವರಿಯದೆ, ಹೆಚ್ಚು ಕಡಿಮೆ ನಿಂತೇ ಹೋಯಿತು.

---

೧. ಡಾ. ಎಂ. ಎಂ. ಕಲಬುರ್ಗಿ, ಮಾರ್ಗ (ಸಂ. ೨) ಪು. ೧೫೦.

ಮೈಸೂರಿನ ಪ್ರಾಚ್ಯ ಸಂಶೋಧನಾ ಸಂಸ್ಥೆಯು ೭೦ ರ ದಶಕದಲ್ಲಿ ಪುನಃ ಈ ಭಾಗದ ಶಾಸನ ಸಂಗ್ರಹ ಕಾರ್ಯವನ್ನು ಕೈಗೆತ್ತಿಕೊಂಡಿತು. ಇದರ ಫಲವಾಗಿ ಸಿಂಧನೂರು ತಾಲೂಕಿನ ಮುಕ್ಕುಂದ, ರೌಡಕುಂದ, ಸಾಲಗುಂದ, ಒಳಬಳ್ಳಾರಿ, ದೇವರಗುಡಿ ಶಾಸನಗಳು ಮತ್ತು ಲಿಂಗಸಗೂರು ತಾಲೂಕಿನ ಕೆಲವು ಶಾಸನಗಳು ಸಂಗ್ರಹಿಸಲ್ಪಟ್ಟವೆ. ಆದರೆ ಇವೆಲ್ಲಾ ಇನ್ನೂ ಹಸ್ತಪ್ರತಿಯ ರೂಪದಲ್ಲಿವೆ.[೧] ಜಿಲ್ಲೆಯ ಇತರ ತಾಲೂಕಿನ ಶಾಸನಗಳ ಶೋಧವೂ ಈ ಇಲಾಖೆಯಿಂದ ನಡೆಯುತ್ತಿದೆ. ಆದರೆ ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ. ಇದು ತುಂಬಾ ಕಡಿಮೆಯೆಂದೇ ವಿಷಾದದಿಂದ ಹೇಳಬೇಕಾಗಿದೆ. ಇದಕ್ಕೆ ಹಲವು ಕಾರಣಗಳುಂಟು :

೧. ಶಾಸನಗಳ ಮಹತ್ವವನ್ನರಿಯದ ಇಲ್ಲಿಯ ಜನರು ಅವುಗಳ ಮಾಹಿತಿಯನ್ನು ಪ್ರಾಚ್ಯ ಸಂಶೋಧನ ಇಲಾಖೆಯವರಿಗೆ ನೀಡದಿರುವುದು.

೨. ಸಾರಿಗೆ ಸೌಕರ್ಯದ ಅನಾನುಕೂಲತೆಯನ್ನು ಮುಂದು ಮಾಡಿಕೊಂಡು ಕೇವಲ ಪ್ರಮುಖ ಸ್ಥಳಗಳಿಗೆ ಮಾತ್ರ ಭೆಟ್ಟಿಕೊಟ್ಟು, ಉಳಿದ ಗ್ರಾಮಗಳನ್ನು ಅಲಕ್ಷಿಸಿರುವ ಪರಿವೀಕ್ಷಣೆಗಾಗಿ ಬಂದ ಅಧಿಕಾರಿಗಳು ಮತ್ತು ಸಂಶೋಧಕರು.

೩. ಶಾಸನ ಸಂಗ್ರಹ ಮತ್ತು ಅಧ್ಯಯನಗಳಲ್ಲಿ ಈ ಭಾಗದ ಸಂಶೋಧಕರು ಹಾಗೂ ಅಧ್ಯಾಪಕರು ತೋರುತ್ತಿರುವ ಅನಾಸಕ್ತಿ.

ಈ ಎಲ್ಲ ಕಾರಣಗಳಿಂದಾಗಿ, ಈ ಭಾಗದ ಶಾಸನಗಳ ಒಟ್ಟು ಚಿತ್ರ ಸ್ಪಷ್ಟವಾಗಿ ಗೊತ್ತಾಗುವುದಿಲ್ಲ ಇದರಿಂದಾಗಿ ಇಲ್ಲಿ ಆಳಿರಬಹುದಾದ ಚಕ್ರವರ್ತಿಗಳ, ಸಾಮಂತರ ಚರಿತ್ರೆ ಮತ್ತು ಅವರ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿವರಗಳನ್ನು ತಿಳಿದುಕೊಳ್ಳುವುದು ಕಷ್ಟಸಾಧ್ಯವೆನಿಸಿದೆ.

ಒಟ್ಟಿನಲ್ಲಿ ರಾಯಚೂರು ಜಿಲ್ಲೆಯು ಶಾಸನ ಸಂಗ್ರಹದಲ್ಲಿ ತುಂಬಾ ಹಿಂದುಳಿದಿದೆ. ಸಂಗ್ರಹಿಸಿದ ಶಾಸನಗಳ ಪ್ರಕಟಣೆಗಳೂ ಸರಿಯಾಗಿ ನಡೆಯುತ್ತಿಲ್ಲ. ಇನ್ನು ಅವುಗಳನ್ನು ಪರಿಷ್ಕರಿಸುವ ಮತ್ತು ಕ್ರಮಬದ್ಧವಾಗಿ ಜೋಡಿಸುವ ಇಲ್ಲವೆ ವಿಮರ್ಶಿಸುವ ಕೆಲಸವಂತೂ ದೂರವೇ ಉಳಿಯಿತು. ಈವರೆಗೆ ಜಿಲ್ಲೆಯ ಕೊಪ್ಪಳ, ಯಲಬುರ್ಗಿ, ಲಿಂಗಸಗೂರು ಮತ್ತು ಸಿಂಧನೂರು ತಾಲೂಕುಗಳ ಹೆಚ್ಚಿನ ಶಾಸನ ಸಂಗ್ರಹವಾಗಿವೆ. ಸಂಗ್ರಹವಾದವುಗಳಲ್ಲಿಯೇ ಪ್ರಕಟಗೊಳ್ಳದಿರುವ ಶಾಸನಗಳ ಸಂಖ್ಯೆಯೇ ಹೆಚ್ಚಾಗಿದೆ. ಮಾನ್ವಿ ತಾಲೂಕು ಕೂಡ ಇದರಿಂದ ಹೊರತಾಗಿಲ್ಲ. ರಾಯಚೂರು, ದೇವದುರ್ಗ, ಕುಷ್ಟಗಿ ಮತ್ತು ಗಂಗಾವತಿ ತಾಲೂಕುಗಳ ಕೆಲವು ಶಾಸನಗಳು ಮಾತ್ರ ಪ್ರಕಟವಾಗಿದ್ದು, ಇಲ್ಲಿ ಅನ್ವೇಷಣೆಯ ಕಾರ್ಯ ಚುರುಕುಗೊಳ್ಳಬೇಕಾಗಿದೆ. ಇದ

---

೧. ಈ ಹಸ್ತಪ್ರತಿಗಳನ್ನು ಬರೆದು ತರಲು ಅನುಮತಿಯನ್ನು ನೀಡಿದ ಪ್ರಾಚ್ಯ ಸಂಶೋಧನ ಸಂಸ್ಥೆಯ ನಿರ್ದೇಶಕರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ರೊಂದಿಗೆ ಈ ಭಾಗದಲ್ಲಿಯ ಪ್ರಾಚೀನ ದೇವಾಲಯ, ವೀರಗಲ್ಲು, ಮಾಸ್ತಿಕಲ್ಲು, ನಿಶಿಧಿ ಗಲ್ಲುಗಳನ್ನು ಗುರುತಿಸುವ; ಕೋಟೆ-ಕೊತ್ತಲಗಳ ರಚನೆ ಮತ್ತು ವಿನ್ಯಾಸಗಳನ್ನು ವಿವರಿಸುವ, ಅವುಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳುವ, ಕಾಲವನ್ನು ನಿರ್ಧರಿಸುವ ಕೆಲಸ ನಡೆಯಬೇಕಾಗಿದೆ. ಇವುಗಳ ಅಲ್ಪ ಸ್ವಲ್ಪ ಕೆಲಸ ಈಗಾಗಲೇ ಕೃಷ್ಣಮಾಚಾರ್ಯ, ಪಿ. ಬಿ. ದೇಸಾಯಿ, ಅ.ಸುಂದರ ಮುಂತಾದವರಿಂದಲೂ ಪ್ರಾಚ್ಯ ಸಂಶೋಧನಾ ಸಂಸ್ಥೆಯಿಂದಲೂ ರಾಯಚೂರಿನ ಕರ್ನಾಟಕ ಸಂಘದವರಿಂದಲೂ ನಡೆದಿದೆ; ಹೀಗಿದ್ದರೂ ಇಲ್ಲಿ ನಡೆಯಬೇಕಾದ ಕೆಲಸ ಅಪಾರವಾಗಿದೆ. ಈ ವರೆಗೆ ಇಲ್ಲಿ ಸಂಗ್ರಹಿಸಿರುವ ಶಾಸನಗಳ ಸಂಖ್ಯೆ ಸುಮಾರು ೬೦೦. ಹುಡುಕಿದರೆ ಇಲ್ಲಿ ಇನ್ನೂ ೪೦೦ ಶಾಸನಗಳು ಸಿಕ್ಕಬಹುದು. ಈ ಶಾಸನಗಳ ಅಧ್ಯಯನದಿಂದ ತಿಳಿದುಬರುವ ರಾಜಕೀಯ, ಸಾಹಿತ್ಯಿಕ ಹಾಗೂ ಧಾರ್ಮಿಕ ಸಂಗತಿಗಳನ್ನು ಹೀಗೆ ವಿವರಿಸಬಹುದು:

ರಾಜಕೀಯ :

ರಾಯಚೂರು ಜಿಲ್ಲೆ ಮೌರ್ಯ ಚಕ್ರವರ್ತಿಯ ಆಡಳಿತಕ್ಕೊಳಪಟ್ಟಿರುವದು ಇಲ್ಲಿ ದೊರೆತ ಅಶೋಕನ ಶಾಸನಗಳಿಂದ ಗೊತ್ತಾಗುತ್ತದೆ. ಆದರೆ ಮೌರ್ಯರ ನಂತರದ ಈ ಭಾಗದ ಇತಿಹಾಸ ಅಸ್ಪಷ್ಟವಾಗಿದೆ. ಶಾತವಾಹನ, ಪಲ್ಲವ ಮತ್ತು ಕದಂಬರ ಕಾಲದ ಶಾಸನಗಳು ಇಲ್ಲಿ ಒಂದೂ ಸಿಕ್ಕಿಲ್ಲ. ಹಾಗೆಂದ ಮಾತ್ರಕ್ಕೆ ಇದು ಆ ಸಮಯದಲ್ಲಿ ಬೇರೊಬ್ಬರ ಆಡಳಿತಕ್ಕೆ ಒಳಪಟ್ಟಿರಬೇಕೆಂದಾಗಲೀ, ಸ್ವತಂತ್ರ ನಾಡಾಗಿದ್ದಿತೆಂದಾಗಲೀ ಊಹಿಸುವಂತಿಲ್ಲ. ಕಾಲಗರ್ಭದಲ್ಲಿ ಅಡಗಿರುವ ಶಾಸನಗಳು ಹೊರಬರುವವರೆಗೆ ಏನನ್ನೂ ಹೇಳಲಾಗದು. ಆದರೆ ಬಾದಾಮಿಯ ಚಾಲುಕ್ಯರ ಕಾಲದಿಂದೀಚೆಗೆ ಈ ನಾಡಿನ ಇತಿಹಾಸ ಸ್ಪಷ್ಟವಾಗಿದೆ. ಬಾದಾಮಿಯ ಚಾಲುಕ್ಯ ಮತ್ತು ರಾಷ್ಟ್ರಕೂಟರ ಹಲವಾರು ಶಾಸನಗಳು ದೊರೆತಿವೆ. ಕಲ್ಯಾಣ ಚಾಲುಕ್ಯ, ಕಲಚೂರಿ, ಸಿಂದ, ಕಾಕತೀಯ, ಸೇವುಣ, ಹೈಹೆಯ, ವಿಜಯನಗರ ಮತ್ತು ಬಹುಮನಿ ಸುಲ್ತಾನರ ನೂರಾರು ಶಾಸನಗಳು ಇಲ್ಲಿಯ ಹಳ್ಳಿ-ಹಳ್ಳಿಗಳಲ್ಲಿ ತುಂಬಿವೆ. ಅವು ಈ ಭಾಗದ ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಅವುಗಳ ವಿವರಗಳಿಗೆ ಹೋಗುವ ಮುನ್ನ,ಈ ಜಿಲ್ಲೆಯ ಪ್ರಾಚೀನ ಭೌಗೋಳಿಕ ವ್ಯಾಪ್ತಿಯನ್ನು ನೋಡೋಣ.

ಎಡೆದೊರೆ ನಾಡು : ಚಕ್ರವರ್ತಿಗಳು ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಹಲವಾರು ನಾಡುಗಳಾಗಿ ವಿಂಗಡಿಸಿದರು. ಅವುಗಳಲ್ಲಿ 'ಎಡೆದೊರೆ' ನಾಡೂ ಒಂದು. ಇದು ೨೦೦೦ ಹಳ್ಳಿಗಳನ್ನೊಳಗೊಂಡ ಒಂದು ಆಡಳಿತದ ವಿಭಾಗ. ಇಂದಿನ ರಾಯಚೂರು ಜಿಲ್ಲೆಯ ಹೆಚ್ಚಿನ ಪ್ರದೇಶವು ಪ್ರಾಚೀನ 'ಎಡೆದೊರೆ-೨೦೦೦' ನಾಡಿನಲ್ಲಿದ್ದಿತು.

ಎಡೆದೊರೆ ಪದದ ಅರ್ಥ : ಎಡೆದೊರೆ ಎಂಬುದು 'ಬೆಳ್ವೊಲ' ಎಂಬ ಪದದಂತೆ ಪ್ರಾಕೃತಿಕ ವಿಭಾಗವನ್ನು ಸೂಚಿಸುತ್ತದೆ. ಆದ್ದರಿಂದ ಇದನ್ನು ಪ್ರಕೃತಿಯ ಹಿನ್ನೆಲೆಯಲ್ಲಿ ಅರ್ಥೈಸಬೇಕಾಗಿದೆ. ಎಡೆದೊರೆ ಎಂಬಲ್ಲಿ ಸ್ವತಂತ್ರ ಪದಗಳಿವೆ. ಅವುಗಳನ್ನು ಎಡೆ+ತೊರೆ ಎಂದು ಬಿಡಿಸಬಹುದು. ಇವೆರಡೂ ದೇಶೀಯ ಪದಗಳು. 'ತೊರೆ' ಎಂದರೆ ನದಿ ರೇವು (=ದಂಡೆ) ಎಂದರ್ಥ. ಎಡೆ ಎಂಬುದಕ್ಕೆ ಸ್ಥಾನ,ಬಳಿ, ಹತ್ತಿರ, ಪ್ರದೇಶ, ನಡುವೆ, ಮಧ್ಯೆ ಮುಂತಾದ ಅರ್ಥಗಳನ್ನು ಕಿಟೆಲ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟುಗಳಲ್ಲಿ[೧] ಹೇಳಲಾಗಿದೆ. ಆದ್ದರಿಂದ ಎಡೆದೊರೆ ಎಂಬ ಪದವು ನದಿಯ ನಡುವಿನ ಅಥವಾ ಮಧ್ಯದ ಪ್ರದೇಶ ಎಂಬ ಅರ್ಥವನ್ನು ಕೊಡುತ್ತದೆ. ನಿಜಾಮರ ಆಳ್ವಿಕೆಯಿಂದೀಚೆಗೆ ಅದನ್ನು 'ದೋ ಆಬ್' ಎಂದು ಕರೆಯಲಾಗಿದೆ.

ಎಡೆದೊರೆ ನಾಡಿನ ವ್ಯಾಪ್ತಿ : ಇಂದಿನ ರಾಯಚೂರು ಜಿಲ್ಲೆಯ ಬಹಳಷ್ಟು ಪ್ರದೇಶವು ಪ್ರಾಚೀನ ಎಡೆದೊರೆ ನಾಡಿನಲ್ಲಿದ್ದಿತೆಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ತುಂಗಭದ್ರೆಯ ದಂಡೆಯ ಮೇಲಿರುವ ಸಿರುಗುಪ್ಪ[೨] ಹಾಗೂ ಮಂತ್ರಾಲಯ[೩]ಗಳು ಕ್ರಮವಾಗಿ ಬಲ್ಲಕುಂದೆ-೩೦೦ ಮತ್ತು ಸಿಂದವಾಡಿ-೧೦೦೦ದಲ್ಲಿದ್ದವೆಂದು ಅಲ್ಲಿಯ ಶಾಸನಗಳು ಹೇಳುತ್ತವೆ. ಸಾಲಗುಂದೆಯ ಶಾಸನವು[೪] ಅದು ಎಡೆದೊರೆ ನಾಡಿನಲ್ಲಿದ್ದಿತೆಂದು ಹೇಳುತ್ತದೆ. ಆದ್ದರಿಂದ ತುಂಗಭದ್ರಾ ನದಿಯು ಎಡದೊರೆ ನಾಡಿನ ದಕ್ಷಿಣದ ಗಡಿಯಾಗಿತ್ತೆಂದು ಹೇಳಬಹುದು. ಇದೇ ರೀತಿಯಾಗಿ ಕೃಷ್ಣಾ ನದಿಯು ಉತ್ತರದ ಗಡಿಯಾಗಿದೆ. ಇಂದಿನ ವಿಜಾಪುರ ಜಿಲ್ಲೆಯ ನಂದವಾಡಗಿಯು ಎಡದೊರೆ ನಾಡಿನ ಕರಡಕಲ್ಲು-೪೦೦ರಲ್ಲಿದ್ದಿತೆಂದು ಶಾಸನವೊಂದು ಹೇಳಿದೆ.[೫] ನಂದವಾಡಗಿಯ ಸುತ್ತಮುತ್ತಲಿನ ಕೆಲವು ಹಳ್ಳಿಗಳು ಎಡೆದೊರೆ ನಾಡಿನಲ್ಲಿದ್ದವು. ಕೊಪ್ಪಳ ತಾಲೂಕಿನ ಮಾದೆನೂರ ಶಾಸನವು[೬] ಅದನ್ನು ಎಡೆದೊರೆ ನಾಡಿನಲ್ಲಿಯ ಕೇದವಾಡಿ-೩೦೦ ರಲ್ಲಿಯ ಗ್ರಾಮವೆನ್ನುತ್ತದೆ. ಆದ್ದರಿಂದ ಕೊಪ್ಪಳ ತಾಲೂಕಿನ ಕೆಲವು ಹಳ್ಳಿಗಳು ಎಡೆದೊರೆ ನಾಡಿನಲ್ಲಿದ್ದವು. ಆದರೆ ಇಂದಿನ ಯಲಬುರ್ಗಿ ತಾಲೂಕು ಸಂಪೂರ್ಣವಾಗಿ ಬೆಳ್ವೊಲ ನಾಡಿನಲ್ಲಿದ್ದಿತು.

---

೧. ಕಿಟೆಲ್ ನಿಘಂಟು, ಸಂ. ೧-೨ ಎಂ. ಮರಿಯಪ್ಪ ಭಟ್ಟ ಪು.೨೭೬,೧೯೬೯ ಕಸಾಪ ನಿಘಂಟು ಪು. ೧೩೨, ೪೨೮, ೧೯೭೫.

೨. ಸೌ.ಇ.ಇ. ix (i) ೧೫೯ ಸಿರುಗುಪ್ಪ, ಸಿರುಗುಪ್ಪ (ತಾ.) ಬಳ್ಳಾರಿ (ಜಿ.) ಕ್ರಿ.ಶ.

೩. KI. Vol. V, Ed.B.R. Gopal, No.3, ಮಂತ್ರಾಲಯ, ಕರ್ನೂಲ (ಜಿ.) ಕ್ರಿ.ಶ. ೮೯೩-೯೪.

೪. B.No. ೧೦೭/೮೫-೮೬ ಸಾಲಗುಂದೆ, ಸಿಂಧನೂರ (ತಾ.) ಕ್ರಿ.ಶ. ೧೧೫೩ ಅಪ್ರಕಟಿತ.

೫. ಸೌ.ಇ.ಇ. VI ೫೫೮, ಹೇಮಾವತಿ,ಮಡಕಶಿರಾ (ತಾ.)

೬. ಶಾಸನ ಪರಿಚಯ, ಸಂ. ಪಿ.ಬಿ. ದೇಸಾಯಿ, ೬ ಕ್ರಿ.ಶ. ೧೧೩೬.

ಹೀಗೆ ರಾಯಚೂರು ಜಿಲ್ಲೆಯು ಉತ್ತರಕ್ಕೆ ಕೃಷ್ಣಾ, ದಕ್ಷಿಣಕ್ಕೆ ತುಂಗಭದ್ರಾ ನದಿಗಳ ಮಧ್ಯದಲ್ಲಿದ್ದುದರಿಂದ ಶಾಸನಗಳು ಅದನ್ನು ಎಡೆದೊರೆ ನಾಡೆಂದು ಸೊಗಸಾಗಿ ಕರೆದಿವೆ.

ಎಡೆದೊರೆ ನಾಡಿನ ರಾಜಕೀಯ ಉಪವಿಭಾಗಗಳು : ಎಡೆದೊರೆ-೨೦೦೦, ಹಲವಾರು ಉಪವಿಭಾಗಗಳನ್ನು ಹೊಂದಿರುವುದನ್ನು ಇಲ್ಲಿಯ ಶಾಸನಗಳು ಹೇಳುತ್ತವೆ.

ಕರಡಕಲ್-೪೦೦ : ಇಂದಿನ ಲಿಂಗಸಗೂರು ತಾಲೂಕಿನ ಚಿಕ್ಕಹಳ್ಳಿಯಾದ ಕರಡಕಲ್ಲು, ಪ್ರಾಚೀನ ಎಡದೊರೆ ನಾಡಿನ ಉಪ-ವಿಭಾಗವಾಗಿದ್ದಿತು. ಶಾಸನಗಳು ಅದನ್ನು "ಕರಡಿಕಲ್ನಾಡಂ",[೧] "ಕರಡಿಕಲ್ನಾನೂಱಱ ಬಳಿಯ ಭತ್ತಗ್ರಾಮಂ[೨] ಮುಂತಾಗಿ ಕರೆದಿವೆ. ಅಲ್ಲದೆ ಮುದಗಲ್ ಶಾಸನ[೩]ದಲ್ಲಿಯೂ ಇದರ ಉಲ್ಲೇಖವಿದೆ. ಇಂದಿನ ಕರಡಕಲ್ಲು ಗ್ರಾಮವು ಈ ವಿಭಾಗದ ಮುಖ್ಯಪಟ್ಟಣವಾಗಿದ್ದಿತು. ಇಂದಿನ ವಿಜಾಪುರ ಜಿಲ್ಲೆಯ ನಂದವಾಡಿಗೆಯೂ ಕರಡಕಲ್ಲು-೪೦೦ರಲ್ಲಿದ್ದಿತೆಂದು ಶಾಸನವೊಂದು ಹೇಳುತ್ತದೆ.

ಮೊರಟ-೩೦೦ : ಇಂದಿನ ಮಾನ್ವಿ ತಾಲೂಕಿನ ಚಿಕ್ಕಗ್ರಾಮವಾದ ಮಲ್ಲಟವು ಎಡೆದೊರೆ ನಾಡಿನ ಉಪವಿಭಾಗವಾಗಿದ್ದಿತು. ಶಾಸನಗಳಲ್ಲಿ ಅದನ್ನು ಮೊರಟ-೩೦೦ ಎಂದು ಕರೆಯಲಾಗಿದೆ. ಇಂದಿನ ಮಲ್ಲಟ, ಈ ವಿಭಾಗದ ಮುಖ್ಯ ಪಟ್ಟಣವಾಗಿದ್ದಿತು.

ಮೊಸಳಿಕಲ್-೩೦೦ : ಇಂದಿನ ದೇವದುರ್ಗ ತಾಲೂಕಿನ ಸಣ್ಣ ಗ್ರಾಮವಾದ ಮಸರಿಕಲ್ಲು, ಪ್ರಾಚೀನ ಎಡೆದೊರೆ ನಾಡಿನ ಉಪವಿಭಾಗವಾಗಿದ್ದಿತು. ಇಂದಿನ ಮೊಸರಕಲ್ ಗ್ರಾಮವು ಈ ವಿಭಾಗದ ಮುಖ್ಯಪಟ್ಟಣವಾಗಿದ್ದಿತು.

ಕೇದವಾಡಿ-೩೦೦ : ಕೇದವಾಡಿಯು ಪ್ರಾಚೀನ ಎಡೆದೊರೆ ನಾಡಿನ ಉಪವಿಭಾಗವಾಗಿದ್ದಿತು. ಮೂದೆನೂರಿನ ಶಾಸನವು[೪] ಅದನ್ನು "ಎಡೆದೊರೆ ಯಿಚ್ಛಾರ್ಛಸಿರದ ಬಳಿಯ ಕೇದವಾಡಿ ಮೂನೂರಕ್ಕಂ" ಎಂದು ಸ್ಪಷ್ಟವಾಗಿ ಹೇಳಿದೆ. ಆದರೆ ಈ ಕೇದವಾಡಿ ಯಾವುದೆಂಬುದು ತಿಳಿದುಬಂದಿಲ್ಲ.

ನಿಟ್ಟೆರವೆ-೭೦ : ಸಾಲಗುಂದ ಮತ್ತು ಕೌಡಕುಂದೆಯ ಶಾಸನಗಳು[೫] ನಿಟ್ಟೆರವೆ-೭೦ ಎಡದೊರೆ, ನಾಡಿನ ಉಪವಿಭಾಗವಾಗಿದ್ದಿತೆಂದು ಹೇಳುತ್ತವೆ. ಇದನ್ನು

---

೧. H.S.A. ೧೮ No. ೧೬.

೨. ಅದೇ No. ೯

೩. ಅದೇ No. ೧೭.

೪. ಅದೇ No. ೧೧.

೫. ಪೂರ್ವೋಕ್ತ, ಅಪ್ರಕಟಿತ ಶಾಸನ ಮತ್ತು B.No. ೧೦೪.

ಮಹಾಮಂಡಳೇಶ್ವರ ಅಮ್ಮಾಣದೇವನು ಆಳುತ್ತಿದ್ದನು. ಇಲ್ಲಿಯ ನಿಟ್ಟರವೆ ಯಾವುದೆಂಬುದು ತಿಳಿದುಬಂದಿಲ್ಲ. ಶಾಸನಗಳು ಅದನ್ನು ನಿಟ್ಟರವೆಯೆಪ್ಪತ್ತುಮಂ", "ಎಡದೊರೆ ನಾಱ್ಕ್ಕಿ ತೊಡವಿದೆನಂತೊರ್ಪ ತೋರ್ಪ ನಿಟ್ಟರವೆಯೆಪ್ಪತ್ತಱಿ" ಎಂದು ಕರೆದಿವೆ. ಈ ವಿಭಾಗವು ಮೊದಲಬಾರಿಗೆ ಇಲ್ಲಿ ಉಲ್ಲೇಖಗೊಳ್ಳುತ್ತಿದೆ.

ಸಾಲಗುಂದೆ-೭೦ : ಇಂದಿನ ಸಿಂಧನೂರು ತಾಲೂಕಿನ ಚಿಕ್ಕಗ್ರಾಮವಾದ ಸಾಲಗುಂದೆಯುೞ ಮೊದಲುಃ ನಿಟ್ಟರವೆ-೭೦ ರ ಅಗ್ರಹಾರವಾಗಿತ್ತು. "ನಿಟ್ಟರವೆ ಯೆರ್ಪತ್ತಱಗ್ರಹಾರಮಃದು ಶಾಶ್ವತ ನಿಳಯಂ ಸಾಲಗುಂದೆ" ಎಂದು ಶಾಸನ[1] ಹೇಳುತ್ತದೆ. ಮುಂದೆ ಇದು ಸ್ವತಂತ್ರ ಆಡಳಿತ ವಿಭಾಗವಾಗಿ ಸಾಲಗುಂದೆ-೭೦ ಆಯಿತು. ಶಾಸನವು "ಎಡೆದೊಱೆಯೆಚ್ಛಾವಿರ ನಾಡೊಳಗೆ ಸೋ(ಶೋ)ಭೆವೆತ್ತಿರ್ಪ ಭೂದೇವ ಕುಳೋತ್ತಮರಿಂದಂ ಕೇವೆಳವೆ ಸಾಲಗುಂದೆ ಯೆಪ್ಪತ್ತಱಿಕೊಳು[2]" ಎಂದು ಕರೆದಿದೆ.

ಒಟ್ಟನಲ್ಲಿ ಇದುವರೆಗೆ ಎಡೆದೊರೆ-೨೦೦೦ ನಾಡಿನಲ್ಲಿಯ ಕರಡಕಲ್ಲ-೪೦೦, ಮೊರಟ-೩೦೦, ಮೊಸಳಿಕಲ್-೩೦೦, ಕೇದವಾಡಿ-೩೦೦, ನಿಟ್ಟರವೆ-೭೦ ಮತ್ತು ಸಾಲಗುಂದೆ-೭೦ (೪೦೦+೩೦೦+೩೦೦+೩೦೦+೭೦+೭೦=೧೪೪೦)-ಹೀಗೆ ಒಟ್ಟು ೧೪೪೦ ಹಳ್ಳಿಗಳ ಲೆಕ್ಕ ಸಿಗುತ್ತದೆ. ಇನ್ನುಳಿದ ೫೬೦ ಗ್ರಾಮಗಳನ್ನು ಹುಡುಕ ಬೇಕಾಗಿದೆ.

ಎಡೆದೊರೆ ನಾಡಿನ ಅರಸರು : ಚಕ್ರವರ್ತಿಗಳ ಆಳ್ವಿಕೆಯ ವ್ಯಾಪ್ತಿಯು ದೊಡ್ಡದಾಗಿರುವುದರಿಂದಲೂ ಅವರ ವಿಷಯವು ಕರ್ನಾಟಕದ ಬೇರೆ ಕಡೆಯ ಅನೇಕ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟು, ಅವರ ಚರಿತ್ರೆಗಳು ಪೂರ್ಣವಾಗಿ ವಿದ್ವಾಂಸರಿಂದ ಬೆಳಕಿಗೆ ಬಂದಿರುವದರಿಂದಲೂ ಅವರನ್ನು ಕುರಿತು ಹೇಳದೆ, ಎಡದೊರೆ ನಾಡಿನ ಉಪ ವಿಭಾಗಗಳ ಅರಸರನ್ನು ಮತ್ತು ಇಂದಿನ ಯಲಬುರ್ಗಿ ತಾಲೂಕಿನಲ್ಲಿ ಆಳಿದ ಸಿಂಧರನ್ನು ಕುರಿತಾಗಿ ಮಾತ್ರ ಇಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ಯಲಬುರ್ಗಿಯ ಸಿಂದರು : ಇಂದಿನ ತಾಲೂಕು ಸ್ಥಳವಾದ ಯಲಬುರ್ಗಾವು ಪ್ರಾಚೀನ ಬೆಳ್ವೊಲ-೩೦೦ ರಲ್ಲಿದ್ದಿತು. ಅಲ್ಲದೆ ಅದು ಸಿಂದರ ರಾಜಧಾನಿಯೂ ಆಗಿದ್ದಿತು. ಅವರ ಅತ್ಯಂತ ಪ್ರಾಚೀನ ಉಲ್ಲೇಖ, ಈ ತಾಲೂಕಿನ ಕುಕನೂರಿನಲ್ಲಿ ದೊರೆತಿದೆ. ಕ್ರಿ.ಶ. ೫ ನೆಯ ಶತಮಾನದ ಈ ಶಾಸನವು[3] ಸಿಂದರ ಇತಿಹಾಸ ವನ್ನು ಬಹಳಷ್ಟು ಹಿಂದಕ್ಕೆ ಕೊಂಡೊಯ್ಯುತ್ತದೆ. ಇವರು ತಮ್ಮನ್ನು 'ಭೋಗಾವತಿ

---

೧. B.No. ೧೦೫.

೨. ಅದೇ

೩. AR.EP. ೧೯೫೫-೫೬ B.No. ೨೧೨ ಕುಕನೂರು, ಯಲಬುರ್ಗಿ (ತಾ.)

ಪುರವರಾಧೀಶ್ವರ'ರೆಂದೂ, 'ಫಣಿಪತಾಕೇಶ್ವರ'ರೆಂದೂ, 'ವ್ಯಾಘ್ರ ಮೃಗ ಲಾಂಛನ'ರೆಂದೂ ಕರೆದುಕೊಂಡಿದ್ದಾರೆ. ಇವರ ಮೂಲಸ್ಥಳವಾದ 'ಭೋಗಾವತಿ ಯಾವುದೆಂಬುದು ಇದುವರೆಗೆ ವಿದ್ವಾಂಸರಿಂದ ಗುರುತಿಸಲ್ಪಟ್ಟಿಲ್ಲ. ಈ ಜಿಲ್ಲೆಯಲ್ಲಿ ಒಟ್ಟು ೩ 'ಭೋಗಾವತಿ'ಗಳಿವೆ: ೧. ಮಾನ್ವಿ ತಾಲೂಕಿನಲ್ಲಿರುವ 'ಭೋಗಾವತಿ'. ೨. ಸಿಂಧನೂರು ತಾಲೂಕಿನಲ್ಲಿರುವ 'ಭೋಗಾಪುರ' ೩. ಲಿಂಗಸಗೂರು ತಾಲೂಕಿನಲ್ಲಿಯ 'ಭೋಗಾಪುರ'. ಈ ಮೂರರಲ್ಲಿ ಯಾವುದೋ ಒಂದು ಇವರ ಮೂಲಸ್ಥಳವಾಗಿರಬೇಕು. ಆದರೆ ಇಲ್ಲಿಯ ಶಾಸನಗಳಾವುವೂ ಈ ಬಗ್ಗೆ ಸುಳಿವನ್ನು ನೀಡುತ್ತಿಲ್ಲ.

ಯಲಬುರ್ಗಿಯ ಸಿಂದರು ಬಾಗಡಗೆಯ ಸಿಂದಮನೆತನದಿಂದ ಕವಲೊಡೆದವರಾಗಿದ್ದಾರೆ. ಆ ಮನೆತನದ ಕೊನೆಯ ದೊರೆ ನಾಗಾದಿತ್ಯನೇ, ಯಲಬುರ್ಗಿ ಸಿಂದ ಮನೆತನದ ಮೂಲಪುರುಷನಾಗಿದ್ದಾನೆ. ಕ್ರಿ.ಶ. ೧೦೪೩ ರ ಅರಕೇರಿಯ ಶಾಸನದಲ್ಲಿ[೧] "ನಾಗಾತಿ(ಪ್ಪ)ರಸನಾ" ಎಂಬ ಉಲ್ಲೇಖವಿದೆ. ಬಹುಶಃ ಈತನು ಸಿಂದ ನಾಗಾದಿತ್ಯನೇ ಆಗಿರಬೇಕು. ಮೊದಮೊದಲು ಪಟ್ಟದಕಲ್ಲು ರಾಜಧಾನಿಯಿಂದ ಕಿಸುಕಾಡು-೭೦, ಕೆಳವಾಡಿ-೩೦೦ ಆಳುತ್ತಿದ್ದ ಇವರು ಮುಂದೆ ಕಿರಿಬೀಡಿ-೩೦, ಕುಂಟಗೆ-೭೦ ಮತ್ತು ಕುಕನೂರು-೩೦ ಗಳನ್ನು ಆಳತೊಡಗಿದರು.[೨] ಈ ಅವಧಿಯಲ್ಲಿ ಯಲಬುರ್ಗವು ಇವರ ರಾಜಧಾನಿಯಾಯಿತು. ಅದು ಈ ಮನೆತನವು ಕೊನೆಗೊಳ್ಳುವವರೆಗೂ ರಾಜಧಾನಿಯಾಗಿದ್ದಿತು. ಆದ್ದರಿಂದ ಇವರನ್ನು ಯಲಬುರ್ಗಿಯ ಸಿಂದರೆಂದೇ ಕರೆಯಲಾಗಿದೆ. ಆರಂಭದಲ್ಲಿ ಮಹಾಸಾಮಂತರಾಗಿದ್ದ ಇವರು ಮುಂದೆ ಮಹಾಮಂಡಳೇಶ್ವರರಾದರು. ಚಕ್ರವರ್ತಿಗಳ ಪ್ರೀತಿಗೆ ಪಾತ್ರರಾದರಲ್ಲದೆ ಕಲಚೂರಿ ಬಿಜ್ಜಳನ ಮಗಳಾದ ಸಿರಿಯಾದೇವಿಯನ್ನು (೩ ನೆಯ ಚಾವುಂಡರಾಯ) ಮದುವೆಯಾಗುವಷ್ಟರ ಮಟ್ಟಿಗೆ ಪ್ರಬಲರಾದರು.[೩] ಸುಮಾರು ೧೫೦ ವರ್ಷಗಳ ದೀರ್ಘ (ಕ್ರಿ.ಶ. ೧೦೭೬-೧೨೨೦) ಅವಧಿಯವರೆಗೆ ಆಳ್ವಿಕೆ ನಡೆಸಿದ ಈ ಮನೆತನ ಸೇವುಣರ ಕಾಲಕ್ಕೆ ಅಸ್ತಂಗತವಾಯಿತು. ಇವರ ಕೈಕೆಳಗೆ ಹಲವಾರು ಮಾಂಡಲಿಕರು ಇದ್ದುದನ್ನು ಇಲ್ಲಿಯ ಶಾಸನಗಳು ತಿಳಿಸುತ್ತವೆ.

ಸಾಲಗುಂದಿಯ ಸಿಂದರು : ಇಂದಿನ ಸಿಂಧನೂರು ತಾಲೂಕಿನ ಸಾಲಗುಂದಿಯನ್ನು ಸಿಂದ ಅರಸರು ಆಳುತ್ತಿದ್ದರು. ಸಾಲಗುಂದಿ, ರೌಡಕುಂದಿ ಮತ್ತು ಮುಕ್ಕುಂದಿಯ ಅಪ್ರಕಟಿತ ಶಾಸನಗಳು[೪] ಈ ವಿಷಯವನ್ನು ಹೇಳುತ್ತವೆ.

---

೧. ಶಾಸನ ಪರಿಚಯ ೪೧ ಕ್ರಿ.ಶ. ೧೦೪೩.

೨. ಶಿರೂರ ಬಿ.ವಿ. ಯಲಬುರ್ಗಿಯ ಸಿಂದರು, ಧಾರವಾಡ, ೧೯೭೭, ಪು.೩-೪.

೩. ಶಾಸನ ಪರಿಚಯ ೩೬, ಕಲ್ಲೂರು ಕ್ರಿ.ಶ. ೧೧೮೫.

೪. ಪೂರ್ವೋಕ್ತ, ಅಪ್ರಕಟಿತ ಶಾಸನಗಳು.

ಕ್ರಿ.ಶ.೧೦೫೩ ರಲ್ಲಿ ಕಣ್ಣರಸನಿಂದ ಈ ಮನೆತನದ ಇತಿಹಾಸದ ಪ್ರಾರಂಭವಾಗುತ್ತದೆ. ಈತನು ಮಹಾಮಂಡಳೇಶ್ವರ ಅಮ್ಮಣ್ಣನ ಸಾಮಂತನಾಗಿದ್ದನು. ಶಾಸನವು ಈತನು ಯಾವ ಪ್ರದೇಶವನ್ನು ಆಳುತ್ತಿದ್ದನೆಂಬುದನ್ನು ಹೇಳುವುದಿಲ್ಲ. ಬಹುಶಃ ರೌಡಕುಂದೆಯನ್ನು ಆಳುತ್ತಿರಬೇಕು. ಮುಂದೆ ಇವರು ಸಾಲಗುಂದೆ ಉಪವಿಭಾಗವನ್ನು ಸ್ವತಂತ್ರವಾಗಿ ಆಳತೊಡಗಿದ್ದರು. ಕ್ರಿ.ಶ. ೧೧೫೩ ರಲ್ಲಿ ಕಾಣುವಬಾಚಿಗ ಭೂಪನೇ ಸಧ್ಯಕ್ಕೆ ಉಲ್ಲೇಖಗೊಂಡಿರುವ ಈ ಮನೆತನದ ಕೊನೆಯ ಅರಸನಾಗಿದ್ದಾನೆ. ಈ ಮನೆತನ ಇಲ್ಲಿ ಮೊದಲಬಾರಿಗೆ ಉಲ್ಲೇಖಗೊಳ್ಳುತ್ತಿದೆ.

ಕದಂಬರು : ಕದಂಬ ವಂಶದ ಮನ್ನೆಯ ನಾಗವರ್ಮನು ಕ್ರಿ.ಶ. ೧೦೭೭ ರಲ್ಲಿ ಕರಡಕಲ್-೪೦೦ ನ್ನು ಆಳುತ್ತಿದ್ದನು.[೧] ಇವನು 'ಬನವಾಸಿ ಪುರಾಧೀಶ್ವರ', 'ತೊರೆದಡಿಯ ಭೀಮ', 'ಕಲಿಯುಗ ರಾಮ', 'ನವಿಲೆಯ ಪಾರ್ಥ', 'ಸಂದಣಿ ಧವಳ', 'ಸಿಂಗನಂಕಕಾರ', 'ಮನ್ನೆಯಗೊಡತಿ' ಮುಂತಾದ ಬಿರುದುಗಳನ್ನು ಧರಿಸಿದ್ದ. ಈ ಮನೆತನದ ಮಹಾಮಂಡಳೇಶ್ವರ ಮಾದವತ್ತಿಯರಸನು ಕ್ರಿ. ಶ. ೧೧೨೪ರಲ್ಲಿ[೨] ಮತ್ತು ಮಹಾಮಂಡಳೇಶ್ವರ ಬಿಜ್ಜರಸನು ಕ್ರಿ. ಶ. ೧೧೯೧–೧೨೧೫ ರ ವರೆಗೆ ಆಳಿದರು.[೩] ಇವರಿಬ್ಬರ ಮಧ್ಯದಲ್ಲಿ ಬಿಜ್ಜರಸ ಮತ್ತು ಕಾಚರಸರು ಆಳುತ್ತಿರಬೇಕು. ಕದಂಬರ ಶಾಸನಗಳು ನವಲಿ ಮತ್ತು ಹಲ್ಕಾವಟಿಯಲ್ಲಿಯೂ ದೊರೆತಿವೆ.

ಹೈಹೆಯರು : ಈ ಮನೆತನದ ಮಹಾಮಂಡಳೇಶ್ವರ ದೇವರಸನು ಕ್ರಿ.ಶ. ೧೦೫೨ ರಲ್ಲಿ ಎಡೆದೊರೆ-೨೦೦೦ ಆಳುತ್ತಿದ್ದನು.[೪] ಬಳಗಾನೂರಿನ ಕ್ರಿ.ಶ. ೧೧೯೧–೯೨ ರ ಶಾಸನದಲ್ಲಿ[೫] ಮಹಾಮಂಡಳೇಶ್ವರ ಮಲ್ಲಿದೇವನ ಉಲ್ಲೇಖವಿದೆ. ಆದರೆ ಇಲ್ಲಿ ಆತನು ಆಳುತ್ತಿದ್ದ ಪ್ರದೇಶವನ್ನು ಹೇಳಿಲ್ಲ. ಇವನು ಬಹುಶಃ ಎಡೆದೊರೆ-೨೦೦೦ ವನ್ನು ಆಳುತ್ತಿರಬೇಕು. ಶಾಸನಗಳು ಇವನನ್ನು 'ಮಾಹಿಷ್ಮತೀ ಪರಮೇಶ್ವರ', 'ಧಾರಾನಗರಭಯಂಕರ', 'ಕಾರ್ತವೀರ್ಯ ಕುಲತಿಲಕ', 'ಮೂವಡಿ ಗಂಡ', 'ರಿಪುಮಂಡಳಿಕ ಭೇರುಂಡ', 'ಕಟಕ ಮಂಡಳಿ ರಕ್ಷಪಾಳ', ಮುಂತಾಗಿ ಕರೆದಿವೆ. ಮೊರಟ–೩೦೦ನ್ನು ಈ ಮನೆತನದ ಕೆಲವು ಅರಸರು ಆಳುತ್ತಿದ್ದುದನ್ನು ಮಲ್ಲಟ ಸಿರಿವಾರ, ಕವಿತಾಳ, ಹೀರಾ, ಬಲ್ಲಟಗಿ ಶಾಸನಗಳು ಹೇಳುತ್ತವೆ.

ಕಾಕತೀಯರು : ರಾಯಚೂರಿನ ಕ್ರಿ.ಶ. ೧೨೯೪ ರ ಶಾಸನ[೬]ದಲ್ಲಿ ಈ ಮನೆತನದ ೨ನೆಯ ಪ್ರತಾಪರುದ್ರನ ಉಲ್ಲೇಖವಿದೆ. ಈತನ ದಂಡನಾಯಕ ಗೋನ

---

೧. H.S.A. ೧೮ No. ೬.

೨. ಅದೇ No. ೯.

೩. ಅದೇ No. ೧೬ ಮತ್ತು ೧೦೭.

೪. ಅದೇ No. ೫.

೫. ಅದೇ No. ೧೫.

೬. ಶ್ರೀನಿವಾಸರಿತ್ತಿ, ರಾಯಚೂರ ಜಿಲ್ಲೆಯ ಶಾಸನಗಳು.

ಗೊಂನ್ನಯ್ಯ ರೆಡ್ಡಿ. ಈತನ ಸಾಮಂತ ಮತ್ತು ರಾಜ್ಯ ರಕ್ಷಕನಾದ ವಿಠಲನಾಥನು ಆದವಾನಿ, ಮಾನ್ವಿ,ಹಾಲ್ವಿ ಕೋಟೆಗಳನ್ನು ಗೆದ್ದು ರಾಯಚೂರನ್ನು ಪ್ರವೇಶಿಸಿದ ಉಲ್ಲೇಖ ಶಾಸನದಲ್ಲಿದೆ. ರಾಯಚೂರಿನ ಇಂದಿನ ಕೋಟೆಯನ್ನು ಇವನೇ ಕಟ್ಟಿಸಿದ.

ರಾಣಿಯರ ಆಡಳಿತ :

ಚಕ್ರವರ್ತಿಗಳು ತಮ್ಮ ರಾಣಿಯರನ್ನು ಸುರಕ್ಷಿತವಾಗಿಡಲು ಪ್ರಾಚೀನಕಾಲದ ಸುರಕ್ಷಿತ ಕೇಂದ್ರಗಳಾದ ಅಗ್ರಹಾರ ಮತ್ತು ಭತ್ತಗ್ರಾಮಗಳನ್ನು ಬಳಸಿಕೊಂಡಿದ್ದಾರೆ. ಅವುಗಳ ಮೇಲ್ವಿಚಾರಣೆಯನ್ನು ರಾಣಿಯರಿಗೆ ವಹಿಸಿಕೊಡುವುದರ ಮೂಲಕ ಅವರನ್ನು ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದಾರೆ. ಕಲ್ಯಾಣ ಚಾಲುಕ್ಯರ ಕಾಲದಿಂದ ಈ ಪದ್ಧತಿ ಹೆಚ್ಚಾಗಿ ಬೆಳೆಯುತ್ತಾ ಹೋಯಿತು. ಇವರಲ್ಲಿ ೬ನೆಯ ವಿಕ್ರಮಾದಿತ್ಯನ ರಾಣಿ ಅಬ್ಬಲದೇವಿ, ಎಡೆದೊರೆ ನಾಡಿನ ಕರಡಕಲ್-೪೦೦ ರ ಬಳಿಯ ಭತ್ತಗ್ರಾಮ'ಲಿಂಗ'ವನ್ನು ಅಂದರೆ ಇಂದಿನ ಲಿಂಗಸಗೂರನ್ನು ಆಳುತ್ತಿದ್ದಳು.[೧] ಇವರು ಚಕ್ರವರ್ತಿ ಮತ್ತು ಸ್ಥಳೀಯ ಮಾಂಡಳಿಕರ ಮಧ್ಯವರ್ತಿಗಳಾಗಿದ್ದರು. ಸಾಮಂತರ ಚಲನವಲನಗಳನ್ನು ಚಕ್ರವರ್ತಿ ಇವರಿಂದ ಪಡೆಯುತ್ತಿದ್ದ.

ಹೀಗೆ ಮಾಂಡಳಿಕರು, ಅರಸು ಪರಿವಾರದವರು ರಾಜ್ಯದ ಆಳ್ವಿಕೆಯನ್ನು ನಡೆಸುತ್ತ ಅಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುತ್ತಿದ್ದರು. ಅರಸನು ಯುದ್ಧಕ್ಕೆ ಬಂದಾಗ ಅವನ ಜೊತೆ ಸೇರಿಕೊಂಡು, ವೈರಿಗಳನ್ನು ರಾಜ್ಯದಿಂದ ಹಿಮ್ಮೆಟ್ಟಿಸುತ್ತಿದ್ದರು. ಇಂತಹ ಯುದ್ಧ ಪ್ರಸಂಗದಲ್ಲಿ ಮತ್ತು ಗ್ರಾಮದ ಸ್ತ್ರೀಯರ ರಕ್ಷಣೆಯಲ್ಲಿ ಸೈನಿಕರು ಹೋರಾಡುತ್ತಿದ್ದರು. ಹೀಗೆ ಹೋರಾಡುವಾಗ ಮಡಿದರೆ ಅವರ ನೆನಪಿಗಾಗಿ ಶಾಸನವನ್ನು ಬರೆಯಿಸುತ್ತಿದ್ದರು. ಇವುಗಳನ್ನು 'ವೀರ ಶಾಸನ'ಗಳೆಂದು ಕರೆಯುತ್ತಾರೆ. ಕ್ರಿ.ಶ. ೧೧೧೮ ಹಲ್ಲೇರಿಯ ಶಾಸನದಲ್ಲಿ[೨] ''ಬೆಣ್ಣಕಲ್ಲ ಸೀಮೆಯ ಕಾಳಗದಲ್ತುಳಾಚಿ ನಾಯಕ ನೆರೆಯುಮ ಸತ್ತಡೆ ಕಲ್ನಾಟ ಗೆಯ್ದುರು" ಎಂದು ಹೇಳಿದೆ. ಇದೊಂದು ವೀರಗಲ್ಲಿನ ಮಾದರಿ. ಸಾಮಂತರ ಕೆಳಗೆ ಗಾವುಂಡರು, ತಳಾರರು, ಕುಲಕರ್ಣಿಗಳು ಆಡಳಿತದಲ್ಲಿ ನೆರವಾಗುತ್ತಿದ್ದರು. ರಾಜ್ಯಾದಾಯದ ಮೂಲವಾದ ತೆರಿಗೆಯನ್ನು ಸಂಗ್ರಹಿಸಲು ಹಲವಾರು ಅಧಿಕಾರಿಗಳಿದ್ದರು. ಇವರಲ್ಲಿ ಹೆಜ್ಜುಂಕದ ಸಾಮಂತರು, ವಡ್ಡರಾವುಳ ಸುಂಕಾಧಿಪತಿಗಳನ್ನು ಹೆಸರಿಸಬಹುದು. ಇಲ್ಲಿ ಅವರೆಲ್ಲರ ವಿವರಗಳಿಗೆ ಹೋಗದೆ, ಈ ಎಲ್ಲರ ಸಹಕಾರದಿಂದ ಚಕ್ರವರ್ತಿಗಳು ರಾಜ್ಯವನ್ನು ಆಳುತ್ತಿದ್ದರೆಂದು ಮಾತ್ರ ಹೇಳಬಹುದಾಗಿದೆ.

---

೧. HAS ೧೮ No.೯. ಕ್ರಿ.ಶ. ೧೧೨೪ ಡಿಸೆಂಬರ ೨೪.

೨. ಶಾಸನ ಪರಿಚಯ ೨ ಕ್ರಿ.ಶ. ೧೧೧೮.

ವಿದ್ಯಾಭ್ಯಾಸದ ಕೇಂದ್ರಗಳು :

ಪ್ರಾಚೀನ ಕರ್ನಾಟಕದಲ್ಲಿ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನ ಮತ್ತು ದೇವಾಲಯಗಳು ವಿದ್ಯಾಭ್ಯಾಸದ ಕೇಂದ್ರಗಳಾಗಿದ್ದವು. ರಾಯಚೂರು ಜಿಲ್ಲೆಯ ಕುಕನೂರು, ಮಾದೆನೂರು, ಬಳಗಾನೂರು, ಸಾಲಗುಂದೆ, ಅಳವಂಡಿ, ಕೌಲೂರು, ಗಬ್ಬೂರು, ಕಲ್ಲೂರು ಕುರುಡಿ, ಮತ್ತು ಇಟಗಿಗಳು ಪ್ರಮುಖ ಅಗ್ರಹಾರ ಗಳಾಗಿದ್ದವು.

ಅಗ್ರಹಾರದ ಮಹಾಜನರು ವಿದ್ಯಾಪಾರಂಗತರಾಗಿದ್ದರು. ಕೌಲೂರಿನಲ್ಲಿ[೧] ೫೦೦ ಜನ ಮಹಾಜನರಿದ್ದು, ಅವರು

"ಸಕಳ ವ್ಯಾಕರಣ ಶ್ರುತಿ ಸ್ಮೃತಿ ಪುರಾಣ ನ್ಯಾಯ ಸತ್ಕಾವ್ಯ ನಾಟಕವಾತ್ಸ್ಯಾಯನ ಮಂತ್ರ ತಂತ್ರ ನಯ × × × × ಪ್ರಕ × × × × × ಪುಣ್ಯೈರೆಸೆವೆ ಪ್ರತ್ಯಕ್ಷ ಸಾರಸ್ವತಾಧಿಕರಾನಂದದ ತೆಂಕಣಯ್ವೊಳೆಯೆ × × × ಕೌಱೂರೊಳಿರ್ಪದ್ವಿರ್ಜರ್" ಆಗಿದ್ದರು.

ಅಳವಂಡಿಯಲ್ಲಿ[೨] ೪೦೦ ಜನ ಮಹಾಜನರಿದ್ದು, ಅವರು

"ಸಕಳ ವ್ಯಾಕರಣಾಗಮ ಸ್ಮೃತಿ ಪುರಾಣ ಗ್ರಾಮ ಶಟ್ತರ್ಕನಾ |
ಟಕ ಕಾವ್ಯಜ್ಞ ಚತುರ್ಮುಖ ಕೃತಮುಖರ್ ಷಟ್ಕರ್ಮ ಸಂಯುಕ್ತರ |
ರ್ಥಿಕದಿಂಬಾಧಾರ ಭೂಮಿ ಜಾತರ ಕುಳ ಶ್ರೀ ವಲ್ಲಭರ್ ಸದ್ಗುಣಾ |
ಧಿಕರುದ್ದಾಮರಗಣ್ಯೆಪುಣ್ಯೈರೆಸೆದನಾಲ್ನೂರ್ವರುರ್ವೀನುತರು ||"

ಆಗಿದ್ದರು. ಕುಕನೂರಿನಲ್ಲಿ[೩] ೧೦೦೦ ಜನ ಮಹಾಜನರಿದ್ದು, ಅವರು ಜನರ ಪ್ರೀತಿ ಗಳಿಸಿದ್ದರು. ಶಾಸನವು ಅವರನ್ನು

"ಸಮವಾಪ್ತ ಶಾಸ್ತ್ರ ಸಜ್ಜನರನವದ್ಯರರ್ಥಿಜನಕಲ್ಪಕುಜರ್ಕೃವಿತಾಮಹಾ ರ್ಣ್ಣವರ್ಮನುಚರಿತರ್ಸ್ಸಮಸ್ತ ಬುಧಸಂಸ್ತುತ್ತರೆಂದು ಮಹಾಜನಂಗಳಂ ಜನವೆನಿತುಂ ಸಕೌತುಕದೆ ಸಂಸ್ತುತಿಗೆಯ್ವುದದೇಂ ಬಣ್ಣಿಪೆ" ಎಂದಿದೆ.

ಅಲ್ಲದೆ ಅವರು

"ಗರ್ವ್ವೋರ್ವೀಪೇತರ್ ವಿದಿತ ಚ
ತುರ್ವ್ವೇದರ್ಸ್ಸಕಳ ಶಬ್ದವಿದ್ಯಾನಿಪುಣ
ರ್ನ್ನಿರ್ಬ್ಬಾಧಿತ ತರ್ಕ್ಕಸ್ಸಾರ್

---

೧. ಶಾಸನ ಪರಿಚಯ ೨೨ ಕೌಲೂರು, ಕೊಪ್ಪಳ (ತಾ.)

೨. ಅದೇ ೧೯

೩. ಅದೇ ೫೨

ಸಿರ್ವ್ವರ್ಸಲೆ ಕುಕ್ಕನೂರೊಳಸದಳದೆಸೆದರು'||

ಎಂದು ಉಲ್ಲೇಖಿಸಲಾಗಿದೆ. ಗಬ್ಬೂರು ಶಾಸನವು[೧]

'ಇದು ವಿದ್ಯಾಕ್ಷೇತ್ರ ಲೋಕಕ್ಕಧಿಕ ಭೂವನ ವಿಖ್ಯಾತ ವಿಗೋಪುರಂ ತಾ
ನಿದು ಪುಣ್ಯೇದಾರಾದಾನಾರುಹ ವಿಭುದಜವಿದ್ವಜನಂಗಳ್ |
ಮುದದಿಂದಾನಂದದಿಂ ಕೊಡುವರೊಲಿದು ಮಾತ್ರಾಕ್ಷರಂ ಪ್ರೀತಿಯಿಂದಂ|
ಪದುಳಂ ಚಂದ್ರಾರ್ಕತಾರನ್ನವರಮಧಿಕಮತ್ರ್ಯೋರ್ತಿತಂ
ಗ್ರಾಮರಾಜ್ಯಂ '||

ಎಂದು ವರ್ಣಿಸುತ್ತದೆ. ಹೀಗೆ ಅಗ್ರಹಾರಗಳ ವರ್ಣನೆ, ಅಲ್ಲಿಯ ಮಹಾಜನರ ಪಾಂಡಿತ್ಯ, ವ್ಯಕ್ತಿತ್ವಗಳ ವಿವರಗಳು ಇಲ್ಲಿಯ ಶಾಸನಗಳಲ್ಲಿ ಸುದೀರ್ಘವಾಗಿ ಬಂದಿವೆ.

ನಗರಗಳ ಒಂದು ಭಾಗದಲ್ಲಿ ವಾಸವಾಗಿರುವ ಬ್ರಾಹ್ಮಣರ ಓಣಿಗಳನ್ನು "ಬ್ರಹ್ಮಪುರಿ"ಗಳೆಂದು ಕರೆಯುತ್ತಾರೆ. ಕೆಲವೊಮ್ಮೆ ಅಗ್ರಹಾರಗಳನ್ನೂ ಬ್ರಹ್ಮಪುರಿಗಳೆಂದು ಶಾಸನಗಳು ಕರೆದಿವೆ. ಉದಾ : ಕೌಲೂರು ಅಗ್ರಹಾರವಾಗಿದ್ದರೂ ಅದನ್ನು 'ಬ್ರಹ್ಮಪುರಿ' ಎಂದು ಕರೆದು, ಅಲ್ಲಿಯ ಬ್ರಹ್ಮಪುರಿಗೆ ತಕ್ಕ ವೃತ್ತಿಯನ್ನು ಏಚಿಮಯ್ಯ ಮತ್ತು ಮೇಲಾಳ್ವಿಕೆ ಮಾಡುತ್ತಿದ್ದ ಮಹಾಮಂಡಳೇಶ್ವರ ಸಿಂಗಟಾಲೂರ ಬಾಚಿದೇವ ಹಾಗೂ ಆತನ ಮಗ ಚಿಡಿಗಿದೇವರು ಸಂತಾನಾಭಿವೃದ್ಧಿ ಬಯಸಿ ದತ್ತಿ ಬಿಟ್ಟಿರುವುದನ್ನು ಶಾಸನ[೨] ಹೇಳುತ್ತದೆ.

ದೇವಾಲಯಗಳೂ ಪ್ರಾಚೀನ ವಿದ್ಯಾಕೇಂದ್ರಗಳಾಗಿದ್ದವು. ಕುಕನೂರಿನ ಶಾಸನ[೩]ವು ಅಲ್ಲಿನ ತಪೋಧನರನ್ನು "ಅನೇಕ ತರ್ಕ ವ್ಯಾಕರಣ ಪುರಾಣ, ಕಾವ್ಯ, ನಾಟಕ, ಭರತ ವಾತ್ಸ್ಯಾಯನಾದಿ ವಿದ್ಯಾಪಾರಾವಾರ ವಿಚಾರ ಚತುರಾನನರ್/ ದುಷ್ಟ ದರ್ಪಿಷ್ಟ ಪಟಿಷ್ಠ ನಿಷ್ಠುರಾನೇಕಾನ್ತವಾದಿ ಮತ್ತಮಾತಂಗಮಸ್ತಕ ವಿದಳನ ಪಂಚಾನನರ್/ಸಕಳ ಜಗತ್ಕರ್ತೃ ತ್ರಿನಯನ ವಿಧಾತೃತ್ವಾದಿ ನಿರಾಚಿರೇರ್ಘ ಮೀಮಾಂಸ ಕಕುಳ ಕುಧರ ವಿದಳನೋಚ್ಚಂಡ ವಜ್ರಾನಳ್‌ರ್.........ಸೂಂಡಿಯ ನಗರೇಶ್ವರದ.........ದಾಚಾರ್ಯರ್" ಎಂದು ಅವರ ಪಾಂಡಿತ್ಯಾದಿಗಳನ್ನು ವರ್ಣಿಸುತ್ತದೆ. ಇಲ್ಲಿಯ ದೇವಾಲಯಕ್ಕೆ ಮತ್ತು ಅಲ್ಲಿಯ ತಪೋಧನರಿಗೆ, ಛತ್ರಕ್ಕೆ, ವಿದ್ಯಾದಾನಕ್ಕೆ ದತ್ತಿಗಳನ್ನು ಬಿಟ್ಟ ಉಲ್ಲೇಖಗಳು ಆ ಶಾಸನದಲ್ಲಿದೆ, ಅಲ್ಲದೆ ಸಂಕನೂರು, ಕಲ್ಲೂರು, ಕುಕನೂರು ಬಳಗಾನೂರು, ಕುರಡಿ, ಚೀಕಲಪರ್ವಿ, ಬಲ್ಲಟಗಿ, ಗಬ್ಬೂರು

---

೧. ಡಾ. ದೇಸಾಯಿ ಪಿ. ಬಿ; ಒಂದನೆಯ ರಾಯಚೂರ ಜಿಲ್ಲಾ ಸಾಹಿತ್ಯ ಸಮ್ಮೇಳನ ಸಂಚಿಕೆ, ೧೯೭೦.

೨. ಅದೇ ೨೨.

೩. ಅದೇ ೫೨.

ಗಳ ದೇವಾಲಯಗಳಿಗೆ ಮತ್ತು ತಪೋಧನರಿಗೆ ದತ್ತಿಯನ್ನು ಬಿಟ್ಟ ಉಲ್ಲೇಖಗಳು ಆಯಾ ಶಾಸನಗಳಲ್ಲಿವೆ.

ಘಟಿಕಾಸ್ಥಾನಗಳು ಪ್ರಾಚೀನ ವಿದ್ಯಾಭ್ಯಾಸದ ಮತ್ತೊಂದು ಕೇಂದ್ರಗಳಾಗಿವೆ. ಈ ವರೆಗೆ ದೊರೆತಿರುವ ಇಲ್ಲಿಯ ಶಾಸನಗಳಲ್ಲಿ ಘಟಿಕಾಸ್ಥಾನಗಳ ಬಗ್ಗೆ ಉಲ್ಲೇಖ ವಿಲ್ಲ. ಆದರೆ ಇಲ್ಲಿಯ ಕೆಲವು ಶಾಸನಗಳಲ್ಲಿ ಘೈಸಾಸರನ್ನು ಹೇಳಲಾಗಿದೆ. ಕುಕನೂರಿನ ಶಾಸನಗಳಲ್ಲಿ[೧] ಅನೇಕ ಘೈಸಾಸರು ಉಲ್ಲೇಖಗೊಂಡಿದ್ದಾರೆ. ಪ್ರೌಢ ವಿದ್ಯಾಭ್ಯಾಸದಲ್ಲಿ ಪರಿಣತಿ ಹೊಂದಿರುವ ಇವರು ಅಗ್ರಹಾರ ಮತ್ತು ದೇವಾಲಯ ಗಳಿಗೆ ದತ್ತಿಗಳನ್ನು ಬಿಟ್ಟದ್ದಾರೆ. ಬಹುಶಃ ಇಲ್ಲಿಯ ಯಾವುದೋ ಘಟಿಕಾಸ್ಥಾನ ದಿಂದ (ಯಾವುದೆಂಬುದು ಗೊತ್ತಾಗುವುದಿಲ್ಲ) ಘೈಸಾಸರು ಎಂಬ ಬಿರುದನ್ನು ಪಡೆ ದಿರಬೇಕು.

ಹೀಗೆ ಈ ಪ್ರದೇಶದಲ್ಲಿ ಹಲವು ವಿದ್ಯಾಕೇಂದ್ರಗಳಿದ್ದವು. ಅವು ನೈಷ್ಠಿಕ ಬ್ರಹ್ಮಚಾರಿಗಳನ್ನು ಹೊಂದಿದ್ದು, ಜನರಿಂದ ಮನ್ನಣೆ ಪಡೆದ ಸ್ಥಾನಗಳಾಗಿದ್ದವು. ಆದರೆ ಇಲ್ಲಿ ಕಲಿಸಲಾಗುತ್ತಿದ್ದ ವಿಷಯಗಳ ಸ್ಪಷ್ಟಚಿತ್ರ ಸಿಗುವುದಿಲ್ಲ. ಅವರ ಗುರು ಶಿಷ್ಯರ ಸಂಬಂಧಗಳಾಗಲೀ, ವಿದ್ಯಾರ್ಥಿಗಳು ವಾಸಿಸುವ ಸ್ಥಳಗಳ ಬಗೆಗಾಗಲೀ ಪ್ರಸ್ತಾಪವಿಲ್ಲ. ಆದರೆ ಮಠಗಳ ತಪೋಧನಾಧಿಪತಿಗಳು, ಅಗ್ರಹಾರಗಳ ಬ್ರಾಹ್ಮಣರು ಹಲವಾರು ಶಾಸ್ತ್ರಗಳನ್ನು, ವಿವಿಧ ಮತ ಧರ್ಮಗಳ ಗ್ರಂಥಗಳನ್ನು, ಸಾಹಿತ್ಯಾದಿ ಕೃತಿಗಳನ್ನು ಕರತಲಾಮಲಕ ಮಾಡಿಕೊಂಡಿರುವದನ್ನು ಶಾಸನಗಳಲ್ಲಿ ಹೇಳಲಾಗಿದೆ. ಬಹುಶಃ ಇವುಗಳನ್ನೇ ಇಲ್ಲಿ ಕಲಿಸುತ್ತಿರಬಹುದು.

ಸಾಹಿತ್ಯಿಕ[೨]:

ರಾಯಚೂರು ಜಿಲ್ಲೆಯ ಶಾಸನಗಳು ಪೂರ್ಣಪ್ರಮಾಣದಲ್ಲಿ ಪ್ರಕಟ ಗೊಂಡಿಲ್ಲ. ಹೀಗಾಗಿ ಇಲ್ಲಿಯ ಶಾಸನಗಳ ಸಾಹಿತ್ಯಿಕ ಮೌಲ್ಯವನ್ನು ಮತ್ತು ಅವು ಗಳ ಬೆಲೆಯನ್ನು ಖಚಿತವಾಗಿಕೊಡಲು ಸಾಧ್ಯವಾಗದು. ಆದರೂ ಪ್ರಕಟಗೊಂಡಿ ರುವ ಕೆಲವನ್ನು ಬಳಸಿಕೊಂಡು, ಅವುಗಳ ಸ್ಥೂಲ ಪರಿಚಯ ಮಾಡಿಕೊಡಲು ಇಲ್ಲಿ ಪ್ರಯತ್ನಿಸಿದ್ದೇನೆ.

ಕವಿಸಾಹಿತ್ಯದಂತೆ ಶಾಸನಸಾಹಿತ್ಯವನ್ನೂ ಜೈನ, (ವೀರ)ಶೈವ, ಬ್ರಾಹ್ಮಣ, ಮತ್ತು ಇತರ ಎಂದು ವಿಭಜಿಸಬಹುದು. ಆದರೆ ಈ ಶಾಸನಗಳಿಗೆ ತಮ್ಮದೇ ಆದ ಒಂದು ಮಿತಿ ಮತ್ತು ಗತಿಯಿರುವುದನ್ನು ಗಮನಿಸಿ,

---

೧. ಒಂದನೆಯ ರಾಯಚೂರು ಜಿಲ್ಲೆ ಸಾಹಿತ್ಯ ಸಮ್ಮೇಳನ ಸಂಚಿಕೆ ೪೮, ೪೯, ೫೦.

೨. ಈ ಭಾಗವನ್ನು ಬರೆಯಲು ಎಂ. ಎಂ. ಕಲಬುರ್ಗಿಯವರ ಲೇಖನಗಳ ನೆರವನ್ನು ಪಡೆ ದಿದ್ದೇನೆ. ಅದಕ್ಕಾಗಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಡಾ|| ಎಮ್. ಎಮ್. ಕಲಬುರ್ಗಿಯವರು[೧] ಅವುಗಳನ್ನು ನೃಪತುಂಗಪೂರ್ವಯುಗ, ನೃಪತುಂಗೋತ್ತರಯುಗ, ವಿಜಯನಗರಯುಗ-ಹೀಗೆ ೩ ಗುಂಪುಗಳಾಗಿ ವಿಂಗಡಿಸುತ್ತಾರೆ. ಈ ವಿಭಾಗವನ್ನೇ ಇಲ್ಲಿ ಮಾದರಿಯಾಗಿಟ್ಟುಕೊಳ್ಳಲಾಗಿದೆ.

ನೃಪತುಂಗಪೂರ್ವಯುಗ (ಕ್ರಿ.ಶ ೮೫೦ ರ ವರೆಗೆ) : ಕನ್ನಡಭಾಷೆ ಬದಲಾವಣೆಗೆ ಇಳಿಯುವ ಮೊದಲಿನ ಕೆಲವು ಶಾಸನಗಳು ಇಲ್ಲಿ ಸಿಕ್ಕಿವೆ. ಪ್ರಾಕೃತ ಭಾಷೆಯಲ್ಲಿರುವ ಅವು, ಕ್ರಿ. ಪೂ. ೩ನೆಯ ಶತಮಾನಕ್ಕೆ ಸೇರಿವೆ. ಇವುಗಳಲ್ಲಿ "ಮಾನವನು ಪರಿಶ್ರಮಿಸಬೇಕು. ಪರಿಶ್ರಮದಿಂದ ಜಯ ನಿಶ್ಚಯ. ಪ್ರಯತ್ನದಿಂದ ಮಾನವನು ದೇವನಾಗಬಲ್ಲನು. ನನ್ನ ಅನುಭವವನ್ನೇ ಹೇಳುತ್ತೇನೆ. ಈಚೆಗೆ ಒಂದು ಸಂವತ್ಸರಕ್ಕೆ ಅಧಿಕವಾಗಿ ಬುದ್ಧ ಸಂಘದಲ್ಲಿ ಆಸಕ್ತಿ ಉಳ್ಳವನಾಗಿ ಶ್ರಮಿಸುತ್ತಲಿದ್ದೇನೆ. ಇದರ ಫಲವಾಗಿ ಈ ಜಂಬೂ ದ್ವೀಪದಲ್ಲಿ ಹಿಂದೆ ದೇವರುಗಳು ಮಾನವನೊಡನೆ ಮಿಳಿತರಾಗಿರಲಿಲ್ಲ. ಈಗ ಮಿಳಿತರಾಗಿದ್ದಾರೆ. ಇಂತಹ ಸಾಧನೆ ಬಲ್ಲಿದವನಿಗೆ ಮಾತ್ರ ಸಾಧ್ಯ. ಬಡವನು ನಿರಾಶನಾಗದಿರಲಿ. ಪರಿಶ್ರಮದಿಂದ ಬಡವನೂ ಜಯಶಾಲಿಯಾದಾನು" ಎಂದು ಮಸ್ಕಿಯ ಶಾಸನದಲ್ಲಿ,

"ನಾನು ಸಾಧಿಸಿದ ಈ ಕಾರ್ಯವನ್ನು ಬಡವನಾದರೂ ಸಾಧಿಸಬಹುದು. ಆದರೆ ಆತನಿಗೆ ಧರ್ಮದಲ್ಲಿ ಶ್ರದ್ಧೆ ಮಾತ್ರ ಅವಶ್ಯಕ. ನೀವು ಈ ಮಾರ್ಗವನ್ನು ಅನುಸರಿಸುವಿರಾದರೆ ಈ ಘನಸಾಧನೆ ಬಹುಕಾಲ ಬಾಳೀತು. ಒಂದೂವರೆಯಷ್ಟು ಅಭಿವೃದ್ಧಿಯಾದೀತು" ಎಂದು ಕೊಪ್ಪಳದ ಶಾಸನ[೨]ದಲ್ಲಿ ಹೇಳಲಾಗಿದೆ. ಇವು ಧರ್ಮ ಬೋಧನೆಯನ್ನು ಆತ್ಮೀಯ ಶೈಲಿಯಲ್ಲಿ ಹೇಳಿವೆ.

ಪ್ರಾಕೃತ ಶಾಸನಗಳ ನಂತರದಲ್ಲಿ ಈ ಜಿಲ್ಲೆಯಲ್ಲಿ ಕನ್ನಡ ಶಾಸನಗಳು ಸ್ಥಾನ ಪಡೆದಿವೆ ಬಾದಾಮಿ ಚಾಲುಕ್ಯರ ಕಾಲದಲ್ಲಿ ಕರ್ನಾಟಕದ ಇತರೆಡೆ ಸಂಸ್ಕೃತ ಮತ್ತು ಕನ್ನಡ ಶಾಸನಗಳೆರಡೂ ಸ್ಥಾನ ಪಡೆದಿದ್ದರೆ, ಈ ವರೆಗೆ ಇಲ್ಲಿ ಈ ಕಾಲದ ಸಂಸ್ಕೃತ ಶಾಸನವೊಂದೂ ದೊರೆತಿಲ್ಲ ಕನ್ನಡಕ್ಕೆ ಹೆಚ್ಚಿನ ಮನ್ನಣೆ ಸಿಕ್ಕಿದೆ. ವಿಷಯ ನಿರೂಪಣೆಗೆ ಒತ್ತುಕೊಟ್ಟಂತೆ ಇವು ಸಾಹಿತ್ಯದ ಕಡೆಗೆ ಕೊಟ್ಟಿಲ್ಲ. ಪ್ರಾರಂಭದ ಮಂಗಲ, ಕೊನೆಯ ಫಲಶ್ರುತಿ ಪದ್ಯಗಳಿಂದ ಕೂಡಿದ ಇವು ತಮ ತಮಗೆ ಬೇರೆ ಬೇರೆ ಸ್ವರೂಪದ ತುಂಡು ಗದ್ಯದಲ್ಲಿವೆ. ಇಲ್ಲಿ ಸಂಸ್ಕೃತ ಮತ್ತು ಕನ್ನಡಗಳೆರಡೂ ಜೊತೆಯಲ್ಲಿಯೇ ನಡೆದು ಬಂದಿವೆ ಉದಾ : "ಪ್ರಸ್ತುತ್ಯಂ ಪಡೆದಂ ಸುರೇಂದ್ರ ಸುಖಮಂ (ವೀರೋ) ವಿಶ್ರಾಂತಾ ಗುಣಾ ಘನಶ್ರೀ"[೩].

---

೧ ಡಾ. ಕಲಬುರ್ಗಿ ಎಂ ಎಂ. ಮಾರ್ಗ (ಸಂ. ೨) ಪು. ೨೫೩-೫೮

೨. ಡಾ. ದೇಸಾಯಿ. ಪಿ. ಬಿ., ಪೂರ್ವೋಕ್ತ.

೩. ಅಪ್ರಕಟಿತ ಶಾಸನ.

ನೃಪತುಂಗೋತ್ತರಯುಗ (ಕ್ರಿ. ಶ. ೮೫೦-೧೩೫೦) : ಬಾದಾಮಿ ಚಾಲುಕ್ಯರಿಗಿಂತ ಹೆಚ್ಚಾಗಿ ರಾಷ್ಟ್ರಕೂಟ ದೊರೆಗಳು ಸಾಹಿತ್ಯಕ್ಕೆ ಕೊಟ್ಟಂತೆ ಶಾಸನಕ್ಕೂ ಮಹತ್ವವನ್ನು ಕೊಟ್ಟಿದ್ದಾರೆ. ಆದರೆ ಸಾಹಿತ್ಯದಂತೆ ಅದು ವ್ಯತ್ಯಾಸಗೊಳ್ಳದೆ ಒಂದೇ ಪ್ರಕಾರ ಸಾಗಿಬಂದಿದೆ. ಇವರ ಕಾಲದ ಶಾಸನಗಳಲ್ಲಿ ಸ್ತುತಿ, ಸಮುದ್ರ, ಅರಸು, ಗ್ರಾಮ, ದಾನಿ, ದಾನವನ್ನು ಸ್ವೀಕರಿಸುವುದು, ಫಲಶ್ರುತಿಗಳು ಕ್ರಮವಾಗಿ ಬಂದಿವೆ. ಸಾಹಿತ್ಯದ ದೃಷ್ಟಿಯಿಂದ ಗಮನಿಸಬೇಕಾದ ಇವುಗಳು ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಲ್ಲೂ ತಪ್ಪದೆ ಪಾಲಿಸಿಕೊಂಡು ಬಂದಿವೆ. ಉದಾ : ಕಲ್ಲೂರಿನ ಕ್ರಿ. ಶ. ೧೧೮೫ ರ ಶಾಸನ[೧]ದಲ್ಲಿ ಸ್ತುತಿ ಮತ್ತು ಸಮುದ್ರ ವರ್ಣನೆ ಹೀಗಿದೆ:

> "ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ
> ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಶಂಭವೇ"||
>
> ವಿಲುಠತ್ಪಾಠೀನ ಪುಚ್ಛಸ್ಫುರಿತ ಗುರುತರಾ ಸ್ಫಾಳನ ಸ್ಫಾರ ಕೋಳಾ
> ಹಳ ನಿರ್ಯಧೈರ್ಯರ್ ನಕ್ರಕ್ರಮಕಕ್ಷಣ ನಿಷಂಣೋರು ನೀರೇಭಭೀಕೃ
> ಚ್ಚಳ ಹಸ್ತಾಘಾತಮಸ್ತಪ್ರಕಠಿಣ ಕಮಠಭ್ರಾಂತಿ ನಿರ್ಮುಕ್ತಿ ಮುಕ್ತಾ
> ವಿಳವೀಚೀಸಂಚಯಂ ಕಣ್ಗೆಸೆದುದು ಬಹಳದ್ವಾನ ರೌದ್ರಂ ಸಮುದ್ರಂ ||

ಕುಕನೂರಿನ ಶಾಸನ[೨]ದಲ್ಲಿ ಕುಂತಳನಾಡಿನ ವರ್ಣನೆ ಹೀಗಿದೆ :

> "ಎನೆ ಚೆಲ್ವಿಂ ಲವಣಾಬ್ಧಿ ಸುತ್ತುವಿರೆ ಮುನ್ ದೈತ್ಯೈಕ್ಯರ್ಗಳಂ ದೈತ್ಯಮ
> ರ್ದ್ದನಿ ಕಾಯ್ದಿಂ ಪಿಡಿದೊತ್ತಿ ಪಿಂಡುತಿರೆ ತನ್ಮೇ ದೋರಸಂತೀವಿ ಮೇ
> ದಿನಿಯೆಂಬಂಕಮನಾಳ್ದ ಳಾ ಬೆಳೆಯದೊಳು ಶ್ರೀಭಾರತೋರ್ಬ್ಬಿ ವಿಳಾ
> ಸಿನಿಗೊಪ್ಪಂಬಡೆದಿರ್ದ್ದ ಕುನ್ತಳದವೊಲು ಶ್ರೀಕುಂತಳಂ ಶೋಭಿಕುಂ ||

ತಳಕಲ್ಲಿನ ಕ್ರಿ. ಶ. ೯೯೧ ರ ಶಾಸನ[೩]ವು ಚಾಲುಕ್ಯ ತೈಲಪನನ್ನು ಹೀಗೆ ಹೊಗಳುತ್ತದೆ:

> ಮಕರ ಕರಿನಿಕರಕರಹತ
> ವಿಕೀರ್ಣ ತುಂಗತ್ತರಂಗ ಸಂಗತ ಶಿಶಿರ

---

೧. ಶಾಸನ ಪರಿಚಯ ೩೬. ಕಲ್ಲೂರು, ಯಲಬುರ್ಗಿ (ತಾ)

೨. ಅದೇ. ೫೩

೩. ಅದೇ. ೨೩

ಪ್ರಕರ ಗಂಭೀರಾಂಬೋನಿಧಿ
ನಿಕಾಯ ಪರಿವೃತ ಸಮಸ್ತವಸುಧಾತಳಮಂ ||

ಸೇತುಹಿಮಾದ್ರಿಯಿನಸ್ತಾ
ದ್ರಿತಟದಿಂದಂಗಯು ಶೈಳದಿಂದೆಸೆದಖಿಳ
ಕ್ಷ್ಮಾತ ಳಮಂ ಪ್ರತಿಪಾಳಿಸಿ
ನೀತಿಯೊಳಾಳ್ದೆಸೆದನಿಮ್ಮ ತೈಲ ನರೇಂದ್ರಂ"||

ಕ್ರಿ.ಶ. ೧೧೯೧ ರ ಕರಡಕಲ್ಲ ಶಾಸನ[೧]ವು ಆ ನಾಡನ್ನು ಹೊಗಳಿದ ರೀತಿ ಹೀಗಿದೆ :

'ಸಕಳ ಶ್ರೀಲೀಲೆಯಿಂ ಕಣ್ಗೆಸೆವೆಡೆ ದೊಜೆ[?]ನಾಡೊಳ್ ಸುಧಾ
ವಾಸ ಧಾನ್ಯ
ಪ್ರಕರ ಕ್ಷೇತ್ರದ್ರುಮವ್ರಾತದಿನಖಿಳಜನೈಶ್ವರ್ಯಸೌಂದರ್ಯದಿಂ ಗೋ
ನಿಕರ ಕ್ಷೀರಾಜ್ಯದಿಂ ಭೋರೆನೆ ಪರಿವ ನದೀಜಾಳದಿಂ ಭೂಜಗದ್ಭುಂ
ಭುಕವಾಗಿದ್ದೊಗ್ಗಳಿಂದಗ್ಗಳಿಸಿ ಕರಡಿಕಲ್ನಾಡು ಸಂತಂ ಬಸಂತಂ ||

ಅದೇ ಶಾಸನವು ಕರಡಕಲ್ಲ ಗ್ರಾಮವನ್ನು

'ಬಳಸಿದ ಗಂಧಶಾಳಿವನದಿಂ ಪರಿಪೂರ್ಣ್ಣ ತಟಾಕದಿಂ ಮನಂ
ಗೊಳಿಸುವ ಕೆಯ್ವೊಲಂಗಳಿನಗುರ್ವ್ವಿನ ಕರ್ವ್ವಿನ ತೋಂಟದಿಂ ಜನಂ
ಗಳ ಪರಿವೃದ್ಧಿಯಿಂ ಪ್ರಭು ಸಮೃದ್ಧಿಯನೀಶಗೃಹಂಗಳಿಂ ವನಾ
ವಳಿಗಳ ಶೋಭೆಯಿಂ ಕರಡಿಕಲ್ಪೊಗಯಿಪ್ಪುದದೆಂತು ನೋಳ್ಪಡಂ ||

ಎಂದು ವರ್ಣಿಸಿದೆ. ಈ ಮುಂದೆ ಶಾಸನಗಳು ದಾನಿಯನ್ನು, ದಾನ ಸ್ವೀಕರಿಸಿದವನನ್ನು, ಹೀಗೆ ಬಿಟ್ಟ ದಾನವನ್ನು ರಕ್ಷಿಸುವವರಿಗೆ ಸದ್ಗತಿಯೂ ನಾಶಪಡಿಸುವವರಿಗೆ ದುರ್ಗತಿಯೂ ಬರುವುದೆಂದು ಹೇಳುತ್ತವೆ.

ಹೀಗೆ ಚಾಲುಕ್ಯರ ಕಾಲದಲ್ಲಿ ಶಾಸನಗಳು ಸ್ಥಿರತೆಗೆ ಬಂದು ಮಾದರಿಯಾಗಿ ನಿಂತವು. ಭಾಷೆ, ಬರಹ, ತಂತ್ರ ಮುಂತಾದವುಗಳಲ್ಲಿ ಖಚಿತರೂಪ ಧರಿಸಿಕೊಂಡು ಉನ್ನತಿಯನ್ನು ಮುಟ್ಟಿದರೂ ಅವು ಇತರ ಶಾಸನಗಳ ಪಡಿಯಚ್ಚಾಗಿವೆ. ಹೀಗಾಗಿ ಚಾಲುಕ್ಯರ ಕಾಲದ ಶಾಸನಗಳು ಸಂಖ್ಯೆ ಮತ್ತು ಸತ್ವಗಳ ದೃಷ್ಟಿಯಿಂದ ಶೂನ್ಯವಾಗಿವೆ. 'ಈ ಅವಧಿಯ ಪ್ರತಿಯೊಂದು ಶಾಸನಗಳೂ ಸುಂದರವಾಗಿವೆ. ಆದರೆ ಇನ್ನೊಂದರೊಂದಿಗೆ ಹೋಲಿಸಿದಾಗ ಪಡಿಯಚ್ಚಾಗಿವೆ. ಅದೇ ಸಮುದ್ರ, ಅದೇ ಉಪಮೆಗಳು ತುಂಬಿ ಭಾಷೆಯ ಧನಿಶಕ್ತಿ ಕಡಿಮೆಯಾಗಿರುವದನ್ನೂ ಶಾಸನ ಸಾಹಿ

---

೧. HAS. ೧೮. No. ೧೬ ಕ್ರಿ. ಶ.೧೧೯೧

ತ್ಯದ ಬೆಳವಣಿಗೆ ನಿಂತಿರುವದನ್ನೂ ಸೂಚಿಸುತ್ತದೆ.' ಎಂಬ ಕಲಬುರ್ಗಿಯವರ[೧] ಇಲ್ಲಿಯ ಮಾತು ಸತ್ಯವಾಗಿದೆ. ಶಾಸನ[೨]ವೊಂದರಲ್ಲಿ ಪಿರಿಯಕ್ಕರ ಬಳಸಲ್ಪಟ್ಟಿದೆ. ಅಕ್ಷರ ವೃತ್ತ, ಕಂದಪದ್ಯಗಳು ಶಾಸನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಳಕೆಗೊಂಡಿವೆ. ಕುಕನೂರು,[೩] ಕರಡಕಲ್[೪] ಶಾಸನಗಳು ಚಿಕ್ಕಚಂಪೂಕಾವ್ಯಗಳಾಗಿವೆ. ಈ ಕಾಲದಲ್ಲಿ ಕನ್ನಡ ಸಾಹಿತ್ಯವು ಚಂಪುವಿನಿಂದ ವಚನ, ರಗಳೆ, ಷಟ್ಪದಿ ಪ್ರಕಾರಗಳಿಗೆ ತಿರುಗಿದ್ದರೂ (ಇಲ್ಲಿಯ) ಶಾಸನಗಳು ಚಂಪೂ ಮಾರ್ಗದಲ್ಲಿ ಮಾತ್ರ ಮುನ್ನಡೆದಿವೆ. ಈ ಅವಧಿಯಲ್ಲಿ ಕೆಲವು ಸಂಸ್ಕೃತ ಶಾಸನಗಳೂ ಹುಟ್ಟಿಕೊಂಡಿವೆ. ಉದಾ : ಇಟಗಿ ಶಾಸನ.[೫]

ವಿಜಯನಗರಯುಗ (೧೩೫೦ರ ನಂತರ) : ಈ ಅವಧಿಯ ಶಾಸನಗಳು ಹಿಂದಿನ ಸಾಹಿತ್ಯಿಕ ಸೊಗಸನ್ನು ಕಳೆದುಕೊಂಡು, ಕೇವಲ ರಾಜಕೀಯ ದಾಖಲೆಗಳಾಗಿ ರೂಪಗೊಂಡಿವೆ. ಕಡತ, ಹಲಗೆ ಮತ್ತು ಕಾಗದಗಳ ಬಳಕೆ ಈ ಅವಧಿಯಲ್ಲಿ ಬಳಕೆಗೊಂಡದ್ದು ಇದಕ್ಕೆ ಕಾರಣವಾಗಿರಬಹುದು.

ಹೀಗೆ ಈ ಜಿಲ್ಲೆಯ ಶಾಸನಗಳು ಬೆಳೆದುಬಂದಿವೆ. ಇವುಗಳಲ್ಲಿ ಬಳಕೆಗೊಂಡ ಗದ್ಯ; ಸಾಹಿತ್ಯದ ಇತರ ರೂಪಗಳಾದ ಗದ್ಯಪದ್ಯಗಳ ಮಿಶ್ರಣ, ಕಂದ, ವೃತ್ತ ಮುಂತಾದವುಗಳ ಕೆಲವು ಮಾದರಿಗಳನ್ನು ಇಲ್ಲಿ ಕೊಡಲಾಗಿದೆ. ಶಾಸನಗಳಲ್ಲಿ ಗದ್ಯವು ಸಾಮಾನ್ಯವಾಗಿ ಹೀಗಿರುತ್ತದೆ :

'ಸ್ವಸ್ತ್ಯನವರತ ಪರಮಕಲ್ಯಾಣಭ್ಯುದಯ ಸಹಸ್ರಫಳ ಭೋಗ ಭಾಗಿನಿ ದ್ವಿತೀಯ ಲಕ್ಷ್ಮೀ ಸಮಾನೆ ಶಿಷ್ಟ ನಿಧಾನೆ ಸಲ್ಲಲಿತ ಗಾತ್ರೆ ಗೋತ್ರ ಪವಿತ್ರೆ ಪರಿಹಾರ ರಕ್ಷಾಮಣಿ ದಾನಚಿಂತಾಮಣಿ, ಸೋವರ ದಂಡನಾಥ ಮನಃ ಸರೋವರ ರಾಜಹಂಸೆ ಭಾರತೀ ಕರುಣಾವತಂಸೆ ದಾನವಿನೋದೆ ಕಸ್ತೂರಿ ಕಾಮೋ ದೆ ನ್ಯಿತಸತ್ಯಸಂಪನ್ನೆ ವಿಬುಧಪ್ರಸನ್ನೆ ಬಂಧುಜನ ಹರ್ಷ ಸುವರ್ಣ ವರ್ಷೆ[೬]' 'ಸ್ವಸ್ತಿ ಸಮಸ್ತ

---

೧. ಡಾ. ಕಲಬುರ್ಗಿ. ಎಂ. ಎಂ. ಮಾರ್ಗ. ಸಂ. ೨. ಪು. ೨೫೯

೨. APGAS III No. ೧೩. ಮುನಿರಾಬಾದ, ಕೊಪ್ಪಳ (ತಾ) ಕ್ರಿ. ಶ.೧೦೮೮.

೩. ಶಾಸನ ಪರಿಚಯ ೫೨, ೫೩

೪. HAS ೧೮. No. ೧೬.

೫. ಅದೇ. No. ೧೪

೬. ಶಾಸನ ಪರಿಚಯ ೩೧

ಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕರಂ ಕಾಳಂಜರ ಪುರವರಾಧೀಶ್ವರಂ ಸುವರ್ಣವೃಷಭಧ್ವಜ ಡಮರುಗತೂರ್ಯ್ಯನಿರ್ಗ್ಘೋಷಣ ಸುಭಟರಾದಿತ್ಯ ಪ್ರತಾಪ ಲಂಕೇಶ್ವರ ಶ್ರೀಮಕ್ಕಳಚೂರಿ ಕುಳಕಮಳ ಮಾರ್ತಂಡಂ ರಾಯಮುರಾರಿ ಸೋವಿದೇವರಸ'[೧]

ಚಂಪಕಮಾಲೆ :

ಜಳರುಹ ವಕ್ತ್ರೀ ಕೆರವದಳಾಯತಲೋಚನೆ ಮತ್ತಭೃಂಗ ಕುಂ
ತಳ ಕಳಕಂಠನಾದೆ ನವಪಾಠಳಗಂಧಿ ವರಾನೆ ಯಾನೆಸ |
ಲ್ಲಲಿತಲತಾಂಗಿ ಗುಚ್ಚ ನಿಬಿಡಸ್ತನೆ ತಾನೆನಿಸಿರ್ಪ ತತ್ಪುರೀ
ಲಲನೆಯನಾರ್ಪನೇ ಪೊಗಳಲಂಬುಜಗರ್ಭ್ಭನುದಾತ್ತ ಚಿತ್ತದೊಳ್ ೨

ಮತ್ತೇಭವಿಕ್ರೀಡಿತ :

ಸುರಪಂಗಂ ಶಚಿಗಂ ಜಯಂತನಭವಂಗಂ ಗೌರಿಗಂ ಷಣ್ಮುಖಂ
ಹರಿಗಂ ಲಕ್ಷ್ಮಿಗನಂಗಜನ್ಮನುದಯಂಗೆಯ್ವಂದದಿಂದಂತು ಚಾ |
ವರಸಂಗಂ ಗುಣಿ ಚಂದ್ರಿಕಾರಮಣಿಗಂ ಭೂವಂದಿತಂ ಪುಟ್ಟಿದಂ
ಸ್ಥಿರ ತೇಜೋನಿಧಿ ಸಬ್ಬ್ರದೇವನನಘಂ ಶ್ರೀ ವಿಪ್ರವಿದ್ಯಾಧರಂ" ೩

ಇವುಗಳೊಂದಿಗೆ ಹಿಂದೆ ತೋರಿಸಿದಂತೆ ಕಂದಪದ್ಯಗಳಿವೆ. ಇದು ಈ ಜಿಲ್ಲೆಯ ಶಾಸನಗಳ ಸಾಹಿತ್ಯ ಸ್ವರೂಪದ ಸ್ಥೂಲ ಪರಿಚಯ. ಇಲ್ಲಿಯ ಅಪ್ರಕಟಿತ ಮತ್ತು ಅಸಂಗ್ರಹ ಶಾಸನಗಳ ಜೋಡಣೆಯಿಂದ ಈ ಬಗ್ಗೆ ಹೆಚ್ಚಿನ ಬೆಳಕು ಕಾಣಬಹುದು. ಇದರಿಂದ ಈ ಕ್ಷೇತ್ರದಲ್ಲಿ ಮೂಡಿ ಮರೆಯಾಗಿರುವ ಅನೇಕ ಹಾದಿಗಳು ಬೆಳಕಿಗೆ ಬಂದು ವಿಸ್ತಾರಗೊಳ್ಳಬಹುದು.

ಶಾಸನ ಕವಿಗಳು :

ಕೇವಲ ರಾಜಕೀಯ, ಸಾಮಾಜಿಕ ದಾಖಲೆಗಳಾದ ಶಾಸನಗಳನ್ನು ತಮ್ಮ ಪ್ರತಿಭಾ ಸಾಮರ್ಥ್ಯದಿಂದ ಸಾಹಿತ್ಯವನ್ನಾಗಿಸಿ, ಅದಕ್ಕೆ ಗೌರವವನ್ನು ತಂದುಕೊಟ್ಟವರು ಶಾಸನ ಕವಿಗಳು. ಅವರ ವಿಷಯವು ಇಲ್ಲಿ ಕೆಲಮಟ್ಟಿಗೆ ಸಿಗುತ್ತದೆ. ಇವರನ್ನು ಹೊರತುಪಡಿಸಿ ಬರೆದ ಕವಿಚರಿತೆ ಅಪೂರ್ಣವೆಂದೇ ಹೇಳಬೇಕು. ಶಾಸನ ಕವಿಗಳ ಬಗ್ಗೆ ಆರ್. ನರಸಿಂಹಾಚಾರ್ಯ, ಮೇವುಂಡಿ ಮಲ್ಲಾರಿಗಳಾದಿಯಾಗಿ ಈಚೆಗೆ

---

೧. HAS, ೧೮. No. ೧೨
೨. ಶಾಸನ ಪರಿಚಯ ೧೯ ಅಳವಂಡಿ
೩. ಅದೇ

ಡಾ|| ಎಮ್. ಎಮ್. ಕಲಬುರ್ಗಿ, ಡಾ|| ರಿತ್ತಿ, ಟಿ. ಟಿ. ಶರ್ಮ, ಎಮ್. ಮರಿಯಪ್ಪ ಭಟ್ಟರೂ ಲೇಖನಗಳನ್ನು ಬರೆದಿದ್ದಾರೆ.

ಶಾಸನಗಳಲ್ಲಿ ಕವಿಯ ಸ್ಥಾನ ಕೊನೆಯದು. ಶಾಸನಗಳ ಪಾಠಗಳನ್ನು ರಚಿಸಿ ಕೊಡುವದು ಮಾತ್ರ ಅವನ ಕೆಲಸ. ಅದನ್ನು ಕಲ್ಲಿನ ಮೇಲೆ ಬರೆಯುವವನು ಲಿಪಿಕಾರ. ಹೀಗೆ ಬರೆದುದನ್ನು ರೂವಾರಿಯು ಕಂಡರಿಸುತ್ತಾನೆ. ಅಂದರೆ ಒಂದು ಶಾಸನ ನಿರ್ಮಾಣಗೊಳ್ಳಲು ಮೂವರು ಕೆಲಸ ಮಾಡುತ್ತಾರೆ. ಆದರೆ "ಬರೆದಂ ಕಾಟ್ಟಜಂ"[೧] ಎಂಬಲ್ಲಿ ಎಷ್ಟು ಜನರ ಕೆಲಸವಿದೆ. ಎಂಬುದನ್ನು ನಿರ್ಧರಿಸುವುದು ಕಷ್ಟ. ಆದರೆ ಕುಕನೂರಿನ ಶಾಸನ.[೨]

> ಪಲಬರ್ಪೊಗಳಲಗಸ್ತ್ಯರ
> ಕುಳತಿಳಕಂ ನೆಗಳ್ದಸುಕವಿ ಪರಮಾತ್ಮಸುತಂ
> ನಲವಿಂ ಪೇಳ್ದಂ ಸಜ್ಜನ
> ತಿಲಕನೆನಲು ಮೆಚ್ಚನಾವನೀ ಶಾಸನಮಂ ||
> ವರಕಾಶ್ಯಪಗೋತ್ರದ ದೇ
> ವರಾಜನಂಗನೆಯ ಮಾಳಿಯಕ್ಕನ ತನಯಂ
> ಬರೆದನಿದಂ ಶ್ರೀನಗೆವಡೆ
> ಯರ ತಿಲಕಂ ಗಣಿಕ ಮಂಡನಂ ಶಿವದೇವ |

ಎಂದು ಹೇಳಿದೆ. ಇಲ್ಲಿ ಕವಿ ಮತ್ತು ಲಿಪಿಕಾರರಿಬ್ಬರೂ ಬೇರೆಯಾಗಿದ್ದಾರೆ. ಮತ್ತು ಇದೇ ಶಾಸನ,

> "ಮಹಾ ಅಗ್ರಹಾರ ಕುಕನೂರ ಸಾಸಿರ್ವ್ವರ ವರಪುತ್ರ ನೆಚ್ಚಿನ
> ಕಮ್ಮಟದೊಡೆ ಯಂ ಚಂಡೋಜನ ಮೊಗಂ ದಾಮೋಜಂ
> ಬಿಸಕೆಯ್ದು ಬರೆದ ಶಾಸನ ||

ಎಂದು ಮತ್ತೊಬ್ಬನನ್ನು ಉಲ್ಲೇಖಿಸಿದೆ. ಇಲ್ಲಿ ಒಟ್ಟು ಮೂರು ಜನರಿರುವುದು ಸ್ಪಷ್ಟ. ಈ ಮೂವರನ್ನೂ ಪ್ರತ್ಯೇಕವಾಗಿ ಅವರವರ ವಂಶಾವಳಿಗಳೊಂದಿಗೆ ಹೇಳಲಾಗಿದೆ. ಕವಿಯನ್ನು 'ಪೇಳ್ದಂ' ಎಂದು ಕರೆದರೆ, 'ಲಿಪಿಕಾರ' ಮತ್ತು 'ರೂವಾರಿ'ಯನ್ನು 'ಬರೆದ' ಎಂದು ಸೂಚಿಸಲಾಗಿದೆ. ಇದರಿಂದ ಒಂದು ಶಾಸನ ರೂಪ ತಳೆಯಲು ಮೂವರು ಕೆಲಸ ಮಾಡಿರುವುದು ಸ್ಪಷ್ಟವಾಗುತ್ತದೆ. ಕೆಲವೊಮ್ಮೆ ಇಬ್ಬರೇ ಈ ಕೆಲಸವನ್ನು ಮಾಡುತ್ತಾರೆ. ಕೆಲವು ಶಾಸನಗಳಲ್ಲಿ ಈ ಮೂವರೂ ಮರೆಯಾಗಿ

---

೧. HAS ೧೮. No. ೭. ಮಸ್ಕಿ, ಲಿಂಗಸ್ಗೂರು (ತಾ) ಕ್ರಿ. ಶ. ೧೦೧೦.

೨. ಶಾಸನ ಪರಿಚಯ ೫೦

ಅದನ್ನು ಬರೆಯಿಸಿದವನು ಉಲ್ಲೇಖಗೊಂಡಿದ್ದಾನೆ. ಉದಾ : "ಈಶ್ವರ ಸೆಟ್ಟಿ ಬರೆಸಿದ".[೧]

ಶಾಸನಸಾಹಿತ್ಯ ರಚನೆ ಒಂದು ವೃತ್ತಿಯಾಗಿರದೆ ಪ್ರವೃತ್ತಿಯಾಗಿತ್ತು. ಅವರು ಯಾವುದೇ ಪ್ರತಿಫಲದ ಆಸೆಯಿಂದ ಬರೆಯುತ್ತಿರಲಿಲ್ಲ. ಆದರೂ ಸಮಾಜ ದಿಂದ ಅವರಿಗೆ ಮರ್ಯಾದೆ ಸಿಗುತ್ತಿತ್ತು. ಉದಾ : ಕುಕ್ಕನೂರಿನ ಶಾಸನವನ್ನು ಬರೆದ ಶಿವದೇವನಿಗೆ ಇತರರಿಗೆ ಕೊಟ್ಟಂತೆ ದಾನ ಕೊಡಲಾಗಿದೆ. ಅಲ್ಲದೆ ಅದೇ ಊರಿನ ಮತ್ತೊಂದು ಶಾಸನದಲ್ಲಿ[೨] "ಶ್ರೀಗೋಮ ಕವಿಗೆ ದಯೆಯಿಂ ಹಂ ನಿರ್ಮ್ಮತ್ತರ್ಕೈಯುಂ" ಬಿಡಲಾಗಿದೆ. ಕೌಲೂರು ಶಾಸನದಲ್ಲಿ[೩] "ಚತುರ್ಭಾಷಾ ಚಕ್ರವರ್ತಿ ಕವಿ ಕಂದರ್ಪ"ನ ಉಲ್ಲೇಖವಿದೆ. ಬಹುಶಃ ಈತನು ಶಾಸನ ಕವಿಯಾಗಿರ ಬಹುದು.

ಶಾಸನದ ಕೊನೆಯಲ್ಲಿ ಹೆಚ್ಚಿನ ಸ್ಥಳ ಉಳಿದರೆ ಕವಿಗಳು ಆತ್ಮ ಪ್ರಶಂಸೆ ಮಾಡಿ ಕೊಳ್ಳುತ್ತಿದ್ದುದು ಕುಕನೂರು ಶಾಸನದಿಂದ ಸ್ಪಷ್ಟವಾಗುತ್ತದೆ.

ಒಟ್ಟಿನಲ್ಲಿ ಶಾಸನಗಳಲ್ಲಿ ಕ್ವಚಿತ್ತಾಗಿ ಸಿಗುವ ಕವಿಗಳ ವಿವರಗಳನ್ನು ಸಂಗ್ರಹಿಸಿ ದರೆ, ಅವರ ಕೌಟುಂಬಿಕ ಸಂಬಂಧ, ಗುರುಶಿಷ್ಯ ಸಂಬಂಧ, ವೃತ್ತಿ ಮತ್ತು ಜಾತಿ ಗಳನ್ನು ಗುರುತಿಸಬಹುದು. ಅಲ್ಲದೆ ಒಬ್ಬೊಬ್ಬ ಕವಿ ಬರೆದ ಹಲವು ಶಾಸನಗಳನ್ನು ಮತ್ತು ಅವರ ಒಟ್ಟು ಸಾಹಿತ್ಯದ ಸಾಧನೆಯನ್ನು ಗುರುತಿಸಬಹುದು. ಆದರೆ ಹೀಗೆ ಮಾಡುವ ಭರದಲ್ಲಿ ಒಂದೇ ಹೆಸರಿನ ಬೇರೆ ಬೇರೆ ವ್ಯಕ್ತಿಗಳನ್ನು ಒಂದುಗೂಡಿಸುವ ಅಪಾಯವೂ ಉಂಟು. ಉದಾ :

"ಶ್ರೀ ಕಂದರ್ಪನ ಕಾವ್ಯಂ"
"ಚತುರ್ಭಾಷಾ ಕವಿ ಚಕ್ರವರ್ತಿ ಕವಿಕಂದರ್ಪಂ"[೪]

ಇವರಿಬ್ಬರೂ ಬೇರೆ ಬೇರೆ ಕಾಲಗಳಲ್ಲಿದ್ದ ಕವಿಗಳು. ಹೆಸರಿನ ಸಾಮ್ಯದಿಂದ ಜೊತೆಗೂಡಿಸಿದರೆ ಅಪಾರ್ಥವಾಗುತ್ತದೆ. ಇಂತಹ ಕೆಲ ತೊಂದರೆಗಳನ್ನು ನಿವಾರಿಸಿ ಕೊಂಡು ಅಧ್ಯಯನ ಮಾಡಿದರೆ, ಶಾಸನ ಕವಿಗಳ ಒಟ್ಟು ಸಾಧನೆ ವ್ಯಕ್ತವಾಗುತ್ತದೆ. ಹೀಗಾದಾಗ ಸಾಹಿತ್ಯದಂತೆ ಶಾಸನ ಕವಿಗಳಿಗೂ ಕನ್ನಡ ಕವಿಚರಿತ್ರೆಯಲ್ಲಿ ಸ್ಥಾನ ಸಿಕ್ಕಂತಾಗುತ್ತದೆ.

೧. HAS ೧೮ No. ೧, ಕುಕನೂರು ಕ್ರಿ. ಶ. ೧೦೦೫.
೨. ಶಾಸನ ಪರಿಚಯ ೫೩
೩. ಅದೇ ೨೨
೪. ಉದ್ಧೃತ: ಮಾರ್ಗ (ಸಂ. ೨), ಪು. ೨೨೦

ಧಾರ್ಮಿಕ :

ಶಾಸನಗಳನ್ನು ಧರ್ಮಗಳ ಹಿನ್ನೆಲೆಯಲ್ಲಿ ಬೌದ್ಧ, ಜೈನ, ವೀರಶೈವ, ವೈಷ್ಣವ ಎಂದು ವಿಂಗಡಿಸಬಹುದು. ರಾಯಚೂರು ಜಿಲ್ಲೆಯ ಶಾಸನಗಳು ತಿಳಿಸುವ ಈ ಧರ್ಮಗಳನ್ನು ಹೀಗೆ ವಿವರಿಸಬಹುದು.

ಬೌದ್ಧಧರ್ಮ : ಕರ್ನಾಟಕದಲ್ಲಿ ಬೌದ್ಧಧರ್ಮದ ಅತ್ಯಂತ ಪ್ರಾಚೀನ ಕುರುಹುಗಳೆಂದರೆ ಅಶೋಕನ ಶಾಸನಗಳು. ಆದರೆ ಇವು ಬೌದ್ಧಧರ್ಮ ಇಲ್ಲಿ ಪ್ರಬಲವಾಗಿತ್ತು ಎನ್ನುವುದಕ್ಕಿಂತ ಅಶೋಕನ ಸಾಮ್ರಾಜ್ಯವು ಇಲ್ಲಿಯವರೆಗೆ ಹಬ್ಬಿತ್ತು ಎಂಬುದಕ್ಕೆ ಸಾಕ್ಷಿಗಳಾಗಿವೆ. ರಾಯಚೂರು ಜಿಲ್ಲೆಯಲ್ಲಿ ಅಶೋಕನ ಮೂರು ಶಾಸನಗಳು ದೊರೆತಿವೆ. ಅವುಗಳ ವಿವರವನ್ನು ಹಿಂದೆಯೇ ಹೇಳಿದ್ದೇವೆ. ಹುಯೆನ್ ತ್ಸಾಂಗನ ಪ್ರಕಾರ ಕ್ರಿ. ಶ. ೭ ನೆಯ ಶತಮಾನದಲ್ಲಿ ಕೊಪ್ಪಳವು ಬೌದ್ಧ ಧರ್ಮದ ಕೇಂದ್ರವಾಗಿತ್ತು. ಅವನು ಅದನ್ನು 'ಕೊಂಕಿನ ಪುಲೊ' ಎಂದು ಕರೆದಿದ್ದಾನೆ.[೧] ರಾಯಚೂರಿನ ನೆರೆಹೊರೆಯ ಜಿಲ್ಲೆಗಳಾದ ವಿಜಾಪುರ (ಐಹೊಳೆ, ಚಿಕ್ಕಂಡಿ); ಧಾರವಾಡ (ಡಂಬಳ, ಲಕ್ಕುಂಡಿ, ಕೋಳಿವಾಡ); ಬೆಳಗಾವಿ (ತೇರದಾಳ); ಶಿವಮೊಗ್ಗ (ಶಿಕಾರಿಪುರ, ಬಳ್ಳಿಗಾವೆ); ಕಾರವಾರ (ತೊರ್ಕೆ)ಗಳಲ್ಲಿ ಬೌದ್ಧ ಧರ್ಮದ ಕುರುಹುಗಳು ಸಿಕ್ಕುತ್ತವೆ.[೨] ಚತುಸ್ಸಮಯಗಳಲ್ಲಿ ಬೌದ್ಧಧರ್ಮ ಒಂದಾಗಿದ್ದರೂ ಅದು ಕರ್ನಾಟಕದಲ್ಲಿ ಎಂದೂ ಒಂದು ಪ್ರಬಲ ಧರ್ಮವಾಗಿರಲಿಲ್ಲ. ಬೌದ್ಧಧರ್ಮದ ಉಲ್ಲೇಖವುಳ್ಳ ಕೊಪ್ಪಳವೂ ಮುಂದೆ ಜೈನಧರ್ಮದ ಕೇಂದ್ರವಾಯಿತು.

ಜೈನಧರ್ಮ : ಕರ್ನಾಟಕದ ಪ್ರಬಲ ಧರ್ಮಗಳಲ್ಲಿ ಜೈನಧರ್ಮವೂ ಒಂದು ಅದು ಕ್ರಿ. ಪೂ. 3 ನೆಯ ಶತಮಾನಕ್ಕೂ ಮೊದಲಿನಿಂದಲೇ ಇಲ್ಲಿ ನೆಲೆಗೊಂಡಿದೆ. ಆರಂಭದಲ್ಲಿ ಇವರು ಬೆಟ್ಟ-ಗುಡ್ಡಗಳಲ್ಲಿ ತಮ್ಮ ಕೇಂದ್ರಗಳನ್ನು ಸ್ಥಾಪಿಸಿಕೊಂಡರು. ಕರ್ನಾಟಕದಲ್ಲಿ ಅವರು ಆರಿಸಿಕೊಂಡ ಎರಡು ಸ್ಥಳಗಳೆಂದರೆ ಉತ್ತರ ಕರ್ನಾಟಕದಲ್ಲಿ 'ಕೊಪ್ಪಳ', ದಕ್ಷಿಣ ಕರ್ನಾಟಕದಲ್ಲಿ 'ಶ್ರವಣಬೆಳಗೊಳ'.

ಕೊಪ್ಪಳವು ಕವಿರಾಜಮಾರ್ಗ ಹೇಳುವಂತೆ ತಿರುಳ್ಗನ್ನಡದ ಕೇಂದ್ರಗಳಲ್ಲಿ ಒಂದಾಗಿದ್ದಿತು. ಕ್ರಿ. ಶ. ೬೦೦ ರ ಹಲಗೇರಿ ಶಾಸನವು[೩] ಬಹಳ ಪ್ರಾಚೀನವಾಗಿಯೇ ಅದು ಜೈನ ಧರ್ಮದ ಕೇಂದ್ರವಾಗಿದ್ದಿತ್ತೆಂದು ಹೇಳುತ್ತದೆ. ಶ್ರವಣ ಬೆಳ

---

೧. ಉದ್ಧೃತ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಎಂ. ಚಿದಾನಂದಮೂರ್ತಿ, ಪು ೧೧೪

೨. ವಿವರಗಳಿಗೆ ನೋಡಿ: ಅದೇ ಪು. ೧೧೪-೧೮

೩. EC II No. ೧

ಗೊಳದ ಶಾಸನಗಳು[೧] ಅದನ್ನು 'ಆದಿತೀರ್ಥ', 'ಮಹಾತೀರ್ಥ' ಎಂದು ಕರೆದಿವೆ. ಕೊಪ್ಪಳದಲ್ಲಿ ಅನೇಕ ಜೈನ ಶಾಸನಗಳು ದೊರೆತಿವೆ. ಒಂದು ಶಾಸನ ಕೇವಲ "ಓಂ ಜಿನ ಬಿಂಬಾಯ ನಮಃ" ಎಂದು ಹೇಳಿದೆ.[೨]

ಜೈನ ಯತಿಗಳು ಪಂಡಿತರಾಗಿದ್ದು ಶಿಕ್ಷಣವನ್ನು ಕೊಡುವ ಗುರುಗಳೂ ಆಗಿದ್ದರು. ಸರ್ವನಂದಿಯು "ಅನವರತ ಶಾಸ್ತ್ರದಾನ ಪ್ರವಿಮಲ ಚಾರಿತ್ರ"ರಾಗಿದ್ದರೆಂದು ಒಂದು ಶಾಸನ[೩] ಹೇಳುತ್ತದೆ. ಜೈನರಲ್ಲಿ ಅಪಾರ ವಿದ್ವತ್ತು ಬೆಳೆಯಲು ಪ್ರಚಾರವಾಗಲು ಅವರ ಈ ಶಾಸ್ತ್ರದಾನವೇ ಕಾರಣವಾಗಿದೆ.

ಕೊಪ್ಪಳದಲ್ಲಿ ಮೂಲಸಂಘದ ಬಲಾತ್ಕಾರಗಣದ ಬಸದಿಯೊಂದಿದ್ದಂತೆ ಶಾಸನ[೪]ದಲ್ಲಿ ಹೇಳಿದೆ. ಇಲ್ಲಿಯ ಒಂದು ಶಾಸನ[೫]ದಲ್ಲಿ ಬಸದಿಯೊಂದನ್ನು ಕಟ್ಟಿಸಿದ ಉಲ್ಲೇಖವಿದ್ದರೆ, ಮತ್ತೊಂದರಲ್ಲಿ ಕೇವಲ "ಮುಕ್ಕೊಡೆಯ ಕಲ್........ ಗೋಪುರ ಪುರಃ ಸ್ಥಾಪಿತಚ್ಛತ್ರತ್ರಯ"ಗಳ ಪ್ರಸ್ತಾಪವಿದೆ.[೬] ಇಂತಹ ಬಸದಿಗಳಿಗೆ ಜನರು ದತ್ತಿ ಬಿಡುತ್ತಿದ್ದರು. ಕ್ರಿ. ಶ. ೯೬೫ ರ ಉಪ್ಪಿನ ಬೆಟಗೇರಿ ಶಾಸನವು[೭] ಮಹಾ ಸಾಮನ್ತಾಧಿಪತಿ ಶಂಕರ ಗಣ್ಡರಸನು ಕೊಪಣದಲ್ಲಿ ತಾನು ಮಾಡಿಸಿದ ಜಯಧೀರ ಜಿನಾಲಯದ ತಳವೃತ್ತಿಗೆ ಚಕ್ರವರ್ತಿ ೩ ನೆಯ ಕೃಷ್ಣನಿಂದ ಭೂಮಿಯನ್ನು ಪಡೆದು, ನಾಗನಂದಿ ಪಂಡಿತ ಭಟಾರರಿಗೆ ಬಿಡುತ್ತಾನೆ. ಅಲ್ಲದೆ "ಸುಹಾದ್ರಿ ಮೂಲ ಸಂಘ ದೇಶಿಯ ಗಣ ....ಚಿಂತಾಮಣಿ ಸಜ್ಜನಜನ ಚೂಡಾಮಣಿ"ಗೆ ನಾಯಕಿತಿ (ಹೆಸರು ಇಲ್ಲ) "ಪಾರ್ಶ್ವನಾಥ ಜೈತ್ಯ (ದ್ವ)ಯಮನೆತ್ತಿಸಿಯಾ ಸ್ಥಾನಮಂ ತಮ್ಮಗೆ........ಮಾಡಿಸಿಬಿಟ್ಟ" ಉಲ್ಲೇಖವಿದೆ.[೮]

ಮಸ್ಕಿಯ ಶಾಸನ[೯]ದಲ್ಲಿ "ದೊರೆವ(ಡಿ)ಯಜಿ ರೇವಣಯ್ಯನಾಣತಿಯಿಂ ಬೆಸವೋಜನು ಮಾಡಿಸಿದ ಬಸದಿಯ ಭೋಗಕ್ಕೆ" ಅಲ್ಲಿಯ ಸಮಸ್ತ ಪ್ರಧಾನರು ದತ್ತಿ ಬಿಡುತ್ತಾರೆ. ಅದೇ ಊರಿನ ಮತ್ತೊಂದು ಶಾಸನದಲ್ಲಿ[೧೦] "ಅಷ್ಟೋಪವಾಸಿ ಕನಕಣನ್ದಿ ಬಳಾರಕರ ಪ್ರಾರ್ಥನೆ"ಯ ಮೇರೆಗೆ ಅಲ್ಲಿಯ ಸಮಸ್ತ ಪ್ರಧಾನರು "ದೇಸಿಯ

---

೧. ನೋಡಿ: ಪೂರ್ವೋಕ್ತ, ಚಿದಾನಂದ ಮೂರ್ತಿ
೨. ಶಾಸನ ಪರಿಚಯ ೧೦
೩. ಅದೇ ೧೨
೪. Jainism and some Jaina Epigraphs No. ೨೫. ಕ್ರಿ. ಶ. ೧೧೦೦
೫. ಶಾಸನ ಪರಿಚಯ ೧೬
೬. ಅದೇ ೧೭
೭. ಅದೇ ೫
೮. ಅದೇ ೩೩ ಯಲಬುರ್ಗಿ
೯. HAS ೧೮. No. ೩. ಕ್ರಿ. ಶ. ೧೦೨೭
೧೦. ಅದೇ No. ೪. ಕ್ರಿ. ಶ. ೧೦೩೨

ಗಣದ ಶ್ರೀಜಗದೇಕಮಲ್ಲ ಜಿನಾಲಯದ ಭೋಗಕ್ಕೆ" ದತ್ತಿ ಬಿಟ್ಟ ಉಲ್ಲೇಖವಿದೆ. ಇದಲ್ಲದೆ ಕೊಪ್ಪಳದ ಕ್ರಿ. ಶ. ೧೩ ನೆಯ ಶತಮಾನದ ಶಾಸನ[೧]ದಲ್ಲಿ "ಶ್ರೀ ಮದ್ಭಾಗ್ಗಾರಾದೇವಿಯರ ಹಡಪದ x x (ಲಖ್ಖಾ)ರ್ಯ x x ಸಾಂತಲದೇವಿಯರ ಬಸದಿಗೆ ಚಿಕ್ಕೊಡಿಯ ಹೊಲದಲ್ಲಿ" ದತ್ತಿ ಬಿಟ್ಟುದನ್ನು ಹೇಳಲಾಗಿದೆ.

ಸಮಾಧಿ ಮರಣ : ಜೈನ ಯತಿಗಳು ಸಲ್ಲೇಖನ ಮರಣವನ್ನಪ್ಪುತ್ತಿದ್ದರು. ಕೊಪ್ಪಳದ ಶಾಸನದಲ್ಲಿ[೨] ಇದರ ಉಲ್ಲೇಖ ಹೀಗಿದೆ : "ಕುಣ್ಡಕುನ್ದಾನ್ವಯದ ಏಕ ಚಟ್ಟುಗದ ಭಟಾರರ ಶಿಷ್ಯರ್ ಶ್ರೀ ಸರ್ವ್ವೇನಂದಿ ಭಟಾರರಿಬ್ಬು ಊರ್ಗ್ಗನ್ತೀರ್ಥಕದುಪಕಾರಿಗಳಾಗಿ ಫಲಕಾಲನ್ತಪಂಗೆಯ್ದು ಸನ್ಯಾಸನನ್ನೋನ್ತು ಮುಡಿಪಿದರ್"

ಹೀಗೆ ಜೈನ ಯತಿಗಳು ಮಡಿದಾಗ ಅವರ ಸ್ಮಾರಕವಾಗಿ ನಿಶಧಿಗಲ್ಲುಗಳನ್ನು ನಿಲ್ಲಿಸುತ್ತಿದ್ದರು.

> "ಶ್ರೀ ಕೊಪಣದ ಚಂದ್ರಸೇನದೇವರ ಗುಡ್ಡ ಗುರುಗಳ
> ಭಂಡ [ಪ್ಪ] ನ ನಿಸಿದಿ"[೩]

ಇವು ಬಸದಿಗಳ ಮುಂದಿನ ಪ್ರತ್ಯೇಕ ಶಿಲಾಫಲಕಗಳಲ್ಲಿ, ಬಸದಿಯ ಕಂಬಗಳ ಮೇಲೆ, ಊರ ಹೊರಗಿನ ಹೊಲಗಳಲ್ಲಿ ನೆಟ್ಟ ಕಲ್ಲುಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಸನ್ಯಾಸದ ವಿಷಯವನ್ನು ಮಾತ್ರ ಹೇಳಬಹುದು. ಇಲ್ಲವೆ ಅದರೊಂದಿಗೆ ಸನ್ಯಾಸವನ್ನು ಸ್ವೀಕರಿಸಿದ ವ್ಯಕ್ತಿಯ ಚಿತ್ರವೂ ಇರಬಹುದು.

> "ಜಟಾಸಿಂಗನಂದಿ ಆಚಾರ್ಯರ (ನಿಸಿದಿ) ಮಹಾದೇವ
> ಮಚಯ್ಯಂ ಮಾಡಿಸಿದಂ"[೪]
> "ಶ್ರೀ ಮೂಲಸಂ[ಘ]ದ ಬಲಕರ ಗಣದ ಪುಷ್ಪದಂತ ತೀರ್ಥಂಕರ
> ಸೌದದಲ್ಲಿ ಬೊಂಮಿಸ ಮಗ ಸಾಂಸಜ ಮಾಡಿದ ಪ್ರತಿಮೆ"[೫]

ನಿಶಿಧಿಗಳು ಸತ್ತವರಿಗಾಗಿ ಕಟ್ಟಿಸಿದ ಸ್ಮಾರಕಗಳಲ್ಲ. ವೀರಗಲ್ಲುಗಳಂತೆ ಇವನ್ನು ಪರೋಕ್ಷವಿನಯಕ್ಕಾಗಿ ನಿಲ್ಲಿಸುತ್ತಿದ್ದರು. ಈ ನಿಶಿಧಿಗಳು 'ತೀರ್ಥಕ್ಷೇತ್ರ'ಗಳಂತೆ ಪವಿತ್ರಪ್ರದೇಶಗಳಾಗಿದ್ದವು. ಇದು ಈ ಜಿಲ್ಲೆಯ ಜೈನಧರ್ಮದ ಸ್ಥೂಲ ಪರಿಚಯ.

ವೀರಶೈವಧರ್ಮ : ವೀರಶೈವಕ್ಕೆ ಮುನ್ನ ಕನ್ನಡ ನಾಡಿನಲ್ಲಿ ಜೈನರನ್ನು ಬಿಟ್ಟರೆ ಶೈವರೇ ಅತ್ಯಂತ ಪ್ರಬಲರಾಗಿದ್ದರು. ಶೈವರಲ್ಲಿ ಕಾಳಾಮುಖ ಶಾಖೆಯೇ

---

೧. ಶಾಸನ ಪರಿಚಯ ೧೮
೨. ಅದೇ ೧೨
೩. ಅದೇ ೧೧
೪. ಅದೇ ೧೪
೫. ಅದೇ ೧೫

ಸತ್ವಪೂರ್ಣವಾಗಿತ್ತು. ರಾಯಚೂರು ಜಿಲ್ಲೆಯ ಶಾಸನಗಳಲ್ಲಿಯೂ ಇವರ ಉಲ್ಲೇಖಗಳಿವೆ. ಕ್ರಿ. ಶ. ೧೧೯೮ ರ ಕಲ್ಲೂರು ಶಾಸನವು[೧] "ಕಾಳಾಮುಖ ಶಿವಶಕ್ತಿ ಪಂಡಿತರ ಕಾಲಂಕರ್ಚ್ಚಿ" ದತ್ತಿ ಬಿಟ್ಟುದನ್ನು ಹೇಳುತ್ತದೆ. ಅದೇ ಶಾಸನವು ಕ್ರಿ. ಶ. ೧೧೨೫ ರಲ್ಲಿ ಬಾದಾಮಿಯ ಬಮ್ಮದೇವಯ್ಯ ನಾಯಕನು ದೇವರ ಚೈತ್ರ ಪವಿತ್ರಕ್ಕೆಂದು ತನ್ನ ಆಳ್ವಿಕೆಯ ಹೆಜ್ಜುಂಕವನ್ನು ವಡ್ಡರಾವುಳ ಸಹಿತವಾಗಿ ರುದ್ರಶಕ್ತಿಪಂಡಿತರಿಗೆ ಬಿಟ್ಟುದನ್ನು ಹೇಳುತ್ತದೆ.

ಕುಕನೂರಿನ ಶಾಸನ[೨] ಅಲ್ಲಿಯ ಪುಣ್ಯಮಠದ ಮನ್ನೆಯವಳಿಯ ತಪೋಧನರಾದ ಸೋಮೇಶ್ವರ ಮುದಿಪಣ್ಣನ ವಿದ್ವತ್ತು, ಗುಣವಿಶೇಷಗಳನ್ನು ವಿಸ್ತಾರವಾಗಿ ಹೇಳುತ್ತದೆ. ಇವರು "ಬೌದ್ಧಕೆಯ್ದಿ x x x x ಪ್ರಕಟಮಾಡಿ ಗಾಖ್ಯಮತಮಂ ನಿರ್ಮೂಳನಂಗೆಯ್ದು" ರಂತೆ. ಮುಂದೆ ಇವರ ಶಿಷ್ಯರಿಗೂ ದತ್ತಿ ಬಿಟ್ಟುದನ್ನು ಶಾಸನ ಹೇಳಿದೆ. ಕುಕನೂರಿನ ಜೇಷ್ಠಾದೇವಿಯನ್ನು ಶಾಸನ[೩]ವೊಂದು ಕಾವ್ಯಾತ್ಮಕವಾಗಿ, ದೀರ್ಘವಾಗಿ ವರ್ಣಿಸುತ್ತದೆ. ಈ ಜೇಷ್ಠಾದೇವಿಯ ಸ್ಥಾನಾಚಾರ್ಯತ್ವವನ್ನು, ಅಲ್ಲಿಯ ಸೋಮೇಶ್ವರ ನವಮಠಾಚಾರ್ಯತ್ವವನ್ನು ಯಲಬುರ್ಗಿಯ ಮೂಲಸ್ಥಾನದ ಸಿಂಗೇಶ, ರಾಚೇಶ, ಚೌಂಡೇಶ, ವಿಕ್ರಮೇಶ್ವರ ದೇವಾಲಯಗಳ ಮಠಾಚಾರ್ಯತ್ವವನ್ನು ಸಿಂದರ ಗುರುಗಳಾಗಿದ್ದ ಕಳೇಶ್ವರ ಸಿದ್ಧಾಂತಿಕ ರಾಜಗುರುಗಳು ಪಡೆದಿದ್ದರು. ಕಾಳಾಮುಖ ಅನ್ವಯರೂ ಮನ್ಯಾವಳಿಯವರೂ ಆದ ಇವರ ಶಿಷ್ಯಪರಂಪರೆ ಶಾಸನದಲ್ಲಿ ಹೀಗೆ ಬಂದಿದೆ :

ಸೋಮೇಶ್ವರಚಾರ್ಯ

ವಿಗ್ರಹೇಶ್ವರ ಬುಧರು

ರುದ್ರೈದುಗ್ಗಣಾಕರ ಯೋಗೇಶ್ವರದೇವರು

ಕಳೇಶ್ವರ ಸಿದ್ಧಾಂತಿ ರಾಜರುಗಳು

ಇವರ ವ್ಯಕ್ತಿತ್ವವನ್ನು ಸುದೀರ್ಘವಾಗಿ ವರ್ಣಿಸುತ್ತ ಇವರು "ಅನೇಕ ತರ್ಕ ವ್ಯಾಕರಣಪುರಾಣಕಾಬ್ಯನಾಟಕನಾಟಿಕಾ ಭರತ ವಾತ್ಸಾಯನಾದಿ"ಗಳಲ್ಲಿ ಪಾರಂಗತರಾಗಿದ್ದರೆಂದು ಶಾಸನವು ಹೇಳುತ್ತದೆ.

ಮುಂದೆ ಕಲ್ಯಾಣದ ಬಸವಣ್ಣನವರ ಕ್ರಾಂತಿಯ ಪರಿಣಾಮವಾಗಿ ಕರ್ನಾಟಕದ ಅನೇಕ ಕಾಳಾಮುಖ ಮಠಗಳು ವೀರಶೈವ ಮಠಗಳಾಗಿ ಪರಿವರ್ತಿತವಾದವು. ಶರಣರು ದೇವಾಲಯ ಮತ್ತು ಮಠಗಳನ್ನು ತಿರಸ್ಕರಿಸಿದರೂ ಇವರು ಅದನ್ನು ಮುಂದುವರಿಸಿ

೧. ಶಾಸನ ಪರಿಚಯ ೩೭

೨. ಅದೇ ೫೨

೩. ಅದೇ ೫೩

ಕೊಂಡು ಹೋದರು. ಇದಕ್ಕೆ ಸ್ಪಷ್ಟ ನಿದರ್ಶನಗಳೆಂದರೆ ಶಂಕರ ದಾಸಿಮಯ್ಯ, ಜೇಡರ ದಾಸಿಮಯ್ಯ ಮತ್ತು ಹುಳಿಯುಮೇಶ್ವರ ಚಿಕ್ಕಯ್ಯರು. ಈ ಮೂವರೂ ಕ್ರಮವಾಗಿ ನವಿಲೆ(ಲಿಂಗಸ್ಗೂರು ತಾಲೂಕು), ಗಬ್ಬೂರು (ದೇವದುರ್ಗ ತಾಲೂಕು), ದೇವರಗುಡಿ (ಸಿಂಧನೂರು ತಾಲೂಕು) ಯ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದಾರೆ. ಈ ಮೂವರೂ ವಚನಕಾರರಾಗಿದ್ದಾರೆ. ಇವರಲ್ಲಿ ಚಿಕ್ಕಯ್ಯನು ದೇವರಗುಡಿಯ ಹುಳಿಯುಮೇಶ್ವರ ದೇವಾಲಯದ ಸ್ಥಾನಾಚಾರ್ಯನಾಗಿದ್ದನೆಂದು ಅಲ್ಲಿಯ ಶಾಸನಗಳಲ್ಲಿ ಹೇಳಲಾಗಿದೆ.[೧] ಈತನು ಬಸವಾದಿಗಳ ನಂತರದಲ್ಲಿಯೂ ಬದುಕಿದ್ದನೆಂಬುದು ಅಲ್ಲಿಯ ಮತ್ತೊಂದು ಶಾಸನದಿಂದ ಗೊತ್ತಾಗುತ್ತದೆ.[೨] ಶಂಕರ ದಾಸಿಮಯ್ಯನು ಕಂಡಗಲ್ಲದಿಂದ ನವಿಲೆಯಲ್ಲಿ ಒಂದು ನೆಲೆ ನಿಂತವನು. ಅಲ್ಲಿಯ ಜಡೆಯ ಶಂಕರನನ್ನು ತನ್ನ ಆರಾಧ್ಯದೈವವನ್ನಾಗಿಸಿಕೊಂಡ ಈತನ ಉಲ್ಲೇಖ ಅಲ್ಲಿಯ ಶಾಸನದಲ್ಲಿದೆ. ಕ್ರಿ. ಶ. ೧೧೪೮ ರ ಗಬ್ಬೂರ ಶಾಸನದಲ್ಲಿ[೩] "ಜಾಡಕುಲತಿಲಕ ಜಾಡದಾಸಿಮಯ್ಯ ಪ್ರಿಯಪುತ್ರಮಪ್ಪ ಸಕಳ ಜಾಡಗೊತ್ತ್ರಳಿಗಳು" ಎಂದು ಹೇಳುತ್ತ, ಜೇಡರ ದಾಸಿಮಯ್ಯನನ್ನು ಹೆಸರಿಸಲಾಗಿದೆ.

ಒಟ್ಟಿನಲ್ಲಿ ವಚನಕಾರರಾದ ಇವರು ದೇವಾಲಯಗಳಿಗೆ ದತ್ತಿಯನ್ನು ಬಿಡುವಾಗ ಉಲ್ಲೇಖಗೊಂಡಿದ್ದಾರೆ. ಪ್ರಾಚೀನ ಕಾಳಾಮುಖ ಶೈವಮಠಗಳೇ ವೀರಶೈವ ಮಠಗಳಾದವೆಂಬುದಕ್ಕೆ ಚಿಕ್ಕಯ್ಯನ ವಿವರಣೆ ಸ್ಪಷ್ಟವಾದ ಸಾಕ್ಷಿಯಾಗಿದೆ.

ವೈಷ್ಣವ ಧರ್ಮ : ಶೈವ ಧರ್ಮದಂತೆ ವೈಷ್ಣವ ಧರ್ಮದ ಉಲ್ಲೇಖವೂ ಇಲ್ಲಿಯ ಶಾಸನಗಳಲ್ಲಿದೆ. ವಿಷ್ಣುವಿನ ಸ್ತುತಿಯನ್ನು ಕುಕನೂರ ಶಾಸನ[೪]

"ಜಯತ್ಯಾವಿಷ್ಕೃತಂ ವಿಷ್ಣೋರ್ವಾರಾಹಂ ಕ್ಷೋಭಿತಾರ್ಣವಂ ||
ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾಂತ ಭುವನಂ ವಪುಃ"||

ಎಂದು ಹೇಳಿದೆ. ಇದಲ್ಲದೆ ಗಬ್ಬೂರ ಶಾಸನದಲ್ಲಿಯೂ ವಿಷ್ಣುವಿನ ಸ್ತುತಿಯಿದೆ. ಆದರೆ ಶೈವದಂತೆ ವೈಷ್ಣವ ಶಾಸನಗಳು ಇಷ್ಟು ಹೆಚ್ಚಾಗಿಲ್ಲ. ಅಗ್ರಹಾರಗಳ ಬ್ರಾಹ್ಮಣರು ವೈಷ್ಣವರಾಗಿದ್ದಾರೆ. ಅವರನ್ನು ಇಲ್ಲಿಯ ಶಾಸನಗಳು ನಾನಾ ರೀತಿಯಿಂದ ವರ್ಣಿಸಿವೆ. ಅಲ್ಲದೆ "ಶ್ರೀಪತಿ ನಾಯಕರ ಬ್ರಾಹ್ಮಣಿ ಚಾಮಿಕವ್ವೆಗಳು" ಎಂದು

---

೧. ಅಪ್ರಕಟಿತ, B. No. ೯೮/೧೯೮೫-೮೬ ದೇವರಗುಡಿ, ಸಿಂಧನೂರ (ತಾ)

೨. ಅಪ್ರಕಟಿತ, B. No. ೧೦೦/೮೫-೮೬ ದೇವರಗುಡಿ

೩. ಕನ್ನಡ ಸಾಹಿತ್ಯ ಚರಿತ್ರೆ ಸಂ. ೪, ಮೈಸೂರು, ೧೯೭೭, ಪು ೩೮೮

೪. ಶಾಸನ ಪರಿಚಯ ೪೯, ೫೦

ಮತ್ತೊಂದು ಶಾಸನದಲ್ಲಿ[೧] ಹೇಳಲಾಗಿದೆ. ಇಲ್ಲಿಯ ಶಾಸನಗಳಲ್ಲಿ ಶೈವ-ವೈಷ್ಣವ ಸ್ತುತಿಗಳೆರಡೂ ಒಟ್ಟಿಗೆ ಬಂದಿವೆ.[೨] ಇದು ಸರ್ವಧರ್ಮಸಮನ್ವಯದ ಸಂಕೇತವಾಗಿದೆ.

ಒಟ್ಟಿನಲ್ಲಿ ರಾಯಚೂರ ಜಿಲ್ಲೆಯ ಶಾಸನಗಳು ವಿಷಯ, ಗಾತ್ರ, ನಿರೂಪಣೆ, ಸತ್ವ, ಸಂಖ್ಯೆ ಮುಂತಾದವವುಗಳಿಂದ ತುಂಬಿಕೊಂಡಿವೆ. ಆದರೆ ಇಲ್ಲಿ ಈವರೆಗೆ ಆಗಿರುವ ಪ್ರತಿಶತ ೬೦ ರಷ್ಟು ಕಾರ್ಯ ಪೂರ್ಣವಾಗಿ ಬೆಳಕುಕಂಡಿಲ್ಲ. ಇನ್ನೂ ಸಾಕಷ್ಟು ಕೆಲಸ ಇಲ್ಲಿ ನಡೆಯಬೇಕಾಗಿದೆ. ಸಾಮಂತರ ಆಡಳಿತ, ಗ್ರಾಮಗಳ ಆಡಳಿತ, ಸಾಮಾನ್ಯಜನರ ಜೀವನ, ಆರ್ಥಿಕ, ಸಾಮಾಜಿಕ ಜೀವನ, ಸ್ತ್ರೀಯರ ಸ್ಥಿತಿಗತಿಗಳು, ಶಿಕ್ಷಣ ಪದ್ಧತಿ, ಪಠ್ಯಕ್ರಮಗಳು ಸುಂಕ ಸಂಗ್ರಹಣೆಯ ರೀತಿ, ತೂಕ ಅಳತೆಯ ವಿಧಾನಗಳು, ವೀರಗಲ್ಲು-ಮಾಸ್ತಿಕಲ್ಲುಗಳ ಸಮಗ್ರ ಅಧ್ಯಯನ ಮುಂತಾದ ಕಾರ್ಯ ನಡೆಯಬೇಕಾಗಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಹೆಚ್ಚಿನ ಶಾಸನಗಳು ಸಂಗ್ರಹಗೊಂಡು ಪ್ರಕಟಗೊಳ್ಳಬೇಕಾಗಿದೆ. ಅಂದಾಗ ಮಾತ್ರ ಜಿಲ್ಲೆಯ ಇತಿಹಾಸದ ಸಮಗ್ರ ಚಿತ್ರಣ ಸಿಗುತ್ತದೆ. ಆ ಮಾರ್ಗದಲ್ಲಿ ಇದೊಂದು ಚಿಕ್ಕ ಪ್ರಯತ್ನವಾಗಿದೆ.

**

೧. ಶಾಸನ ಪರಿಚಯ ೪೭

೨. ಅದೇ ೩೧, ೪೯, ೫೦, ೬

HAS ೧೮. No. ೧೨, ೧೭, etc.

ಔದ್ಯೋಗಿಕ ಕಾರ್ಮಿಕರಿಗಾಗಿ ಜನಸಂಖ್ಯಾಶಿಕ್ಷಣ

– ಪಿ. ಎಸ್. ಹಳ್ಯಾಳ

ಪ್ರತಿಯೊಂದು ಸುಧಾರಿಸಿದ ಸಮಾಜದಲ್ಲಿ ಸಮುದಾಯದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ವೈಜ್ಞಾನಿಕ ಮತ್ತು ತಾಂತ್ರಿಕಜ್ಞಾನವನ್ನು ವಿಪುಲವಾಗಿ ಬಳಸಿಕೊಳ್ಳಬೇಕಾಗುತ್ತದೆ. ಅಂದಾಗ ಮಾತ್ರ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯತ್ತ ದಾಪುಗಾಲು ಹಾಕಲು ಸಾಧ್ಯವಾಗುತ್ತದೆ. ಆದರೆ ಬೆಳೆಯುತ್ತಿರುವ ಮಕ್ಕಳ ಸಂಖ್ಯೆ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿದೆಯೆಂಬ ಕೆಲವರ ಅಭಿಪ್ರಾಯವನ್ನು ಒಪ್ಪಲೇಬೇಕು. ಇಂದು ಭಾರತ ದೇಶದಲ್ಲಿ ಮೂಲಭೂತ ಅವಶ್ಯಕತೆಗಳ ಪೂರೈಕೆಯಾಗದೆ ಹೆಚ್ಚು ಹೆಚ್ಚು ಜನರು ಬಡತನಕ್ಕಿಂತಲೂ ಕೀಳುಮಟ್ಟದಲ್ಲಿ ಬದುಕುತ್ತಿದ್ದಾರೆಂದು ಹೇಳಲಾಗುತ್ತಿದೆ. ಹೆಚ್ಚುತ್ತಿರುವ ಬಡತನ, ಅನಕ್ಷರತೆ, ನಿರುದ್ಯೋಗ, ಸಮರ್ಪಕವಲ್ಲದ ಆರೋಗ್ಯ ಸೌಲಭ್ಯ, ಅಪೌಷ್ಟಿಕತೆ ಮತ್ತು ಕುಂದುತ್ತಿರುವ ಔದ್ಯೋಗಿಕ ಉತ್ಪತ್ತಿ ಈ ಕೆಲವು ಸಮಸ್ಯೆಗಳು ಹೆಚ್ಚುತ್ತಿರುವ ಜನಸಂಖ್ಯೆಯಿಂದ ಉದ್ಭವಿಸಿದವುಗಳೆಂದು ಹೇಳಲಾಗುತ್ತಿದೆ.

ಸಾವಿರಾರು ವರ್ಷಗಳಿಂದ ಪ್ರಕೃತಿಯ ಪ್ರಕೋಪಗಳ ವಿರುದ್ಧ ಹೋರಾಡಿ ಪ್ರಯತ್ನಪೂರ್ವಕವಾಗಿ ತನ್ನ ಸಂತಾನವನ್ನು ವೃದ್ಧಿಪಡಿಸಿಕೊಂಡ ಮಾನವನಿಗೆ ಇಂದು ಬೆಳೆದುನಿಂತ ತನ್ನ ಸಂಖ್ಯೆಯೇ ಸಮಸ್ಯೆಯಾಗಿದೆ. ಯಾವುದೇ ದೇಶದ ಬೆಳವಣಿಗೆಯು ಆ ದೇಶದ ನೈಸರ್ಗಿಕ ಸಂಪನ್ಮೂಲ ಮತ್ತು ಮಾನವಶಕ್ತಿಯನ್ನು ಅವಲಂಬಿಸಿದೆ. ಹವಣಿಯಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಮಾನವ ಜನಾಂಗ ಮುಂದುವರೆಯುವದು ಸ್ವಾಭಾವಿಕ. ಆದರೆ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ಬೇಕಾಗಿರುವ ದೈಹಿಕ ಮತ್ತು ಮನೋವೈಜ್ಞಾನಿಕ ಗುಣಧರ್ಮಗಳು ಜನತೆಯಲ್ಲಿ ಬೆಳೆದುಬರದೇ ಇದ್ದಾಗ ಆ ಸಮಾಜ ಒಂದು ಶಾಪವಾಗಿ ಪರಿಣಮಿಸಬಹುದು, ಯಾಕೆಂದರೆ ಬೆಳೆಯುತ್ತಿರುವ ಜನಸಂಖ್ಯೆಗೆ, ಜನತೆಯನ್ನು ಪ್ರಗತಿಯತ್ತ ಕೊಂಡೊಯ್ಯಲು ಬೇಕಾಗಿರುವ ನೈಪುಣ್ಯತೆ ಮತ್ತು ಮನೋಧರ್ಮವನ್ನು ಮೈಗೂಡಿಸುವ ಶಿಕ್ಷಣದ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗದೆ ಇರಬಹುದು.

ಒಂದಾನೊಂದು ಕಾಲದಲ್ಲಿ ಪ್ರಯತ್ನಪೂರ್ವಕವಾಗಿ ಸಂತಾನಾಭಿವೃದ್ಧಿ ಮಾಡಿಕೊಳ್ಳುವ ಉದ್ದೇಶದಿಂದ ನಿರ್ಮಿತವಾದ ಅನೇಕ ಕಟ್ಟಳೆಗಳು, ಅನುಸರಿಸಿದ ವಿಧಾನಗಳು ಹಾಗೂ ಮೂಢನಂಬಿಕೆಗಳು ಇಂದಿಗೂ ಪರಿಣಾಮಕಾರಿಯಾಗಿ ಜೀವಂತವಾಗಿವೆ.

ಸಾಮೂಹಿಕ ವಿವಾಹ, ಬಾಲ್ಯವಿವಾಹ, ಬಂಜೆತನದ ಭಯ, ಗಂಡುಸಂತಾನದ ವ್ಯಾಮೋಹ, ಪುರುಷ ಪ್ರಾಧಾನ್ಯತೆ ಮತ್ತು ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಅಸಡ್ಡೆ ಈ ಕೆಲವು ಸಮಸ್ಯೆಗಳು ಸಾಮಾಜಿಕವಾಗಿ ಸಾಕಷ್ಟು ಬೇರುಬಿಟ್ಟು ಜನಸಂಖ್ಯಾ ಬೆಳವಣಿಗೆಗೆ ಇಂದಿಗೂ ನೀರೆರೆಯುತ್ತಿವೆ.

ಮನುಷ್ಯನಲ್ಲಿ ಸಂತಾನಾಭಿವೃದ್ಧಿ ಕೇವಲ ಜೈವಿಕವಾಗಿರದೆ ಅದು ಸಾಮಾಜಿಕ ಮತ್ತು ಮನೋವೈಜ್ಞಾನಿಕ ಅವಶ್ಯಕತೆಗಳನ್ನು ಪ್ರತಿಬಿಂಬಿಸುತ್ತದೆ. ಸಾಮಾಜಿಕ ಮತ್ತು ಮನೋವೈಜ್ಞಾನಿಕ ಅವಶ್ಯಕತೆಗಳು ಅಂದಿನ ಪರಿಸರವನ್ನವಲಂಬಿಸಿವೆ. ಆದ್ದರಿಂದ ಅತಿಯಾಗಿ ಬೆಳೆಯುತ್ತಿರುವ ಕುಟುಂಬಗಳನ್ನು ಸಣ್ಣಕುಟುಂಬಗಳನ್ನಾಗಿ ಪರಿವರ್ತಿಸಲು ಅನುಕೂಲವಾಗುವಂತೆ ಸಾಮಾಜಿಕ ಮತ್ತು ಮನೋವೈಜ್ಞಾನಿಕ ಮೌಲ್ಯಗಳನ್ನು ರೂಪಿಸುವದು ಸಮಂಜಸ. ಈ ದಿಶೆಯಲ್ಲಿ ಯಾವುದೇ ಶಿಕ್ಷಣದ ಪಾತ್ರ ಮಹತ್ವದ್ದು.

ನಮ್ಮ ದೇಶದಲ್ಲಿ ಮದುವೆ, ಸಮಾಜದ ಒಂದು ಅವಿಭಾಜ್ಯ ಅಂಗ. ಆದ್ದರಿಂದ ಇದು ಎಲ್ಲರಿಗೂ ಅನಿವಾರ್ಯ. ಆದರೆ ಮದುವೆಯಾಗುವವ ಪಾಲಕನಾಗಿ ಹೊಣೆಗಾರಿಕೆಯನ್ನು ಹೊರುವ ಯೋಗ್ಯತೆಯನ್ನು ಪಡೆದಿದ್ದಾನೆಯೆ ? ಎಂಬುದು ಬಹಳ ಮುಖ್ಯವಾದುದು. ಇಂಥ ಹೊಣೆಗಾರಿಕೆ ಇಲ್ಲದೆ ಇದ್ದಾಗ ಮನುಷ್ಯ ಕೇವಲ ಮಕ್ಕಳನ್ನು ಹೆರುವ ಯಂತ್ರವಾಗುತ್ತಾನೆ.

ಜನಸಂಖ್ಯಾ ಸಮಸ್ಯೆಯನ್ನು ನಿಯಂತ್ರಿಸಲು ಭಾರತ ಸರಕಾರ ಮೊಟ್ಟ ಮೊದಲು 'ರಾಷ್ಟ್ರೀಯ ಕುಟುಂಬ ಯೋಜನಾ' ಕಾರ್ಯಕ್ರಮವನ್ನು ಘೋಷಿಸಿತು. ಅದರಂತೆ ಗರ್ಭ ನಿರೋಧಕಗಳ ಬಳಕೆಯೂ ಜಾರಿಯಲ್ಲಿ ಬಂದಿತು. ಆದರೆ ಇದು ಈ ಸಮಸ್ಯೆಗೆ ಸಂಪೂರ್ಣ ಪ್ರತಿಬಂಧಕವಾಗಿ ಕೆಲಸ ಪೂರೈಸುವಲ್ಲಿ ವಿಫಲವಾಯಿತು. ಯಾಕೆಂದರೆ ಕುಟುಂಬ ಯೋಜನೆಯನ್ನು ಅನುಸರಿಸಲು ಪೂರ್ವಭಾವಿಯಾಗಿ ಬೇಕಾಗಿರುವ ಮಾನಸಿಕ ಸಿದ್ಧತೆಯನ್ನು ನಿರ್ಮಿಸುವಲ್ಲಿ ಅಷ್ಟಾಗಿ ಯಶಸ್ವಿಯಾಗಲಿಲ್ಲ. ಜನಸಂಖ್ಯಾ ಬೆಳವಣಿಗೆಯ ಕಲ್ಪನೆಗಳನ್ನು ವ್ಯಕ್ತಿಗಳಲ್ಲಿ ಮೂಡಿಸಿ, ಅವರಲ್ಲಿ ಸಣ್ಣ ಕುಟುಂಬದ ಬಗ್ಗೆ ಉತ್ತಮ ಮನೋಭಾವನೆಯನ್ನು ಸೃಷ್ಟಿಸುವ ಹಾಗೂ ಸ್ವಯಂ ಪ್ರೇರಣೆಯಿಂದ ಸಣ್ಣಕುಟುಂಬವನ್ನು ಹೊಂದುವ ನಿರ್ಧಾರವನ್ನು ತೆಗೆದುಕೊಳ್ಳಲು ಸಹಾಯಕವಾಗುವ ಶೈಕ್ಷಣಿಕ ಕ್ರಮ ಅಗತ್ಯವೆಂದು ಮನವರಿಕೆಯಾಯಿತು. ಆದ್ದರಿಂದ ಜನಸಂಖ್ಯಾ ಶಿಕ್ಷಣ ಅನಿವಾರ್ಯವಾಗಿ ಹುಟ್ಟಿಕೊಂಡು ತೀವ್ರವಾಗಿ ಬೆಳೆಯುತ್ತಿದೆ. ಜನಸಂಖ್ಯೆಯ ನಿಯಂತ್ರಣಕ್ಕಾಗಿ ವ್ಯಕ್ತಿಗಳ ಮನೋಭಾವನೆಗಳಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಪ್ರಚೋದಿಸುವದೇ ಜನಸಂಖ್ಯಾ ಶಿಕ್ಷಣದ ಉದ್ದೇಶ. ಜನಸಂಖ್ಯಾ ಸಮಸ್ಯೆಗೆ ಪ್ರತಿಯೊಬ್ಬನೂ ಕಾರಣನಾಗಿರುವದರಿಂದ ಅವನಲ್ಲಿ 'ಜನಸಂಖ್ಯಾ ಪ್ರಜ್ಞೆ' ಮೊಳೆಯುವದೇ ಇವತ್ತಿನ ತುರ್ತು ಅಗತ್ಯವಾಗಿದೆ. ಇದೂ ಅಲ್ಲದೆ ಈ ಸಮಸ್ಯೆಯ ಪರಿಹಾರಕ್ಕೆ ತಾನೇ ಬದ್ಧನೆಂಬ ಜವಾಬ್ದಾರಿ ಮೂಡಿಬರಬೇಕಾಗುತ್ತದೆ. ಈ

ತರದ ಮಾನಸಿಕ ಮತ್ತು ಕ್ರಿಯಾತ್ಮಕ ಬದಲಾವಣೆ ತರುವಲ್ಲಿ ಜನಸಂಖ್ಯಾ ಶಿಕ್ಷಣ ಮುಂಚೂಣಿಯಲ್ಲಿದೆ. ಈ ದೃಷ್ಟಿಯಿಂದ ಜನತೆಗೆ ಕುಟುಂಬ, ಸಮಾಜ, ರಾಷ್ಟ್ರ ಹಾಗೂ ವಿಶ್ವದ ಜನಸಂಖ್ಯಾ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳಲು ನೆರವಾಗುವ ಒಂದು ಶೈಕ್ಷಣಿಕ ಕಾರ್ಯಕ್ರಮ ಜನಸಂಖ್ಯಾ ಶಿಕ್ಷಣವೆಂದು ಹೇಳಬಹುದು.

ಹೀಗೆ ಒಡಮೂಡಿದ ಆಂತರಿಕ ಬದಲಾವಣೆ ಸಣ್ಣ ಕುಟುಂಬ ಹೊಂದುವಲ್ಲಿ ಮತ್ತು ಪಾಲಕರ ಹೊಣೆಯನ್ನು ನಿರ್ವಹಿಸುವಲ್ಲಿ ಅಭಿವ್ಯಕ್ತಿಗೊಳ್ಳಬೇಕು. ಅಂದಾಗ ಮಾತ್ರ ಜನತೆಯ ಜೀವನಮಟ್ಟ ಸುಧಾರಿಸಲು ನಾಂದಿಯಾಗುತ್ತದೆ. ಇದು ದೇಶದ ಕೆಲವೇ ಪಾಲಕರಲ್ಲಿ ಒಡಮೂಡಿದರೆ ಮಾತ್ರ ಸಾಲದು. ಇಂದಿನ ಭಾರತದ ಮುಖ್ಯ ಗುಂಪಾದ ಔದ್ಯೋಗಿಕ ಕಾರ್ಮಿಕರನ್ನು ಒಳಗೊಂಡು ಎಲ್ಲರಲ್ಲಿಯೂ ಮೂಡಿಬರಬೇಕು.

ಇಂದು ನಮ್ಮ ದೇಶದಲ್ಲಿ, ೧೯೮೧ ರ ಜನಗಣತಿಯ ಪ್ರಕಾರ, ಸುಮಾರು ೩೩ ಕೋಟಿ ಜನ ಔದ್ಯೋಗಿಕ ಕಾರ್ಮಿಕರಿದ್ದಾರೆ. ಅವರಲ್ಲಿ ಸುಮಾರು ೧೮ ಕೋಟಿ ಜನ ಗಂಡಸರು ಮತ್ತು ೪ ೫ ಕೋಟಿ ಜನ ಹೆಂಗಸರಿದ್ದಾರೆ. ಸುಮಾರು ೩ ಕೋಟಿಯಷ್ಟು ಅರೆ ಕಾರ್ಮಿಕರಿದ್ದಾರೆ. ಒಟ್ಟಾರೆ ೧೮ ಕೋಟಿ ಪುರುಷಕಾರ್ಮಿಕರಲ್ಲಿ ಹನ್ನೊಂದುವರೆ ಕೋಟಿ ಕಾರ್ಮಿಕರು ೨೦ ರಿಂದ ೪೫ ವರ್ಷ ವಯಸ್ಸಿನವರಿದ್ದಾರೆ. ಅದರಂತೆ ಸುಮಾರು ೩ ಕೋಟಿ ಮಹಿಳಾ ಕಾರ್ಮಿಕರು ೧೫ ರಿಂದ ೫೦ ವರ್ಷ ವಯಸ್ಸಿನವರಿದ್ದಾರೆ. ಕೇವಲ ಮೂರು ಕೋಟಿ ಪುರುಷಕಾರ್ಮಿಕರು ಅಕ್ಷರಸ್ಥರಾಗಿದ್ದಾರೆ. ಮತ್ತು ಅಕ್ಷರಸ್ಥ ಮಹಿಳಾ ಕಾರ್ಮಿಕರ ಸಂಖ್ಯೆ ಕೇವಲ ೨೩ ಲಕ್ಷ ಮಾತ್ರ. ಅಂದರೆ ದೇಶದ ವಿವಿಧ ಉದ್ದಿಮೆಗಳಲ್ಲಿ ದುಡಿಯುವ ಬಹಳಷ್ಟು ಜನ ಕಾರ್ಮಿಕರು ಅನಕ್ಷರಿಗಳೂ ಮತ್ತು ಅವರು ಸಾಮಾನ್ಯವಾಗಿ ಸಂತಾನಾಭಿವೃದ್ಧಿಗೊಳಿಸುವ ವಯಸ್ಸಿನವರಾಗಿದ್ದಾರೆ. ಹೀಗಾಗಿ ಈ ವರ್ಗದ ಕಾರ್ಮಿಕರಿಗೆ ಜನಸಂಖ್ಯಾಶಿಕ್ಷಣ ಬಹಳ ಅತ್ಯಾವಶ್ಯಕ ವಾಗಿದೆ.

ಕಾರ್ಮಿಕಜೀವನ ಬಹಳ ಕಷ್ಟದಾಯಕವಾದದ್ದು ಯಾಕಂದರೆ ದಿನಾಲು ಸರಾಸರಿ ೬ ರಿಂದ ೮ ಗಂಟೆಗಳ ಕಾಲ ಅವರು ದೈಹಿಕ ಕೆಲಸದಲ್ಲಿ ತೊಡಗಿರುತ್ತಾರೆ. ಇಂಥ ದುಡಿಮೆಗೆ ಸಹಜವಾಗಿ ಹೆಚ್ಚಿನ 'ಕೆಲರಿ'ಗಳುಳ್ಳ ಆಹಾರದ ಅವಶ್ಯಕತೆಯಿದೆ. ಆದರೆ ಇಂದಿನ ಮಿತಿಮೀರಿದ ಜೀವನಾವಶ್ಯಕ ವಸ್ತುಗಳ ಬೆಲೆಗಳು ಅವರಿಗೆ ದಕ್ಕುವ ಸಂಬಳದಲ್ಲಿ ಗಗನಕುಸುಮಗಳಾಗಿವೆ. ಆದ್ದರಿಂದ ಬಹುಸಂಖ್ಯಾತ ಕಾರ್ಮಿಕರು ಅಪೌಷ್ಟಿಕತೆಯಿಂದ ಬಳಲುತ್ತಾರೆ. ಅಧಿಕ ದುಡಿಮೆ, ಕುಸಿಯುತ್ತಿರುವ ಕ್ರಿಯಾಶಕ್ತಿ, ದಣಿವಾರದ ಕೆಲಸ ಇವರನ್ನು ಸಂಜೆಯ ಹೊತ್ತಿಗೆ ಬಹಳಷ್ಟು ಸಲ ಮದ್ಯಪಾನದ ಹವ್ಯಾಸಕ್ಕೆ ಕೊಂಡೊಯ್ಯುತ್ತವೆ. ಕಡಿಮೆ ಸಂಬಳ ಸೀಮಿತ ವಿರಾಮ ಸಮಯದಿಂದಾಗಿ ಸದಭಿರುಚಿಯುಳ್ಳ ಮನೋರಂಜನಾ ಹವ್ಯಾಸಗಳು ಇವರಿಗೆ ಇಂದಿಗೂ ಮೈಗೂಡಿಲ್ಲ. ಆದ್ದರಿಂದ ಬಳಲಿದ ಮನಸ್ಸು, ಸುರಾಪಾನಾವಸ್ಥೆ ಇವರನ್ನು

ಲೈಂಗಿಕ ಮನೋರಂಜನೆಯತ್ತ ಎಳೆಯುವದರಲ್ಲಿ ಸಂದೇಹವಿಲ್ಲ. ಆದರೆ ಇವರಿಗೆ ಕುಟುಂಬ ನಿಯಂತ್ರಣ ವಿಧಾನಗಳ ಅರಿವು ಸಾಕಷ್ಟು ಇಲ್ಲದಿರುವ ಮೂಲಕ ಕುಟುಂಬ ಗಳ ಗಾತ್ರ ಬೆಳೆಯುತ್ತ ಹೋಗುತ್ತದೆ. ಕುಟುಂಬ ಬೆಳೆದಂತೆ ಕಾರ್ಮಿಕರು ಮತ್ತಷ್ಟು ಸಮಸ್ಯೆಗಳಲ್ಲಿ ಹೂತು ಹೋಗುತ್ತಾರೆ. ಇಂಥ ಕೌಟುಂಬಿಕ, ಆರ್ಥಿಕ ಮತ್ತು ಆರೋಗ್ಯಿಕ ಸಮಸ್ಯೆಗಳ ಮಡುವಿನಲ್ಲಿ ನಿಂತ ಕಾರ್ಮಿಕ ದೇಶದ ಭದ್ರಬುನಾದಿಯಾದ ಔದ್ಯೋಗಿಕ ಪ್ರಗತಿ ಸಾಧಿಸುವಲ್ಲಿ ವಿಫಲನಾಗುತ್ತಾನೆ. ಇಂಥ ದುರದೃಷ್ಟಕರ ಸನ್ನಿವೇಶದಲ್ಲಿ ಇಂದು ನಮ್ಮ ದೇಶ ಸಾಗುತ್ತಿದೆ.

ಅನಕ್ಷರಸ್ಥ ಕಾರ್ಮಿಕ ದುಡಿಯಲು ಬಹಳಷ್ಟು ಕೈಗಳು ಬೇಕೆಂದು ಬಯಸಿ ಮಕ್ಕಳ ಸಂಖ್ಯೆಯನ್ನು ಸ್ವಮನಸ್ಸಿನಿಂದ ಹೆಚ್ಚಿಸುತ್ತಾನೆ. ಆದರೆ ಈ ಹೆಚ್ಚಿನ ಸಂಖ್ಯೆಯ ಮಕ್ಕಳಿಗೆ ಮಾನಸಿಕ ವಿಕಾಸವಾಗಲು ಬೇಕಾಗುವ ಉತ್ತಮ ಶಿಕ್ಷಣವನ್ನು ಒದಗಿಸುವಲ್ಲಿ ವಿಫಲನಾಗುತ್ತಾನೆ. ಎಷ್ಟೋ ಸಲ ಮಕ್ಕಳಿಗೆ ಅತೀ ಅವಶ್ಯವಾಗಿ ಬೇಕಾಗಿರುವ ಆರೋಗ್ಯಸೌಲಭ್ಯ ಕಲ್ಪಿಸಲು ಅಸಮರ್ಥನಾಗುತ್ತಾನೆ. ಇದು ಅವನಿಗೆ ಮಕ್ಕಳ ಆರೋಗ್ಯದ ಮುನ್ನೆಚ್ಚರಿಕೆಯ ಕ್ರಮಗಳ ಅರಿವಿಲ್ಲದಿದ್ದಾಗ ಆಗುವ ಒಂದು ಸಹಜ ಸನ್ನಿವೇಶ.

ಇನ್ನು ಸಣ್ಣ ಕುಟುಂಬ ಹೊಂದಿದ ಕಾರ್ಮಿಕನಿಗೆ ಮಕ್ಕಳ ಆರೋಗ್ಯ ರಕ್ಷಣೆಯ ಬಗ್ಗೆ ಖಚಿತವಾದ ಜ್ಞಾನ ಬೇಕಾಗುತ್ತದೆ. ಮಕ್ಕಳಿಗೆ ತಗಲುವ ಸೋಂಕುರೋಗ ಗಳ, ನವಜಾತ ಧನುರ್ವಾಯು, ಪೋಲಿಯೊ, ಕ್ಷಯ, ದಡಾರ ಮತ್ತು ಗಂಟಲು ಮಾರಿಯಂಥ ರೋಗಗಳ ಬಗ್ಗೆ ಮತ್ತು ಅವುಗಳಿಗೆ ಮುಂಜಾಗ್ರತಾ ಕ್ರಮವಾಗಿ ಹಾಕಿಸಬೇಕಾದ ಚುಚ್ಚುಮದ್ದುಗಳ ಬಗ್ಗೆ ಅರಿವು ಇರುವುದು ಬಹಳ ಅವಶ್ಯಕ. ಸಣ್ಣ ಕುಟುಂಬಕ್ಕಾಗಿ ಕೇವಲ ಕೆಲವೇ ಮಕ್ಕಳನ್ನು ಹೆರುವುದಲ್ಲದೆ ಅವರ ಸರಿಯಾದ ಪಾಲನೆ ಪೋಷಣೆ ಮಾಡುವ ಹೊಣೆಯೂ ಪಾಲಕರದಾಗಿರುವದರಿಂದ ಈ ಕ್ರಮಗಳು ಜನಸಂಖ್ಯಾ ಶಿಕ್ಷಣದ ಅಂಗವಾಗಿ ಸೇರಿಕೊಳ್ಳುತ್ತವೆ.

ಜನಸಂಖ್ಯಾ ಶಿಕ್ಷಣವನ್ನು ಔದ್ಯೋಗಿಕ ಕಾರ್ಮಿಕರಿಗೆ ಮುಟ್ಟಿಸುವ ಜವಾಬ್ದಾರಿ ಪ್ರತಿಯೊಂದು ಉದ್ದಿಮೆಯ ಹೊಣೆಗಾರಿಕೆಯಾಗಿದೆ. ಇದು ಕಾರ್ಮಿಕ ಸಂಘಗಳ ಬೇಡಿಕೆಯಲ್ಲೊಂದಾಗಬೇಕು. ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಭೆ, ವಿಚಾರಗೋಷ್ಠಿ, ಚರ್ಚಾಕೂಟ ಮುಂತಾದವುಗಳನ್ನು ನೆರವೇರಿಸಿ ಕಾರ್ಮಿಕನ ಜ್ಞಾನ ನಕಾಶೆಯನ್ನು ವಿಸ್ತರಿಸಿ ಆ ದಿಶೆಯಲ್ಲಿ ಅವನು ಕಾರ್ಯಪ್ರವರ್ತನಾಗುವಂತೆ ಬಿಂಬಿಸುವದೇ ಜನಸಂಖ್ಯಾ ಶಿಕ್ಷಣದ ಉದ್ದೇಶ, ಉಳಿದ ಕೆಲವು ಕಾರ್ಮಿಕ ಸಮೂಹ ಗಳಾದ ಕೃಷಿ, ಗಣಿ ಮತ್ತು ಇತರೆ ಸಮೂಹಗಳಿಗಿಂತಲೂ ಔದ್ಯೋಗಿಕ ಕಾರ್ಮಿಕ ವೈಚಾರಿಕತೆಯಲ್ಲಿ ಮುಂಚೂಣಿಯಲ್ಲಿದ್ದು ಜನಸಂಖ್ಯಾ ಶಿಕ್ಷಣದ ಅರಿವು ಮೂಡಿಸು ವದು ಸುಲಭವಾಗಬಹುದೆಂದು ನನ್ನ ಅಭಿಪ್ರಾಯ. ಆದ್ದರಿಂದ ಕಾರ್ಮಿಕರ ಜೀವನ

ಮಟ್ಟವನ್ನು ಸುಧಾರಿಸುವಲ್ಲಿ ಜನಸಂಖ್ಯಾ ಶಿಕ್ಷಣ ಉತ್ತಮ ಪಾತ್ರವಹಿಸಬಲ್ಲುದೆಂದು ನನ್ನ ಅನಿಸಿಕೆ.

ಆಧಾರ ಗ್ರಂಥಗಳು

1. Mascarenhas H. N. (1974)
   Population Education for Quality of Life,
   Family Welfare Centre, Bangalore.

2. Ananth Subba Rao K. S. (1973)
   Role of Teachers in Population Education,
   Population Education Project, Bangalore.

3. Namjoshi G. K. (1978)
   Health and Population Education,
   Nandadeep Prakashan.

4. NCERT (1979)
   Population Education: A conceptual
   Framework, NCERT, New Delhi

5. ಫಾಸಲಕರ ಮತ್ತು ಹೆಗ್ಡೆ, ಆರ್. ವ್ಹಿ. (1980)
   ಜನಸಂಖ್ಯಾ ಶಾಸ್ತ್ರ, ಪ್ರೀತಿ ಪ್ರಕಾಶನ, ಭದ್ರಾವತಿ.

6. ಕಟ್ಟಿಮನಿ ಸಿ. ವ್ಹಿ. (1979)
   ಜನಸಂಖ್ಯಾ ಸಮಸ್ಯೆ ಮತ್ತು ಅದರ ಪರಿಣಾಮ
   ಎಫ್. ಪಿ. ಎ. ಆಫ್. ಇಂಡಿಯಾ, ಧಾರವಾಡ.

7. ಶೇಷಗಿರಿರಾವ, ಕೆ. (1972)
   ಜನಸಂಖ್ಯಾ ಶಿಕ್ಷಣ ತರಬೇತಿ.
   ಸಾಮಾಜಿಕ ಮತ್ತು ಮನೋವೈಜ್ಞಾನಿಕ ಸಂಶೋಧನಾ ಸಂಸ್ಥೆ,
   ಬೆಂಗಳೂರು.

**

ಅನುವಾದದ ರೂಪರೇಷೆಗಳು

-ಎಚ್. ಎಂ. ಮಹೇಶ್ವರಯ್ಯ

ಒಂದು ಭಾಷೆಯ ಅರ್ಥವತ್ತಾದ ಅನುಭವಗಳನ್ನು ಮತ್ತೊಂದು ಭಾಷೆಗೆ ಕೊಂಡ್ಯೊಯ್ಯುವುದೇ ಅನುವಾದ. ಇದನ್ನು ಕೆಲವರು ಭಾಷಾಂತರವೆಂದು, ಮತ್ತೆ ಕೆಲವರು ತರ್ಜುಮೆ ಎಂದು ಕರೆಯುತ್ತಾರೆ. ಭಾಷಾಂತರವೆಂದರೆ ಯಾವುದೇ ಒಂದು ಭಾಷೆಯಲ್ಲಿರುವ ಬರಹ ಅಥವಾ ಮಾತನ್ನು ಇನ್ನೊಂದು ಭಾಷೆಯಲ್ಲಿ ಸಾದರ ಪಡಿಸುವುದು ಎಂದರ್ಥ. ಇದನ್ನೇ ಭಾಷೆಯ ಅಂತರ ಎಂದು ಸುಲಭವಾಗಿ ಹೇಳ ಬಹುದು. ಗೊತ್ತಿಲ್ಲದ ಭಾಷೆಯೊಂದರ ಬರಹ ಅಥವಾ ಮಾತು ಏನನ್ನು ತಿಳಿಸು ತ್ತದೆ ಎಂಬುದನ್ನು ಇನ್ನೊಂದು ಭಾಷೆಯವರು ತಿಳಿಯುವ ಅಗತ್ಯದಿಂದಾಗಿ ಅನು ವಾದ ಅಥವಾ ಭಾಷಾಂತರದ ಅವಶ್ಯಕತೆ ಇದೆ. ಭಾರತದಲ್ಲಿ ಹಲವಾರು ಭಾಷೆ ಗಳಿವೆ. ಒಂದು ಭಾಷೆಯವರು ಮತ್ತೊಂದು ಭಾಷೆಯನ್ನು ಅರಿಯಲು ಅನುವಾದದ ಅವಶ್ಯಕತೆ ಇದೆ. ಅಮೇರಿಕಾ, ರಷ್ಯಾ, ಜರ್ಮನ್, ಜಪಾನ್, ಫ್ರಾನ್ಸ್ ಮುಂತಾದ ದೇಶಗಳ ವೈಜ್ಞಾನಿಕ ಪ್ರಗತಿ, ವ್ಯವಹಾರ, ಸಾಹಿತ್ಯ ಮುಂತಾದವುಗಳನ್ನು ಅರಿ ಯಲು ಇಂಗ್ಲೀಷ್, ರಶಿಯನ್, ಜರ್ಮನ್, ಜಪಾನೀಸ್, ಫ್ರೆಂಚ್ ಮುಂತಾದ ಭಾಷೆಗಳ ಅನುವಾದವನ್ನು ಮಾಡುವುದರಿಂದ ಮಾತ್ರ ನಾವು ಅರ್ಥಮಾಡಿಕೊಳ್ಳು ವುದು ಸಾಧ್ಯವಾಗುತ್ತದೆ. ಆದ್ದರಿಂದ ಅನುವಾದ ಆಧುನಿಕ ಬದುಕಿಗೆ ಬೇಕಾದ ಬಹಳ ಮಹತ್ವದ ಮತ್ತು ಉಪಯುಕ್ತ ಜ್ಞಾನಶಾಖೆಯಾಗಿದೆ.

ಅನುವಾದದಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳಿವೆ.ಒಂದನೆಯ ಪ್ರಕಾರ, ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಅನುವಾದಿಸುವುದು. ಅಂದರೆ ಇಲ್ಲಿ ಎರಡು ಭಾಷೆಗಳ ನಡುವೆ ಅನುವಾದ ಕಾರ್ಯ ನಡೆಯುತ್ತದೆ. ಇದನ್ನು ಇಂಗ್ಲೀಷಿನಲ್ಲಿ Inter lingual translation ಎಂದು ಕರೆಯುತ್ತಾರೆ. ಉದಾಹರಣೆಗೆ ಇಂಗ್ಲೀಷಿ ನಿಂದ ಕನ್ನಡಕ್ಕೆ ಅನುವಾದಿಸುವುದು, ಅಥವಾ ಹಿಂದಿಯಿಂದ ತೆಲುಗಿಗೆ ಅನುವಾದಿ ಸುವುದು. ಎರಡನೆಯ ಪ್ರಕಾರವೆಂದರೆ, ಒಂದೇ ಭಾಷೆಯ ಒಂದು ಹಂತದಿಂದ ಅದೇ ಭಾಷೆಯ ಮತ್ತೊಂದು ಹಂತಕ್ಕೆ ಅನುವಾದಿಸುವುದು. ಇದನ್ನು ಇಂಗ್ಲೀಷಿನಲ್ಲಿ Intralingual translation ಎಂದು ಕರೆಯುತ್ತಾರೆ. ಉದಾಹರಣೆಗೆ ಹಳಗನ್ನ ಡದಿಂದ ಹೊಸಗನ್ನಡಕ್ಕೆ ಅನುವಾದ ಮಾಡುವುದು. ಹಳಗನ್ನಡದಲ್ಲಿ ಇರುವ ಭಾಷೆ, ಈಗಿರುವ ಹೊಸಗನ್ನಡದ ಭಾಷೆಗಿಂತ ಭಿನ್ನವಾಗಿದೆ. ಹಾಗಾಗಿ ಹಳೆಗನ್ನಡದಲ್ಲಿರುವ

ವಿಷಯವನ್ನು ತಿಳಿಸಬೇಕಾದರೆ ಅದನ್ನು ಹೊಸಗನ್ನಡಕ್ಕೆ ಅನುವಾದಿಸಬೇಕಾಗುತ್ತದೆ. ಇಲ್ಲಿ ಅನುವಾದಕ್ರಿಯೆ ಎರಡು ಭಾಷೆಗಳ ನಡುವೆ ನಡೆಯದೆ ಒಂದೇ ಭಾಷೆಯ ಎರಡು ಘಟ್ಟಗಳ ನಡುವೆ ನಡೆಯುತ್ತದೆ.

ಅನುವಾದದ ವ್ಯಾಖ್ಯೆ :

ಅನುವಾದವೆಂದರೆ ಕ್ಯಾಟ್‌ಫರ್ಡನ ದೃಷ್ಟಿಯಲ್ಲಿ 'ಮೂಲ ಭಾಷೆಯ ಪಠ್ಯ ಸಾಮಗ್ರಿಯನ್ನು ಉದ್ದಿಷ್ಟ ಭಾಷೆಯ ಪಠ್ಯ ಸಾಮಗ್ರಿಯನ್ನಾಗಿ ಪರಿವರ್ತಿಸುವುದು, ಅಂದರೆ ಅನುವಾದಕ್ರಿಯೆಯಲ್ಲಿ ಒಂದು ಮೂಲಭಾಷೆ ಇರುತ್ತದೆ. ಮೂಲಭಾಷೆಯಲ್ಲಿರುವ ಕೃತಿಯನ್ನು ಯಾವ ಭಾಷೆಗೆ ಅನುವಾದಿಸುವ ಉದ್ದೇಶವಿದೆಯೋ ಅದನ್ನೇ ಉದ್ದಿಷ್ಟಭಾಷೆ ಎಂದು ಕರೆಯುತ್ತಾರೆ. ಮೂಲಭಾಷೆಯ ಪಠ್ಯ ಸಾಮಗ್ರಿಯನ್ನು ಉದ್ದಿಷ್ಟಭಾಷೆಯ ಪಠ್ಯಸಾಮಗ್ರಿಯನ್ನಾಗಿ ಪರಿವರ್ತಿಸುವುದೆಂದರೆ: ಸಂವಾದಿಪದಗಳ ಬಳಕೆಯ ಮೂಲಕ ಪಠ್ಯಸಾಮಗ್ರಿಯನ್ನು ಬೇರೆ ಭಾಷೆಗೆ ಪರಿವರ್ತಿಸುವುದು. ಅಂದರೆ ಎರಡು ಭಾಷೆಗಳ ನಡುವೆ ಸಾಮ್ಯತೆಯನ್ನು ಸಾಧಿಸುವುದು. ಎರಡು ಭಾಷೆಗಳಲ್ಲಿ ಎಷ್ಟೇ ಸಮಾನಾಂಶಗಳಿದ್ದರೂ ಭಿನ್ನತೆ ಇದ್ದೇ ಇರುತ್ತದೆ. ಎರಡು ಭಾಷೆಗಳ ನಡುವೆ ಸಮಾನತೆ ಹೆಚ್ಚಿದಷ್ಟು ಸಂವಾದಿಪದ(Equivalent word) ಗಳನ್ನು ಪೂರೈಸುವ ಕ್ರಿಯೆ ಸುಲಭವಾಗುತ್ತದೆ. ಅಂತೆಯೇ ಭಿನ್ನತೆ ಅಧಿಕವಾದಷ್ಟು ಅನುವಾದಕಾರ್ಯ ಜಟಿಲವಾಗುತ್ತದೆ. ಅನುವಾದರೀತಿಗಳಿಗನುಗುಣವಾಗಿ ಸಂವಾದಿಪದಗಳನ್ನು ಪೂರೈಸುವ ಕ್ರಿಯೆ ಭಿನ್ನವಾಗುತ್ತಾ ಹೋಗುತ್ತದೆ.

ಸಾಮಾನ್ಯವಾಗಿ ವೈಜ್ಞಾನಿಕ ಶಾಸ್ತ್ರಸಾಹಿತ್ಯ ಮತ್ತು ಸಾಮಾಜಿಕಶಾಸ್ತ್ರ ಸಾಹಿತ್ಯಗಳ ಅನುವಾದದಲ್ಲಿ ಸಂವಾದಿ ಪದಗಳನ್ನು ಪೂರೈಸುವ ಕ್ರಿಯೆ ಕಠಿಣವೆನಿಸದಿದ್ದರೂ ಸೃಜನಶೀಲ ಸಾಹಿತ್ಯದ ಅನುವಾದದಲ್ಲಿ ಮಾತ್ರ ಕಠಿಣವಾಗುತ್ತದೆ. ಇದಕ್ಕೆ ಕಾರಣ ಸೃಜನಶೀಲ ಸಾಹಿತ್ಯದಲ್ಲಿ, ವಿಶಿಷ್ಟ ರೀತಿಯಲ್ಲಿ ಸೃಜನಗೊಂಡ ಪಠ್ಯವನ್ನು ಸಂವಾದಿ ಪದಗಳ ಮೂಲಕ ಮತ್ತೊಂದು ಭಾಷೆಗೆ ರೂಪಾಂತರಗೊಳಿಸುವಾಗ ಅನೇಕ ಅರೆಕೊರೆಗಳುಂಟಾಗುತ್ತವೆ.

ಅನುವಾದ ಪ್ರಕಾರಗಳು:

ಅನುವಾದದಲ್ಲಿ ಅನೇಕ ಪ್ರಕಾರಗಳಿವೆ. ಅವುಗಳೆಂದರೆ–

ಶಬ್ದಾನುವಾದ (Word by word translation)
ಸಂಗ್ರಹಾನುವಾದ (Epitome)
ಭಾವಾನುವಾದ (Para-phrasing)
ವಿಸ್ತರಣೆ (Expansion)
ರೂಪಾಂತರ (Adaptation)
ಅಂಶಿಕ ಅನುವಾದ (Partial translation).

೧. **ಶಬ್ದಾನುವಾದ :** ಮೂಲಭಾಷೆಯ ಶಬ್ದಗಳನ್ನು ಅನುವಾದಿಸಬೇಕಾದ ಭಾಷೆಯ ಸಂವಾದಿಶಬ್ದಗಳಲ್ಲಿ ಇಡುವುದನ್ನೇ ಶಬ್ದಾನುವಾದ ಎಂದು ಕರೆಯುತ್ತಾರೆ. ಶಬ್ದಶಃ ಅನುವಾದ ಅನೇಕ ವೇಳೆ ಹೇಳಬೇಕಾದ ಅರ್ಥವನ್ನು ಹೇಳದೆ ಸೋತುಬಿಡುತ್ತದೆ. ಕೆಲವು ಸಲ ಸರಿಯಾದ ಅರ್ಥವನ್ನು ನೀಡುತ್ತದೆ. ಅಂದರೆ ಎಲ್ಲ ಸಂದರ್ಭಗಳಲ್ಲಿಯೂ ಶಬ್ದಾನುವಾದ ಸರಿಯಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಸಂದರ್ಭಕ್ಕೆ ತಕ್ಕಂತೆ ಅನುವಾದಕ ಹೇಗೆ ಅನುವಾದಿಸಬೇಕೆಂಬುದನ್ನು ನಿರ್ಧರಿಸಬೇಕಾಗುತ್ತದೆ.

ಉದಾಹರಣೆಗೆ 'Water board' ಎಂಬ ಇಂಗ್ಲೀಷ್ ರೂಪವನ್ನು ಶಬ್ದಶಃ ಕನ್ನಡಕ್ಕೆ ಅನುವಾದಿಸಿದಾಗ 'ನೀರಿನ ಹಲಗೆ' ಯಾಗುತ್ತದೆ. ಆದರೆ 'ನೀರಿನ ಹಲಗೆ' ಎಂಬ ಅರ್ಥದ ರೂಪದಲ್ಲಿ ಇಂಗ್ಲೀಷಿನ ರೂಪದ ಅರ್ಥವನ್ನು ಬಿಂಬಿಸಲು ಸೋಲುತ್ತದೆ. 'Water board' ಎಂಬ ರೂಪ "ಜಲಮಂಡಳಿ" ಎಂದು ಅನುವಾದಗೊಂಡಾಗ ಮಾತ್ರ ಅದು ಸರಿಯಾದ ಅರ್ಥವನ್ನು ನೀಡುವಲ್ಲಿ ಯಶಸ್ವಿಯಾಗುತ್ತದೆ. ಹೀಗೆಯೇ ಕನ್ನಡದಿಂದ ಇಂಗ್ಲೀಷಿಗೆ "ಕರಿಮಣಿ" ಎಂಬ ರೂಪವನ್ನು black beed ಎಂದು ಅನುವಾದಿಸಿದಾಗ ಅದು ತನ್ನ ಮೂಲಾರ್ಥವನ್ನು ಕೊಡಲು ಸೋಲುತ್ತದೆ. ಕರಿಮಣಿ ಎಂದರೇನು ಎಂಬುದನ್ನು ಒಂದು ಪದದಲ್ಲಿ ಹೇಳುವುದಕ್ಕಿಂತ ವಿವರವಾಗಿ ವಿವರಿಸಬೇಕಾಗುತ್ತದೆ. boy fell in the well 'ಹುಡುಗ ಬಿದ್ದ ಒಳಗೆ ಬಾವಿ' ಎಂದರೆ ಏನೂ ಅರ್ಥವಾಗುವುದಿಲ್ಲ. 'ಹುಡುಗ ಬಾವಿಯೊಳಗೆ ಬಿದ್ದ' ಎಂಬುದು ಈ ವಾಕ್ಯದ ಅರ್ಥ. ಶಬ್ದಶಃ ಅನುವಾದ ಎಷ್ಟೋ ಸಲ ಸರಿಯಾದ ಅರ್ಥವನ್ನು ನೀಡುವುದಿಲ್ಲ.

೨. **ಸಂಗ್ರಹಾನುವಾದ :** ಮೂಲಪಠ್ಯದ ಆಶಯವನ್ನು ಸಂಗ್ರಹಿಸಿ ಸಾರರೂಪದಲ್ಲಿ ಹೇಳುವುದನ್ನು ಸಂಗ್ರಹಾನುವಾದ ಎನ್ನುತ್ತಾರೆ. ಪಠ್ಯಸಾಮಗ್ರಿ ವಿಸ್ತಾರವಾದ ವಿವರಣೆಯನ್ನೊಳಗೊಂಡು ದೀರ್ಘವಾಗಿ ವಿವರಿಸಲ್ಪಟ್ಟಿದ್ದರೆ ಅದರ ಮುಖ್ಯ ಭಾಗಗಳನ್ನು ಸಂಗ್ರಹಿಸಿ ಮತ್ತೊಂದು ಭಾಷೆಯಲ್ಲಿ ಸಂಗ್ರಹರೂಪದಲ್ಲಿ ವ್ಯಕ್ತಪಡಿಸುವುದನ್ನೇ ಸಂಗ್ರಹಾನುವಾದ (epitome) ಎಂದು ಕರೆಯುತ್ತಾರೆ. ಮೂಲಕೃತಿ ಸುದೀರ್ಘವಾಗಿರುವುದರಿಂದ ಅದನ್ನು ಅಷ್ಟು ವಿವರವಾಗಿ ಅನುವಾದಿಸುವುದು ಅನವಶ್ಯಕವೆಂದು ಅನುವಾದಕ ಅರಿತಾಗ ಈ ರೀತಿಯ ಸಂಗ್ರಹಾನುವಾದದ ಅವಶ್ಯಕತೆ ತಲೆದೋರುತ್ತದೆ. ಮೂಲಕೃತಿಯಲ್ಲಿ ಬಂದ ವಿವರಣೆ ಅನುವಾದದಲ್ಲಿ ಅನಗತ್ಯವೆನಿಸಿದಾಗ ಅದರ ಸಂಗ್ರಹ ರೂಪವನ್ನು ಅನುವಾದಕ ಕೊಡುತ್ತಾನೆ.

೩. **ವಿಸ್ತರಣೆ :** ಮೂಲಪಠ್ಯದ ಆಶಯವನ್ನು ಹೆಚ್ಚು ಸ್ಪಷ್ಟಗೊಳಿಸಲು ಹಾಗೂ ಅದನ್ನು ಹೆಚ್ಚು ಪ್ರಭಾವಗೊಳಿಸಲು ಅನುವಾದಕ ವಿಸ್ತರಿಸಿ ಹೇಳಬೇಕಾಗುತ್ತದೆ. ಮೂಲಪಠ್ಯಕ್ಕಿಂತ ಅನುವಾದ ಹೆಚ್ಚು ವಿಸ್ತೃತವಾಗಿರುತ್ತದೆ. ಸಂಗ್ರ

ಹಾನುವಾದದಲ್ಲಿ ಪಠ್ಯವನ್ನು ಸಂಕ್ಷೇಪಿಸಿ ಹೇಳಿದರೆ, ವಿಸ್ತರಣೆಯಲ್ಲಿ ಪಠ್ಯವನ್ನು ಹೆಚ್ಚು ವಿಸ್ತಾರಗೊಳಿಸಿ ಹೇಳುತ್ತಾರೆ. ಯಾವುದು ಮೂಲಭಾಷೆಯಲ್ಲಿ ಸಂಕ್ಷೇಪವಾಗಿ, ಕಡಿಮೆ ಮಾತುಗಳಲ್ಲಿ ವ್ಯಕ್ತವಾಗಿದೆಯೋ ಅದನ್ನು ಅನ್ಯಭಾಷೆಗೆ ತರುವಾಗ ತೀರ ಸಪ್ಪೆ ಎನಿಸಬಹುದು. ಆದ್ದರಿಂದ ಅದನ್ನು ವಿವರಿಸಿದರೆ ಸೂಕ್ತ ಎಂದು ಅನುವಾದಕ ಬಯಸಿದರೆ ಆಗ ಅದು ವಿಸ್ತರಣೆಗೊಂಡು ವ್ಯಕ್ತವಾಗುತ್ತದೆ. ಹೆಚ್ಚಾಗಿ ಈ ರೀತಿಯ ವಿಸ್ತರಣೆ ಒಂದು ನಿರ್ದಿಷ್ಟ ಸಂಸ್ಕೃತಿಯನ್ನು ಬಿಂಬಿಸುವಂತಹ ವಿಶೇಷ ಪದಗಳು ಬಳಕೆಯಾಗುತ್ತಿದ್ದಾಗ ಹೆಚ್ಚು ಉಪಯುಕ್ತವಾಗುತ್ತದೆ. "ಕಾಯಕ" ಎಂಬ ವೀರಶೈವ ಸಿದ್ಧಾಂತದ ಪದವನ್ನು ಇಂಗ್ಲೀಷಿಗೆ ಅನುವಾದಿಸುವಾಗ ವಿಸ್ತರಣೆ (Expansion) ಹೆಚ್ಚು ಉಪಯುಕ್ತ.

೪. **ಭಾವಾನುವಾದ :** ಭಾವಾನುವಾದದಲ್ಲಿ ಅನುವಾದಕ ಮೂಲವಸ್ತುವಿನ ಆತ್ಮದ ಕಡೆಗೆ ವಿಶೇಷ ಲಕ್ಷ್ಯವನ್ನು ವಹಿಸುತ್ತಾನೆ. ಒಂದು ಮೂಲಕೃತಿ ಅನುವಾದಕ್ಕೆ ನಿಲುಕದಿರುವಾಗ, ಅದರ ಭಾಷಾರಚನೆಯ ವಿಶಿಷ್ಟತೆ, ಅನುವಾದಗೊಳ್ಳಬೇಕಾದ ಭಾಷಾರಚನೆಗಿಂತ ಭಿನ್ನವಾಗಿರುವಾಗ, ಮೂಲಕೃತಿಯ ಸೊಬಗನ್ನು ಉಳಿಸಿಕೊಂಡು ಅಭಿವ್ಯಕ್ತಿಸಲು ಅನುವಾದಕ ಬಳಸುವ ತಂತ್ರವೆಂದರೆ ಭಾವಾನುವಾದ (Para-phrasing). ಮೂಲದ ಕೃತಿಯ ಭಾವವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ತನ್ನ ಉದ್ದೇಶಕ್ಕನುಗುಣವಾಗಿ ಮೂಲದ ವಿವೇಚನೆಯನ್ನು ಅನ್ಯಭಾಷೆಯಲ್ಲಿ ಹಿಗ್ಗಿಸಬಹುದು, ಇಲ್ಲವೇ ಕುಗ್ಗಿಸಬಹುದು. ಮೂಲಕೃತಿಯ ಅಭಿವ್ಯಕ್ತಿಯ ತಂತ್ರ ಬದಲಾದಾಗ ಅದಕ್ಕನುಸರಿಸಿ ವಿವರಗಳನ್ನು ಕಡಿಮೆ ಮಾಡಬಹುದು ಇಲ್ಲವೆ ಅದನ್ನು ವಿಸ್ತಾರಗೊಳಿಸಬಹುದು. ಆದರೆ ಮೂಲಕೃತಿಯ ಕಥಾವಸ್ತು, ಪಾತ್ರಚಿತ್ರಣ, ಪಾತ್ರಗಳ ಹೆಸರು ಮುಂತಾದವುಗಳಲ್ಲಿ ಯಾವುದೇ ಭಿನ್ನತೆ ಮಾಡುವುದಿಲ್ಲ. ಭಾವಾನುವಾದ ಹೆಚ್ಚು ಸರಿಹೊಂದುವುದು ಶಾಸ್ತ್ರೀಯ ಕೃತಿಗಳಿಗಿಂತ ಸೃಜನಾತ್ಮಕ ಕೃತಿಗಳಿಗೆ. ಏಕೆಂದರೆ ಸೃಜನಾತ್ಮಕ ಕೃತಿಗಳಲ್ಲಿ ಸೂಕ್ಷ್ಮ ಕಲ್ಪನಾವಿಲಾಸ ಮತ್ತು ಭಾವಪೂರ್ಣತೆ ವ್ಯಕ್ತವಾಗಿರುತ್ತದೆ. ಆದ್ದರಿಂದ ಭಾವಾನುವಾದದಲ್ಲಿಯೂ ಮೂಲಕೃತಿಯ ರಚನೆಯಂತೆ ಸಹಜವಾಗಿಯೇ ಸೃಜನಶೀಲತೆ, ಕಲ್ಪನಾ ಸಾಮರ್ಥ್ಯಗಳು ವ್ಯಕ್ತವಾಗಿರುತ್ತವೆ. ಭಾವಾನುವಾದಮಾಡುವ ಅನುವಾದಕನಿಗೆ ತನ್ನ ಅನುವಾದದಲ್ಲಿ ತನ್ನ ಕ್ರಿಯಾಶೀಲ ಪ್ರತಿಭೆಯನ್ನು, ಸ್ವತಂತ್ರ ಶೈಲಿಯನ್ನು ಒಡಗೂಡಿಸಿಕೊಳ್ಳಲು ಹಾಗೂ ಅದನ್ನು ಪ್ರದರ್ಶಿಸಲು ಹೆಚ್ಚಿನ ಅವಕಾಶವಿರುತ್ತದೆ. ಹಾಗಾಗಿ ಭಾವಾನುವಾದ ಅನುವಾದಕನ ಸ್ವಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಕನ್ನಡದಲ್ಲಿ ಕುವೆಂಪುರವರು Robert Browning ನ The pied piper of Hanover ಕವಿತೆಯನ್ನು 'ಬೊಮ್ಮನ ಹಳ್ಳಿಯ ಕಿಂದರ ಜೋಗಿ' ಎಂಬ ಹೆಸರನ್ನಿಟ್ಟು ಭಾವಾನುವಾದ ಮಾಡಿದ್ದಾರೆ. ಇದು ಇಂಗ್ಲೀಷಿನಂತೆಯೇ ಕನ್ನಡದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಮೂಡಿಬಂದಿರುವುದು

ಕುವೆಂಪು ಅವರ ಕ್ರಿಯಾಶೀಲತೆ ಹಾಗೂ ಅನುವಾದ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಅಂತೆಯೇ ಬಿ.ಎಂ. ಶ್ರೀಯವರ ಇಂಗ್ಲೀಷ ಗೀತೆಗಳಲ್ಲಿ ಈ ರೀತಿಯ ಭಾವಾನುವಾದ ಹೆಚ್ಚಿನ ಸ್ಥಾನವನ್ನು ಗಳಿಸಿಕೊಂಡಿರುವುದು ತಿಳಿಯುತ್ತದೆ.

೫. **ರೂಪಾಂತರ :** ಅನುವಾದದ ಒಂದು ಪ್ರಕಾರವಾದ ರೂಪಾಂತರ (Adaptation) ಹೆಸರೇ ಹೇಳುವಂತೆ ಮೂಲಕೃತಿಯನ್ನು ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿಕೊಳ್ಳುವ ಕ್ರಿಯೆಯನ್ನು ಸೂಚಿಸುತ್ತದೆ. ಒಂದು ಭಾಷೆಯ ಸಂಸ್ಕೃತಿಯ ವಿಶಿಷ್ಟ ಅಂಶಗಳಿಂದ ಮೂಡಿಬಂದ ಸಾಹಿತ್ಯಕೃತಿಯನ್ನು ಮತ್ತೊಂದು ಭಾಷೆಯ ಸಂಸ್ಕೃತಿಯ ಪರಿಸರದಲ್ಲಿ ಅದನ್ನು ಅಳವಡಿಸಿ, ಆ ಸಂಸ್ಕೃತಿಗೆ ಸರಿಹೊಂದುವಂತೆ ಅಳವಡಿಸಿ ವ್ಯಕ್ತಪಡಿಸತೊಡಗಿದಾಗ ಮೂಲಕೃತಿಯಲ್ಲಿನ ಹೆಸರುಗಳು ಬದಲಾಗಬಹುದು, ಕಥಾವಸ್ತುವಿನಲ್ಲಿ ಮಾರ್ಪಾಡಾಗಬಹುದು, ಕಾಲ, ಪರಿಸರದಲ್ಲಿ ಬದಲಾಗಬಹುದು, ಇಲ್ಲವೇ ಮೂಲಕೃತಿಯಲ್ಲಿಲ್ಲದ ಹೊಸ ಅಂಶ ಅನುವಾದದಲ್ಲಿ ಸೇರ್ಪಡೆಯಾಗಬಹುದು. ಹೀಗೆ ರೂಪಾಂತರಗೊಳಿಸುವ ಕ್ರಿಯೆ ಇತರ ಅನುವಾದ ಪ್ರಕಾರಗಳಿಗಿಂತ ಭಿನ್ನವಾಗಿರುತ್ತದೆ. ಈ ರೀತಿ ಮಾರ್ಪಾಡನ್ನು ಮಾಡಲು ಅನುವಾದಕನಿಗೆ ಅನೇಕ ಕಾರಣಗಳಿರುತ್ತವೆ. ಅನುವಾದಿತ ಭಾಷೆಯಲ್ಲಿ ಯಾರಿಗಾಗಿ ಕೃತಿರಚಿಸಬೇಕಾಗಿದೆಯೋ ಅವರಿಗೆ ಮೂಲದ ಚೌಕಟ್ಟಿನಲ್ಲಿಯೇ ಕೃತಿಯನ್ನೊದಗಿಸಿದರೆ, ಅದು ಹೆಚ್ಚು ಪರಿಣಾಮವನ್ನು ಮಾಡದಿರಬಹುದು. ಆದ್ದರಿಂದ ಆ ಕೃತಿಯನ್ನು ಬದಲಾಯಿಸಿ ತನಗೆ ಸರಿಹೊಂದುವಂತಹ ಸ್ಥಳ, ಪಾತ್ರದ ಹೆಸರು ಮುಂತಾದವುಗಳನ್ನು ಬದಲಾಯಿಸಿ ಮೂಲಕೃತಿಯನ್ನು ಅನುವಾದಿಸಬೇಕಾದ ಭಾಷೆಯ ಸಂಸ್ಕೃತಿಗೆ ತಕ್ಕಂತೆ ಅಳವಡಿಸಬೇಕಾಗುತ್ತದೆ. ಈ ರೀತಿ ಬದಲಾಯಿಸಿ ಪುನರ್ರಚಿಸಿದ ಕೃತಿಯನ್ನೇ ರೂಪಾಂತರ ಎಂದು ಕರೆಯುತ್ತಾರೆ. ಉದಾಹರಣೆಗೆ ಕುವೆಂಪುರವರ ಶೇಕ್ಸಪೀಯರನ Hamlat ನಾಟಕವನ್ನು 'ರಕ್ತಾಕ್ಷಿ'ಯನ್ನಾಗಿ Tempest ನಾಟಕವನ್ನು 'ಬಿರುಗಾಳಿ'ಯಾಗಿ ರೂಪಾಂತರಿಸಿದ್ದಾರೆ, ಕುವೆಂಪು. ಅಲ್ಲದೆ ಬಸವಪ್ಪಶಾಸ್ತ್ರಿಗಳು, ಬಿ.ಎಂ. ಶ್ರೀ.ಮುಂತಾದವರು ಗ್ರೀಕ್ ಹಾಗೂ ಇಂಗ್ಲೀಷ ನಾಟಕಗಳನ್ನು ಕನ್ನಡ ಭಾಷೆಯ ಜಾಯಮಾನಕ್ಕೆ ತಕ್ಕಂತೆ ರೂಪಾಂತರಿಸಿದ್ದಾರೆ.

೬. **ಅಂಶಿಕ ಅನುವಾದ :** ಕೆಲವೊಮ್ಮೆ ಕೆಲವು ಪ್ರಯೋಗಗಳನ್ನು ಅನುವಾದಿಸಲು ಬಾರದಿದ್ದಾಗ, ಅಥವಾ ಒಂದು ಪಕ್ಷ ಅನುವಾದಿಸಿದರೆ ಅದರ ಸೊಗಸು ಕೆಡಬಹುದೆಂಬ ಕಾರಣದಿಂದ ಅದನ್ನು ಹಾಗೆಯೇ ಇಟ್ಟು ಉಳಿದುದನ್ನು ಅನುವಾದಿಸಿದರೆ ಅದು ಅಂಶಿಕ ಅನುವಾದವಾಗುತ್ತದೆ. ಕೆಲವು ಸಲ "ನಿಯಮಗಳನ್ನು ಇಂಗ್ಲೀಷಿನಲ್ಲಿ ಉಲ್ಲೇಖ ಮಾಡಿ ಅದಕ್ಕೆ ವಿವರಣೆಯನ್ನು ಕನ್ನಡದಲ್ಲಿ ಕೊಡುವುದನ್ನು ಅನೇಕರು ಮಾಡುತ್ತಾರೆ." ಇಂತಹದನ್ನೇ ಅಂಶಿಕ ಅನುವಾದ (Partial-translation) ಎನ್ನುತ್ತಾರೆ.

ಅನುವಾದದ ಪ್ರಭೇದಗಳು :

ಅನುವಾದದ ಭಿನ್ನ ರೀತಿಗಳನ್ನು ಅನುಸರಿಸಿ ಅನುವಾದದ ವಿವಿಧ ಪ್ರಕಾರ-ಗಳನ್ನು ಈ ಮೊದಲು ವಿವರಿಸಲಾಗಿದೆ. ಅನುವಾದದ ವಸ್ತುವನ್ನು ಗಮನಿಸಿ ಅನುವಾದದ ಪ್ರಭೇದಗಳನ್ನು ಗುರುತಿಸಬಹುದು. ಮುಖ್ಯವಾಗಿ ಕೆಲವರು ಅನುವಾದದ ಮೂರು ಪ್ರಭೇದಗಳನ್ನು ಗುರುತಿಸಿದ್ದಾರೆ.

೧. ವೈಜ್ಞಾನಿಕ ಸಾಹಿತ್ಯಾನುವಾದ (Translation of Scientific literature)

೨. ಸಾಮಾಜಿಕ ಸಾಹಿತ್ಯಾನುವಾದ (Translation of Social Science)

೩. ಸೃಜನಸಾಹಿತ್ಯಾನುವಾದ (Translation of Aesthetic literature)

೧. **ವೈಜ್ಞಾನಿಕ ಸಾಹಿತ್ಯಾನುವಾದ :** ವೈಜ್ಞಾನಿಕ ಸಾಹಿತ್ಯ ಅನುವಾದ-ದಲ್ಲಿ ಮೂಲಕೃತಿಯ ಶಬ್ದಗಳ ಯಥಾವತ್ ಅನುವಾದಕ್ಕಿಂತ ವಿಚಾರಗಳನ್ನು ಅನುವಾದಿಸುವುದರ ಕಡೆಗೆ ಹೆಚ್ಚು ಗಮನವನ್ನು ಕೊಡಲಾಗುತ್ತದೆ. ಆದ್ದರಿಂದಲೇ ಇಲ್ಲಿ ಭಾಷೆಗಿಂತ ವಿಷಯದ ಸಮರ್ಥ ಜ್ಞಾನ ಹೆಚ್ಚು ಅವಶ್ಯಕ. ಅಲ್ಲದೆ ವೈಜ್ಞಾನಿಕ ಕೃತಿಗಳ ಅನುವಾದದಲ್ಲಿ ಬಳಸುವ ತಂತ್ರ ಮತ್ತು ಶೈಲಿ ಇತರ ಸಾಹಿತ್ಯಿಕ ಕೃತಿಗಳ ಅನುವಾದದಲ್ಲಿ ಬಳಸುವ ತಂತ್ರ ಮತ್ತು ಶೈಲಿಗಿಂತ ಭಿನ್ನವಾಗಿರುತ್ತದೆ. ವೈಜ್ಞಾನಿಕ ಸಾಹಿತ್ಯ ಅನುವಾದದಲ್ಲಿ ಅನುಭವಗಮ್ಯ ವಸ್ತುನಿಷ್ಠ ಘಟನೆಗಳನ್ನು ಪ್ರಮಾಣೀಕರಿಸಿ ನೋಡಬಹುದಾದ ಪದಗಳ ಮೂಲಕ ಆದಷ್ಟು ಖಚಿತವಾಗಿ, ಸರಳವಾಗಿ, ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆ ಕಾರಣದಿಂದಲೇ ವೈಜ್ಞಾನಿಕ ಸಾಹಿತ್ಯಾನುವಾದಕ ಮೂರು ಮುಖ್ಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರುತ್ತಾನೆ.

೧. ಅನುವಾದ ಮಾಡುವ ವಿಷಯದ ಅಂತರಾಳದ ಸ್ಪಷ್ಟ ತಿಳುವಳಿಕೆ.

೨. ಮೂಲಕೃತಿಯಲ್ಲಿ ಸರಿಯಾಗಿ ಕೆಲವಡೆ ಅಭಿವ್ಯಕ್ತಿಯಾಗದಿದ್ದರೂ, ಅದರ ಸಾರವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ.

೩. ಸರಳ ಹಾಗೂ ನೇರವಾದ ಭಾಷೆಯ ಮೂಲಕ ವಿಷಯವನ್ನು ವಿವೇಚಿಸುವ ಸಾಮರ್ಥ್ಯ.

ಈ ಮೂರು ಅಂಶಗಳು ವೈಜ್ಞಾನಿಕಸಾಹಿತ್ಯ ಅನುವಾದಕನಿಗಿರಬೇಕಾದ ಗುಣಗಳು. ವೈಜ್ಞಾನಿಕ ಸಾಹಿತ್ಯ ಅನುವಾದ ಮಾಡುವಾಗ ತಲೆದೋರುವ ಮುಖ್ಯ ಪಾರಿಭಾಷಿಕ ಪದಗಳನ್ನು ಬಳಸಬೇಕಾದಾಗ, ಮೂಲ ಪದಕ್ಕೆ ನಮ್ಮಲ್ಲಿರುವ ತೊಡಕೆಂದರೆ ಪಾರಿಭಾಷಿಕ ಪದಗಳ ನಿರ್ಮಾಣ. ಶಬ್ದಗಳನ್ನು ಪೂರೈಸಬಹುದು.

ಉದಾಹರಣೆ Acid ಎಂಬ ಪದಕ್ಕೆ "ಆಮ್ಲ" ಎಂಬ ಪದ ಸರಿಯಾಗಿ ಹೊಂದುತ್ತದೆ. Atmosphere ಎಂಬ ಶಬ್ದಕ್ಕೆ "ವಾತಾವರಣ" ಎಂಬ ಕನ್ನಡ ಶಬ್ದ ಸರಿದೂಗುತ್ತದೆ. ಕೆಲವು ಸಲ ನಮ್ಮಲ್ಲಿ ಪದ ದೊರೆಯದಿದ್ದಾಗ ಅದೇ ಪದವನ್ನು ಸ್ವೀಕರಿಸುವುದರ ಮೂಲಕ ಅದು ಅನುವಾದವಾಗುವ ಭಾಷೆಯಲ್ಲಿ ಚಲಾವಣೆಗೆ ಬರುತ್ತದೆ. ಉದಾಹರಣೆಗೆ towel, fan ಇತ್ಯಾದಿ ಪದಗಳು. ಕೆಲವು ಸಲ ಮೂಲ ಪದವನ್ನು ಅನುವಾದಿಸುವುದರ ಮೂಲಕ ಹೊಸ ರೂಪವನ್ನು ಸೃಷ್ಟಿಸ-ಬಹುದು. ಉದಾಹರಣೆಗೆ X-Ray "ಕ್ಷ ಕಿರಣ", Cold-war "ಶೀತಲ ಯುದ್ಧ" ಇತ್ಯಾದಿ.

೨. **ಸಾಮಾಜಿಕ ಸಾಹಿತ್ಯಾನುವಾದ :** ಸಾಮಾಜಿಕ ಸಾಹಿತ್ಯಾನುವಾದದ ರೀತಿ ಕೂಡ ವೈಜ್ಞಾನಿಕ ಸಾಹಿತ್ಯಾನುವಾದದ ರೀತಿಯಂತೆಯೇ ಕಂಡು ಬಂದರೂ, ಬೇರೆ ಬೇರೆ ಸಾಮಾಜಿಕ ರೀತಿ ಪದ್ಧತಿಗಳ ಆಚರಣೆ ಹಾಗೂ ಬದುಕನ್ನು ಬಿಂಬಿಸುವ ಪಾರಿಭಾಷಿಕ ಪದಗಳು ವಿಜ್ಞಾನದಂತೆ ಸಾರ್ವತ್ರಿಕವಾಗಿರದೆ ಪರಿಸರ ಸಾಮಾಜಿಕ ಬದುಕಿನುಗುಣವಾಗಿ ಭಿನ್ನವಾಗಿರುತ್ತವೆ. ವೈಜ್ಞಾನಿಕ ಸಾಹಿತ್ಯದಲ್ಲಿ ಪದಗಳ ಅರ್ಥ ಸಾಮಾನ್ಯವಾಗಿ ಸಾರ್ವತ್ರಿಕವಾಗಿರುತ್ತದೆ. ಉದಾಹರಣೆಗೆ "ಇಂಗಾಲಾಮ್ಲ" ಎಂಬ ಪದದ ಅರ್ಥ ಒಂದು ಸಂಸ್ಕೃತಿಯಿಂದ ಇನ್ನೊಂದು ಸಂಸ್ಕೃತಿಗೆ ಭಿನ್ನವಾಗುವುದಿಲ್ಲ. ಆದರೆ ರಾಜಕೀಯಶಾಸ್ತ್ರ, ಸಮಾಜಶಾಸ್ತ್ರದಲ್ಲಿ ಬಳಕೆಯಾಗುವ Democracy ಎನ್ನುವ ಪದ ಭಾರತದ ಪ್ರಜೆಗಳಿಗೆ ಯಾವ ಅರ್ಥವನ್ನು ಉಂಟುಮಾಡುತ್ತದೆಯೋ ಅದೇ ರೀತಿ ಚೈನಾ, ರಷ್ಯಾ, ಪಾಕಿಸ್ತಾನ, ದಕ್ಷಿಣ ಆಫ್ರಿಕಾದಲ್ಲಿ ಅದೇ ಅರ್ಥವನ್ನು ಕೊಡುವುದಿಲ್ಲ. ಆಯಾ ದೇಶಗಳಲ್ಲಿ ಪ್ರಚಲಿತವಿರುವ ಸಂವಿಧಾನಾತ್ಮಕ ಚೌಕಟ್ಟು ಗಳ ನಡುವೆ ಈ ಪದದ ಅರ್ಥ ನಿಷ್ಪನ್ನವಾಗುವುದರಿಂದ ಒಂದೇ ಪದವಿದ್ದರೂ ಸಹ ಸಾರ್ವತ್ರಿಕತೆಯನ್ನು ಪಡೆಯದೆ ಸಾಮಾಜಿಕ, ರಾಜಕೀಯ ಪರಿಸರಗಳಿಗನು ಗುಣವಾಗಿ ಭಿನ್ನವಾಗುತ್ತದೆ. ಅಲ್ಲದೇ ಕೆಲವು ಸಲ ಒಂದು ಪದದ ಸಂವಾದಿ ಪದ ಇತರ ಭಾಷೆಯಲ್ಲಿ ದೊರೆಯದಿರಬಹುದು. ಉದಾಹರಣೆಗೆ ವೀರಶೈವಧರ್ಮದಲ್ಲಿ ಬಳಕೆಯಾಗಿರುವ ಬಯಲು, ಶೂನ್ಯ ಎಂಬ ಪದಗಳು ಬೇರೆ ಭಾಷೆಯಲ್ಲಿ ಸರಿಯಾದ ಸಂವಾದಿ ಅರ್ಥ ಬರುವಂತಹ ರೂಪವನ್ನು ಪಡೆಯಲಾರವು. ಕೆಲವು ಭಾಷೆಗಳಲ್ಲಿ ಸಾಮಾಜಿಕ ಸಾಹಿತ್ಯಾನುವಾದ ಇತ್ತೀಚೆಗೆ ಹೆಚ್ಚು ನಿಖರತೆಯನ್ನು ಪಡೆಯ ತೊಡಗಿದೆ. ಮೂಲ ಭಾಷೆಯಲ್ಲಿ ವ್ಯಕ್ತವಾಗಿರುವ ವಿಚಾರಕ್ಕೆ ಚ್ಯುತಿ ಬಾರದಂತೆ, ವಸ್ತುನಿಷ್ಠವಾಗಿಸಲು ಬರುವಂತೆ ಹೆಚ್ಚು ಹೆಚ್ಚು ಪಾರಿಭಾಷಿಕ ಪದಗಳ ನಿರ್ಮಾಣ-ವಾಗುತ್ತಿವೆ. ಸರಳವಾಗಿ, ಸ್ಪಷ್ಟವಾಗಿ ನಿರೂಪಿಸುವ ಪ್ರಯತ್ನ ಕೂಡ ನಡೆಯುತ್ತಿದೆ.

೩. ಸೃಜನ ಸಾಹಿತ್ಯಾನುವಾದ : ಸೃಜನ ಸಾಹಿತ್ಯಾನುವಾದದ ರೀತಿ ಇತರ ಪ್ರಭೇದಗಳಿಗಿಂತ ಭಿನ್ನವಾಗಿರುತ್ತದೆ. ಮೂಲ ಭಾಷೆಯ ಕಲ್ಪನಾ ಸಾಮರ್ಥ್ಯದ ಭಾವವನ್ನು ಅರಿತುಕೊಂಡು ಆ ಜೀವಂತ ಅನುಭವವನ್ನು ಮೂಲದ ಶಬ್ದ ಹಾಗೂ ರೂಪಗಳಿಗೆ ಸಮಾನವಾದ ಶಬ್ದ ಹಾಗೂ ರೂಪಗಳಲ್ಲಿ ಅಭಿವ್ಯಕ್ತಿಗೊಳಿಸಬೇಕು. ಆದ್ದರಿಂದ ಇಲ್ಲಿ ಅನುವಾದಕ ಹೆಚ್ಚು ಸೃಜನಶೀಲನಾಗಿರಬೇಕಾದ ಅನಿವಾರ್ಯತೆ ಇದೆ. ಸೃಜನಸಾಹಿತ್ಯ, ಕಾವ್ಯ, ನಾಟಕ, ಕಥೆ, ಕಾದಂಬರಿ, ಪ್ರಬಂಧ ಹೀಗೆ ಅನೇಕ ಪ್ರಕಾರಗಳನ್ನು ಹೊಂದಿದೆ. ಅನುವಾದ ಈ ಪ್ರಕಾರಗಳಿಗನುಗುಣವಾಗಿ ಭಿನ್ನವಾಗುತ್ತದೆ. ಕಾವ್ಯದ ಅನುವಾದ ಪ್ರಬಂಧದ ಅನುವಾದದಂತೆ ಇರದೆ, ಕಡಿಮೆ ವಾಕ್ಯಗಳಲ್ಲಿ ಹೆಚ್ಚು ಅರ್ಥವನ್ನು ತುಂಬಿಕೊಂಡಿರಬೇಕಾಗುತ್ತದೆ. ಹಾಗಾಗಿ ಇದು ಇತರ ಪ್ರಕಾರಗಳಿಗಿಂತ ಕಠಿಣವಾದುದಾಗಿದೆ. ಕಠಿಣವಾಗಿರುವುದಕ್ಕೆ ಒಂದು ಭಾಷೆಯಲ್ಲಿ ಹುಟ್ಟಿ ಬರುವ ವಿಶಿಷ್ಟ ರಚನೆ ಇನ್ನೊಂದು ಭಾಷೆಯಲ್ಲಿ ಅಷ್ಟು ಸುಲಭವಾಗಿ ಬರಲಿಕ್ಕಿಲ್ಲ. ಆ ಕಾರಣದಿಂದ ಇಲ್ಲಿ ಅನುವಾದಕ ಮೂಲ ಕೃತಿಯ ಸಂದೇಶವನ್ನು ಅಷ್ಟು ಸಮರ್ಥವಾಗಿ ಸಂವಹನಿಸಲು ಸೋಲಬಹುದು. ಕೆಲವು ಸಲ ಅನುವಾದವೇ ಮೂಲಕೃತಿಗಿಂತ ಚೆನ್ನಾಗಿ ಮೂಡಿ ಬರಬಹುದು. ಉದಾಹರಣೆಗೆ ಬಿ.ಎಂ ಶ್ರೀ ಯವರು ಇಂಗ್ಲೀಷ್ ಕವಿತೆಯನ್ನು ಕನ್ನಡಕ್ಕೆ ಅನುವಾದಿಸಿರುವ ಪದ್ಯ ಹಾಗೂ ಅದರ ಇಂಗ್ಲೀಷ ಮೂಲರೂಪವನ್ನು ಇಲ್ಲಿ ಕೊಡಲಾಗಿದೆ.

ಕನ್ನಡ ಅನುವಾದ

ವಸಂತ ಬಂದ ಋತುಗಳ ರಾಜ ತಾ ಬಂದ
ಚಿಗುರನು ತಂದ ಹೆಣ್ಗಳ ಕುಣಿಸುತ ನಿಂದ
ಚಳಿಯನು ಕೊಂದ, ಹಕ್ಕಿಗಳ ಉಲಿಗಳೆ ಚೆಂದ
ಕುವ್ವೂ, ಜಗ್-ಜಗ್, ಪುವ್ವೀ, ಟೂವಿಟ್ಟವೂ

–ಬಿ.ಎಂ. ಶ್ರೀ

ಇಂಗ್ಲೀಷ ಪದ್ಯ

Spring the sweet spring is the years' pleasent king
Then blooms each thing, then maids dance in a ring
Cold doth not sting, the petty birds do sing
Cuckoo, jug–jug, pu-we, to witta–wo.

– Spring; T.Nash.

ಅನುವಾದಕ ಗಮನಿಸಬೇಕಾದ ಅಂಶಗಳು :

೧. ಅನುವಾದಕನಿಗೆ ಎರಡು ಭಾಷೆಗಳಲ್ಲಿಯೂ ಪ್ರಭುತ್ವ ಇರಬೇಕು. ಒಂದು

ಭಾಷೆಯ ಮೇಲೆ ಪ್ರಭುತ್ವವಿದ್ದು ಇನ್ನೊಂದು ಭಾಷೆಯ ಅರಿವಿಲ್ಲದ ವ್ಯಕ್ತಿ ಅನುವಾದಕನಾಗಲಾರ. ಅನುವಾದ ಎಂಬುದು ಎರಡು ಭಾಷೆಗಳ ನಡುವೆ ನಡೆಯುವ ಕ್ರಿಯೆ ಯಾದ್ದರಿಂದ ಎರಡು ಭಾಷೆಗಳ ಜ್ಞಾನ ಅನಿವಾರ್ಯ.

೨. ಅನುವಾದದಲ್ಲಿ ಮೂಲದ ಶಬ್ದಗಳನ್ನು ಬಳಸಿಕೊಳ್ಳಬೇಕು. ಯಾವುದೇ ಭಾಷೆಯ ಶಬ್ದ ತನ್ನ ಭಾಷೆಯ ಸಾಮಾಜಿಕ ಚೌಕಟ್ಟಿನೊಳಗೆ ತನ್ನದೇ ಆದ ವಿಶಿಷ್ಟ ಅರ್ಥವನ್ನು ಪಡೆದುಕೊಂಡಿರುತ್ತದೆ. ಆದ್ದರಿಂದ ಪದಗಳ ಆಯ್ಕೆ ಮಾಡುವಾಗ ಮೂಲ ಶಬ್ದಗಳ ಅರ್ಥವನ್ನು ಈ ಶಬ್ದ ಪ್ರತಿನಿಧಿಸುತ್ತದೆಯೇ ಎಂಬುದನ್ನು ಖಚಿತ ಪಡಿಸಿಕೊಂಡು ನಂತರ ಅದನ್ನು ಆಯ್ಕೆ ಮಾಡಿಕೊಳ್ಳ ಬೇಕು. ಉದಾಹರಣೆಗೆ ಇಂಗ್ಲೀಷಿನ ಪಡೆನುಡಿ 'Herculean task' ಎಂಬ ರೂಪವನ್ನು ಕನ್ನಡಕ್ಕೆ ತರುವಾಗ ಅದು 'ಹರ್ಕ್ಯೂಲಸ್‌ನ ಕೆಲಸ' ಆಗುತ್ತದೆ. ಆದರೆ ಈ ಅರ್ಥದ ರೂಪ ಕನ್ನಡದಲ್ಲಿ ಸರಿಯಾದ ಅರ್ಥವನ್ನು ಕೊಡಲು ಸೋಲುತ್ತದೆ. ಕನ್ನಡದಲ್ಲಿ ಮೊದಲಿನಿಂದಲೂ ಬಳಕೆಯಲ್ಲಿರುವ "ಭಗೀರಥ ಪ್ರಯತ್ನ" ಎಂಬ ಪಡೆನುಡಿಯನ್ನು 'Herculean task' ಎಂಬ ರೂಪಕ್ಕೆ ಕೊಟ್ಟರೆ ಸಮರ್ಥವಾದ ಅರ್ಥವನ್ನು ಕೊಡುತ್ತದೆ. ಅದೇ ರೀತಿ "Cry in Wilderness" ಎಂಬ ಪಡೆನುಡಿಗೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಯಲ್ಲಿರುವ 'ಅರಣ್ಯರೋದನ' ಎಂಬ ರೂಪ ಸರಿಹೊಂದುತ್ತದೆ. ಆದ್ದರಿಂದ ಅನುವಾದ ಮೂಲ ಶಬ್ದಗಳ ಬಳಕೆಯ ಕಡೆಗೆ ಗಮನಕೊಡಬೇಕಾದುದು ಅತ್ಯವಶ್ಯ.

೩. ಯಾವುದೇ ಪದಕ್ಕೆ ಸಂವಾದಿ ಪದವನ್ನು ಕೊಡುವಾಗ ಅನುವಾದಕ ಶಬ್ದಾನ್ವಯಕ್ಕಿಂತ ಪ್ರಯೋಗದ ಕಡೆ ಹೆಚ್ಚು ಗಮನಕೊಡಬೇಕು. ಉದಾಹರಣೆಗೆ 'Excise Duty' ಎಂಬ ಪದಕ್ಕೆ ಸಂವಾದಿಯಾಗಿ "ಅಬಕಾರಿ ಕರ್ತವ್ಯ" ಎಂಬ ಕನ್ನಡ ಅನುವಾದವನ್ನು ಕೊಟ್ಟರೆ ಸರಿಯಾಗುವುದಿಲ್ಲ. ಏಕೆಂದರೆ ಒಂದು ಭಾಷೆಯ ರೂಪಗಳನ್ನು ಮತ್ತೊಂದು ಭಾಷೆಗೆ ಅನ್ವಯಿಸುವುದಕ್ಕಿಂತ ಹೆಚ್ಚಾಗಿ ಯಾವ ಅರ್ಥದಲ್ಲಿ ಅದು ಪ್ರಯೋಗಗೊಂಡಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಅರ್ಥ ಕೊಡುವುದು ಮುಖ್ಯವಾಗುತ್ತದೆ. 'excise duty' ಎಂಬ ಪದಕ್ಕೆ 'ಅಬಕಾರಿ ಸುಂಕ' ಎಂಬ ಅರ್ಥ ಸರಿ ಹೊಂದುತ್ತದೆ. ಹಾಗೆಯೇ 'elected body' ಎಂಬ ಇಂಗ್ಲೀಷ ರೂಪಕ್ಕೆ "ಆಯ್ದ ದೇಹ" ಎಂಬ ಕನ್ನಡ ರೂಪಕ್ಕಿಂತ "ಚುನಾಯಿತ ಮಂಡಳಿ" ಎಂಬ ರೂಪ ಸಮಂಜಸವಾಗುತ್ತದೆ. ಅನುವಾದಕಾರ ಶಬ್ದಾನ್ವಯಕ್ಕಿಂತ ಪ್ರಯೋಗದ ಕಡೆ ಹೆಚ್ಚು ಗಮನಕೊಡಬೇಕು.

೪. ಅನುವಾದಕ ಯಾವುದೇ ಪದಕ್ಕೆ ಹೊಸ ಅರ್ಥವನ್ನು ಕೊಟ್ಟು ಬಳಸುವಾಗ ಯೋಚಿಸಬೇಕು. ಉದಾಹರಣೆಗೆ ಇಂಗ್ಲೀಷಿನಲ್ಲಿ 'Lock-out' ಎಂಬ ಪದ ಇದೆ. ಇದಕ್ಕೆ 'ಬೀಗ – ಹೊರಗೆ' ಎಂಬ ಕನ್ನಡ ಸಂವಾದಿ ಪದವನ್ನು ಬಳಸಿ ಚಲಾವಣೆ ತರಬಹುದು. ಆದರೆ ಹೀಗೆ ಚಲಾವಣೆ ತಂದರೆ ಅದು ಸಮರ್ಥವಾದ ಅರ್ಥವನ್ನು ಕೊಡುತ್ತದೆಯೇ ? ಇಂಥ ಚಲಾವಣೆ ತಂದ ರೂಪಗಳಿಂದ ನಾವು ಸರಿಯಾದ ಅರ್ಥವನ್ನು ಪಡೆಯ ಬಹುದೇ ಎಂಬುದನ್ನು ಯೋಚಿಸಬೇಕು. ಹೀಗೆ ಯೋಚಿಸಿದಾಗ 'ಬೀಗ – ಹೊರಗೆ' ಎಂಬ ರೂಪ ಸರಿಕಾಣದೆ 'ಬೀಗ ಮುದ್ರೆ' ಎಂಬ ರೂಪ ಅವಸಿಗೆ ಸರಿಕಾಣುತ್ತದೆ. ಆದ್ದರಿಂದ ಯಾವುದೇ ಪದಕ್ಕೆ ಹೊಸ ಅರ್ಥವನ್ನು ಕೊಡುವಾಗ, ಯೋಚಿಸಿ ಕೊಡಬೇಕಾದುದು ಅನಿವಾರ್ಯ.

೫. ಅನುವಾದಕ ಸಮಾನಾರ್ಥವನ್ನು ಕೊಡುವಾಗ ಪರಕೀಯ ಶಬ್ದಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕಿಂತ ಚಿರಪರಿಚಿತ ಶಬ್ದಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಉದಾಹರಣೆಗೆ 'hanging fire'ಎಂಬ ಇಂಗ್ಲೀಷ ಪದಕ್ಕೆ ಸಂವಾದಿಯಾಗುವಂತೆ ನಮ್ಮಲ್ಲಿ "ನೆನೆಗುದಿ" ಎಂಬ ಪದ ಬಳಕೆಯಲ್ಲಿದೆ. ಇಂಥ ಚಿರಪರಿಚಿತ ಪದಗಳನ್ನು ಅನುವಾದಿಸಬೇಕಾದ ರೂಪಗಳಿಗೆ ಸಂವಾದಿಯಾಗಿ ತಂದರೆ ಅಂತಹ ಅನುವಾದ ಹೆಚ್ಚು ಪರಿಣಾಮಕಾರಿ ಯಾಗುತ್ತದೆ.

೬. ಅನುವಾದಕ ಗಮನಿಸಬೇಕಾದ ಅಂಶಗಳಲ್ಲಿ ಅನುವಾದದ ವಿಷಯ ಶೈಲಿ, ರೀತಿ ಬಹಳ ಮುಖ್ಯವಾದವು. ಅನುವಾದಿಸಬೇಕಾದ ಪದ್ಯ, ಗದ್ಯ ಶೈಲಿಯಲ್ಲಿ ದೆಯೇ, ಅಥವಾ ಪದ್ಯ ಶೈಲಿಯಲ್ಲಿದೆಯೇ ಎಂಬುದನ್ನು ಅರಿತ ಮೇಲೆ ಅದಕ್ಕೆ ಸರಿಹೊಂದುವಂತಹ ಶೈಲಿಯನ್ನು ಆಯ್ಕೆಮಾಡುವ ಹೊಣೆ ಅನುವಾದಕಾರನಿಗೆ ಸೇರಿದ್ದು. ಅನುವಾದಿಸಬೇಕಾದ ವಿಷಯಕ್ಕನುಗುಣವಾಗಿಯೂ ಭಾಷಾ ಬಳಕೆಯ ಶೈಲಿಯಲ್ಲಿ ವ್ಯತ್ಯಾಸವಾಗುತ್ತದೆ. ಗದ್ಯ ಶೈಲಿಯಲ್ಲಿ ಸಾಮಾನ್ಯ-ವಾಗಿ ಸರಳವಾದ ವಾಕ್ಯಗಳ ಬಳಕೆಯಾದರೆ, ಪದ್ಯ ಶೈಲಿಯಲ್ಲಿ ಸಂಕೀರ್ಣವಾದ ವಾಕ್ಯಗಳ ಬಳಕೆಯಾಗುತ್ತದೆ. ವಿಜ್ಞಾನ ಅಥವಾ ಶಾಸ್ತ್ರ ಸಾಹಿತ್ಯದ ಬರವಣಿಗೆಯಲ್ಲಿ ಅನುವಾದ ಹೆಚ್ಚು ಪಾರಿಭಾಷಿಕ ಪದಗಳ ಬಳಕೆಯಿಂದ ಕೂಡಿರುತ್ತದೆ. ಅನುವಾದ ಮಾಡಬೇಕಾದ ಕೃತಿಯಲ್ಲಿ ಯಾವ ರೀತಿಯಿಂದ ವಿಷಯ ನಿರೂಪಿಸಲ್ಪಟ್ಟಿದೆ ಎಂಬ ಅಂಶವನ್ನು ಗಮನಿಸಿ, ಅದಕ್ಕೆ ಸರಿಹೊಂದು-ವಂತೆ ಅನುವಾದ ಮಾಡಬೇಕಾದ ಹೊಣೆ ಅನುವಾದಕನ ಮೇಲಿರುತ್ತದೆ.

ಅನುವಾದಿತ ಕೃತಿಯ ಉದ್ದಕ್ಕೂ ಅನುವಾದಿಸಿದ ಪಠ್ಯದಲ್ಲಿರುವ ಶೈಲಿಯ ಸಮತೋಲನವನ್ನು ಕಾಯ್ದುಕೊಳ್ಳಬೇಕಾದ ಅವಶ್ಯಕತೆ ಇದೆ.

೭. ಅನುವಾದಕ ಅನುವಾದಿಸಬೇಕಾದ ಕೃತಿಯ ಒಳಹೊಕ್ಕು ನೋಡುವ ಅಂತಃ ಚಕ್ಷುವನ್ನು ಪಡೆದಿರಬೇಕು. ಯಾವುದೇ ಅನುವಾದ ಈ ರೀತಿಯ ಒಳಹೊಕ್ಕು ನೋಡಿ, ಅರ್ಥೈಸಿಕೊಂಡು ಬರೆಯಲ್ಪಡದಿದ್ದರೆ, ಅದು ಅನುವಾದದ ಸತ್ವವನ್ನು ಕಳೆದುಕೊಂಡು ಬಿಡುತ್ತದೆ. ಅನುವಾದ ಅತ್ಯಂತ ಸತ್ವಯುತವಾಗಿ ಒಡಮೂಡುವುದು ಮೂಲ ಪಠ್ಯದ ಎಲ್ಲ ಕ್ರಿಯಾಶಕ್ತಿಯನ್ನು ಒಳಗೊಂಡಾಗಲೇ.

೮. ಅನುವಾದಕ ಭಾಷೆಯನ್ನು ಹೆಚ್ಚು ಕ್ರಿಯಾತ್ಮಕವಾಗಿ, ಸೃಜನಶೀಲವಾಗಿ ಬಳಸುವ ಸಾಮರ್ಥ್ಯ ಪಡೆದಿರಬೇಕು. ಅನುವಾದವೆಂಬುದು ಸೃಜನಶೀಲ ಕ್ರಿಯೆಯಾದುದರಿಂದ ಭಾಷೆಯ ಕ್ರಿಯಾಶೀಲ ಬಳಕೆ ಅನಿವಾರ್ಯವಾಗುತ್ತದೆ. ಶಾಸ್ತ್ರಸಾಹಿತ್ಯಗಳ ಅನುವಾದಕ್ಕಿಂತ ಸೃಜನಶೀಲ ಕೃತಿಗಳ ಅನುವಾದದಲ್ಲಿ ಭಾಷೆ ಹೆಚ್ಚು ಸೃಜನಶೀಲವಾಗಿ ಬಳಕೆಯಾಗುತ್ತದೆ. ಆದ್ದರಿಂದ ಭಾಷೆಯನ್ನು ಸರಾಗವಾಗಿ ಬಳಸುವ, ಭಾಷೆಯ ಅಂತರಂಗವನ್ನು ಅರ್ಥೈಸಿಕೊಂಡು ಹೆಚ್ಚು ಪ್ರಭಾವಪೂರ್ಣವಾಗಿ ಬಳಸುವ ಶಕ್ತಿ ಅನುವಾದಕನಿಗೆ ಇರಬೇಕು.

೯. ಅನುವಾದಕ ಪಾರಿಭಾಷಿಕ ಪದಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಸರ್ವೇ ಸಾಮಾನ್ಯವಾಗಿ ಒಂದು ಪದ ಒಂದೇ ಅರ್ಥವನ್ನು ಹೊಂದಿರುವಂತೆ ನೋಡಿ ಕೊಳ್ಳಬೇಕು. ಅಲ್ಲದೆ ಒಂದು ವಿಚಾರಕ್ಕೆ ಒಂದೇ ಹೆಸರಿರುವಂತೆ ನೋಡಿ ಕೊಳ್ಳಬೇಕು. ಉದಾಹರಣೆಗೆ ಇಂಗ್ಲೀಷಿನಲ್ಲಿ heat ಮತ್ತು temperature ಎಂಬ ಎರಡು ಭಿನ್ನಾರ್ಥವನ್ನು ಪಡೆದ ರೂಪಗಳಿವೆ. heat ಎಂಬ ರೂಪ ಉಷ್ಣಕ್ಕೆ ಸಂಬಂಧಿಸಿದುದಾದರೆ temperature ಎನ್ನುವ ರೂಪ ದೇಹದ ಅಥವಾ ವಾತಾವರಣದ ಉಷ್ಣತಾಮಾನಕ್ಕೆ ಸಂಬಂಧಿಸುದಾಗಿದೆ. ಇಂತಹ ಪಾರಿಭಾಷಿಕ ರೂಪಗಳನ್ನು ಕನ್ನಡದಲ್ಲಿ ಹೇಗೆ ವ್ಯಕ್ತಪಡಿಸಬೇಕೆಂಬುದು ಸಮಸ್ಯೆ. ಹಾಲಿ ಬಳಕೆಯಲ್ಲಿರುವ ರೂಪ ಯಾವುದಕ್ಕೆ ಸರಿ ಹೊಂದುತ್ತದೆ ಎಂಬುದನ್ನು ಗಮನಿಸಿ ಇಂಗ್ಲೀಷ ಪದಕ್ಕೆ ಸಂವಾದಿ ಯಾಗಬಲ್ಲುದೇ ಎಂಬುದನ್ನು ನೋಡಿ ಇಡಬೇಕು. ಒಂದು ವೇಳೆ ಸರಿಯಾಗಿರದಿದ್ದರೆ ಇಂಗ್ಲೀಷಿನ ರೂಪವನ್ನು ಹಾಗೇ ಸ್ವೀಕರಿಸಬಹುದು. ಪಾರಿಭಾಷಿಕ ಪದಗಳನ್ನು ಆಯ್ಕೆ ಮಾಡಿಕೊಳ್ಳು ವಾಗ ಸ್ವತಃ ಅರ್ಥವಿವರಣೆ ನೀಡುವಂತಹ ರೂಪಗಳನ್ನು ಆಯ್ಕೆ ಮಾಡಿ ಕೊಳ್ಳಬೇಕು.

ಕೆಲವು ಪಾರಿಭಾಷಿಕ ಪದಗಳು ಎರಡು ವಿಚಾರಗಳ ನಡುವಿನ ಸೂಕ್ಷ್ಮ ಮತ್ತು ವಿಶಿಷ್ಟ ವ್ಯತ್ಯಾಸವನ್ನು ನಿರ್ದೇಶಿಸಲು ಪ್ರಯೋಗವಾಗುತ್ತವೆ. ಉದಾಹರಣೆಗೆ Power ಮತ್ತು energy; ಹಾಗೆಯೇ Speed ಮತ್ತು Velocity ಇಂತಹ ಪಾರಿಭಾಷಿಕ ಪದಗಳನ್ನು ವಿವರಿಸುವಾಗ ಆ ಪದಗಳಲ್ಲಿರುವ ಸೂಕ್ಷ್ಮ ವ್ಯತ್ಯಾಸವನ್ನು ಗಮನಿಸಿ, ಅವಕ್ಕೆ ಸಂವಾದಿಯಾಗುವಂತಹ ರೂಪಗಳನ್ನು ನೀಡಬೇಕು.

ಕೆಲವು ಪಾರಿಭಾಷಿಕ ಪದಗಳು ಸಂದಿಗ್ಧತೆಯನ್ನುಂಟು ಮಾಡುವಂತೆ ಬಳಕೆಯಾಗುತ್ತವೆ. ಅದಕ್ಕೆ ಸಂವಾದಿಯಾಗಿ ರೂಪಗಳನ್ನು ಹುಡುಕುವುದು ಕಷ್ಟವಾಗುತ್ತದೆ. ಉದಾಹರಣೆಗೆ ಇಂಗ್ಲೀಷಿನ Lactometer. Lactus ಎಂದರೆ ಹಾಲು,ಆದರೆ Lactometers ಎಂದರೆ "ಹಾಲಿನ ಮಾಪಕ" ವಾಗಿರದೆ "ಕ್ಷೀರಮಾಪಕ" ವಾಗುತ್ತದೆ. ಇಂತಹ ವ್ಯತ್ಯಾಸವನ್ನು ಅನುವಾದಕರ ಗಮನಿಸಬೇಕು.

೧೦. ಕೆಲವು ಪದಗಳು ಹಾಗೆಯೇ ಅನುವಾದಿಸಿದರೆ ಅರ್ಥವಾಗದೆ ಅವುಗಳ ವ್ಯಾಖ್ಯೆ ಮಾಡಿದ ನಂತರ ಮಾತ್ರ ಅವು ಅರ್ಥವಾಗುತ್ತವೆ ಎಂಬುದನ್ನು ಅನುವಾದಕ ಗಮನಿಸಬೇಕು. ಅಂತಹ ಶಬ್ದಗಳನ್ನು ಬರೆಯುವಾಗ ಅವುಗಳ ವ್ಯಾಖ್ಯೆಯನ್ನು ನೀಡಬೇಕು. ಉದಾಹರಣೆಗೆ ಎಲೆಕ್ಟ್ರಾನ (electron), ಎಲೆಮೆಂಟ್ (Element) ಎರ್ಗ್ (erg) ಮುಂತಾದವು. ಉದಾಹರಣೆಗೆ ಎರ್ಗ್ (erg) ಎಂಬುದು ಯಾವುದೇ ವಸ್ತು ಚಲನಶೀಲವಾಗಿದ್ದಾಗ ಉತ್ಪತ್ತಿಯಾಗುವ ಶಕ್ತಿಯನ್ನು ಮಾಪನ ಮಾಡುವ ಒಂದು ಮೂಲ ಮಾಪನ, ಎಂದು ವಿವರಣೆ ನೀಡಿದರೆ ಹೆಚ್ಚು ಅನುಕೂಲವಾಗುತ್ತದೆ.

೧೧. ಕೆಲವು ಪದಗಳ ಅರ್ಥ ನಿರ್ದೇಶನ ಬಹಿರಂಗವಾಗಿರದೆ ಗೂಢವಾಗಿರುತ್ತವೆ ಎಂಬುದನ್ನು ಅನುವಾದಕ ಗಮನಿಸಬೇಕು. ಆ ಪದಗಳ ಬಳಕೆಯ ವಿಶಿಷ್ಟ ಕ್ಷೇತ್ರದ ಜ್ಞಾನವಿರದ ಹೊರತು ಅವು ಅರ್ಥವಾಗುವುದಿಲ್ಲ. ಉದಾಹರಣೆಗೆ Palatography, Spectrography, Photo-Geology, Satellite ಮುಂತಾದ ಪದಗಳ ಅರ್ಥ ಸಾರ್ವತ್ರಿಕವಾಗಿರದೆ ವಿಶಿಷ್ಟ ಕ್ಷೇತ್ರದಲ್ಲಿ ಮಾತ್ರ ಬಳಕೆಯಾಗುತ್ತವೆ. ಅನುವಾದಕ ಈ ಅಂಶಗಳನ್ನು ಗಮನಿಸಬೇಕು.

ಅನುವಾದದಲ್ಲಿರುವ ತೊಂದರೆಗಳು :

ಅನುವಾದಕ ಎರಡು ಮುಖ್ಯ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಅವೇ ಭಾಷಿಕ ತೊಡಕು ಮತ್ತು ಸಾಂಸ್ಕೃತಿಕ ತೊಡಕು. ಭಾಷೆ ಮತ್ತು ಸಂಸ್ಕೃತಿ ಅನುವಾದದಲ್ಲಿ ಮಹತ್ತರ ಪಾತ್ರಗಳನ್ನು ವಹಿಸುತ್ತವೆ. ಅನುವಾದಕ ಭಾಷೆಯ

ಮೂಲಕ ಸಾಂಸ್ಕೃತಿಕ ಪದರಗಳನ್ನು ಎಳೆಎಳೆಯಾಗಿ ಬಿಚ್ಚುತ್ತಾ ಹೋಗುತ್ತಾನೆ. ಹಾಗಾಗಿ ಭಾಷೆ ಮತ್ತು ಸಂಸ್ಕೃತಿಗಳೆರಡೂ ಅನುವಾದದ ಹಂತದಲ್ಲಿ ನೇರವಾಗಿ ಇಲ್ಲವೇ ಹಿಂದಿನಿಂದ ಅನೇಕ ಸಮಸ್ಯೆಗಳನ್ನು ಉಂಟು ಮಾಡುತ್ತವೆ.

ಭಾಷೆ : ಒಂದೊಂದು ಭಾಷೆ ತನ್ನದೇ ಆದ ವಿಶಿಷ್ಟ ರಚನೆಯನ್ನೊಳ-ಗೊಂಡಿರುತ್ತದೆ. ಒಂದು ವೇಳೆ ಅನುವಾದ ಮಾಡಬೇಕಾದ ಮತ್ತು ಅನುವಾದಿತ ಭಾಷಾರಚನೆಗಳಲ್ಲಿ ಸಾಮ್ಯತೆ ಇದ್ದರೆ ಭಾಷಿಕ ತೊಡಕು ಕಡಿಮೆಯಾಗುತ್ತದೆ. ಭಾಷಾ ರಚನೆಗಳಲ್ಲಿ ಸಾಮ್ಯತೆ ಕಡಿಮೆಯಾದಷ್ಟು ತೊಡಕು ಹೆಚ್ಚುತ್ತಾ ಹೋಗುತ್ತದೆ. ಭಾಷಾ ರಚನೆಗಳ ಭಿನ್ನತೆ ಧ್ವನಿಘಟ್ಟದಲ್ಲಿರಬಹುದು, ವರ್ಣ ಘಟ್ಟದಲ್ಲಿರಬಹುದು, ಶಬ್ದಘಟ್ಟದಲ್ಲಿರಬಹುದು ಇಲ್ಲ ವಾಕ್ಯಘಟ್ಟದಲ್ಲಿರಬಹುದು.

ಮೂಲಭಾಷೆಯಿಂದ ಒಂದು ಕೃತಿ ಬೇರೆ ಭಾಷೆಗೆ ಅನುವಾದವಾಗಬೇಕಾದರೆ ಕೆಲವು ಧ್ವನಿಗಳು ಅನುವಾದಿತ ಭಾಷೆಯಲ್ಲಿ ಇಲ್ಲದಿರಬಹುದು. ಅಂತಹ ಸಂದರ್ಭದಲ್ಲಿ ಹೊಸ ಧ್ವನಿ ಸಂಕೇತಗಳನ್ನು ನಿರ್ಮಿಸಿಕೊಂಡು ಬಳಸುವ ಸಮಸ್ಯೆ ತಲೆದೋರುತ್ತದೆ. ಉದಾಹರಣೆಗೆ ಉರ್ದು ಭಾಷೆಯ ಕೃತಿಯನ್ನು ಕನ್ನಡಕ್ಕೆ ಅನುವಾದಿಸುವಾಗ Z ಮತ್ತು Q ಧ್ವನಿಗಳನ್ನು ಸೇರಿಸಿಕೊಳ್ಳುವ ಅವಶ್ಯಕತೆ ಉಂಟಾಗುತ್ತದೆ. ಏಕೆಂದರೆ ಇಂತಹ ಧ್ವನಿಗಳು ಮೂಲಭಾಷೆಯಲ್ಲಿರುವುದರಿಂದ ಅವುಗಳನ್ನು ಅನುವಾದಿತ ಭಾಷೆಗೆ ತರುವ ಅವಶ್ಯಕತೆ ಇದೆ. ಉದಾಹರಣೆ duqan, bazar ಇತ್ಯಾದಿ. ಅದೇ ರೀತಿ ಇಂಗ್ಲೀಷಿನ ಪದಗಳನ್ನು ಕನ್ನಡಕ್ಕೆ ತರುವಾಗಲೂ f, z ಮುಂತಾದ ಧ್ವನಿಗಳ ಅಗತ್ಯತೆ ತಲೆದೋರುತ್ತದೆ. ಭಾಷೆಯಲ್ಲಿ ಧ್ವನಿಗೆ ಅತ್ಯಂತ ಪ್ರಾಧಾನ್ಯತೆ ಇರುವುದರಿಂದ ಅನುವಾದಕ ಧ್ವನಿಯನ್ನು ನಿರ್ಲಕ್ಷಿಸಲು ಬರುವಂತಿಲ್ಲ.

ಶಬ್ದಘಟ್ಟದಲ್ಲಿಯೂ ಅನೇಕ ತೊಡಕುಗಳುಂಟಾಗುತ್ತವೆ. ಏಕೆಂದರೆ ಒಂದು ಭಾಷೆಯಲ್ಲಿ ಒಂದು ಶಬ್ದಕ್ಕೆ ಒಂದೇ ಅರ್ಥವಿರುವುದಿಲ್ಲ. ಯಾವುದೇ ಶಬ್ದ ತನ್ನ ಬಳಕೆಯ ಸಂದರ್ಭದಿಂದ ಭಿನ್ನ ಭಿನ್ನ ಅರ್ಥವ್ಯಾಪ್ತಿಯನ್ನು ಪಡೆದಿರುತ್ತದೆ. ಉದಾ-ಹರಣೆಗೆ ಇಂಗ್ಲೀಷಿನ Charge ಎಂಬ ಪದ ಭಿನ್ನ ಭಿನ್ನ ಬಳಕೆಯಲ್ಲಿ ಅರ್ಥವ್ಯತ್ಯಾಸ-ವನ್ನು ಹೊಂದುತ್ತಾ ಹೋಗುತ್ತದೆ. ಉದಾಹರಣೆಗೆ Charge the gun, Charge the battery, Charge the pencil, he is in-charge, he is a public charge, electricity charge ಮುಂತಾದ ರೂಪಗಳಲ್ಲಿ Charge ಪದ ವಿವಿಧ ಅರ್ಥವನ್ನು ಹೊಂದಿರುವುದು ಕಂಡು ಬರುತ್ತದೆ. ಆದ್ದರಿಂದ ಯಾವುದೇ ಪದದ ಅರ್ಥವನ್ನು ವಿವರಿಸುವುದೆಂದರೆ ಆ ಪದದ ಪ್ರಸಾರವನ್ನು ಅದು ಭಿನ್ನ ಪ್ರಸಾರದಲ್ಲಿ ಪಡೆಯುವ ಅರ್ಥ ವೈವಿಧ್ಯತೆಯನ್ನು ವಿವರಿಸುವುದೇ ಆಗಿದೆ. ಒಂದು ಪದಕ್ಕೆ ಇಂತಹದೇ ನಿರ್ದಿಷ್ಟ ಅರ್ಥವಿದೆ ಎಂದು ತಿಳಿದು ಅದರ ಸೀಮಾರೇಖೆಯನ್ನು

ನಿರ್ಧರಿಸುವುದು ಅನೇಕ ಸಂದರ್ಭದಲ್ಲಿ ಕಷ್ಟವಾಗುತ್ತದೆ. ಕೆಲವು ಭಾಷೆಗಳಲ್ಲಿ ಕೆಲವು ಪದಗಳು ಸಿಕ್ಕುವುದಿಲ್ಲ. ಕನ್ನಡದಲ್ಲಿ Megenta ಎಂಬ ಬಣ್ಣವನ್ನು ಸೂಚಿಸುವ ಪದವಿಲ್ಲ. ಅದೇರೀತಿ ಅನೇಕ ಬಣ್ಣಗಳನ್ನು ಸೂಚಿಸುವ ಪದಗಳಿಲ್ಲ. ಆಫ್ರಿಕಾದ ಭಾಷೆಯಲ್ಲಿ ಪ್ರಾಣಿ ಹಾಗೂ ಸಸ್ಯಗಳಿಗೆ ಇರುವಷ್ಟು ಹೆಸರುಗಳು ನಮ್ಮ ಭಾಷೆಯಲ್ಲಿ ಸಿಗುವುದಿಲ್ಲ. ಕಾರಣ ಪರಿಸರ ಮುಖ್ಯ ಪಾತ್ರವಹಿಸುತ್ತದೆ.

ಇನ್ನು ವಾಕ್ಯದ ಹಂತದಲ್ಲಿಯೂ ಅನೇಕ ಸಮಸ್ಯೆಗಳು ತಲೆದೋರುತ್ತವೆ. ಕರ್ತೃ, ಕರ್ಮ, ಕ್ರಿಯಾಪದಗಳು ಎಲ್ಲ ಭಾಷೆಗಳಲ್ಲಿಯೂ ಒಂದೇ ರೀತಿ ಅನುಕ್ರಮವಾಗಿ ಬರದೆ, ಭಿನ್ನತೆಯನ್ನು ಪಡೆದಿರುತ್ತವೆ. ಉದಾಹರಣೆಗೆ Kiran goes to school ಎಂಬಲ್ಲಿ ಕರ್ತೃ, ಕ್ರಿಯೆ ಮತ್ತು ಕರ್ಮಪದಗಳ ಅನುಕ್ರಮತೆ ಇದ್ದರೆ, ಕನ್ನಡದಲ್ಲಿ 'ಕಿರಣ ಶಾಲೆಗೆ ಹೋಗುತ್ತಾನೆ' ಎಂಬ ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯೆಯ ಅನುಕ್ರಮತೆ ಇದೆ. ವಾಕ್ಯದ ಹಂತದಲ್ಲಿಯೂ ಭಾಷೆಯ ರಚನೆ ಭಿನ್ನವಾಗಿರುತ್ತದೆ. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ಅನುವಾದ ತೊಡಕಾಗುತ್ತದೆ.

ವಾಕ್ಯಗಳಲ್ಲದೆ, ಸಮಾನಾರ್ಥಕ ಪಡೆನುಡಿ, ಗಾದೆಯ ಮಾತುಗಳ ಅಭಾವ ಕೂಡ ಅನುವಾದದಲ್ಲಿ ತೊಡಕಾಗಿ ಪರಿಣಮಿಸುತ್ತದೆ ಅಲ್ಲದೆ ಭಾಷೆಯಲ್ಲಿ ಬಳಕೆಯಾಗುವ ಲಕ್ಷ್ಯಾರ್ಥ, ವ್ಯಂಜನಾರ್ಥಗಳು ಕೂಡ ಅನುವಾದಕ್ಕೆ ತೊಡಕನ್ನುಂಟು ಮಾಡುತ್ತವೆ. ಒಂದು ಭಾಷೆಯಲ್ಲಿ ಸತ್ವಪೂರ್ಣವಾಗಿ ಬಳಕೆಯಾಗುವ ಇಂತಹ ರೂಪಗಳನ್ನು ಮತ್ತೊಂದು ಭಾಷೆಯಲ್ಲಿ ಅನುವಾದಿಸುವುದು ತೊಂದರೆದಾಯಕ. ಕೆಲವು ವೇಳೆ ಅನುವಾದ ಸಾಧ್ಯವಾಗಲಿಕ್ಕಿಲ್ಲ.

ಸಂಸ್ಕೃತಿ : ಭಾಷೆ, ಸಂಸ್ಕೃತಿಯನ್ನು ಹಿಡಿದಿಡುವ ಸಾಧನ. ಎಷ್ಟೋ ಸಾಂಸ್ಕೃತಿಕ ರೂಪಗಳು ಭಾಷೆಯ ಮೂಲಕ ಅಭಿವ್ಯಕ್ತಗೊಳ್ಳುತ್ತವೆ. ಭಾಷೆ ಸಂಸ್ಕೃತಿಯ ಪ್ರತಿಬಿಂಬವಾಗಿರುವುದರಿಂದ ಅನುವಾದದಲ್ಲಿ ಸಂಸ್ಕೃತಿ ಮಹತ್ವದ ಸ್ಥಾನವನ್ನು ಗಳಿಸಿಕೊಂಡಿದೆ. ಭಾಷೆಯಂತೆಯೇ ಎರಡು ಸಂಸ್ಕೃತಿಗಳ ನಡುವೆ ಸಮಾನಾಂಶವಿದ್ದರೆ ಅನುವಾದ ಸುಲಭವಾಗುತ್ತದೆ. ಎರಡು ಸಂಸ್ಕೃತಿಗಳ ನಡುವೆ ಭಿನ್ನತೆ ಹೆಚ್ಚಿದಾಗ ಸಹಜವಾಗಿಯೇ ಅನುವಾದದಲ್ಲಿ ತೊಡಕುಂಟಾಗುತ್ತದೆ. ವೈಜ್ಞಾನಿಕ ಹಾಗೂ ತಾಂತ್ರಿಕ ಕೃತಿಗಳ ಅನುವಾದದಲ್ಲಿ ಪಾರಿಭಾಷಿಕ ಪದಗಳ ಕೊರತೆ ಎದುರಾಗುತ್ತದೆಯೇ ವಿನಃ ಸಂಸ್ಕೃತಿಯ ಸಮಸ್ಯೆ ಹೆಚ್ಚಾಗಿ ಕಂಡುಬರುವುದಿಲ್ಲ. ಸಾಮಾನ್ಯವಾಗಿ ಸೃಜನಸಾಹಿತ್ಯದ ಅನುವಾದದಲ್ಲಿ ಸಂಸ್ಕೃತಿಯ ತೊಡಕು ಹೆಚ್ಚಾಗಿ ಕಂಡುಬರುತ್ತದೆ. ಏಕೆಂದರೆ ಸೃಜನ ಸಾಹಿತ್ಯ, ಅಥವಾ ಸೃಜನೇತರ ಸಾಹಿತ್ಯ ಒಂದು ವಿಶಿಷ್ಟ ಸಾಂಸ್ಕೃತಿಕ ಸಂದರ್ಭದಲ್ಲಿ ಹುಟ್ಟಿರುವುದರಿಂದ ಸಹಜವಾಗಿಯೇ ಅನೇಕ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿರುತ್ತದೆ.

ದುಃಖವನ್ನು ಸೂಚಿಸಲು ಭಿನ್ನ ಸಂಸ್ಕೃತಿಗಳಲ್ಲಿ ಭಿನ್ನಭಿನ್ನ ಆಚರಣೆ ಹಾಗೂ ನಂಬಿಕೆಗಳಿವೆ. ಈ ರೀತಿಯ ನಂಬಿಕೆಗಳು ಅವರ ಭಾಷೆಯ ಪದಗಳ ಮೂಲಕ ವ್ಯಕ್ತ ವಾಗುತ್ತವೆ. ದುಃಖವಾಗಿದೆ ಎಂಬುದನ್ನು ಸೂಚಿಸಲು ಫ್ರೆಂಚನ ಸೂಡನ್ ಭಾಷಿಕರು "having a sick liver" ಎಂದು ಹೇಳುತ್ತಾರೆ. ಆದರೆ ಹ್ಯಾಬೆಸ್ ಭಾಷಿಕರು "having a black eye" ಎಂದು ಹೇಳುತ್ತಾರೆ. ಮೊಸ್ಸಿ ಭಾಷಿಕರು 'having a rotten heart' ಎಂದು ಹೇಳುತ್ತಾರೆ. ಹಾಗೆಯೇ ಉದುಕ್ ಭಾಷಿಕರಿಗೆ 'having a heavy stomach' ಆಗಿರುತ್ತದೆ. ಅದೇ ರೀತಿ ಕನ್ನಡಿಗರಿಗೆ 'Having a heavy heart' ಆಗಿರುತ್ತದೆ. ಈ ಉದಾಹರಣೆಗಳಿಂದ ಬೇರೆ ಬೇರೆ ಸಾಂಸ್ಕೃತಿಕ ನೆಲೆಯಲ್ಲಿ ದುಃಖದ ಕಲ್ಪನೆ ಹೇಗೆ ಭಿನ್ನ ಭಿನ್ನ ರೂಪ ತಾಳಿದೆ ಎಂಬ ಅಂಶ ವ್ಯಕ್ತ ವಾಗುತ್ತದೆ. ಭಾಷೆ ಕೂಡ ಇಂತಹ ದುಃಖದ ಪರಿಕಲ್ಪನೆಯನ್ನು ಬೇರೆ ಬೇರೆ ಪದ ಗಳಿಂದ ಹಿಡಿದಿಡಲು ಪ್ರಯತ್ನಿಸಿದೆ. ಅನುವಾದಕನಿಗೆ ಬೇರೆ ಬೇರೆ ಭಾಷಾ ನೆಲೆ ಗಳಲ್ಲಿರುವ ಈ ರೀತಿಯ ದುಃಖದ ಪರಿಕಲ್ಪನೆಯ ವಾಸ್ತವತೆಯ ಅರಿವು ಇರಬೇಕಾ ಗುತ್ತದೆ.

ಕೆಲವು ಭಾಷೆಗಳಲ್ಲಿ ಕೆಲವು ಪದಗಳು ವಿಶಿಷ್ಟವಾಗಿರುತ್ತವೆ. ಹಿಂದೂ ಸಂಸ್ಕೃತಿ ಯಲ್ಲಿ ಕಂಡುಬರುವ ಪದಗಳಾದ ಕುಂಕುಮ, ಮಾಂಗಲ್ಯ, ವಿಭೂತಿ, ರುದ್ರಾಕ್ಷಿ ಮುಂತಾದವುಗಳು ಕೇವಲ ಪದಗಳಾಗಿರದೆ ಆ ಸಂಸ್ಕೃತಿಯ ವಿಶಿಷ್ಟ ಅಂಶವನ್ನು ತಿಳಿಸುವ ರೂಪಗಳಾಗಿವೆ. ಇಂತಹ ರೂಪಗಳು ಇನ್ನಿತರ ಸಂಸ್ಕೃತಿಯಲ್ಲಿ ಇಲ್ಲದಿರು ವಾಗ ಇಂತಹ ರೂಪಗಳನ್ನು ಅನುವಾದಿಸುವ ಸಂದರ್ಭದಲ್ಲಿ ತೊಡಕುಂಟಾಗುತ್ತದೆ. ಅದೇ ರೀತಿ ಕ್ರಿಸ್ತಧರ್ಮದಲ್ಲಿ ಬರುವ Dating, betrothal ಗಳಾಗಲಿ, ಅನು ವಾದಕ್ಕೆ ನಿಲುಕದ ಪದಗಳಾಗುತ್ತವೆ. ಹಬ್ಬಹರಿದಿನಗಳೂ ಕೂಡ ವಿಶಿಷ್ಟವಾಗಿರು ವುದರಿಂದ ಅವುಗಳ ಹೆಸರನ್ನು ಸೂಚಿಸುವ ಪದಗಳ ಅನುವಾದ ಕಷ್ಟಸಾಧ್ಯ. ಆಯಾ ಪದಗಳನ್ನು ಹಾಗೆಯೇ ಬಳಸುವುದು ಇಂತಹ ಸಂದರ್ಭಗಳಲ್ಲಿ ಸೂಕ್ತವಾಗು ತ್ತದೆ. ಒಟ್ಟನಲ್ಲಿ ಸಂಸ್ಕೃತಿಯನ್ನು ಬಿಂಬಿಸುವ ಪದಗಳನ್ನು ಅನುವಾದ ಮಾಡು ವಾಗ ಅನುವಾದಕಾರ ಹೆಚ್ಚಿನ ತೊಡಕನ್ನು ಅನುಭವಿಸಬೇಕಾಗುತ್ತದೆ. ಸಂಸ್ಕೃತಿಯ ವಿಶಿಷ್ಟ ಅಂಗವಾದ ಧಾರ್ಮಿಕ, ದಾರ್ಶನಿಕ ವಿಚಾರಕ್ಕೆ ಸಂಬಂಧಿಸಿದ ಭಾಷಾ ರೂಪಗಳೂ ಅನುವಾದದಲ್ಲಿ ತೊಡಕಾಗಿಯೇ ಉಳಿಯುತ್ತವೆ. ಉದಾಹರಣೆಗೆ ಬೌದ್ಧರ ಶೂನ್ಯದ ಕಲ್ಪನೆಗೂ, ವೀರಶೈವರ ಶೂನ್ಯದ ಕಲ್ಪನೆಗೂ ಭಿನ್ನತೆಯಿದೆ. ಅನುವಾದ ಇಂತಹ ಭಿನ್ನತೆಯನ್ನು ಗಮನಿಸಿ, ಅದನ್ನು ಸ್ಪಷ್ಟಪಡಿಸಿದಷ್ಟೂ ಹೆಚ್ಚು ಉಪಯುಕ್ತ ಅನುವಾದವಾಗುತ್ತದೆ.

ಆಕರ ಗ್ರಂಥಗಳು

ಭಾಷಾಂತರ : ಭಟ್. ಎಸ್. ಆರ್. ನವಕರ್ನಾಟಕ ಪ್ರಕಾಶನ ಬೆಂಗಳೂರ, 1989

ಭಾಷಾಂತರ ಕಲೆ : ಪ್ರಧಾನ್ ಗುರುದತ್ತ. ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ ಬೆಂಗಳೂರು, 1989

A Linguistic Theory of Translation : Catford J. C. Oxford University press, London 1965

Translation and Translations : Postgate J. P. 1960.

**

‘ಒರೆಯೂವು’ ಮತ್ತು ‘ವಾಳಿಯೂವು’ : ಅರ್ಥ ವಿವೇಚನೆ

–ಬಿ. ಆರ್. ಹೂಗಾರ

೧

ಶರಣರು ತಮ್ಮ ವಚನಗಳಲ್ಲಿ ಅನುಭಾವನಿಷ್ಠವಾದ ಲಿಂಗಾಂಗಸಾಮರಸ್ಯದ ಅನುಭೂತಿಯನ್ನು ಮಾತ್ರವಲ್ಲದೆ ಶಾಸ್ತ್ರನಿಷ್ಠವಾದ ಸೈದ್ಧಾಂತಿಕ ವಿಷಯವನ್ನು ಹಾಗೂ ಸಮಾಜನಿಷ್ಠವಾದ ಕ್ರಾಂತಿಕಾರಕ ವಿಚಾರಗಳನ್ನು ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾರೆ. ವಿಷಯದ ಸ್ಪಷ್ಟತೆಗಾಗಿ ಪ್ರಕೃತಿ, ಮಾನವ, ಪಶು–ಪಕ್ಷಿಗಳ ವೃತ್ತಿ–ಪ್ರವೃತ್ತಿ, ಸ್ವಭಾವ-ವೈಚಿತ್ರ್ಯಗಳನ್ನು ಬಳಸಿಕೊಂಡಿರುವುದು ಇವರ ಲೋಕಾನುಭವ ಸಾಮರ್ಥ್ಯಕ್ಕೆ ನಿದರ್ಶನವೆನಿಸಿದೆ. ಸಾಂದರ್ಭಿಕವಾಗಿ ಕೆಲವು ವಚನಗಳಲ್ಲಿ ಆಕಳ ಸ್ವಭಾವ ಮತ್ತು ಪ್ರಯೋಜನವನ್ನು ಹೇಳುವಲ್ಲಿ ‘ಒಱೆಯಾವು’ (ಒರೆಯೂವು) ಮತ್ತು ‘ವಾೞಿಯಾವು’ (ವಾಳಿಯೂವು) ಎಂಬ ಪದಗಳು ಪ್ರಯೋಗವಾಗಿವೆ. ಈ ಪದಗಳ ಅರ್ಥವಿವೇಚನೆ ಈ ಲೇಖನದ ಉದ್ದೇಶ.

ಮಹಾದೇವಿ ಅಕ್ಕನ ವಚನದಲ್ಲಿ ‘ಹಸುವಿದ್ದು ಫಲವೇನು ಹಯನವಿಲ್ಲದನ್ನಕ್ಕ[೧] ಎನ್ನುವ ಮಾತು ಬರುತ್ತದೆ. ಹಯನು ಇಲ್ಲದ ಹಸು ಎಂದರೆ ಗೊಡ್ಡು, ಗರ್ಭ ಧರಿಸಿದ್ದು, ಒದೆಯುವದು, ಬಿಡಾಡಿ –ಹೀಗೆ ಯಾವುದೂ ಆಗಿರಬಹುದು.

ಆಕಳು ಗರ್ಭಧರಿಸಿ ಕರುವನ್ನು ಹಾಕುವವರೆಗೆ ಹಾಲು ಕೊಡುವುದಿಲ್ಲ. ಕರುವನ್ನು ಹಾಕಿದ ನಂತರ ಕೆಲವು ಅವಧಿಯವರೆಗೆ ನಿಯಮಿತವಾಗಿ ನಿರ್ದಿಷ್ಟ ಪ್ರಮಾಣದ ಹಾಲನ್ನು ಕೊಡುತ್ತದೆ. ಈ ಪ್ರಮಾಣ ಕ್ರಮೇಣ ಕಡಿಮೆಯಾಗಿ ಹಾಲು ಸಂಪೂರ್ಣ ಬತ್ತುವ ಮೊದಲು ಅದು ಅಲ್ಪ ಪ್ರಮಾಣದ ಹಾಲನ್ನು ಜಿನುಗಿಸುತ್ತದೆ. ಇಂಥ ಆಕಳಿನ ಹಾಲನ್ನು ಕರೆದುಕೊಳ್ಳಲು ಪ್ರಯತ್ನಿಸಿದರೆ, ಇಲ್ಲವೆ ಕರು ಮೊಲೆ ಉಣ್ಣಲು ಬಾಯಿಹಾಕಿದರೆ ಹಿಂಸಾನುಭವದಿಂದಾಗಿ ಅದು ಒದೆಯುತ್ತದೆ. ಇದು ಶೀಘ್ರದಲ್ಲಿಯೆ ಇದಕ್ಕೆ ಗರ್ಭಕಟ್ಟಿಸಬೇಕೆನ್ನುವುದಕ್ಕೆ ಒಂದು ಸೂಚನೆಯಾಗಿದೆ ಹಾಲು ಸಂಪೂರ್ಣವಾಗಿ ಬತ್ತುವ ಪೂರ್ವದಲ್ಲಿ ಅಲ್ಪ ಹಾಲನ್ನು ಜಿನುಗಿಸುವ ಆಕಳನ್ನು ವಚನಗಳಲ್ಲಿ ‘ಒಱೆಯಾವು’ ಎಂದು ಕರೆಯಲಾಗಿದೆ. ಹಾಲು ಬತ್ತಿದ ಆಕಳನ್ನು ರೂಢಿಮಾತಿನಲ್ಲಿ ‘ಒದಕೊಂಡ ಆಕಳು’ ಎಂದು ಕರೆಯಲಾಗುತ್ತದೆ. ಅರಿವಿನ ಮಾರಿತಂದೆಗಳ ವಚನದಲ್ಲಿ ಇಂಥ ಒದಕೊಂಡ ಆಕಳಿನ ಪ್ರಸ್ತಾಪವಿದೆ :

೧. ಮಹಾದೇವಿ ಅಕ್ಕನ ವಚನಗಳು. ಸಂ–ಡಾ ಆರ್. ಸಿ. ಹಿರೇಮಠ, ವಚನ– ೧೨೧.

ಹಾಲು ಬತ್ತಿದ ಹಸುವಿಂಗೆ ಕರುವ ಬಿಟ್ಟರೆ
ಒದೆವುದಲ್ಲದೆ ಉಣಿಸಲೀವುದೆ ? [೧]

ಹಯನಿಲ್ಲದಿರುವ 'ಒರೆಯಾವು' ಮತ್ತು 'ಒದಕೊಂಡ ಆಕಳು' ತಾತ್ಕಾಲಿಕವಾಗಿ ಮಾತ್ರ ಪ್ರಯೋಜನವಿಲ್ಲದವುಗಳಾಗಿರುತ್ತವೆ.

ಬಸವಣ್ಣನವರ ವಚನದಲ್ಲಿ ಒರೆಯಾವಿವ ಪದಪ್ರಯೋಗ ಸಂದರ್ಭ ಹೀಗಿದೆ :

ಊರ ಮುಂದೆ ಹಾಲಹಳ್ಳ ಹರಿಯುತ್ತಿರಲು
ಒಱೆಯಾವಿನ ಬೆನ್ನ ಹರಿಯಲೇಕಯ್ಯಾ ?
ಲಜ್ಜೆಗೆಡಲೇಕೆ ? ನಾಣುಗೆಡಲೇಕೆ ?
ಕೂಡಸಂಗಮದೇವರನ್ನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇತಕಯ್ಯಾ ? [೨]
[ಪಾಠಾಂತರ : ಒಱೆ > ವಾಟಿ, ವಱೆ]

ಇಲ್ಲಿ ಸಂಪತ್ತಿನ ಆಗರವಾದ ಬಿಜ್ಜಳನ ಭಂಡಾರ ಶಿವಾನುಗ್ರಹ ಸಂಪತ್ತಿನ ಮುಂದೆ ಅಲ್ಪವಾದುದು ಎನ್ನುವುದನ್ನು ಒರಯಾವಿಗೆ ಹೋಲಿಸಿ ಹೇಳಿರುವುದು ಅರ್ಥಪೂರ್ಣ ವಾಗಿದೆ.

ಚೆನ್ನಬಸವಣ್ಣನವರ ದೀರ್ಘವಾದ ವಚನದಲ್ಲಿ ಈ ಪದದ ಪ್ರಯೋಗ ಹೀಗಿದೆ :

....ಹಾಲಸಾಗರದೊಳಗೋಲಾಡುತ್ತಿರ್ದು
ಒಱೆಯಾವಿನ ಬೆನ್ನ ಹರಿಯುವವನಲ್ಲ.... [೩]

[ಪಾಠಾಂತರ : ಒಱೆ > ದೊಡ್ಡ ದೊಡ್ಡಿ, ವಾರಿ, ವಾಳಿ, ವೊದಿ]

ಅರಿವನ್ನು ಅನುಭವವೇದ್ಯವಾಗಿಸುವ ನಿಜಾಚರಣೆಯುಳ್ಳ ಶರಣನಿಗೆ ಕೇವಲ ಲೌಕಿಕ ಪ್ರಯೋಜನವುಳ್ಳ ವ್ಯರ್ಥ ಆಚರಣೆಗಳ ಹಂಗು ಬೇಕಿಲ್ಲ ಎನ್ನುವ ಆಶಯ ವನ್ನು ವಿಶಾಲಾರ್ಥದಲ್ಲಿ ಈ ವಚನದಲ್ಲಿ ಧ್ವನಿಸಲಾಗಿದೆ. ಆಧ್ಯಾತ್ಮ ಪ್ರಯೋಜನೆಯ ನಿಜಾಚರಣೆಗಳನ್ನು ಹಾಲಸಾಗರಕ್ಕೂ ಮತ್ತು ವ್ಯರ್ಥ ಆಚರಣೆಗಳನ್ನು ಒರೆಯಾವಿಗೂ ಹೋಲಿಸುವುದು ಔಚಿತ್ಯಪೂರ್ಣವೆನಿಸಿದೆ.

ಡಾ. ಡಿ. ಎಲ್. ಎನ್. ಅವರು ಬಸವಣ್ಣನವರ ವಚನದಲ್ಲಿ ಬರುವ ಒರೆಯಾ ವಿನ ಪದಪ್ರಯೋಗ ಕುರಿತು ಚರ್ಚಿಸುತ್ತಾ, ಇದಕ್ಕೆ ಜಿನುಗು ಹಾಲಿನ ಹಸು ಎಂದು ಅರ್ಥೈಸಿರುವುದು[೪] ಸರಿಯಾಗಿದೆ. ಡಾ. ಎಂ. ಎಂ. ಕಲಬುರ್ಗಿ ಅವರು

---

೧. ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿ ಯೋಜನೆ, ಕರ್ನಾಟಕ ಸರಕಾರ ಸಂಪುಟ– ೧

೨. ಬಸವಣ್ಣನವರ ವಚನಗಳು, ಸಂ– ಡಾ. ಆರ್. ಸಿ. ಹಿರೇಮಠ, ವಚನ-೭೫೪.

೩. ಚೆನ್ನಬಸವಣ್ಣನವರ ವಚನಗಳು, ಸಂ– ಡಾ. ಆರ್. ಸಿ. ಹಿರೇಮಠ. ವಚನ–೬೮೩.

೪. ಬಸವಣ್ಣನವರ ವಚನಗಳ ಪಾಠ. ಡಾ. ಡಿ. ಎಲ್. ಎನ್. ಶರಣ ಸಾಹಿತ್ಯ, ೧೧–೫+೬.

ಒರೆಯಾವಿನ ಮೂಲಪಾಠ 'ವಾಳಿಯಾವು' ಎಂದು ಒಪ್ಪಿಕೊಂಡು, ಇದಕ್ಕೆ ಕರುವುಳ್ಳ ಆಕಳೆಂದು ಅರ್ಥ ನೀಡಿದ್ದಾರೆ.[೧] ಆದರೆ ವಾಳಿಯಾವಿಗೆ ದೇವರಿಗೆ ಬಿಟ್ಟ ಆಕಳು ಬಿಡಾಡಿ ಆಕಳು ಎಂದು ಅರ್ಥೈಸಲು ಸಾಧ್ಯವಿದೆ. ಇದನ್ನು ಮುಂದೆ ಚರ್ಚಿಸಲಾಗಿದೆ.

ಪ್ರಭುದೇವರ ಬೆಡಗಿನ ವಚನದಲ್ಲಿ ಒರೆಯಾವು ಪದಪ್ರಯೋಗ ಹೀಗಿದೆ :

ದೂರದ ತುದಿಗೊಂಬನಾರಯ್ಯ ಗೆಲುವರು ?
ಮೀರಲಿಲ್ಲದ ನಿರಾಳದ ನಿಲುವನು ಮೀರಿಕಾಬ,
ತೋರಿ ಕಾಬಡೆ ತನ್ನ ಹಿಡಿಯಲಿಲ್ಲಯ್ಯಾ
ಒಱೆಯಾವಿನ ಹಾಲನಾರಯ್ಯ ಕರೆವರು ?
ಮೂರು ಲೋಕದೊಳಗೆ ತಾನಿಲ್ಲ ಗುಹೇಶ್ವರ. [೨]
[ಪಾಠಾಂತರ : ಒಱೆ> ವೊಱೆ, ಒದೆಱೆ]

ಬೆಡಗಿನ ವಚನಗಳ ವಸ್ತುಸ್ವರೂಪ, ನಿರೂಪಣಾತಂತ್ರ, ಅನುಭವದ ಆಳ-ವಿಸ್ತಾರಗಳು ಸುಲಭಗ್ರಾಹ್ಯವೆನಿಸುವುದಿಲ್ಲ. ಇವು ವಾಚ್ಯಾರ್ಥ, ವ್ಯಂಗ್ಯಾರ್ಥ, ಧ್ವನ್ಯಾರ್ಥಗಳನ್ನು ಮೀರಿದ ಬೇರೊಂದು ಅರ್ಥವನ್ನು ಸ್ಫುರಿಸುತ್ತವೆ. ಪ್ರಸ್ತುತ ವಚನಕ್ಕೆ '.... ತನ್ನ ಭಿನ್ನವ ಮಾಡಿ ಆ ವಸ್ತುವ ಅಱಸಿಹನೆಂದಡೆ ಆಯಾಸವೆ ಮುಟ್ಟೂದಲ್ಲದೆ ಕಾರ್ಯವಿಲ್ಲ....'[೩] ಎಂದು ಟೀಕೆ ಬರೆಯಲಾಗಿದೆ. ಅಂಗದ ಮೂಲ ಸ್ವರೂಪ ಲಿಂಗವೇ ಆಗಿದೆ. ಇಲ್ಲಿ ತನ್ನ ಮೂಲ ಸ್ವರೂಪವನ್ನು ಮರೆತ ಜೀವವೇ ಒರೆಯಾವು. ಒರೆಯಾವು ಗರ್ಭಕಟ್ಟಿಸಿದ ಮೇಲೆ ಕರುವನ್ನು ಹಾಕಿದ ಬಳಿಕ ಹಾಲನ್ನು ಕೊಡುವಂತೆ, ಶಿವಭಾವ ಜಾಗ್ರತವಾದ ಜೀವನಿಗೆ ಇಷ್ಟಲಿಂಗ ದೀಕ್ಷೆ ಮತ್ತು ಇದರ ಅನುಸಂಧಾನದಿಂದ ಲಿಂಗಾಂಗಸಾಮರಸ್ಯದ ನಿಲುವು ಸ್ವರೂಪಜ್ಞಾನ ಸಾಧ್ಯವಾಗುತ್ತದೆ.

ಪಿಂಡ, ಬ್ರಹ್ಮಾಂಡಗಳನ್ನು ಸೃಷ್ಟಿಸಿ ಮತ್ತೆ ಇವುಗಳಿಗೆ ಅತೀತವಾಗಿ ನಿಲ್ಲುವ (ಮೂರು ಲೋಕದೊಳಗೆ ತಾನಿಲ್ಲ ಗುಹೇಶ್ವರ) ಪರತತ್ವದ ನಿಲುವು, ಶಿವಭಾವ ನಷ್ಟವಾದ, ಸಂಸಾರಬದ್ಧ ಜೀವಿಗೆ ವೇದ್ಯವಾಗಲಾರದು. (ದೂರದ ತುದಿಗೊಂಬನಾರಯ್ಯ ಗೆಲುವರು ?, ಒರೆಯಾವಿನ ಹಾಲನಾರಯ್ಯ ಕರೆವರು ?) ಶಿವಭಾವ ಜಾಗ್ರತವಾಗಿ ಗುರುವಿನಿಂದ ಇಷ್ಟಲಿಂಗ ಪಡೆದು, ಸಮರ್ಪಣಾಭಾವದಿಂದ ಲಿಂಗದಲ್ಲಿ ಅಚಲ ನಿಷ್ಠೆಯನ್ನಿಟ್ಟು ಸಾಧನೆಯಲ್ಲಿ ತೊಡಗಿದ ಅಂಗನಿಗೆ ಮಾತ್ರ ಲಿಂಗಾಂಗ ಸಾಮರಸ್ಯದ ನಿಲುವು, ಸ್ವರೂಪ ಜ್ಞಾನ ಸಾಧ್ಯವಾಗುತ್ತದೆ ಎನ್ನುವುದು ಈ ವಚನದ ಒಟ್ಟು ತಾತ್ಪರ್ಯವಾಗಿದೆ.

---

೧. ವಾಳಿಯಾವು ಡಾ. ಎಂ. ಎಂ. ಕಲಬುರ್ಗಿ ಮಾರ್ಗ- ೨, ಪುಟ- ೧೪೫
೨. ಅಲ್ಲಮಪ್ರಭುದೇವರ ವಚನಗಳು. ಸಂ, ಡಾ. ಆರ್. ಸಿ. ಹಿರೇಮಠ, ವಚನ-೩೬೫
೩. ಅಲ್ಲಮ ಪ್ರಭುವಿನ ಟೀಕಿನ ವಚನಗಳು. ಸಂ- ಇಮ್ಮಡಿ ಶಿವಬಸವಸ್ವಾಮಿಗಳು, ವ-೩೬೫

ಕನ್ನಡ ಲೋಕೋಪಕಾರದಲ್ಲಿ ಒರೆಯಾವಿನ ಪದಪ್ರಯೋಗ ಹೀಗಿದೆ :

ರುಜೆ ಮೇಣಾ ಬಿಳಿಯ ಸಾಸಿವೆ
ಬಜೆ ಬಿವಿಲಿನ ಬೀಜಮೆಂಬಿವಂ ಸರಿಗೊಂಡಂ
ತಜಮಾತ್ರದೊಳರೆದಚ್ಚುಗೆ
ನಿಜೇಚ್ಛೆಂದೋಱೆಯಾವು ಮಟ್ಟಂ ಕರೆಗುಂ[1]

ಇದಕ್ಕೆ '.... ಅಡಗಾಗಿರ್ದ ಆಕಳು ಮಟ್ಟಂ ಕರೆಗುಂ....' ಎಂದು ಟೀಕೆಯಲ್ಲಿ ಹೇಳಲಾಗಿದೆ. ಅಡಗಾದ ಎಂದರೆ ಮರೆಯಾದ, ಮುಚ್ಚಿಟ್ಟ ಎಂಬರ್ಥದ ಹಿನ್ನೆಲೆಯಲ್ಲಿ ಈ ಪದ್ಯದ ಅರ್ಥ ಮತ್ತು ಕರ್ತೃವಿನ ಮೂಲ ಆಶಯವನ್ನು ಗ್ರಹಿಸಬೇಕಾಗುತ್ತದೆ. ಚೆನ್ನಾಗಿ ತೊರೆಬಿಟ್ಟು ಹಾಲುಕೊಡಬೇಕಾದ ಆಕಳು ಶಾರೀರಿಕ ದೋಷದಿಂದಾಗಿ ತುಸು ಹಾಲನ್ನು ಕೊಡುತ್ತಿದ್ದರೆ, ಅದಕ್ಕೆ ಮಾಡಬೇಕಾದ ಔಷಧೀಯ ಉಪಚಾರ ಕ್ರಮವನ್ನು ಈ ಪದ್ಯದಲ್ಲಿ ಹೇಳಲಾಗಿದೆ. ಆದ್ದರಿಂದ ಇಲ್ಲಿ ಒರೆಯಾವು ಎಂದರೆ ತುಸು ಹಾಲನ್ನು ಕೊಡುವ ಆಕಳೆಂದೇ ಅರ್ಥ.

ಒಟ್ಟಾರೆ ಮೇಲಿನ ವಿವೇಚನೆಯಿಂದ ಒರೆಯಾವು ಎಂದರೆ ಹಾಲು ಬತ್ತುವ ಪೂರ್ವದಲ್ಲಿ ತುಸು ಹಾಲನ್ನು ಜಿನುಗಿಸುವ ಇಲ್ಲವೆ ಶಾರೀರಕ ದೋಷದಿಂದಾಗಿ ತುಸು ಹಾಲನ್ನು ಕೊಡುವ ಆಕಳು ಎಂಬ ಅರ್ಥಗಳು ಹೊರಡುತ್ತವೆ. ಈ ಆಕಳನ್ನು ಹೆಚ್ಚು ಹಾಲಿಗಾಗಿ ಒತ್ತಾಯದಿಂದ ಕರೆದುಕೊಳ್ಳಲು ಪ್ರಯತ್ನಿಸಿದರೆ, ಹಿಂಸಾನುಭವದಿಂದಾಗಿ ಒದೆಯಬಹುದು. ಈ ಕಾರಣಕ್ಕಾಗಿ 'ಒರೆ' ಎಂಬ ಮೂಲ ಪಾಠಕ್ಕೆ— ಪೊದಿ, ಒದೆ ಎಂಬ ಪಾಠಾಂತರಗಳೂ, ಬಿಡಾಡಿ, ನಿರುಪಯುಕ್ತ ಎಂಬರ್ಥದ 'ವಾಳಿ' ಪಾಠಾಂತರವೂ ಹುಟ್ಟಿಕೊಂಡಂತೆ ತೋರುತ್ತದೆ.

೨

ಆಕಳು ಪುರಾತನ ಕಾಲದಿಂದಲೂ ಮಾನವನಿಗೆ ಹಯನುಗಾರಿಕೆಯ ಪ್ರಧಾನವಾದ ಸಾಕುಪ್ರಾಣಿಯಾಗಿ ಉಪಯುಕ್ತವೆನಿಸಿದೆ. ಭಾರತೀಯ ಸಂಸ್ಕೃತಿಯಲ್ಲಿ ಇದು ದೇವತಾ ಸ್ವರೂಪಿಯೆಂದು ವೇದಕಾಲದಿಂದಲೂ ಪೂಜೆಗೊಳ್ಳುತ್ತ ಬಂದಿದೆ. ದೋಷ ಪರಿಹಾರಕ್ಕಾಗಿ, ಪುಣ್ಯಪ್ರಾಪ್ತಿಗಾಗಿ, ಇಷ್ಟಾರ್ಥಸಿದ್ಧಿಗಾಗಿ ಬ್ರಾಹ್ಮಣ, ಪುರೋಹಿತ ಹಾಗೂ ದೇವರಿಗೆ ಗೋದಾನ ಮಾಡುವುದು ಶ್ರೇಷ್ಠ ಹಾಗೂ ಪುಣ್ಯಪ್ರದವಾದುದೆಂಬ ನಂಬಿಕೆ ಇಂದಿಗೂ ಪ್ರಚಲಿತವಾಗಿದೆ. ಯಜ್ಞಗಳ ಪ್ರಾಬಲ್ಯ ಕಡಿಮೆಯಾದಂತೆ ಕ್ರಮೇಣ ದೇವಾಲಯಗಳು ಅವುಗಳ ಸ್ಥಾನವನ್ನು ತುಂಬಿಕೊಳ್ಳತೊಡಗಿದವು. ದೇವಾಲಯಗಳ ನಿರ್ಮಾಣ, ಅವುಗಳ ಜೀರ್ಣೋದ್ಧಾರ ಮತ್ತು ದೇವರ ಅಂಗಭೋಗ–ರಂಗಭೋಗ ಮೊದಲಾದ ಕಾರ್ಯಗಳು ನಿರಂತರವಾಗಿ ನಡೆಯಲೆಂದು

೧. ಲೋಕೋಪಕಾರ –೯–೧೯೬.

ಸಮಾಜದ ವಿವಿಧ ವರ್ಗಗಳ ಜನರು ಬೇರೆ ಬೇರೆ ರೀತಿಯ ದಾನ-ದತ್ತಿಗಳನ್ನು ನೀಡಿರುವ ವಿಷಯವನ್ನು ವಿಪುಲ ಸಂಖ್ಯೆಯ ಶಾಸನಗಳು ತಿಳಿಸುತ್ತವೆ ಆದರೆ ದೇವರಿಗೆ ನಿತ್ಯದ ಅಭಿಷೇಕ ಮತ್ತು ನೈವೇದ್ಯಕ್ಕೆ ಯೋಗ್ಯವೆನಿಸಿರುವ ಆಕಳ ಹಾಲಿನ ಪೂರೈಕೆಗಾಗಿ ಯಾವ ವ್ಯವಸ್ಥೆ ಇತ್ತು ಎನ್ನುವುದು ಶಾಸನಗಳಿಂದ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಆದ್ದರಿಂದ ಇಂಥ ವ್ಯವಸ್ಥೆಗಾಗಿ ದೇವರಿಗಾಗಿ, ದೇವಸ್ಥಾನಕ್ಕೆ ಆಕಳ ದಾನ ಮಾಡುವ ಪದ್ಧತಿ ರೂಢವಾಗಿರಬೇಕು ಎನ್ನುವ ಊಹೆಯನ್ನು ಅಗತ್ಯವಾಗಿ ಇಟ್ಟುಕೊಳ್ಳಬೇಕಾಗುತ್ತದೆ. ಡಾ. ಎಂ. ಚಿದಾನಂದಮೂರ್ತಿ ಅವರು ದೇವಸ್ಥಾನಗಳಿಗೆ ಆಕಳು ದಾನ ನೀಡಿರುವ ವಿರಳ ಉದಾಹರಣೆಗಳತ್ತ ನಮ್ಮ ಗಮನ ಸೆಳೆಯುತ್ತಾರೆ.[೧] ದೇವಾಲಯಕ್ಕೆ ಆಕಳದಾನ ಮಾಡುವ ಪದ್ಧತಿ ನಿರ್ದಿಷ್ಟವಾಗಿ ಎಂದು ಆರಂಭವಾಯಿತೆನ್ನುವುದು ವಿಚಾರಣೀಯವಾದುದು. ಹನ್ನೆರಡನೆಯ ಶತಮಾನದಲ್ಲಿ ಶಿವಶರಣರ ಕಾಲದಲ್ಲಿ ಇಂಥ ಪದ್ಧತಿ ಪ್ರಚಲಿತವಾಗಿದ್ದಿತೆನ್ನುವುದನ್ನು ಚೆನ್ನಬಸವಣ್ಣನವರ ಈ ಕೆಳಗಿನ ವಚನ ತಿಳಿಸುತ್ತದೆ :

> ....ಬೀದಿಯ ಬಸವಂಗೆ, ದೇಗುಲದ ಪಶುವಿಂಗೆ
> ಹುಟ್ಟಿದ ಕರು ಹೋರಿಗಳು ಬಸವಗಳಪ್ಪುವೆ ?[೨]

ಇಲ್ಲಿ ಬರುವ 'ದೇಗುಲದ ಪಶು' ದೇವರಿಗಾಗಿ ದೇವಾಲಯಕ್ಕೆ ಬಿಟ್ಟ (ದಾನಮಾಡಿದ) ಆಕಳು ಎನ್ನುವುದು ಸ್ಪಷ್ಟ. ಹೀಗೆ ದೇವಾಲಯಕ್ಕೆ ಬಿಟ್ಟ ಆಕಳು ಅತ್ಯಂತ ಪವಿತ್ರವಾದದ್ದು ಎನ್ನುವ ಧಾರ್ಮಿಕ ಮನೋಭಾವನೆ ಜನಮನದಲ್ಲಿ ಉಂಟಾಗಿದೆ ಶಾಸನಗಳನ್ನು ನಾಶಮಾಡುವುದು ಆಕಳನ್ನು ಕೊಂದ ಪಾಪಕ್ಕೆ ಸಮಾನ ಎಂದು ಸಾಮಾನ್ಯವಾಗಿ ಶಾಸನಗಳ ಫಲಶ್ರುತಿವಾಕ್ಯಗಳಲ್ಲಿ ಹೇಳಿದರೆ ಶಾಸನಗಳನ್ನು ನಾಶಮಾಡಿದರೆ ಇನ್ನೂ ಘೋರವಾದ ಪಾಪ ಬರುತ್ತದೆ ಎನ್ನುವುದನ್ನು ಗಟ್ಟುಕಾಮದೇವನಹಳ್ಳಿ ಶಾಸನದ ಕೊನೆಯ '.... ಇದನಳಿದವ ಬರನಸಿಯುಂ ವಾಳಿಕವಿಲೆಯುಮನಳಿದ ಪತನಕ್ಕು....[೩] ಎಂಬ ಫಲಶ್ರುತಿ ವಾಕ್ಯ ಸಾರುತ್ತದೆ. ದೇವರ ಆಕಳು ಅತ್ಯಂತ ಪವಿತ್ರವಾದುದು ಎನ್ನುವ ಆಶಯವನ್ನು ಈ ಶಾಸನದಲ್ಲಿ ಪ್ರಯೋಗವಾಗಿರುವ ದೇವರಿಗೆ ಬಿಟ್ಟ-ದೇಗುಲದ ಪಶು- ಎನ್ನುವ ಅರ್ಥದ 'ವಾಳಿಕವಿಲೆ' ಎಂಬ ಪದ ಸ್ಪಷ್ಟಪಡಿಸುತ್ತದೆ.

ಕೆಲವು ವಚನಗಳಲ್ಲಿ ಪಾಠಾಂತರ ರೂಪದಲ್ಲಿ ಮತ್ತು ಶಾಸನದ ಕೊನೆಯ ಫಲಶ್ರುತಿವಾಕ್ಯದಲ್ಲಿ ಪ್ರಯೋಗವಾಗಿರುವ ವಾಳಿಕವಿಲೆ, 'ವಾಳಿಯಾವು' ಪದಕ್ಕೆ ದೇವರ,

---

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ. ಡಾ. ಎಂ. ಚಿದಾನಂದ ಮೂರ್ತಿ, ಪು-೨೦೦, ೨೦೧.

೨. ಚೆನ್ನಬಸವಣ್ಣನವರ ವಚನಗಳು. ಡಾ. ಆರ್. ಸಿ. ಹಿರೇಮಠ, ವಚನ-೪೨೪

೩. Ec, XVII, i-2.

ಪವಿತ್ರ-ಆಕಳೆನ್ನುವ ಮೂಲದ ಶಿಷ್ಟಾರ್ಥ ಮರೆಯಾಗಿ ಸ್ವೇಚ್ಛಾಜೀವಿ, ಬಿಡಾಡಿ, ನಿರುಪಯುಕ್ತ, ನೀತಿಗೆಟ್ಟ ಎಂಬಂಥ ಕೀಳು ಅರ್ಥಗಳೂ ರೂಢವಾಗಿವೆ. ಇದಕ್ಕೆ ಕಾರಣವನ್ನು ಹೀಗೆ ವಿವರಿಸಬಹುದಾಗಿದೆ. ದೇವರ ಪೂಜೆ ಮೊದಲಾದ ನಿತ್ಯ ಕರ್ಮಗಳೇ ಪ್ರಧಾನವಾದ ಪೂಜಾರಿ, ಪುರೋಹಿತರಿಗೆ ದೇವಾಲಯಕ್ಕೆ ಬಿಡುವ ಆಕಳುಗಳ ಸಂಗೋಪನೆಯಂಥ ಶ್ರಮದಾಯಕ ಕೆಲಸಗಳಿಗೆ ಸಮಯವಿಲ್ಲದ ಅಥವಾ ಮನಸ್ಸಿಲ್ಲದ ಕಾರಣದಿಂದಾಗಿ ದೇವರಿಗೆ ದಾನ ಮಾಡಿದ ಆಕಳುಗಳಿಗೆ ವ್ಯವಸ್ಥಿತವಾದ ಸಾಕಾಣಿಕೆಯ ಕ್ರಮ ತಪ್ಪಿ, ಅವುಗಳಿಗೆ 'ಹೆಚ್ಚಾಗಿದ್ದಲ್ಲಿ ಮೆಯ್ದು ಬೆಚ್ಚಾಗಿದ್ದಲ್ಲಿ ಮಲಗಿ' ಊರಲ್ಲಿ ಅಲೆದಾಡುವ ಸ್ವೇಚ್ಛಾಜೀವನಕ್ರಮ ಅನಿವಾರ್ಯವಾಯಿತು. ಸ್ವೇಚ್ಛಾಜೀವಿ, ಗೊತ್ತುಗುರಿ ಇಲ್ಲದೆ ಅಲೆದಾಡುವ, ನೀತಿಗೆಟ್ಟವರನ್ನು 'ವಾಳಿ' ಎಂದು ಕರೆಯಲಾಗುತ್ತದೆ. ಊರಾಗ ಅವಾ (ಆಕಿ) ವಾಳ್ಯಾಗಾನ (ಳ) ಎಂದು ಹೇಳುವ ಹಳ್ಳಿಗರ ರೂಢಿ ಮಾತಿನಲ್ಲಿ ಇದೇ ಅರ್ಥದ ಧ್ವನಿ ಇರುವುದನ್ನು ಗಮನಿಸಬಹುದು. ಹೀಗೆ ವಾಳಿ ಪದಕ್ಕಿದ್ದ ಮೂಲದ ಶಿಷ್ಟಾರ್ಥ ಮರೆಯಾಗಿ ಕನಿಷ್ಠಾರ್ಥ ಆರೋಪಿತವಾಗಿರುವ ಪದ ಪ್ರಯೋಗಗಳು ಈಚಿನ ವಚನಕಾರರ ವಚನಗಳಲ್ಲಿವೆ :

೧ .... ಲಿಂಗದ ಸ್ವರೂಪ ತಿಳಿಯದೆ
ಕೊರಳಲ್ಲಿ ಲಿಂಗವ ಕಟ್ಟುವರೆಲ್ಲ
ವಾಳಿಯಾವಿಗೆ ಎಳೆಗುದ್ದಿಯ ಕಟ್ಟುವಂತೆ....[೧]

—ಕಾಡಸಿದ್ಧೇಶ್ವರ.

೨ ....ನಿವಾಳಿಸಿ ಬಿಟ್ಟ ವಾಳಿಮಾನವರಿಗೆ
ಮೇಳವಾಡಿ ಮುಕುರಿದರೆ
ಭಕ್ತಿ ಬೆಳುವಿಗೆ ಸರಿಯೆ[೨]

—ಕುಷ್ಟಗಿ ಕರಿಬಸವೇಶ್ವರ

ಒಟ್ಟಿನಲ್ಲಿ 'ಒರೆಯಾವು' ಪದ ಹಾಲು ಬತ್ತುವ ಪೂರ್ವದಲ್ಲಿ ತುಸು ಹಾಲನ್ನು ಜಿನಗಿಸುವ ಆಕಳು ಎಂಬ ಅರ್ಥದಲ್ಲಿ ವಚನಗಳಲ್ಲಿಯೂ, ಶಾರೀರಿಕ ದೋಷದಿಂದ ತುಸು ಹಾಲನ್ನು ಜಿನುಗಿಸುವ ಆಕಳೆಂದು ಲೋಕೋಪಕಾರದಲ್ಲಿಯೂ ಬಳಕೆಯಾದುದು ಮೇಲಿನ ವಿವೇಚನೆಯಿಂದ ವಿದಿತವಾಗುತ್ತದೆ. ಹಾಗೆಯೇ 'ವಾಳಿಯಾವು' ಎಂಬ ಪದ ಮೂಲತಃ ದೇವರಿಗೆ ಬಿಟ್ಟ, ಪವಿತ್ರ ಆಕಳೆಂಬ ಅರ್ಥವುಳ್ಳದ್ದಾಗಿದ್ದು, ಕಾಲಾಂತರದಲ್ಲಿ ಇದಕ್ಕೆ ಬಿಡಾಡಿ, ಸ್ವೇಚ್ಛಾಜೀವಿ, ನೀತಿಗೆಟ್ಟ ಎಂಬ ಕನಿಷ್ಠಾರ್ಥವು ರೂಢಿಯಲ್ಲಿ ಬಂದವು ಎಂದು ತಿಳಿದು ಬರುತ್ತದೆ. ಹೀಗೆ ಒರೆಯಾವು ಮತ್ತು ವಾಳಿಯಾವು ಎರಡೂ ಪದಗಳು ಭಿನ್ನಾರ್ಥದಲ್ಲಿ ಪ್ರಯೋಗವಾಗುತ್ತ ಬಂದುದನ್ನು ವಚನ ಮತ್ತು ಶಾಸನಗಳು ಸ್ಪಷ್ಟಪಡಿಸುತ್ತವೆ. *

* *

---

೧. ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿಯೋಜನೆ ಕರ್ನಾಟಕ ಸರಕಾರ ಸಂಕೀರ್ಣ ವಚನ ಸಂಪುಟ-೫. ವಚನ- ೭೮೦

೨. ಅದೇ, ವಚನ-೪೧

ಶಿಗ್ಗಾವಿಯಲ್ಲಿ ದೊರೆತ ಅಪರೂಪದ ಗಜಲಕ್ಷ್ಮಿಶಿಲ್ಪ

–ರು. ಮ. ಷಡಕ್ಷರಯ್ಯ

ಶಿಗ್ಗಾವಿಯ ಮಾಮಲೇದಾರ ಕಚೇರಿಯ ಹಿಂಭಾಗದಲ್ಲಿ ಹಲವಾರು ಶಿಲಾ ಶಾಸನ ಮತ್ತು ಎರಡು ಗಜಲಕ್ಷ್ಮಿ ಫಲಕಗಳನ್ನು ಸಂಗ್ರಹಿಸಿ, ಈ ಹಿಂದೆ ಇಡಲಾಗಿತ್ತು.ಅಲ್ಲಿಯ ಕೆಲವು ಶಾಸನಗಳನ್ನು ಈ ಹಿಂದೆಯೇ ಕನ್ನಡ ಸಂಶೋಧನ ಸಂಸ್ಥೆಗೆ ತರಲಾಗಿದೆ [೧] ಉಳಿದಿರುವ ಅವಶೇಷಗಳಲ್ಲಿ ಒಟ್ಟು ಎರಡು ಗಜಕ್ಷ್ಮಿ ಫಲಕಗಳನ್ನು ಸಂಗ್ರಹಿಸಿ ಈ ಸಂಸ್ಥೆಗೆ ಇತ್ತೀಚೆಗೆ ನಾನು ಸಂದಿದ್ದೇನೆ ಅಲ್ಲಿಯ ತಹಶೀಲದಾರ ಅವರ ಪರವಾನಿಗೆ ಪಡೆದು ಈ ಶಿಲ್ಪಗಳನ್ನು ಸಂಗ್ರಹಿಸಲಾಯಿತು

ಮೊದಲ ಫಲಕದ ಉದ್ದ ೧೬೫ ಸೆಂ.ಮೀ. ಅಗಲ ಮಧ್ಯದಲ್ಲಿ ೬೪ ಸೆಂ ಮೀ. ಅಂಚಿನಲ್ಲಿ ೪೦ ಸೆಂ ಮೀ. ಎರಡನೇ ಫಲಕದ ಉದ್ದ ೧೫೬ ಸೆಂ ಮೀ. ಅಗಲ ಮಧ್ಯದಲ್ಲಿ ೫೮ ಸೆಂ.ಮೀ. ಅಂಚಿನಲ್ಲಿ ೪೫ ಸೆಂ.ಮೀ. ಎರಡೂ ಫಲಕಗಳ ದಪ್ಪ ೧೪ ಸೆಂ ಮೀ. ಅಲ್ಲಲ್ಲಿ ಒಡೆದ ಈ ಫಲಕಗಳಿಗೆ ತಲಾ ಎರಡು ರಂಧ್ರಗಳಿವೆ. ಮೊದಲ ಫಲಕದ ರಂಧ್ರದ ಉದ್ದ ೧೫ ಸೆಂ ಮೀ. ಅಗಲ ೭ ಸೆಂ.ಮೀ ಮತ್ತು ಆಳ ೧೨ ಸೆಂ ಮೀ. ಎರಡನೇ ಫಲಕದ ರಂಧ್ರದ ಉದ್ದ ೧೪ ಸೆಂ.ಮೀ. ಅಗಲ ೬ ಸೆಂ.ಮೀ ಮತ್ತು ಆಳ ೧೨ ಸೆಂ.ಮೀ ಇದರಿಂದಾಗಿ ಈ ಫಲಕಗಳು ತೋರಣಫಲಕಗಳನ್ನಾಗಿ ದೇವಾಲಯಗಳ ಮುಂದೆ ನಿಲ್ಲಿಸಿರಬೇಕು.

ಅಲ್ಲಿದ್ದ ಒಟ್ಟು ಹತ್ತು ಶಿಲಾಶಾಸನಗಳನ್ನು ಈ ಸಂಸ್ಥೆಯ ಹಿಂದಿನ ನಿರ್ದೇಶಕ ಡಾ. ಆರ್ ಎಸ್. ಪಂಚಮುಖಿಯವರು ಮೊದಲು ಮಾಡಿ ಅಧ್ಯಯನ ಮಾಡಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಈ ಗಜಲಕ್ಷ್ಮಿ ಫಲಕಗಳ ಮೂಲಸ್ಥಳ ಯಾವುದಾಗಿತ್ತು ಎಂಬುದನ್ನು ತಿಳಿಯಬೇಕಾಗಿದೆ. ಕ್ರಿ. ಶ. ೧ ನೇ ಶತಮಾನದ ಶಾತವಾಹನರ ಕಾಲದ ಅವಶೇಷಗಳನ್ನು ಈ ಹಿಂದೆ [೩] ಪತ್ತೆ ಹಚ್ಚಲಾಗಿದೆ ಇದಲ್ಲದೆ ಕದಂಬ, ಬಾದಾಮಿ ಚಾಲುಕ್ಯ

೧. ಎನ್ಯೂಯಲ್ ರಿಪೋರ್ಟ ಆಫ್.ದಿ. ಕನ್ನಡ ರೀಸರ್ಚ ಇನಸ್ಟಿಟ್ಯೂಟ್ ಇನ್ ಬಾಂಬೆ ಪ್ರಾವಿನ್ಸ ಪಾರ್ ದಿ ಈಯರ್ ೧೯೩೦–೪೦, ಪು. ೪೦.

೨. ಪಂಚಮುಖಿ, ಆರ್. ಎಸ್. ಕರ್ನಾಟಕ ಇನಸ್ಕ್ರಿಪ್ಷನ್ಸ್, ದಾ.ನಂ.೧. ಪು. ೧೫–೨೪, ೨೬–೩೧.

೩. ಷಡಕ್ಷರಯ್ಯ, ರು. ಮ. ೧೯೯೦: ''ಧಾರವಾಡ ಜಿಲ್ಲೆಯಲ್ಲಿ ಇತ್ತೀಚೆಗೆ ಕಂಡಾಬಂದ ಕೆಲ ಮಹತ್ವದ ಇಟ್ಟಿಗೆ ದೇವಾಲಯಗಳು"–ಕರ್ನಾಟಕ ಭಾರತಿ, ಸಂ. ೨೩, ಸಂ. ೧.ಪು.೧೦೫.



ಗಜಲಕ್ಷ್ಮಿ ಶಿಲ್ಪ – ೧



ಗಜಲಕ್ಷ್ಮಿ ಶಿಲ್ಪ - ೨

ಮತ್ತು ರಾಷ್ಟ್ರಕೂಟರ ಆಳ್ವಿಕೆಯ ಕಾಲದ ಶಾಸನಗಳೂ ಈ ಪ್ರದೇಶದಲ್ಲಿ ಬೆಳಕಿಗೆ ಬಂದಿರುವುದನ್ನು ಗಮನಿಸಬಹುದಾಗಿದೆ.

ಈ ಎರಡು ಗಜಲಕ್ಷ್ಮಿ ಫಲಕಗಳಲ್ಲಿ ಸಾಮಾನ್ಯವಾಗಿ ಕಮಲ ಹಿಡಿದ ದ್ವಿಭುಜ ಲಕ್ಷ್ಮಿ, ಅವಳನ್ನು ಸ್ನಾನ ಮಾಡಿಸುವ ನಾಲ್ಕು ಆನೆಗಳು, ಗಂಧರ್ವರು ಮತ್ತು ಸವಾರರನ್ನು ಹೊಂದಿದ ಬಾಯಿ ತೆರೆದ ಮಕರಗಳ ದೃಶ್ಯವನ್ನು ಕಂಡರಿಸ ಲಾಗಿದೆ. ಇದರ ಚಿತ್ರಗಳನ್ನು ಉಜ್ಜಿ ಸುಂದರವಾಗಿ ನಯಗೊಳಿಸಲಾಗಿದೆ.

ಮೊದಲನೆಯ ಫಲಕ :

ಒಂದನೇ ಫಲಕದಲ್ಲಿಯ ಲಕ್ಷ್ಮಿಯು ತನ್ನ ಬಲಗೈಯಲ್ಲಿ ಕಮಲ ಹಿಡಿದು ಕಾಲು ಗಳನ್ನು ಇಳಿಬಿಟ್ಟು ಪದ್ಮಪೀಠದ ಮೇಲೆ ಪ್ರಲಂಬಾಸನದಲ್ಲಿ ಕುಳಿತಿರುವಳು. ವಿಶಾಲ ವಾಗಿ ಅರಳಿದ ಕಮಲದ ಹೂವಿನಿಂದ ಈ ಪೀಠವನ್ನು ರೂಪಿಸಲಾಗಿದೆ. ಅಗಲವಾದ ಎಲೆಯು ಈ ಹೂವಿನ ಪೀಠಕ್ಕೆ ಉದ್ದವಾದ ದಂಟಿದೆ. ಬಲಗೈಯಲ್ಲಿ ಎತ್ತಿಹಿಡಿದ ಕಮಲ ವಿದ್ದರೆ ಎಡಗೈಯಲ್ಲಿ ಸೊಂಟಕ್ಕೆ ಕಟ್ಟಿದ ಕಟಿಯನ್ನು ಹಿಡಿದಂತೆ ಗೋಚರಿಸುತ್ತದೆ. ಇದು ಮತ್ತೊಂದು ಮಹತ್ವದ ಸಂಗತಿಯಾಗಿದೆ. ಭಾರವಾದ ದಪ್ಪನೆಯ ಕಿರೀಟ ಮುಕುಟ, ಕಂಠಾಭರಣ. ಕುಚಗಳ ಮಧ್ಯ ಇಳಿಬಿಟ್ಟ ಗುಂಡಿನ ಕೊರಳ ಹಾರ, ತೋಳಲ್ಲಿ ನಾಗಬಂಧ, ಸೊಂಟದಲ್ಲಿ ಕಟಿ, ಕೈಯಲ್ಲಿ ಬಳೆ, ಕಾಲುಗಳಲ್ಲಿ ಕಡಗಗಳನ್ನು ಧರಿಸಿದ ಈ ಲಕ್ಷ್ಮಿಗೆ ಉಬ್ಬಿದ ತುಟಿಗಳು, ಸಹಜವಾದ ತುಂಬು ಕುಚ, ಕಲಾತ್ಮಕ ವಾದ ಮುಖ ಮತ್ತು ಬಳಕುವ ನಡವಿದೆ. ಅರಳಿದ ಪದ್ಮದಳಗಳ ಪ್ರಭಾಮಂಡಳ ಈ ದೇವಿಗಿದೆ. ಈ ಮೂರ್ತಿಗೆ ತಾದಾತ್ಮ್ಯತೆ, ಸಮತೋಲತ್ವ ಇರುತ್ತದೆ. ಈಕೆಯ ಕಿರೀಟದ ಮೇಲೆ ಛತ್ರಿಯಿದೆ. ಗಜಲಕ್ಷ್ಮಿಗೆ ಛತ್ರಿಯನ್ನು ತೋರಿಸುವ ಪದ್ಧತಿ ಪ್ರಾಚೀನ ಕಾಲದಿಂದಲೂ ಇದ್ದಿತು. ಒಟ್ಟು ನಾಲ್ಕು ಆನೆಗಳು ಸೊಂಡಿಲಲ್ಲಿ ಪೂರ್ಣ ಕುಂಭಗಳನ್ನು ಹೊತ್ತು ಈ ದೇವತೆಯನ್ನು ಅಭಿಷೇಕ ಮಾಡುತ್ತಿರುವುದು ಸ್ವಾರಸ್ಯಕರ ವಾಗಿದೆ. ಆಕೆಯ ಬದಿಯಲ್ಲಿ ಕೆಳಗಿನ ಆನೆಗಳು ಎದುರು ಮುಖ ಮಾಡಿ ಪೂರ್ಣ ಕುಂಭಗಳನ್ನು ಸೊಂಡಿಲಲ್ಲಿ ಹಿಡಿದು ನಿಂತಿವೆ. ಅವಳ ಬದಿಗಿನ ಮೇಲ್ಭಾಗದಲ್ಲಿ ಆನೆಗಳು ಮುಖಗಳನ್ನು ಮೇಲೇರಿಸಿ ಸೊಂಡಿಲಲ್ಲಿ ಹಿಡಿದು ಪೂರ್ಣಕುಂಭದ ನೀರನ್ನು ಲಕ್ಷ್ಮಿಯ ಮೇಲೆ ಹಾಕುತ್ತಿರುವುದು ತುಂಬಾ ಸೊಗಸಾಗಿದೆ. ಹರಿಯುವ ಹಳ್ಳದಂತೆ ನೀರು ಬೀಳುವುದನ್ನು ಚಿತ್ರಿಸಲಾಗಿದೆ. ಗಜಗಳು ಕೊರಳಲ್ಲಿ ಮತ್ತು ದೇಹದ ಮೇಲೆ ಆಭರಣಗಳನ್ನು ಧರಿಸಿವೆ. ಚಾಮರಿಯನ್ನು ಹಿಡಿದ ಸೇವಕಿಯರು ಇವುಗಳ ಬದಿಯಲ್ಲಿ ದ್ದಾರೆ. ಅವರು ಎರಡು ವಿಧದ ಕಿವಿಯೋಲೆಗಳನ್ನು ಧರಿಸಿದ್ದಾರೆ. ಅವರುಗಳ ಕೆಳ ಬದಿಯಲ್ಲಿ ಲಲಿತಾಸನದಲ್ಲಿಪದ್ಮನಿಧಿ ಮತ್ತು ಶಂಖನಿಧಿಗಳು ಕುಳಿತಿದ್ದು, ಅವರಿಗೆ ಡೊಳ್ಳು ಹೊಟ್ಟೆಗಳಿವೆ. ಎಡಬದಿಗೆ ಕುಳಿತ ಶಂಖನಿಧಿಯು ತನ್ನ ಎಡಗೈಯಲ್ಲಿ ಗಟ್ಟಿಯಾಗಿ ಶಂಖವನ್ನು ಹಿಡಿದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಇವರ ಮೇಲ್ಭಾಗ

ಹಾಗೂ ಚೌರಿಹಿಡಿದ ಸೇವಕಿಯರ ಮೇಲ್ಗಡೆ ಗಗನದಲ್ಲಿ ಹಾರುವ ಗಂಧರ್ವರಿದ್ದಾರೆ. ಎಡಗಡೆಗೆ ತೋರಿಸಿದವನ ಕೈಯಲ್ಲಿ ಜಪಮಾಲೆ ಮತ್ತು ಬಲಗಡೆಗೆ ಕಾಣುವ ವ್ಯಕ್ತಿಯ ಕೈಯಲ್ಲಿ ಗಂಟೆ ಸ್ಪಷ್ಟವಾಗಿ ಕಾಣಿಸುತ್ತವೆ. ಇದರಿಂದ ಈ ಗಂಧರ್ವರು ಲಕ್ಷ್ಮೀ ದೇವಿಯ ಅಭಿಷೇಕವನ್ನು ವೀಕ್ಷಿಸುತ್ತ, ವಾದ್ಯ ಮಾಡುತ್ತ ಗಗನದಲ್ಲಿ ಹಾರುತ್ತಿರುವರೆಂದು ಭಾವಿಸಬಹುದು (ಚಿತ್ರ-೧).

ಈ ಎಲ್ಲಾ ಚಿತ್ರಗಳ ಸುತ್ತಲೂ ತೆಳುವಾದ ಅರ್ಧ ವೃತ್ತಾಕಾರ ಪಟ್ಟಿ ಇದೆ. ಈ ವೃತ್ತಕ್ಕೆ ಯಾವ ಅಲಂಕಾರವಿರುವದಿಲ್ಲ. ಈ ವೃತ್ತದ ಬದಿಗಳಲ್ಲಿ, ಹೊರಗಿನ ಬದಿಗಳಲ್ಲಿ ಬಾಯಿ ತೆರೆದ ಮಕರಗಳಿದ್ದು ಅವುಗಳನ್ನು ನಡೆಸುವ ಸವಾರರನ್ನು ಚಿತ್ರಿಸಲಾಗಿದೆ. ಸವಾರರು ವಿವಿಧ ಕಿವಿಯೋಲೆಗಳನ್ನು ಹಾಗೂ ದುಂಡಾದ ಟೋಪಿಗಳನ್ನು ತಲೆಗೆ ಧರಿಸಿರುವರು.

ಎರಡನೆಯ ಫಲಕ :

ಮೊದಲನೆಯ ಫಲಕದ ಸಂಗಡ ದೊರೆತ ಈ ಎರಡನೇ ಗಜಲಕ್ಷ್ಮಿ ಫಲಕದ ಚಿತ್ರದ ಮಾದರಿಗಳು ಮೇಲ್ನೋಟಕ್ಕೆ ಒಂದೇ ರೀತಿಯಾಗಿ ಕಾಣುತ್ತವೆ. ಈಫಲಕದಲ್ಲಿ ಶಂಖನಿಧಿ ಮತ್ತು ಪದ್ಮನಿಧಿ ಮತ್ತು ಚೌರಿ ಹಿಡಿದ ಸೇವಕಿಯರನ್ನು ಬಿಟ್ಟು ಉಳಿದ ಚಿತ್ರಗಳನ್ನು ಇಲ್ಲಿಯೂ ಸೊಗಸಾಗಿ ಚಿತ್ರಿಸಲಾಗಿದೆ. ಈ ಫಲಕದಲ್ಲಿ ದ್ವಿಭುಜ ಲಕ್ಷ್ಮಿಯು ಪದ್ಮಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ಭಂಗಿ, ಬದಿಯಲ್ಲಿಯ ಕೆಳಗಿನ ಆನೆಗಳು ಕೆಳಗಿನಿಂದ ಸ್ವಲ್ಪ ಮೇಲಕ್ಕೆ ಪೂರ್ಣಕುಂಭಗಳನ್ನು ಎತ್ತಿಕೊಂಡು ಎದುರು ಮುಖ ಮಾಡಿ ನಿಂತಿರುವ ದೃಶ್ಯಗಳು ಮೊದಲನೇ ಫಲಕಕ್ಕಿಂತ ಭಿನ್ನವಾಗಿರುವುದನ್ನು ಎತ್ತಿ ತೋರಿಸುತ್ತವೆ ಈ ಫಲಕದಲ್ಲಿ ಲಕ್ಷ್ಮಿಯು ಬಿಗಿಯಾಗಿ ಕಾಲುಗಳ ವರೆಗೆ ಸೀರೆಯನ್ನು ಉಟ್ಟಿರುವುದು ಮತ್ತೊಂದು ಭಿನ್ನ ಲಕ್ಷಣ. ಇಲ್ಲಿ ನಾಲ್ಕು ಮಂದಿ ಗಗನದಲ್ಲಿ ಹಾರುತ್ತಿರುವ ಗಂಧರ್ವರನ್ನು ತೋರಿಸಲಾಗಿದೆ. ಈ ಫಲಕದಲ್ಲಿ ಲಕ್ಷ್ಮಿಯನ್ನು ನಾಲ್ಕು ಆನೆಗಳು ಆರಾಧಿಸುತ್ತಿರುವುದು ವಿಶೇಷವಾಗಿದೆ. ಈ ಶಿಲ್ಪದಲ್ಲಿ ಕಾಣುವ ವಸ್ತ್ರಾಭರಣ ಭಂಗಿ ಇತ್ಯಾದಿ ಶೈಲಿಯಿಂದ ಈ ಫಲಕದ ಕಾಲಮಾನ ಮೊದಲನೇ ಫಲಕ ತಯಾರಿಸಿದ ನಂತರದೆಂದು ಈ ಹೇಳಬಹುದು. ಈ ಫಲಕದಲ್ಲೂ ನಾಲ್ಕು ಆನೆಗಳಿದ್ದು, ಕೆಳಗಿನ ಆನೆಗಳು ಪೂರ್ಣಕುಂಭಗಳನ್ನು ಕೆಳಗಿನಿಂದ ಎತ್ತಿಹಿಡಿದ ದೃಶ್ಯವು ಮೊದಲನೇ ಫಲಕದಲ್ಲಿ ಕೆಳಗಿನ ಆನೆಗಳು ಮಧ್ಯದ ವರೆಗೆ ಪೂರ್ಣ ಕುಂಭಗಳನ್ನು ಎತ್ತಿಹಿಡಿದಿರುವ ದೃಶ್ಯಗಳನ್ನು ಅವಲೋಕಿಸಿದಾಗ ಈ ಫಲಕವೂ ಅದೇ ಸ್ಥಳಕ್ಕೆ ಸೇರಿದ್ದೆಂದು ಹೇಳಬಹುದಾಗಿದೆ (ಚಿತ್ರ-೨).

ಬದಾಮಿ ಚಾಲುಕ್ಯ-ಪಲ್ಲವರ ಕಾಲದ ಗಜಲಕ್ಷ್ಮಿ :

ಬಾದಾಮಿ ಚಾಲುಕ್ಯರ ಕಾಲದ (ಸುಮಾರು ಕ್ರಿ. ಶ. ೭-೮ ನೇ ಶತಮಾನ)

ಬದಾಮಿಯ [೪] ಮೊದಲಿನ ಮತ್ತು ಎರಡನೇ ಗುಹಾಲಯದ ಕಂಬಗಳ ಮೇಲೆ ಮತ್ತು ಪಟ್ಟದಕಲ್ಲಿನ ಪಾಪನಾಥ [೫] ದೇವಾಲಯದಲ್ಲಿ ತೋರಿಸಿದ ಗಜಲಕ್ಷ್ಮಿಯು ಪದ್ಮಾಸನದಲ್ಲಿ ಕುಳಿತಿರುವಳು. ತೋರಣ ಫಲಕದಲ್ಲಿ ಎರಡು ಆನೆಗಳಿಂದ ಆರಾಧಿಸುವ ಪದ್ಮಾಸನದಲ್ಲಿ ಕುಳಿತ ದ್ವಿಭುಜ ಲಕ್ಷ್ಮಿಯನ್ನು, ಶಿವಮೊಗ್ಗ ಜಿಲ್ಲೆಯ ಕುಪ್ಪಗದ್ದೆ ಮತ್ತು ತಾಳಗುಂದಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತ ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ. ಅ. ಸುಂದರ [೬] ಅವರು ಈ ಹಿಂದೆ ಶೋಧಿಸಿರುವರು. ಸಿದ್ಧೇಶ್ವರ ದೇವಾಲಯದ ಮುಂದಿನ ತೋರಣದಲ್ಲಿದ್ದ ತಾಳಗುಂದದ ಗಜಲಕ್ಷ್ಮಿ ಫಲಕವು ಕ್ರಿ. ಶ. ೬ ನೇ ಶತಮಾನ ಮತ್ತು ಕುಪ್ಪಗದ್ದೆಯ ಗಜಲಕ್ಷ್ಮಿ ಫಲಕವು ಕ್ರಿ. ಶ. ೭ನೇ ಶತಮಾನದ್ದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ನಾಲ್ಕು ಆನೆಗಳಿಂದ ಆರಾಧಿಸಿಕೊಳ್ಳುವ, ಪದ್ಮಾಸನದಲ್ಲಿ ಕುಳಿತ ದ್ವಿಭುಜ ಲಕ್ಷ್ಮಿ ತನ್ನ ಕೈಯಲ್ಲಿ ಏನನ್ನೂ ಹಿಡಿದಿಲ್ಲ. ಅವಳು ಪದ್ಮ ಪೀಠದ ಮೇಲೆ ಕುಳಿತಿರುವಳು.ಎರಡೂ ಕೈಗಳನ್ನು ತನ್ನ ತೊಡೆಯ ಮೇಲೆ ಇಟ್ಟಿದ್ದಾಳೆ. ಮೇಲಿನ ಆನೆಗಳನ್ನು ಬದಿಗಳಲ್ಲಿ ಮತ್ತು ಕೆಳಗಿನ ಆನೆಗಳು ಸೊಂಡಿಲಲ್ಲಿ ಪೂರ್ಣಕುಂಭಗಳಿಂದ ನೀರನ್ನು ಲಕ್ಷ್ಮಿಯ ಮೇಲೆ ಹಾಕುತ್ತಿವೆ. ಇದು ಬಾದಾಮಿಯ ಎರಡೇ [೭] ಗುಹದೇವಾಲಯದಲ್ಲಿದೆ. ಆದರೆ ಪಲ್ಲವರ ಕಾಲದ ಮಹಾಬಲೀಪುರದ ವರಾಹ [೮] ಗುಹಾಲಯದ ಗೋಡೆಯ ಮೇಲೆ ಮತ್ತು ಮದ್ರಾಸಿನ ಮ್ಯೂಜಿಯಂನ ಗಜಲಕ್ಷ್ಮಿ ಶಿಲ್ಪದಲ್ಲಿ ಬಾದಾಮಿಯ [೯] ಮೂರನೆ ವಿಷ್ಣು ಗುಹಾಲಯದಲ್ಲಿ ನಾಲ್ಕು ಆನೆಗಳಿಂದ ದೇವಿಯು ಆರಾಧಿಸಿಕೊಳ್ಳುತ್ತಿರುವ ಲಕ್ಷ್ಮಿಯು ಪ್ರಲಂಬಾಸನದಲ್ಲಿ ಕುಳಿತಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಶಿಲ್ಪಗಳ ಕಾಲಮಾನ ಸುಮಾರು ಕ್ರಿ. ಶ. ೭ ನೇ ಶತಮಾನ. ಆದರೆ ಬಾದಾಮಿಯ ವಿಷ್ಣುಗುಹೆಯ ಲಕ್ಷ್ಮಿಯ ಪಕ್ಕದಲ್ಲಿ ಆನೆಗಳಲ್ಲದೆ ಪೂರ್ಣಕುಂಭಗಳನ್ನು ಹಿಡಿದುನಿಂತ ನಾಲ್ಕು ಮಂದಿ ಸೇವಕಿಯರಿದ್ದಾರೆ. ಪದ್ಮಪೀಠಕ್ಕೆ ಉದ್ದವಾದ ದಂಡ ಮತ್ತು ಎಲೆಯನ್ನು ತೋರಿಸಿಲ್ಲ. ಕೆಳಗಿನ ಆನೆಗಳು ಪೂರ್ಣಕುಂಭಗಳನ್ನು ಕೆಳಗಿನಿಂದ ಸೊಂಡಿಲಲ್ಲಿ ಎತ್ತಿಕೊಂಡು ನಿಂತಿವೆ. ಶಿಗ್ಗಾವಿಯ ಎರಡನೇ ಫಲಕದಲ್ಲಿ ತೋರಿಸಿದ ಈ ರೀತಿಯ ನಾಲ್ಕು ಆನೆಗಳು ಕಲಾತ್ಮಕವಾಗಿವೆ. ಶಿಗ್ಗಾವಿಯ ಮೊದ

---

೪. ಬ್ಯಾನರ್ಜಿ, ಆರ್. ಡಿ. ೧೯೨೮: ಬಾಸ ರಿಲೀಪ್ಸ್ ಆಫ್ ಬಾದಾಮಿ ಮಿಮಾಯರ್ಸ್ ಆಫ್ ದಿ. ಆರ್.ಕ್ಯಾಲಾಜಿಕಲ್ ಸರವೇ ಆಫ್. ಇಂಡಿಯಾ. ನಂ. ೨೫ ಪ್ಲೇ೫ ಮತ್ತು ಪ್ಲೇ,೧೦:

೫. ಅಣ್ಣಗೇರಿ. ೧೯ : ಪಟ್ಟದಕಲ್ಲಿನ ದೇವಾಲಯಗಳು.

೬. ಸುಂದರ, ಅ, ಇವರು ಈ ಮೂರ್ತಿಗಳನ್ನು ಬೆಳಕಿಗೆ ತಂದಿರುವುದಾಗಿ ನನಗೆ ತಿಳಿಸಿದ್ದಾರೆ.

೭. ಬ್ಯಾನರ್ಜಿ, ಆರ್. ಡಿ. ೧೯೨೮ : ಅದೇ ಕಡೆ : ಸಂ. ೨೫, ಪ್ಲೇ. ೧೦.

೮. ರಾವ ವಿ. ಎಸ್. ಹೆಚ್. ೧೯೭೦ : ಜೆ ಐ ಹೆಚ್, ೪೮, ಪು. ೭೪

೯. ಶಿವರಾಮಮೂರ್ತಿ ೧೯೪೧, ಜರ್ನಲ್ ಆಫ್ ದಿ ಯು. ಪಿ. ಹಿಸ್ಟಾರಿಕಲ್ ಸೊಸೈಟಿ

ಲನೇ ಫಲಕದಂತೆ ಅವು ಗಜ-ಲಕ್ಷ್ಮಿ ಮತ್ತು ಲಕ್ಷ್ಮಿಯ ಕೆಲ ಅಭರಣಗಳನ್ನು ಹೋಲುತ್ತವೆ.

ಬಾದಾಮಿಯ ಎರಡನೇ ಗುಹಾಲಯದಲ್ಲಿ ಲಕ್ಷ್ಮಿಯನ್ನು ಕೊಲ್ಲಲು ಕಳಿಸುವ ಮಧ್ಯದಲ್ಲಿ ಕೈಯಲ್ಲಿ ಕಮಲಹಿಡಿದ ದ್ವಿಭುಜ ಲಕ್ಷ್ಮಿಯು ಪ್ರಲಂಬಾಸನದಲ್ಲಿ ಪದ್ಮ ಪೀಠದ ಮೇಲೆ ಕುಳಿತಿರುವಳು. ಎರಡು ಆನೆಗಳು ಸೊಂಡಿಲಲ್ಲಿ ಪೂರ್ಣಕುಂಭಗಳನ್ನು ಹಿಡಿದು ನಿಂತಿವೆ. ಅವುಗಳ ಮೇಲ್ಭಾಗದಲ್ಲಿ ಸೇವಕರು ಪೂರ್ಣಕುಂಭಗಳಿಂದ ಲಕ್ಷ್ಮಿಗೆ ನೀರನ್ನು ಹಾಕುತ್ತಿರುವರು. ದೇವ-ದೇವತೆಯರು, ಗಂಧರ್ವರು, ತ್ರಿಮೂರ್ತಿಗಳು ಲಕ್ಷ್ಮಿಯ ಅಭಿಷೇಕವನ್ನು ವೀಕ್ಷಿಸುತ್ತಿರುವರು. ಅವಳ ಎಡಬದಿಗೆ ಅಂಚಿನಲ್ಲಿ ಅವಳು ಮಹಿಷಾಸುರನನ್ನು ಕೊಲ್ಲುವುದನ್ನು ಬಹು ಮಾರ್ಮಿಕವಾಗಿ ಚಿತ್ರಿಸ ಲಾಗಿದೆ.

ರಾಯಚೂರು ಜಿಲ್ಲೆಯ ಯಲಬುರ್ಗಾ ತಾಲಕೂನ ಇಟ್ಟಿಗಿಯ ಅಲಂಕಾರ ತೋರಣದ ಮಧ್ಯ ಗಜಲಕ್ಷ್ಮಿ ಶಿಲ್ಪವಿದೆ. ಬದಿಗಳ ಅಂಚಿನಲ್ಲಿರುವ ಕುಬೇರರು ಶಂಖನಿಧಿ ಮತ್ತು ಪದ್ಮನಿಧಿಯರಾಗಿದ್ದಾರೆ. ಅದರಲ್ಲಿ ಮಂಗಳಚಿಹ್ನೆಗಳಾದ ಪೂರ್ಣಕುಂಭ, ನಂದಿ, ಮೀನದ್ವಯ, ಚಾಮರದ್ವಯ ಹಂದಿ ಮತ್ತು ಸಿಂಹದ ಚಿತ್ರಗಳಿವೆ. ಅದರಲ್ಲಿ ರುವ ಶಾಸನದಿಂದ ಅದು ಸು. ಕ್ರಿ. ಶ. ೭ ನೇ ಶತಮಾನ ದಅಂತ್ಯಭಾಗದ್ದೆಂದು ಡಾ. ಎಂ. ಎಸ್. ನಾಗರಾಜರಾವ ಅವರು ಅಭಿಪ್ರಾಯಪಟ್ಟಿದ್ದಾರೆ.

ಸುಮಾರು ಕ್ರಿ. ಶ. ೭ ನೇ ಶತಮಾನದ ತಮಿಳುನಾಡಿನ ಉತ್ತರ ಅರ್ಕಾಟ ಜಿಲ್ಲೆಯ[೧೦] ಒಂದು ಶಿಲ್ಪದಲ್ಲಿ ದ್ವಿಭುಜ ಲಕ್ಷ್ಮಿಯು ಪದ್ಮಾಸನದಲ್ಲಿ ಕುಳಿತಿದ್ದು, ಬದಿ ಗಳಲ್ಲಿ ಶಂಖನಿಧಿ ಮತ್ತು ಪದ್ಮ ನಿಧಿಯರು ಇರುವುದನ್ನು ಗುರ್ತಿಸಿದ್ದಾರೆ.

ಆದರೆ ಸುಮಾರು ಕ್ರಿ. ಶ. ೭ ನೇ ಶತಮಾನದ ಪಲ್ಲವರ ಹೇಮಾವತಿಯ[೧೧] ನೊಳಂಬರು ದೇವಾಲಯದ ತೋರಣದ ಶಿಲ್ಪದಲ್ಲಿ ಪದ್ಮಾಸನದಲ್ಲಿ ಕುಳಿತ ದ್ವಿಭುಜ ಲಕ್ಷ್ಮಿಯ ಸಂಗಡ ಕುಬೇರ-ಯಕ್ಷಿ ಮತ್ತು ಗಂಧರ್ವರಿದ್ದಾರೆ. ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳಲ್ಲಿ ಶಂಖನಿಧಿ ಮತ್ತು ಪದ್ಮನಿಧಿಯ ಶಿಲ್ಪಗಳು ಸಾಮಾನ್ಯ[೧೨] ಇದರಿಂದಾಗಿ ಸುಮಾರು ಕ್ರಿ. ಶ. ೭ ನೇ ಶತಮಾನದ ಪೂರ್ವದ ಗಜಲಕ್ಷ್ಮಿಯ ಸಂಗಡ ಶಂಖನಿಧಿ, ಪದ್ಮನಿಧಿ ಮತ್ತು ಗಂಧರ್ವರ ಚಿತ್ರಗಳನ್ನು ತೋರಿಸುವ ಸಂಪ್ರ ದಾಯ ಪ್ರಾರಂಭವಾದಂತೆ ಕಾಣುವದು.[೧೩]

---

೧೦. ಅದೇ ಕಡೆ.

೧೧. ಗೋವಿಂದ ಚಂದ್ರ : ಪ್ರಾಚೀನ ಭಾರತ ಮೇ ಲಕ್ಷ್ಮಿಪ್ರತಿಮ ಪು. ೨೪

೧೨. ಅಣ್ಣಿಗೇರಿ : ಐಹೊಳೆ :ಕಲೆ ಮತ್ತು ಸಂಸ್ಕೃತಿ

೧೩. ಅದೇ ಕಡೆ.

ಪ್ರಭಾಮಂಡಲದಲ್ಲಿ ಪದ್ಮದಳಗಳನ್ನು ಮತ್ತು ತೋಳಿನಲ್ಲಿ ನಾಗಬಂಧಗಳನ್ನು, ವಿವಿಧ ಕಿವಿಯೋಲೆಗಳನ್ನು ಪ್ರಲಂಬಾಸನದಲ್ಲಿ ಪದ್ಮಪೀಠದ ಮೇಲೆ ಕುಳಿತು ಎರಡು ಮತ್ತು ನಾಲ್ಕು ಆನೆಗಳಿಂದ ಲಕ್ಷ್ಮಿಯನ್ನು ಅಭಿಷೇಕ ಮಾಡುವ ದೃಶ್ಯಗಳ ಶೈಲಿಯು ಬಾದಾಮಿ ಚಾಲುಕ್ಯರ ಕಾಲದ ಹಲವಾರು ಶಿಲ್ಪಗಳಲ್ಲಿ ಕಂಡುಬಂದಿದೆ. ಇವುಗಳು ಶಿಗ್ಗಾವಿಯ ಮೊದಲನೆಯ ಫಲಕದ ಲಕ್ಷ್ಮಿಯನ್ನು ಹೋಲುತ್ತಿರುವುದು ವಿಶಿಷ್ಟವಾಗಿದೆ. ಪೂರ್ಣಕುಂಭಗಳನ್ನು ಹಿಡಿದು ನಿಂತಿರುವುದು ಮತ್ತು ನೀರನ್ನು ಲಕ್ಷ್ಮಿಯ ಮೇಲೆ ಸುರಿಯುವ ಶಿಗ್ಗಾವಿ ಫಲಕದ ನಾಲ್ಕುಆನೆಗಳು ಆಕರ್ಷಣೀಯವಾಗಿ ಮತ್ತುಕಲಾತ್ಮಕ ವಾಗಿ ಇವೆ. ಇಂತಹ ಆಕರ್ಷಣೀಯ ಕೊರತೆ ಅಲ್ಲಿರುವುದು. ಈ ಮೊದಲ ಶಿಲ್ಪದಲ್ಲಿ ಗಜಲಕ್ಷ್ಮಿ ಆಕೆಯ ಪರಿವಾರದಲ್ಲಿ ಕಾಣುವ ಕಡಿಮೆ ಆಭರಣ, ದಪ್ಪ ತುಟಿ, ಸಮ ತೂಕದ ಅಂಗಾಂಗಗಳ ಶೈಲಿಯು ಬಾದಾಮಿ ಚಾಲುಕ್ಯರ ಕೆಲ ಶಿಲ್ಪಗಳನ್ನು ತಕ್ಕ ಮಟ್ಟಿಗೆ ಹೋಲುತ್ತವೆ ನಾಲ್ಕು ಆನೆಗಳಿಂದ ಲಕ್ಷ್ಮಿಯ ಆರಾಧನೆಯು ಈ ಕಾಲದಲ್ಲಿ ಕಾಣುವದನ್ನು ಈ ಮೇಲೆ ಸೂಚಿಸಲಾಗಿದೆ. ಗಜಲಕ್ಷ್ಮಿಯಸಂಗಡ ಶಂಖನಿಧಿ ಮತ್ತು ಪದ್ಮನಿಧಿಯುಉ ಈ ಕಾಲದ ಇಟಗಿ, ಐಹೊಳೆ, ಪಟ್ಟದಕಲ್ಲಿನ ಶಿಲ್ಪಗಳಲ್ಲಿವೆ. ಹಾಗೂ ಇದೇ ಕಾಲದ ಪಲ್ಲವರ ಕಾವೇರಿ ಪಟ್ಟಣದ[೧೪] ಗಜ-ಲಕ್ಷ್ಮಿ ಫಲಕದಲ್ಲಿ ಗಜಲಕ್ಷ್ಮಿ ಸಂಗಡ ಶಂಖನಿಧಿ ಮತ್ತು ಪದ್ಮನಿಧಿಯಿರುವುದು ವಿಶಿಷ್ಟವಾಗಿದೆ.

ರಾಷ್ಟ್ರಕೂಟರ ಕಾಲದ ಗಜಲಕ್ಷ್ಮಿ:

ರಾಷ್ಟ್ರಕೂಟರ ಕಾಲದಲ್ಲಿ ವಿಶೇಷವಾಗಿ ತೋರಣ ಫಲಕಗಳನ್ನು ನಿಲ್ಲಿಸುವ ಸಂಪ್ರದಾಯ ಹೆಚ್ಚು ಬೆಳಕಿಗೆ ಬಂದಿದೆ. ರಾಷ್ಟ್ರಕೂಟರ ಮೊದಲನೇ ಕೃಷ್ಣನು ಕಟ್ಟಿಸಿದ ಎಲ್ಲೋರದ[೧೫] ಕೈಲಾಸದಲ್ಲಿ ಕಾಣುವ ಗಜ-ಲಕ್ಷ್ಮಿ ದೃಶ್ಯ, ವಸ್ತ್ರಾಭರಣ ಶೈಲಿಯ ಲಕ್ಷಣದಿಂದ ಈ ಫಲಕಗಳು ಭಿನ್ನವಾಗಿರುವವು.

ಎಲ್ಲೋರಾದ ಹದಿನಾರನೇ ಗುಹಾಲಯದ ಕೈಲಾಸ ದೇವಾಲಯದಲ್ಲಿ ಹೆಚ್ಚು ಆಭರಣಗಳನ್ನು ಧರಿಸಿದ ಚತುರ್ಭುಜ ಲಕ್ಷ್ಮಿಯು ಒಂದು ಕಾಲನ್ನು ಮಾತ್ರ ಕೆಳಗಿಳಿ ಬಿಟ್ಟು ಕುಳಿತಿರುವಳು ಬದಿಗೆ ಪೂರ್ಣಕುಂಭಗಳನ್ನು ಹಿಡಿದು ನಿಂತ ಸೇವಕರಿದ್ದಾರೆ. ಮೇಲಿನ ಆನೆಗಳ ಸೊಂಡಿಲು ಪಕ್ಕದಲ್ಲಿ ಛತ್ರಿಯ ರೇಖಾಚಿತ್ರ ಗಂಧರ್ವರ ಚಿತ್ರ ಗಳಿವೆ.[೧೬] ಅಲ್ಲಿಯ ಇನ್ನೊಂದು[೧೭] ಚಿತ್ರದಲ್ಲಿ ಪದ್ಮಾಸನದಲ್ಲಿ ದ್ವಿಭುಜ ಲಕ್ಷ್ಮಿ

---

೧೩. ನಾಗರಾಜರಾವ, ಎಂ. ಎಸ್. ೧೯೭೮ : ಸ್ಕಲ್ಪ್ಚರ್ ಆಂಡ್ ಪೇಂಟಿಂಗ್ಸ್ ಆಫ್ ಬದಾಮಿ ಚಾಲುಕ್ಯ, ಪು: ३೦೮-३೦೯.

೧೪. ಶಿವರಾಮಮೂರ್ತಿ : ೧೯೪೧ : ಅದೇ ಕಡೆ.

೧೫. ರಾವ್ ವಿ. ಎನ್. ಎಚ್. ಪು. ೭೪

೧೬.

೧೭. ಕುಮಾರಸ್ವಾಮಿ : ಅರ್ಲಿ ಇಂಡಿಯನ್ ಐಕನೋಗ್ರಾಫಿ ಶ್ರೀಲಕ್ಷ್ಮಿ, ಪು. ೧೮೨

ಯನ್ನು ನಾಲ್ಕು ಆನೆಗಳು ಆರಾಧಿಸುತ್ತಿವೆ. ಈ ದೃಶ್ಯದ ಸುತ್ತ ಗಂಧರ್ವರು, ದಂಪತಿಗಳು ಮುಂತಾದವರು ದೇವಿಯ ಅಭಿಷೇಕವನ್ನು ವೀಕ್ಷಿಸುತ್ತಿರುವರು. ಮೇಲಿನ ಆನೆಗಳು ಹಿಡಿದ ಪೂರ್ಣಕುಂಭಗಳ ಮೇಲೆ ಛತ್ರಿಯನ್ನು ತೋರಿಸಲಾಗಿದೆ. ಈ ದೃಶ್ಯದ ಮುಂದೆ ಕಮಲದ ಹೊಂಡ ಮತ್ತು ಅದರಲ್ಲಿ ಕಮಲಗಳು ಬೆಳೆದು ನಿಂತಿವೆ. ಈ ರೀತಿಯ ಸ್ಥೂಲ ವಿವರಗಳನ್ನು ಹೊಂದಿದ ದ್ವಿಭುಜ ಲಕ್ಷ್ಮಿಯನ್ನು ಎರಡು ಆನೆಗಳು ಅವಳ ಮೇಲ್ಭಾಗದಿಂದ ಅಭಿಷೇಕ ಮಾಡುವ ಶಿಲ್ಪ ಐಹೊಳೆಯಲ್ಲಿದ್ದು, ಅದು ಬಾದಾಮಿ ಚಾಲುಕ್ಯರ ಅಂತ್ಯಕಾಲಕ್ಕೆ ಸೇರಿದೆ. ಇವುಗಳ ಕಾಲಮಾನ ಸುಮಾರು ಕ್ರಿ. ಶ. ೮ ನೇ ಶತಮಾನ. ಬಳ್ಳಾರಿ ಜಿಲ್ಲೆಯ ಕುರುವತ್ತಿಯಲ್ಲಿ ಇಂತಹ ಗಜಲಕ್ಷ್ಮಿ ಫಲಕವನ್ನು ಅಲೆಕ್ಸಾಂಡರ್ ವರದಿ ಮಾಡಿದ್ದಾರೆ.

ಸಾಹಿತ್ಯದಲ್ಲಿ ಗಜಲಕ್ಷ್ಮಿ :

ವೈದಿಕ ಸಂಪ್ರದಾಯ ಮತ್ತು ಸಾಹಿತ್ಯದಲ್ಲಿ ಈ ದೇವಿಯ ಆರಾಧನೆ ಬಗ್ಗೆ ಹೇಳಲಾಗಿದೆ. ಈಕೆಯ ವಿವರಣೆ ಶ್ರೀಸೂಕ್ತದಲ್ಲಿದೆ.[೧೮] ಮತ್ಸ್ಯ ಪುರಾಣವು[೧೯] ದ್ವಿಭುಜಲಕ್ಷ್ಮಿ ಜತೆ ನಾಲ್ಕು ಆನೆಗಳು ಆರಾಧಿಸುವದನ್ನು ಹೇಳುತ್ತದೆ. ಈಕೆಯು ಸ್ವತಂತ್ರ ದೇವತೆಯಾಗಿದ್ದಾಳೆಂದು ಇದರಲ್ಲಿ ಹೇಳಲಾಗಿದೆ. ಪುರಾಣಗಳು ಲಕ್ಷ್ಮಿ ಜತೆಯಲ್ಲಿ ಕಮಲ, ನೀರು, ಆನೆ ಮತ್ತು ಯಕ್ಷರಿರುವುದನ್ನು ತಿಳಿಸುತ್ತವೆ. ಪೌರಾಣಿಕ ವರ್ಣನೆಯನ್ನು ಗಳಿಸಿದ ಈಕೆಯ ಚಿತ್ರಗಳನ್ನು[೨೦] ಮಣ್ಣಿನ ಗೊಂಬೆಗಳಲ್ಲಿ, ನಾಣ್ಯ ಮತ್ತು ಮುದ್ರೆಗಳಲ್ಲೂ ತೋರಿಸಲಾಗಿದೆ.

ಉತ್ತರಭಾರತದ ಸಾಂಚಿ, ಬೋಧಗಯಾ, ಕೌಶಾಂಬಿ, ಮಥುರೆ, ಅಯೋಧ್ಯ ಮುಂತಾದ ಕಡೆ ಈಕೆಯ ಶಿಲ್ಪಗಳಿವೆ. ಗಜಲಕ್ಷ್ಮಿಯನ್ನು ಶಿಲ್ಪದಲ್ಲಿ ತೋರಿಸುವ ಪದ್ಧತಿ ಕ್ರಿ. ಪೂ. ೨ ನೇ ಶತಮಾನದಲ್ಲಿ ಮೊದಲು ಬೌದ್ಧರಿಂದ ಪ್ರಾಯಃಶಃ ವ್ಯಾಪಾರಿಗಳಿಂದ ಪ್ರಾರಂಭವಾಯಿತೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.[೨೧] ತದನಂತರ ಕಾಲದಲ್ಲಿ ವಿವಿಧ ಧರ್ಮದವರೂ ಈ ದೇವಿಯನ್ನು ಶಿಲ್ಪದಲ್ಲಿ ತೋರಿಸಿ ಆರಾಧಿಸುವ ಪದ್ಧತಿಯು ಹೆಚ್ಚು ಪ್ರಚಲಿತವಾಯಿತೆಂದು ಹೇಳಲು ಆಧಾರಗಳು ಲಭ್ಯವಾಗಿವೆ. ಅದೇ ರೀತಿ ಬಾದಾಮಿ ಚಾಲುಕ್ಯರು ಈ ಪದ್ಧತಿಗೆ ಪ್ರೋತ್ಸಾಹ ನೀಡಿದ ಉದಾಹರಣೆಗಳು ಅಲ್ಲಲ್ಲಿ ಕಂಡುಬಂದಿವೆ. ತದನಂತರದ ರಾಷ್ಟ್ರಕೂಟರ ಕಾಲದಲ್ಲಿ ಈ ಶಿಲ್ಪದ ಬಳಕೆ ಹೆಚ್ಚು ವಿಸ್ತಾರವಾಗಿರುವದು ತಿಳಿದ ಸಂಗತಿಯಾಗಿದೆ. ಈ ಕಾಲ ಮತ್ತು ನಂತರದಲ್ಲಿ ಈ ಶಿಲ್ಪದ ಮಾದರಿಯೂ ಹೆಚ್ಚು ಅಭಿವೃದ್ಧಿ ಹೊಂದಿರುವದು ತಿಳಿದ ಸಂಗತಿಯಾಗಿದೆ.

---

೧೮. ಕಶಿಕರ್ : ಋಗ್ವೇದ, ಪು.೯೦೧–೯೦೨

೧೯. ಮತ್ಸ್ಯಪುರಾಣ, ಪು. ೨೬೧–೨೬೬.

೨೦. ಸಿಂಗ್ ಓ. ಪಿ. ೧೯೮೩ : ಐಕನೋಗ್ರಾಫಿ ಆಫ್ ಗಜಲಕ್ಷ್ಮಿ, ಪು. ೩೯, ವಾರಣಾಸಿ.

೨೧. ಅದೇ ಕಡೆ.

ಮೂಲಸ್ಥಳ :

ಈ ಶಿಲ್ಪಗಳ ಮೂಲಸ್ಥಳದ ಬಗ್ಗೆ ಹೀಗೆ ವಿವರಿಸಬಹುದು. ಶಿಗ್ಗಾವಿಯಲ್ಲಿ ಮುಖ್ಯವಾಗಿ ರಾಷ್ಟ್ರಕೂಟರ ಕಾಲದಿಂದ ಶಿಲಾಶಾಸನಗಳು ಬೆಳಕಿಗೆ ಬಂದಿವೆ.[೨೨] ಅಲ್ಲಿಯ ಜನವಸತಿ ಸುಮಾರು ಕ್ರಿ. ಶ. ೧–೨ ನೇ ಶತಮಾನದಿಂದ ಆರಂಭವಾಯಿತೆಂದು ಹೇಳಲಿಕ್ಕೆ ಆ ಕಾಲದ ಹೇರಳ ಗಡಿಗೆಮಡಿಕೆ ಚೂರುಗಳು, ಇಟ್ಟಿಗೆಗಳು, ಹಂಚುಗಳು, ಶಾತವಾಹನರ ಕೆಲವು ನಾಣ್ಯಗಳು ಈ ಹಿಂದೆ ಅಲ್ಲಿಯ ಕೆರೆಯ ಉತ್ತರ ಪ್ರದೇಶದಲ್ಲಿ ದೊರೆತಿವೆ. ಆದರೆ ತದನಂತರ ಕಾಲವಾದ ಕದಂಬರ ಮತ್ತು ಬಾದಾಮಿ ಚಾಲುಕ್ಯರ ಅವಶೇಷಗಳು ಅಲ್ಲಿ ಲಭ್ಯವಾಗಿಲ್ಲ. ಬದಾಮಿ[೨೩] ಚಾಲುಕ್ಯ ದೊರೆ ವಿಜಯಾದಿತ್ಯನ ತಾಮ್ರ ಶಾಸನ ಈ ಭಾಗದಲ್ಲಿ (ಶಿಗ್ಗಾವಿಯಲ್ಲಿ) ಸಂಗ್ರಹವಾಗಿದೆ. ಈ ಗ್ರಾಮಕ್ಕೆ ಬೆಳಕನ್ನು ಚೆಲ್ಲುವ ಯಾವ ಅಂಶಗಳೂ ಈ ಪಟಗಳಲ್ಲಿ ಉಲ್ಲೇಖವಾಗಿಲ್ಲ. ಈ ರಾಜನ ಈ ಕಾಲದ ಕೆಲವು ಶಿಲಾಶಾಸನಗಳು ಶಿಗ್ಗಾವಿ ಭಾಗದ ಬೆಳಗಲಿಯ[೨೪] ಕೀರ್ತಿವರ್ಮನ ತ್ರುಟಿತಶಾಸನ ಮತ್ತು ಬನ್ನಿಕೊಪ್ಪದ[೨೫] ವಿಜಯಾದಿತ್ಯನ ಶಾಸನ ಮಹತ್ವದ್ದಾಗಿವೆ. ಬನ್ನಿಕೊಪ್ಪ ಶಾಸನವು ಈ ಅರಸನ ಕಾಲದಲ್ಲಿ ಉತ್ತರಾಪಥದಿಂದ ಬಂದ ಒಬ್ಬ ವ್ಯಕ್ತಿಯಿಂದ ಅಲ್ಲಿಯ ಅರ್ಜುನೇಶ್ವರ ದೇವಾಲಯ ಪುನಃ ನಿರ್ಮಾಣ ಹೊಂದಿತೆಂದು ಮತ್ತು ಆ ದೇವಾಲಯದ ಮುಂದೆ ನಂದೀಶ್ವರನನ್ನು ಪ್ರತಿಷ್ಠಾಪಿಸಿದನೆಂದು ಹೇಳುತ್ತದೆ. ಈ ಶಾಸನ ಮತ್ತು ಉಲ್ಲೇಖಿಸಿದ ದೇವಾಲಯ,ಆ ಕಾಲದ ಶಿವ-ನಂದಿ ಮೂರ್ತಿಗಳು ಈಗ ಅಲ್ಲಿ ನೋಡ ಸಿಗುತ್ತವೆ.[೨೬]

ಅಲ್ಲಿಯ ಈ ಕಾಲದ ಮೂರ್ತಿಗಳನ್ನು ಮತ್ತು ಶಿಲಾಶಾಸನವನ್ನು ಬೇರೆ ಕಡೆ ವರ್ಗಾಯಿಸಿರುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಶಿಗ್ಗಾವಿಯಲ್ಲಿ ರಾಷ್ಟ್ರಕೂಟರ ಕಾಲದ ಶಿಲಾಶಾಸನಗಳು ಬೆಳಕಿಗೆ ಬಂದಿವೆ. ಕ್ರಿ.ಶ. ೮೬೫ ರ ಈ ಕಾಲದ ಅಮೋಘವರ್ಷನ ಶಾಸನ, ಅಲ್ಲಿಯ ಅತ್ಯಂತ ಹಳೆಯ ಶಿಲಾಶಾಸನವಾ[೨೭]ಗಿದೆ. ಈ ಶಾಸನವು ಶಿಗ್ಗಾವಿಯಲ್ಲಿ ಶ್ರೀಕಲ್ಕೆರೆತಿ

---

೨೨. ಪಂಚಮುಖಿ ಆರ್. ಎಸ್. ೧೯೪೧ : ಪು. ೧೫–೨೪.

೨೩. ಎ.ಇ. ೩೨, ಪು. ೩೧೭–೨೪.

೨೪. ಎ.ಆರ್.ಐ.ಇ. ೧೯೪೫–೪೬, ನಂ. ೨೭೭.

೨೫. ಎಸ್.ಐ.ಐ, ೧೯, ನಂ ೩.

೨೬. ಈ ಪ್ರದೇಶದಲ್ಲಿ ಅನ್ವೇಷಣೆ ಕೈಗೊಂಡಾಗ (೧೯೯೧) ಬನ್ನಿಕೊಪ್ಪದ ಪಂಚಪಾಂಡವರ ದೇವಸ್ಥಾನಗಳಲ್ಲಿ ವಿಗ್ರಹ, ಸು. ಕ್ರಿ.ಶ. ೭ ನೇ ಶತಮಾನದ ಬ್ರಹ್ಮಸೂತ್ರವಿರುವ ಶಿವಲಿಂಗ, ಅಲ್ಲಿಯ ಕಾಳಮ್ಮನ ಗುಡಿಯಲ್ಲಿ ಕ್ರಿ.ಶ. ೭ ನೇ ಶತಮಾನದ ನಂದಿವಿಗ್ರಹಗಳು ನನಗೆ (ಲೇಖಕರಿಗೆ) ಕಂಡು ಬಂದಿವೆ.

೨೭. ಕೆ.ಐ. ೧ ಪು. ೧೪–೧೫.

ಭಟಾರೆ ದೇವತೆಗೆ ದತ್ತಿ ನೀಡಿದ ವಿಷಯವನ್ನು ತಿಳಿಸುತ್ತದೆ. ಆ ಅರಸನ ಅಲ್ಲಿಯ ಮತ್ತೊಂದು ಶಾಸಶಿಲನದ ಮೇಲೆ ಗಜ–ಲಕ್ಷ್ಮಿಯ ಸುಂದರ ಚಿತ್ರವಿದೆ. ಹೆಚ್ಚು ಆಭರಣ, ಅಲಂಕಾರವುಳ್ಳ ಪದ್ಮಾಸನದಲ್ಲಿ ಕುಳಿತ, ದ್ವಿಭುಜ ಲಕ್ಷ್ಮಿಯನ್ನು ಎರಡು ಆನೆಗಳು ಅಭಿಷೇಕ ಮಾಡುತ್ತಿವೆ ಆ ಚಿತ್ರದ ಶೈಲಿಯು ಅಲ್ಲಿ ದೊರೆತ ಗಜಲಕ್ಷ್ಮಿಯ ಎರಡೂ ಫಲಕಗಳಿಗಿಂತ ಅತ್ಯಂತ ಭಿನ್ನವಾಗಿದೆ. ಆದುದರಿಂದ ಈಗ ದೊರೆತ ಎರಡೂ ಫಲಕದ ಗಜ–ಲಕ್ಷ್ಮಿಯನ್ನು ಶಿಗ್ಗಾವಿಯ ಶ್ರೀ ಕಲ್ಮೆರೆತಿ ಭಟಾರೆ ದೇವತೆಯ ಶಿಲ್ಪ ಗಳಾಗಿದ್ದವೇ ? ಎಂಬ ಅನುಮಾನ ಬರುತ್ತದೆ. ಆದರೆ ಈ ಫಲಕಗಳಿಗೆ ಎರಡು ರಂಧ್ರಗಳಿರುವುದರಿಂದ ಈ ಅಭಿಪ್ರಾಯ ಸಮಂಜಸವಾಗಿ ಕಾಣುವುದಿಲ್ಲ. ಈ ಫಲಕ ಗಳನ್ನೇ ಅಲ್ಲಿಯ ದೇವಾಲಯದ ತೋರಣ ಫಲಕಗಳನ್ನಾಗಿ ಬಳಸಿರಬೇಕೆಂದು ಈಗಾಗಲೇ ಸ್ಪಷ್ಟಪಡಿಸಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಫಲಕಗಳು ಅಲ್ಲಿಯ ಈ ದೇವತೆಯ ದೇಗುಲದ ಮುಂದೆ ನಿಲ್ಲಿಸಿರಬಹುದೆಂದು ಈ ಸಧ್ಯ ದೊರೆತ ಆಧಾರದಿಂದ ತರ್ಕಿಸಬಹುದಾಗಿದೆ. ಆದರೆ ಈ ಕಾಲದ ದತ್ತಿಯ ಶಾಸನದ ಪ್ರಕಾರ ಮುಖ್ಯವಾದ ಅಲ್ಲಿಯ ದೇವರನ್ನು ಮೂಲಸ್ಥಾನ ಮಹದೇವರು ಎಂದು ಹೇಳಿರುವುದನ್ನು[೨೯] ಇಲ್ಲಿ ಗಮನಿಸಬೇಕಾಗುತ್ತದೆ. ಈ ಫಲಕಗಳನ್ನು ಈ ದೇವಾಲಯದ ಮುಂದೆ ನಿಲ್ಲಿಸಲಾಯಿತೆ ? ಶಿಗ್ಗಾವಿಯ ಯಾವ ಭಾಗದಲ್ಲಿ ಈ ದೇವಾಲಯ ಇದ್ದಿತು ? ಇತ್ಯಾದಿ ಸಂಶಯಗಳು ಬರುತ್ತವೆ.

ಕಾಲಮಾನ :

ಮೇಲಿನ ಬಾದಾಮಿ ಚಾಲುಕ್ಯ – ಪಲ್ಲವ ಹಾಗೂ ರಾಷ್ಟ್ರಕೂಟರ ಕಾಲದ ಗಜಲಕ್ಷ್ಮಿ ಶಿಲ್ಪಗಳ ತುಲನಾತ್ಮಕ ಪರಿಶೀಲನೆಯಿಂದ ಶಿಗ್ಗಾವಿಯ ಮೊದಲನೆಯ ಗಜಲಕ್ಷ್ಮಿ ಫಲಕ ಸುಮಾರು ಕ್ರಿ.ಶ. ೭ ನೇ ಶತಮಾನದ್ದೆಂದೂ ಶಿಗ್ಗಾವಿಯ ಎರಡ ನೆಯ ಗಜಲಕ್ಷ್ಮಿ ಫಲಕ ಸುಮಾರು ಕ್ರಿ.ಶ. ೮ ನೇ ಶತಮಾನ ಅಭಿಪ್ರಾಯಪಡಬಹು ದಾಗಿದೆ. ಈ ರೀತಿಯ ಪ್ರತ್ಯೇಕ ಗಜಲಕ್ಷ್ಮಿ ಶಿಲ್ಪಗಳು ಕರ್ನಾಟಕ ವಾಸ್ತು ಶಿಲ್ಪದಲ್ಲೇ ಅಪರೂಪವಾಗಿವೆ.*

**

೨೮. ಕೆ.ಐ. ಪು. ೧೫–೧೮.

೨೯. ಅದೇ ಪು. ೧೪–೧೫.

* ಗಜಲಕ್ಷ್ಮಿ ಫಲಕಗಳನ್ನು ಕನ್ನಡ ಸಂಶೋಧನ ಸಂಸ್ಥೆಗೆ ತೆಗೆದುಕೊಂಡು ಬರಲು ಅನುಮತಿ ನೀಡಿದ ಕರ್ನಾಟಕ ವಿಶ್ವವಿದ್ಯಾಲಯದ ಮಾನ್ಯ ಕುಲಸಚಿವರಾದ ಡಾ. ಎ.ಎ. ಬಡಿಗೇರ ಅವರಿಗೂ ಮತ್ತು ಶಿಗ್ಗಾವಿಯ ತಹಸೀಲ್ದಾರ ಅವರಿಗೂ ಕೃತಜ್ಞತೆಗಳು.

ದೇವರಾಯ ಇಂಗಳೆ ಅವರ ಸಾಮಾಜಿಕ ವಿಚಾರಗಳು

–ಎಸ್.ಕೆ. ಕಲ್ಲೊಳ್ಳೀಕರ
–ಎಂ.ಎಸ್. ಯಾದವ

ದೇವರಾಯ ಇಂಗಳೆಯವರ ಹೆಸರು ಇಂದು ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ. ನಮ್ಮ ದೇಶದ ಇತಿಹಾಸದ ಬರವಣಿಗೆಯೇ ಹೀಗೆ. ಇದನ್ನು ಎಷ್ಟೋ ಜನ ಪರಕೀಯರು ಪ್ರಶ್ನಿಸಿದ್ದಾರೆ.* ಡಾ. ಬಿ.ಆರ್. ಅಂಬೇಡ್ಕರರು ಹೇಳುವಂತೆ "ಪ್ರಾಚೀನ ಭಾರತ, ಇತಿಹಾಸ ಹೊಂದಿಲ್ಲವೇನಂತಲ್ಲ. ಆದರೆ ಅದರ ಸ್ವರೂಪ ಮಾತ್ರ ಬೇರೆಯಾಗಿದೆ."೧ ಆಧುನಿಕ ಭಾರತದ ಇತಿಹಾಸ ಕೂಡ ಅಷ್ಟೆ. ಉತ್ತರ ಕರ್ನಾಟಕದ ಅನೇಕ ಮಹಿಮರು ತಮ್ಮ ಜೀವನವನ್ನೇ ಅವರ ಜನಾಂಗದ ಅಭ್ಯುದಯಕ್ಕೆ ಮುಡಿಪಾಗಿಟ್ಟು, ಹೇಳಹೆಸರಿಲ್ಲದಂತೆ ಇತಿಹಾಸದಿಂದ ಕಣ್ಮರೆಯಾಗಿರುವದು, ಈ ದೇಶದ ಇತಿಹಾಸ ಬರೆವಣಿಗೆಯ ಒಂದು ಚೋದ್ಯ. ಇಂಥ ವ್ಯಕ್ತಿಗಳಲ್ಲಿ ಶ್ರೀದೇವರಾಯ ರಾಮರಾಯ ಇಂಗಳೆಯವರೂ ಒಬ್ಬರು.

ಇಂದಿನ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ಹುಕ್ಕೇರಿ, ರಾಯಭಾಗ, ಅಥಣಿ ಮತ್ತು ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ 'ಇಂಗಳೆ ದೇವೂ' ಎಂದೇ ಪ್ರಖ್ಯಾತರಾದ ದೇವರಾಯ ಅವರು ಅಸ್ಪೃಶ್ಯ ಜಾತಿಯ ಹೊಲೇರ ಮನೆತನದಲ್ಲಿ ಶ್ರೀ ರಾಮರಾಯರ ಪುತ್ರನಾಗಿ ೧೮೯೮ ಜುಲೈ ತಿಂಗಳಲ್ಲಿ ಜನ್ಮವೆತ್ತಿದರು. ಹಿಂದೂಧರ್ಮದ ಕರಾಳ ಕಟ್ಟಳೆಗಳ ಅಡಿಯಲ್ಲಿ ಸಿಕ್ಕು ನರಳಿದ ಕೋಟ್ಯಾಂತರ ಅಸ್ಪೃಶ್ಯ ವ್ಯಕ್ತಿಗಳಲ್ಲಿ ಶ್ರೀ ದೇವರಾಯರೂ ಒಬ್ಬರು. ಅಂತಹ ಪರಿಸ್ಥಿತಿಯೇ ಗೌತಮ ಬುದ್ಧ, ಬಸವಣ್ಣ, ಜ್ಯೋತಿರಾವ ಫೂಲೆ ಮತ್ತು ಡಾ. ಬಿ.ಆರ್. ಅಂಬೇಡ್ಕರರನ್ನು ನಿರ್ಮಾಣಗೊಳಿಸಿದಂತೆ ಜಾತಿ ಪ್ರಧಾನವಾದ ಈ ವ್ಯವಸ್ಥೆಯ ಒಳ ಅಂಗವಾದ ಅಸ್ಪೃಶ್ಯತೆ ದೇವರಾಯರನ್ನು ನಿರ್ಮಿಸಿದ್ದು ಅತಿಶಯೋಕ್ತಿಯೇನಲ್ಲ.

'ಮಹಾರ'** ಜನಾಂಗದ ಅತ್ಯರು ಬಡಕುಟುಂಬದಲ್ಲಿ ಜನಿಸಿದ ಈ ಕೂಸು ಮುಂದೆ ಒಂದುದಿನ ಹಿಂದೂ ಧರ್ಮದ ಅವಿಭಾಜ್ಯ ಅಂಗವಾದ ಅಸ್ಪೃಶ್ಯತೆಗೆ ಕೊಡಲಿ ಪಟು ಹಾಕುತ್ತದೆಯೆಂದು ಯಾವ ಸನಾತನ ಹಿಂದುವೂ ಭಾವಿಸಿರಲಿಲ್ಲ. ಅಸ್ಪೃಶ್ಯರ ಸುದೈವವೆಂಬಂತೆ ಭಾರತ ಮತ್ತೊಮ್ಮೆ ಪರಕೀಯರಿಂದ (ಬ್ರಿಟೀಷರು) ಆಳಲ್ಪಡುವಾಗ,

* ಭಾರತೀಯರಿಗೆ ಇತಿಹಾಸ ಬರೆಯುವ ಕಲೆ ಇಲ್ಲವೆಂದು ಮ್ಯಾಕ್ಸಮುಲ್ಲರ ಹೇಳಿದ್ದಾನೆ.

೧. ಡಾ. ಬಿ.ಆರ್. ಅಂಬೇಡ್ಕರ: ರೈಟಿಂಗ್ಸ್ ಅ್ಯಂಡ್ ಸ್ಪೀಚಿಸ್, ವಾಲ್ಯೂಮ ೩.

ಅವರ ಆಡಳಿತದ ನೀತಿಗಳು ಭಾರತದ ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ತಳಹದಿಯನ್ನೇ ಬುಡುಮೇಲು ಮಾಡುತ್ತಿದ್ದವು.[೧]

ಇದೇ ವೇಳೆಯಲ್ಲಿ ಮಹಾರಾಷ್ಟ್ರದ ಮಣ್ಣಿನಿಂದ, ನೂರಾರು ವರ್ಷಗಳಿಂದ ಕೆಳವರ್ಗದ ಜನರ ರಕ್ತ ಹೀರಿ ಅಟ್ಟಹಾಸಗೈಯುತ್ತಿದ್ದ ಬ್ರಾಹ್ಮಣರ ವಿರುದ್ಧ ಬಂಡಾಯದ ಧ್ವನಿಯೊಂದು ಕೇಳಿ ಬಂತು. ಆ ಘರ್ಜನೆ ಮತ್ಯಾರದೂ ಆಗಿರದೆ 'ಆಧುನಿಕ ಭಾರತದ ಶೂದ್ರ ಶ್ರೇಷ್ಠನಾದಂತಹ ಮತ್ತು "ಭಾರತದ ಸಾಮಾಜಿಕ ಕ್ರಾಂತಿಯ ಪಿತಾಮಹ"ನೆಂದೇ ಪ್ರಖ್ಯಾತಿ ಹೊಂದಿದ ಜ್ಯೋತಿರಾವ ಫೂಲೆ ಅವರದಾಗಿತ್ತು.

ಈ ನಿಟ್ಟಿನಲ್ಲಿ ಫೂಲೆ ಅವರು ಕೆಳವರ್ಗದ ಜನರ ಅಭ್ಯುದಯದ ಸಂಕೇತವಾಗಿ, ಕೇವಲ ಬೆರಳೆಣಿಕೆಯಲ್ಲಿ ಎಣಿಸುವಷ್ಟು ಬ್ರಾಹ್ಮಣರ ಏಕಸ್ವಾಮಿತ್ವ ಇಡೀ ಕೆಳವರ್ಗದ ಜನರ ಮೇಲಿದ್ದುದನ್ನು ಪ್ರಶ್ನಿಸುತ್ತಾರೆ. 'ಫೂಲೆಯವರ ಕ್ರಾಂತಿಕಾರಕ ವಿಚಾರ ಮತ್ತು ಬ್ರಿಟೀಷರ ಶಿಕ್ಷಣದ ನೀತಿಗಳೆರಡೂ ಅಸ್ಪೃಶ್ಯ ಜನಾಂಗದ ಶಿಕ್ಷಣಕ್ಕೆ ಪೂರಕ ವಾಗಿದ್ದವು.[೨] ಇಂತಹ ಪರಿಸ್ಥಿತಿಯಲ್ಲಿ ಕೆಲವು ಅಸ್ಪೃಶ್ಯರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸುವುದರೊಂದಿಗೆ ಆಧುನಿಕ ಭಾರತದ ಶಿಕ್ಷಣದ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದನ್ನು ಪ್ರಾರಂಭಿಸಿದರು.ಸಾವಿರಾರು ವರ್ಷಗಳಿಂದ ಕೇವಲ ಬ್ರಾಹ್ಮಣರು ಮತ್ತು ಕೆಲವು ಪಟ್ಟಭದ್ರ ಹಿತಾಶಕ್ತಿಗಳು ಕಪಿಮುಷ್ಠಿಯಲ್ಲಿ ಹಿಡಿದಿಟ್ಟದ್ದ ಶಿಕ್ಷಣದತ್ತ ದಲಿತರೂ ಕೂಡ ದಾಪುಗಾಲು ಹಾಕಿದರು. ಅದರ ಪರಿಣಾಮವೇ ಡಾ. ಬಿ.ಆರ್. ಅಂಬೇಡ್ಕರರಂಥವರು ೧೯೨೪ ರ ಸುಮಾರಿಗೆ ಯಾವ ಭಾರತೀಯನೂ (ಇಂದಿಗೂ ಕೂಡ) ಪಡೆಯದಂತಹ ಉಚ್ಚ ಶಿಕ್ಷಣವನ್ನು ಪಡೆದರು.

ಈ ಆಧುನಿಕತೆಯ ಹೊಸ ಅಲೆಯ ಗಾಳಿ ರಾಮರಾಯರಿಗೆ ಸೋಂಕದೇ ಇರಲಿಲ್ಲ. ಅವರು ತಮ್ಮ ಮಗನನ್ನು ಹಳ್ಳಿಯ ಶಾಲೆಯೊಂದಕ್ಕೆ ಸೇರಿಸಿದರು. 'ಬೇರೆ ಜಾತಿಯ ಮಕ್ಕಳೆಲ್ಲ ಶಾಲೆಯ ಒಳಗಡೆ ಕುಳಿತು ಓದುವಾಗ ಅಸ್ಪೃಶ್ಯರ ಮಕ್ಕಳೆಲ್ಲ ಶಾಲೆಯ ಹೊರಗೆ, ಬಿಸಿಲು,ಮಳೆಗಾಳಿಯೆನ್ನದೆ ಕುಳಿತು ಓದಬೇಕಾದ ಪರಿಸ್ಥಿತಿ[೩].ಅಸ್ಪೃಶ್ಯತೆಯ ಮೈಲಿಗೆ ಮತ್ತು ಮುಟ್ಟಿಗೆಗಳು ಸವರ್ಣೀಯ ಶಿಕ್ಷಕರನ್ನು ಈ ದೀನ ಮಕ್ಕಳತ್ತ ನೋಡದಂತೆ ತಡೆದಿದ್ದವು. ಆದರೂ ದೇವರಾಯ ೫ ನೆಯ ತರಗತಿಯವರೆಗೆ ಓದಿ, ಮುಂದೆ ತಮ್ಮ ಶಿಕ್ಷಣವನ್ನು ನಿಲ್ಲಿಸಿದರು. ಹದಗೆಟ್ಟ ಮನೆಯ ಆರ್ಥಿಕ ಪರಿಸ್ಥಿತಿ

---

೧. ಎ.ಆರ್. ದೇಸಾಯಿ : ಸೋಶಿಯಲ್ ಬ್ಯಾಗ್ರೌಂಡ ಟು ಇಂಡಿಯನ್ ನ್ಯಾಶನಲಿಸಂ.

೨. ಎಸ್.ಕೆ. ಕಲ್ಲೋಳಿಕರ : 'ದೇವರಾಯ ಇಂಗಳೆ ಆ್ಯನ ಎಪಾಂಚ್ ಮೇಕಿಂಗ್ ಮ್ಯಾನ: ಪೇಪರ ಪ್ರೆಸೆಂಟೆಡ್ ಟು IX ಸೌಥ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಪೂನಾ.

೩. ಚಂಪಾ ಭೋಗಲೆ ಜತೆಯ ಸಂದರ್ಶನ: ಇವಳು ದೇವರಾಯನ ಆಪ್ತಮಿತ್ರ ಶ್ರೀ ಓ.ಕೆ. ಭೋಗಲೆಯ ಧರ್ಮಪತ್ನಿ ಮತ್ತು ಮಾಜಿ ಶಾಸಕಿ.

ಇವರನ್ನು ಮುಂದೆ ಓದಗೊಡಲಿಲ್ಲ. ಆದರೆ ಜ್ಞಾನದಾಹ ಹೊಂದಿದ ದೇವರಾಯ ಶಾಲೆಗೆ ಹೋಗದಿದ್ದರೂ ನಂತರದ ದಿವಸಗಳಲ್ಲಿ ಚೆನ್ನಾಗಿ ಓದಿ ಕನ್ನಡ, ಮರಾಠಿ, ಇಂಗ್ಲೀಷ ಮತ್ತು ಮೋಡಿ ಭಾಷೆಯನ್ನು ಕಲಿತರು.[೧]

ಇದರ ಪರಿಣಾಮವಾಗಿ, ದೇವರಾಯರು ಮಹಾತ್ಮಾ ಫೂಲೆ ಅವರ ವಿಚಾರದಿಂದ ಪ್ರಭಾವಿತರಾಗಿ ಸಾಮಾಜಿಕ ಚಳುವಳಿಯಲ್ಲಿ ಧುಮುಕಿದರು. ಫೂಲೆ ಹಾಕಿಕೊಟ್ಟ ಚಳುವಳಿ ಸಂಪೂರ್ಣವಾಗಿ ಬ್ರಾಹ್ಮಣೇತರರ ಚಳುವಳಿಯಾಗಿ ಕೊಲ್ಹಾಪೂರದ ಶಾಹೂ ಮಹಾರಾಜರ ಮತ್ತು ಅವರ ಅನುಯಾಯಿಗಳ ಬೆಂಬಲ ಪಡೆದಿತ್ತು. ಕರ್ನಾಟಕ ದಿಂದ ಸರ್ ಸಿದ್ದಪ್ಪ ಕಂಬಳಿ ಮತ್ತು ತಮಿಳುನಾಡಿನಿಂದ, ಪೆರಿಯಾರ ರಾಮಸ್ವಾಮಿ ಯಂತಹ ಧೀಮಂತರು ಈ ಚಳುವಳಿಯ ಮುಖಂಡತ್ವವನ್ನು ವಹಿಸಿದರು. ಈ ಕಾಲ ದಲ್ಲಿ ಮೈಸೂರಿನ ಒಡೆಯರು ಸಹಿತ ಹೊರತೇನಾಗಲಿಲ್ಲ. ಇವರೆಲ್ಲ ಬ್ರಾಹ್ಮಣ್ಯತ್ವ ವನ್ನು ಪ್ರಶ್ನಿಸಿ, ಅಂಧಶ್ರದ್ಧೆ ಮತ್ತು ಮೂಢನಂಬಿಕೆಗಳ ವಿರುದ್ಧ ಸಮರಸಾರಿದರು.

ಇಂತಹ ಘಟನೆಗಳು ದೇವರಾಯರ ಮೇಲೆ ದಟ್ಟವಾದ ಪ್ರಭಾವ ಬೀರಿದವು.

ಇದರ ಪರಿಣಾಮದಿಂದಲೇ ದೇವರಾಯ ಸಾಮಾಜಿಕ ಚಳುವಳಿಯ ನೇತೃತ್ವ ವನ್ನು ಬೆಳಗಾವಿ ಜಿಲ್ಲೆಯಿಂದ ವಹಿಸುವಂತಾಯಿತು. ದೇವರಾಯ, ಡಾ. ಅಂಬೇ ಡ್ಕರರಿಗಿಂತ ವಯಸ್ಸಿನಲ್ಲಿ ಕೇವಲ ಎರಡು ವರ್ಷ ದೊಡ್ಡವರು. ಆದರೆ ದುರ್ದೈವಶಾತ್ ಅಂಬೇಡ್ಕರರಿಗೆ ಇದ್ದಂಥ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬಲ ದೇವ ರಾಯರಿಗೆ ಇದ್ದಿರಲಿಲ್ಲ. ಅದೇ ಕಾರಣಕ್ಕಾಗಿ ಅವರಿಗೆ ಉಚ್ಚ ಶಿಕ್ಷಣ ಪಡೆಯ ಲಾಗಲಿಲ್ಲ. ಶೈಕ್ಷಣಿಕವಾಗಿ, ಅಂಬೇಡ್ಕರರಿಗೆ ದೇವರಾಯರನ್ನು ಹೋಲಿಸಿದರೆ, ದೇವರಾಯ ಒಂದು ಸೊನ್ನೆ. ಆದರೆ ಅವರ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿಚಾರಗಳು ಅಂಬೇಡ್ಕರವರ ವಿಚಾರಗಳಿಗಿಂತ ಕಡಿಮೆಯೇನೂ ಇರಲಿಲ್ಲ.[೨]

೧೯೨೪ ರ ವೇಳೆಗೆ ಡಾ. ಅಂಬೇಡ್ಕರ ತಮ್ಮ ಬಾರ್-ಎಟ್-ಲಾ ಪದವಿಯ ವನ್ನು ಮುಗಿಸಿಕೊಂಡು ಬರುವ ಹೊತ್ತಿಗೆ ಶ್ರೀ ದೇವರಾಯ ಬೆಳಗಾವಿ ಜಿಲ್ಲೆ ಯಾದ್ಯಾಂತ ಸಾಮಾಜಿಕ ಕ್ರಾಂತಿಯ ಕಿಚ್ಚು ನಿಗಿನಿಗಿಯಾಗಿರುವಂತೆ ನೋಡಿ ಕೊಂಡರು. ಈ ವೇಳೆಗೆ, ಪ್ರಪ್ರಥಮವಾಗಿ, ಡಾ|| ಅಂಬೇಡ್ಕರರನ್ನು ಬೆಳಗಾವಿ ಮತ್ತು ನಿಪ್ಪಾಣಿಗೆ ಕರೆತಂದು ಸಾರ್ವಜನಿಕವಾಗಿ ಸನ್ಮಾನಿಸಿ, ದೇಣಿಗೆ ಅರ್ಪಿಸಿದರು.[೩]

---

೧. ರಾಮಾ ಭವಾನೆ ಜೊತೆ ಸಂದರ್ಶನ (ದೇವರಾಯರ ಸಂಗಡಿಗ).

೨. ಎಸ್.ಕೆ. ಕಲ್ಲೋಳಿಕರ : ರೆಫೆರೆನ್ಸ್ ೩ ರಲ್ಲಿ ನೋಡಿ.

೩. ಪಿ.ಕೆ. ಬೋಗಲೆ ದೇವರಾಯರ ೬೦ ನೇ ಹುಟ್ಟು ಹಬ್ಬದ ನಿಮಿತ್ಯ ಪ್ರಕಟಿಸಿದ ಜಾಹೀರಾತು.

ಡಾ. ಅಂಬೇಡ್ಕರರು ತಮ್ಮ ಚಳುವಳಿಯನ್ನು ಪ್ರಾರಂಭಿಸಬೇಕೆನ್ನುವ ಪೂರ್ವದಲ್ಲಿಯೇ ದಕ್ಷಿಣ ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕದ ಕೆಲವು ಭಾಗದಲ್ಲಿ ಅಸ್ಪೃಶ್ಯರ ವಿರೋಧಿ ಚಳುವಳಿಯನ್ನು ಒಂದು ಹಂತಕ್ಕೆ ಮುನ್ನಡೆಸಿದ ವಿವರವನ್ನು ಅವರು ನವಭಾರತದ ರಾಜ್ಯಾಂಗ ಶಿಲ್ಪಿಗೆ ಪರಿಚಯಿಸಿದರು.

ದೇವರಾಯರ ಸಾಮಾಜಿಕ ವಿಚಾರಗಳನ್ನು ಮುಖ್ಯವಾಗಿ ಅಸ್ಪೃಶ್ಯ ಜನಾಂಗದ ಸುಧಾರಣೆಯನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ಈ ಕೆಳಗಿನ ರೀತಿಯಲ್ಲಿ ಅವುಗಳನ್ನು ವಿಂಗಡಿಸಬಹುದು :

೧. ಜಾತಿವಾಚಕ ಅಡ್ಡ ಹೆಸರಿನ ನಿರ್ಮೂಲನೆ
೨. ದೇವದಾಸಿ ಪದ್ಧತಿಯ ವಿರುದ್ಧದ ಹೋರಾಟ
೩. ಸತ್ತ ದನದ ಮಾಂಸ ಭಕ್ಷಣೆ ತಡೆಗಟ್ಟುವದು
೪. ಅಸ್ಪೃಶ್ಯತಾ ವಿರುದ್ಧದ ಹೋರಾಟ

ಇಂದು ಕಂಡುಬರುವ ಹಾಗೆ ೨೦ ನೆಯ ಶತಮಾನದ ಪೂರ್ವಾರ್ಧದಲ್ಲಿ ಅಸ್ಪೃಶ್ಯರಿಗೆ ಅಡ್ಡ ಹೆಸರುಗಳು ಇರಲಿಲ್ಲ. ಕೆಲವು ವೇಳೆ ಇದ್ದರೂ ಅವು ಜಾತಿ ವಾಚಕವಾಗಿದ್ದವು. ಅಸ್ಪೃಶ್ಯರ ಸ್ವಪ್ರತಿಷ್ಠೆಗೆ, ಜಾತಿಪ್ರಧಾನವಾದ ಹಿಂದೂ ಸಮಾಜದಲ್ಲಿ ಇಂತಹ ಹೆಸರುಗಳು ಅವರ ಪ್ರಗತಿಗೆ ಮುಳ್ಳಾಗಿದ್ದವು. ಇಂಥ ಜಾತಿ ಸೂಚಕ ಅಡ್ಡ ಹೆಸರನ್ನು ನಿರ್ನಾಮಗೊಳಿಸುವುದರ ಹೋರಾಟದಲ್ಲಿ ದೇವರಾಯ ಹೊಸ ಅಡ್ಡ ಹೆಸರುಗಳನ್ನು ಸೃಷ್ಟಿಸಿದರು. ಇದು, ದೇವರಾಯ ಭಾರತೀಯ ದಲಿತರಿಗೆ ನೀಡಿದ ಆತ್ಮಸ್ಥೈರ್ಯ ಮತ್ತು ನಡೆಸಿದ ಪ್ರಥಮ ಚಳುವಳಿ. ಇದರೊಂದಿಗೆ, ದೇವರಾಯ ಅಸ್ಪೃಶ್ಯ ಸಮಾಜವನ್ನು ಸುಧಾರಿಸಲು ಇಟ್ಟ ದಿಟ್ಟ ಹೆಜ್ಜೆ. ಇಲ್ಲಿ ಡಾ. ಅಂಬೇಡ್ಕರರ ಹೆಸರೂ ಮೊದಲು 'ಮಹಾರ್' ಎಂದು ಇದ್ದದ್ದನ್ನು ಕಾಣಬಹುದು. ಮಹಾರಾಷ್ಟ್ರದಲ್ಲಿ ಸರಕಾರಿ ದಾಖಲೆಗಳಲ್ಲಿ ಅಸ್ಪೃಶ್ಯರ ಹೆಸರು ಜಾತಿ ವಾಚಕವಿದ್ದುದು ಕಂಡುಬರುತ್ತದೆ.

ಈ ನಿಟ್ಟಿನಲ್ಲಿ ದೇವರಾಯ ಅಡ್ಡ ಹೆಸರನ್ನಷ್ಟೇ ಬದಲಿಸಲಿಲ್ಲ. ಅದರ ಜೊತೆಗೆ ಐತಿಹಾಸಿಕವಾದ ಮತ್ತು ಸಾಂಸ್ಕೃತಿಕವಾದ ಪುನರುಜ್ಜೀವನವನ್ನು ದಲಿತರಿಗೆ ತಂದು ಕೊಟ್ಟರು.[೧] ಇಂದು, ವಿಶೇಷವಾಗಿ, ದಕ್ಷಿಣ ಮಹಾರಾಷ್ಟ್ರದ ಮತ್ತು ಉತ್ತರ ಕರ್ನಾಟಕದ ಪ್ರದೇಶದಲ್ಲಿ ವಾಸಿಸುತ್ತಿದ್ದ ಅಸ್ಪೃಶ್ಯರಿಗೆ ಅವರ ಪೂರ್ವಜರ ಅಡ್ಡ ಹೆಸರುಗಳನ್ನಿಟ್ಟರು. ಅವರು ಚಿಕ್ಕೋಡಿಯ ದಲಿತರಿಗೆ ಕೊಟ್ಟಿರುವ ಅಡ್ಡಹೆಸರು ನೋಡಿದರೆ, ಅವರಿಗಿದ್ದ ಇತಿಹಾಸದ ಕಲ್ಪನೆಯ ಬಗ್ಗೆ ಸೋಜಿಗವೆನಿಸುತ್ತದೆ. ಇಂದು

೧. ಎಮ್.ಎಸ್. ಯಾದವ : 'ಬೆಲಗಾಂ ಡಿಸ್ಟ್ರಿಕ್ಟ ಮಹಾರ್ಸ್'- ಎ ಸ್ಟಡಿ : ಪೇಪರ್ ಪ್ರೆಸೆಂಟೆಡ್ ಟು IX ಸೌಥ್ ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಪೂನಾ.

ನಾವು ಅಲ್ಲಿ ರಾಯಣ್ಣವರ, ತಮ್ಮಣ್ಣವರ, ಧಾಮಣ್ಣವರ, ಮೋಘಣ್ಣವರ ಶೆಟ್ಟೆಣ್ಣವರ ಇತ್ಯಾದಿ ಅಡ್ಡ ಹೆಸರುಗಳನ್ನು ಕಾಣುತ್ತೇವೆ. ೧೮೧೮ ರಲ್ಲಿ ಬ್ರಿಟಿಷರಿಗೂ ಪೇಶ್ವೆಯರಿಗೂ ಭೀಮಾ ನದಿಯ ದಂಡೆಯ ಮೇಲೆ (ಕೋರೆಗಾಂವದ ಹತ್ತಿರ) ಯುದ್ಧ ವುಂಟಾದಾಗ ಬ್ರಿಟಿಷ್ ಸೈನ್ಯದಲ್ಲಿ ಬಹಳಷ್ಟು 'ಮಹಾರರು' ಪೇಶ್ವೆಯರಿಗೆ ಎದುರಾಗಿ ಹೋರಾಡಿದರು. ಪೇಶ್ವೆಯ ೨೫ ಸಾವಿರ ಕಾಲ್ದಳ, ೫ ಸಾವಿರದಷ್ಟಿದ್ದ ಅಶ್ವದಳ ಮಹಾರರ ರೊಚ್ಚಿನ ಕಿಚ್ಚಿಗೆ ಬಲಿಯಾಯಿತು[೧] ಈ ಕಡೆಯಿಂದ ಕೇವಲ ೨೫ ಜನ ಯುದ್ಧದಲ್ಲಿ ಮಡಿದರು. ಅವರೇ ಶ್ರೀ ರಾಯನಾಕ, ತಾಮನಾಕ ಧಾಮನಾಕ, ಮೋಘನಾಕ ಶೆಟ್ಯಾಕ[೨] ಮುಂತಾದವರು. ಇವರ ವಂಶಜರೇ ಇಂದು ಮೇಲೆ ಹೇಳಿದ ಹೆಸರಿನಿಂದ ಕರೆಯಲ್ಪಡುತ್ತಿದ್ದಾರೆ. ಈ ರೀತಿಯಾದ ಐತಿಹಾಸಿಕವಾದ ಸತ್ಯಸಂಗತಿ ಯನ್ನು ತನ್ನ ಜನರಿಗೆ ತೋರಿಸಿ ತಾವೂ ಉಳಿದವರಿಗಿಂತ ಕಡಿಮೆಯೇನಿಲ್ಲವೆಂಬುದನ್ನು ತೋರಿಸಿ ಕೊಟ್ಟವರೆಂದರೆ ಶ್ರೀದೇವರಾಯ.

ಇನ್ನು ಯಾವುದೇ ಮನೆತನಕ್ಕೆ ಈ ರೀತಿಯಾದ ಐತಿಹಾಸಿಕ ಹಿನ್ನೆಲೆ ಇರದಿದ್ದರೆ ಅವರ ಮೂಲಸ್ಥಳ ತಿಳಿದುಕೊಂಡು ಅದನ್ನೇ ಅಡ್ಡ ಹೆಸರು ಎಂದು ಇಟ್ಟಿದ್ದನ್ನು ನೋಡಬಹುದು. ಉದಾ– ಶಿರಗಾಂವದಿಂದ ಬಂದ್ದಿದ್ದರೆ ಶಿರಗಾಂವಕರ,ರಾಯಭಾಗ ದಿಂದ ಬಂದಿದ್ದರೆ ರಾಯಭಾಗಕರ, ಚಿಂಚಲಿಕರ, ಮಿರಜಕರ, ಸಾಂಗಲೀಕರ ಇತ್ಯಾದಿ. ಕಾಮತ, ಜೋಶಿ, ಪಟೇಲ, ಮಾನೆ, ಭವಾನೆ, ಸೂರ್ಯವಂಶಿ ಇವು ದೇವರಾಯ, ಅಸ್ಪೃಶ್ಯರಿಗೆ ಕೊಟ್ಟ ಅಮೋಘ ಕಾಣಿಕೆ.

ದೇವರಾಯರ ಅಸ್ಪೃಶ್ಯ ಸಮಾಜದ ಸುಧಾರಣೆಯ ಮತ್ತೊಂದು ಚಳುವಳಿ ಯೆಂದರೆ ದೇವದಾಸಿ ಪದ್ಧತಿಯನ್ನು ತಡೆಗಟ್ಟುವದು. ಮಹಾರಾಷ್ಟ್ರದ ಗಡಿ ಭಾಗ ಗಳಲ್ಲಿ ಮತ್ತು ಕರ್ನಾಟಕದ ಬೆಳಗಾವಿ, ವಿಜಾಪೂರ ಮತ್ತು ಧಾರವಾಡ ಜಿಲ್ಲೆಯ ದಲಿತರು ಮೊದಲಿನಿಂದಲೂ ಯಲ್ಲಮ್ಮನ ಭಕ್ತರಾಗಿದ್ದರು ಇದರ ಪರಿಣಾಮವೇ ದೇವದಾಸಿ ಅಥವಾ ಜೋಗತಿ ಬಿಡುವ ಪದ್ಧತಿ ಭಾರತೀಯ ಅನಿಷ್ಟಗಳಲ್ಲೊಂದಾಗಿ ನಡೆದುಕೊಂಡು ಬಂದಿತ್ತು. ಈ ರೀತಿಯಾದ ಪದ್ಧತಿ ಹಿಂದೂ ಸಮಾಜದಲ್ಲಿ ಘಾಸಿ ಗೊಂಡ ದಲಿತರ ಮರ್ಯಾದೆಗೆ ಮತ್ತು ಸ್ವಪ್ರತಿಷ್ಠೆಗೆ ಕಲಂಕವಾಗಿತ್ತು. ಅದಕ್ಕಾಗಿ ದೇವರಾಯ ಇದನ್ನು ತಡೆಗಟ್ಟಲು ಕಂಕಣಬದ್ಧರಾದರು.

ಇದನ್ನು ಪ್ರಪ್ರಥಮವಾಗಿ ತಡೆಗಟ್ಟಲು, ದೇವರಾಯ ಉಪಯೋಗಿಸಿದ ತಂತ್ರ ವೆಂದರೆ ಮನೆಮನೆಗೆ ಹೋಗಿ ದೇವದಾಸಿಯರನ್ನು ಬಿಡಬೇಡಿರೆಂದು ಕಳಕಳಿಯ ಮನವಿ

---

೧. ಡಾ. ಎಸ್.ಡಿ. ಕುಂಬಳೆ, ಶೆಡ್ಯೂಲ್ಡ್ ಕಾಸ್ಟ್ಸ ಆಫ್ ಇಂಡಿಯಾ' ಆಶಿಸ್ ಪಬ್ಲಿಕೇಶನ್, ನ್ಯೂ ಡೆಲ್ಲಿ.

೨. 'ಕೋರೆಗಾಂವ ಪಿಲ್ಲರ್ ಇನ್ಸಸ್ಕ್ರಿಪ್ಶನ್'.

ಮಾಡಿದುದು. ಅದೇ ಹೊತ್ತಿಗೆ, ಮೇಲ್ಜಾತಿಯವರು ತಮ್ಮನ್ನು ಯಲ್ಲಮ್ಮನ ಮತ್ತು ದೇವರ ಹೆಸರಿನಿಂದ ಹೇಗೆ ಮೋಸಗೊಳಿಸುತ್ತಿದ್ದಾರೆಂಬುದನ್ನು ಮನದಟ್ಟು ಮಾಡಿ ಕೊಟ್ಟರು. ಕೇವಲ ತಮ್ಮ ಕಾಮತೃಷೆಯನ್ನು ತೀರಿಸಿಕೊಳ್ಳುವ ಸಲುವಾಗಿ ಅನಾಥ ಮತ್ತು ಅವಿದ್ಯಾವಂತ ಜನರನ್ನು ಮೋಸಗೊಳಿಸುವದನ್ನು ದೇವರಾಯ ಖಂಡಿಸಿದರು. ಕೇವಲ ಬಾಯಿಮಾತಿನಿಂದ ಈ ಕೆಲಸ ಸಂಪೂರ್ಣವಾಗಿ ಆಗುವುದಿಲ್ಲವೆಂದು ಅರಿತಿದ್ದ ದೇವರಾಯ, ಸಾಕಷ್ಟು ಪದ್ಯಗಳನ್ನು ಕನ್ನಡ ಮತ್ತು ಮರಾಠಿಯಲ್ಲಿ ಬರೆದರು.

ತಮ್ಮ ಹಾಡುಗಳಲ್ಲಿ, ಅವರು ಜೋಗತಿಯರನ್ನು ಮತ್ತು ಯಲ್ಲಮ್ಮನನ್ನು

"ಏ ಯಲ್ಲಮ್ಮ ನಮ್ಮಕ್ಕಿ ಅಲ್ಲರೋ........
ಹೊಲಸ ಜೋಗತಿ
ಎಂಟ ದಿನಕ್ಕೊಮ್ಮೆ ಜಳಕಾ ಮಾಡತಿ"

ಎಂದು ಖಾರವಾಗಿ ಟೀಕಿಸಿದರು. ತಮ್ಮ ಪದ್ಯಗಳ ಮುಖಾಂತರ ಯಲ್ಲಮ್ಮ ಹರಿಜನರವಳಲ್ಲವೆಂದೂ, ಆಕೆ ಬ್ರಾಹ್ಮಣ ಜಾತಿಯವಳೆಂದೂ ಜನತೆಗೆ ತಿಳಿಸಿ, ಅವಳಿಗೆ ಹರಕೆ ಹೊರುವುದಾಗಲೀ ಅಥವಾ ಜೋಗತಿ ಬಿಡುವದಾಗಲೀ ದಲಿತರಿಗೆ ಸಂಬಂಧಿ ಸಿದ್ದಲ್ಲವೆಂದು ಒತ್ತಿ ಹೇಳಿದರು.

ಕೇವಲ ಪದ್ಯಗಳನ್ನು ಬರೆಯುವದರ ಮೂಲಕ ದೇವರಾಯ ತಮ್ಮ ಚಳುವಳಿ ಯನ್ನು ಮುಂದುವರಿಸಲಿಲ್ಲ. ಅದನ್ನು ಸಂಪೂರ್ಣವಾಗಿ ತೊಡೆದು ಹಾಕುವ ಪ್ರಯತ್ನ ವನ್ನು 'ಬಹಿಷ್ಕೃತ ಭಾರತ ಬೋಧಿನಿ' ಅರ್ಥಾತ್ 'ಯಲ್ಲಮ್ಮ' ಎಂಬ ನಾಟಕವನ್ನು ರಚಿಸಿ, ಊರೂರಿಗೆ ತಿರುಗಾಡಿ ನಾಟಕ ಆಡಿ, ಈ ಪದ್ಧತಿಯ ದುಷ್ಪರಿಣಾಮಗಳನ್ನು ಜನರಿಗೆ ತಿಳಿಸಿ ಹೇಳಿದರು. ಅವರು ಈ ನಾಟಕ ಬರೆದು ಆಡಿದ್ದು ೧೯೧೮-೧೯ ರ ಸುಮಾರಿಗೆ. ಈ ನಾಟಕದಲ್ಲಿ ಮುಖ್ಯವಾಗಿ ಜೋಗತಿಯರನ್ನು ಮತ್ತು ಯಲ್ಲಮ್ಮ ನನ್ನು ಹೀಯಾಳಿಸಿ, ಖಂಡಿಸುವದರ ಜೊತೆಗೆ ದಲಿತರಿಗೆ ಸಾಂಸ್ಕೃತಿಕವಾದ ಪುನರು-ಜ್ಜೀವನವನ್ನು ತಂದುಕೊಟ್ಟರು. ಸರಜೂ ಕಾಟಕರ ಹೇಳುವಂತೆ 'ದೇವರಾಯ ಭಾರತದ ಅಸ್ಪೃಶ್ಯರ ಪ್ರಪ್ರಥಮ ಕವಿ, ನಾಟಕಕಾರ ಮತ್ತು ಧೀಮಂತ ಹೋರಾಟ ಗಾರ'ನಾಗಿದ್ದಾನೆ.[೧]

ಈ ನಾಟಕದ ಪ್ರಥಮ ಅಂಕ ಅದೇ ಹೊಸದಾಗಿ ಮದುವೆಯಾಗಿ ಜೊತೆ ಗೂಡಿದ ದಂಪತಿಯರ ಸರಸ ವಿರಸದೊಂದಿಗೆ ಪ್ರಾರಂಭವಾಗುತ್ತದೆ. ಮುಂದೆ ಹುಟ್ಟುವ ಮಗು ಗಂಡೇ ಆಗಬೇಕೆಂಬುದು ಗಂಡನ ಆಶೆ. ಆದರೆ ಹೆಂಡತಿಗೆ ಹೆಣ್ಣು ಮಗು ಆದರೆ ಒಳ್ಳೆಯದು. ಏಕೆಂದರೆ ಅವಳನ್ನು ಜೋಗತಿ ಬಿಟ್ಟರೆ ತಾವಿಬ್ಬರೂ

---

೧. ಸರಜೂ ಕಾಟಕರ : 'ಅಂಬೇಡ್ಕರ ಹಿಂದೆ ಭೀಮ ಶಕ್ತಿಯಾಗಿದ್ದ ಇಂಗಳೆ'– 'ಕನ್ನಡ ಪ್ರಭ' ಬೆಂಗಳೂರು.

ಸುಖ ಜೀವನ ನಡೆಸಬಹುದೆಂದು ಹೇಳುತ್ತಾಳೆ. ಆದರೆ ಇದಕ್ಕೆ ಗಂಡ ತನ್ನ ಅಸಮ್ಮತಿ ಸೂಚಿಸಿ, ಅದು ಮರ್ಯಾದಸ್ಥರ ಕೆಲಸವಲ್ಲವೆಂದೂ, ಒಂದುವೇಳೆ ಇಂಥದೇನಾದರೂ ನಡೆದರೆ ಪೋಲಿಸರು ಸುಮ್ಮನಿರುವದಿಲ್ಲವೆಂದೂ ಕಾನೂನಿನ ಭಯ ವ್ಯಕ್ತ ಪಡಿಸುತ್ತಾನೆ. ಆಗ ಹೆಂಡತಿ ಯಾsssಕss ನೀ ಇಂಗಳೆ ದೇವ್ಯಾನ ಮಾತ ಕೇಳಿ ಹಿಂಗ ಮಾಡಾಕತ್ತಿಯೇನು ?[೧] ಎಂದು ಕೇಳುತ್ತಾಳೆ.

ಮುಂದಿನ ಭಾಗದಲ್ಲಿ ಆ ಹೆಂಗಸು ಹೆಣ್ಣೇ ಹಡೆಯುತ್ತಾಳೆ. ಆಕೆಯು ಆ ಜಾತಿಯಂತೆ ಮಗಳನ್ನು ಸವದತ್ತಿ ಯಲ್ಲಮ್ಮನಿಗೆ ಜೋಗತಿ ಬಿಡುವ ವೇಳೆಯಲ್ಲಿ ಪೋಲಿಸರು ಅವರೆಲ್ಲರನ್ನೂ ಬಂಧಿಸಿ ಜೇಲಿಗೆ ಕರೆದೊಯ್ಯುವಾಗ ಸೂತ್ರಧಾರಿ ಈ ಪದ್ಧತಿಯ ಅನಿಷ್ಟತೆಯನ್ನು ಪ್ರೇಕ್ಷರಿಗೆ ನಿವೇದಿಸುತ್ತಾನೆ. ಇಲ್ಲಿಗೆ ನಾಟಕ ಮುಗಿಯುತ್ತದೆ. ಈ ನಾಟಕವನ್ನು ಆಡುವಾಗ ಮೊದಲು ದೇವದಾಸಿಯರ ಮಕ್ಕಳಿಂದ ಪ್ರತಿಭಟನೆ ಬಂತು. ಇದರಲ್ಲಿ ಕೆಲವು ಪಟ್ಟಭದ್ರ ಹಿತಾಶಕ್ತಿಗಳ ಕೈವಾಡವಿತ್ತು. ಆದ್ದರಿಂದ ಈ ನಾಟಕ ಆಡಲು ದೇವರಾಯ ಜಿಲ್ಲಾಧಿಕಾರಿಗಳ ಅನುಮತಿಪಡೆಯಬೇಕಾಯಿತು. ಈ ನಾಟಕದಲ್ಲಿ ಅವರು ರಚಿಸಿದ ಹಾಡುಗಳನ್ನೇ ಹಾಡಲಾಗುತ್ತಿತ್ತು. ಇವು ಎಷ್ಟು ಖಾರವಾಗಿದ್ದುವೆಂದರೆ ಜಿಲ್ಲಾಧಿಕಾರಿಗಳು ಮೂರು ಹಾಡುಗಳನ್ನು ಸೆನ್ಸಾರ್ ಮಾಡಿದ್ದರು.[೨]

ಈ ನಾಟಕ ಬರೆದದ್ದು ಸುಮಾರು ೧೯೧೮ ರ ಹೊತ್ತಿಗೆ. ಆಗ ಯಾವ ಕಾನೂನುಗಳೂ ದೇವದಾಸಿ ಪದ್ಧತಿಯನ್ನು ತಡೆಗಟ್ಟುವಂತಿರಲಿಲ್ಲ. ಆದರೆ ಮುಂದಾಲೋಚನೆಯ ದೇವರಾಯ ಇದನ್ನು ಕಾನೂನಿನ ವ್ಯಾಪ್ತಿಯೊಳಗೆ ತಂದು ಈ ಅನಿಷ್ಟ ಪದ್ಧತಿಯನ್ನು ಪುರಸ್ಕರಿಸುವವರನ್ನು ಶಿಕ್ಷಿಸಬೇಕೆಂದು ಪ್ರತಿಪಾದಿಸಿದರು. ಈ ವೇಳೆಗೆ ಅವರು ಸಾಕಷ್ಟು ಮನವಿಗಳನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಿ ಸುಮಾರು ೧೯೨೪ ರ ವೇಳೆಗೆ ದೇವದಾಸಿ ಪದ್ಧತಿ ಆಚರಿಸುವದು 'ಕಾನೂನು ಬಾಹಿರ' ಎಂದು ಸಾರಿಸಿದರು.[೩] ಇಷ್ಟಕ್ಕೂ ತೃಪ್ತಿ ಹೊಂದದ ದೇವರಾಯ ಆಗಿನ ಮುಂಬಯಿ ಪ್ರಾಂತದ ಕೌನ್ಸಿಲ್ ಮೆಂಬರಾಗಿದ್ದ ಡಾ|| ಅಂಬೇಡ್ಕರರ ಮೇಲೆ ಒತ್ತಾಯ ತಂದು ಹಿಂದೂ ಹೆಣ್ಣುಮಕ್ಕಳಿಗೆ ತಂದೆಯ ಆಸ್ತಿಯಲ್ಲಿ ಪಾಲು ಆಗಬಾರದೆನ್ನುವ ಒಂದು 'ಬಿಲ್ಲ'ನ್ನು ಮಂಡಿಸಲಿಕ್ಕೆ ಕಾರಣರಾದರು.

ನಿಜವಾಗಿಯೂ ಇದು ದೇವರಾಯ ಮಾಡಿದ ಒಂದು ಮಹತ್ಕಾರ್ಯ ದೇವರಾಯ ಈ ದಿಶೆಯಲ್ಲಿ ಒಂದು ಹೆಜ್ಜೆ ಮುಂದಿಟ್ಟು, ಅಸಂಖ್ಯಾತ ದಲಿತ ಮಹಿಳೆ

---

೧. ರತ್ನಪ್ಪ ಸೂರ್ಯವಂಶಿ : ದೇವರಾಯ ಬರೆದ ನಾಟಕದ ಪಾತ್ರಧಾರಿ (ಸಂದರ್ಶನ).

೨. ,, ,, ,, ,, ,, ,,

೩. ಚಂಪಾ ಬೋಗಲೆ (ಸಂದರ್ಶನ) ರೆಫರೆನ್ಸ್ ಳ ರಲ್ಲಿ ನೋಡಿ.

ಯರು ಅಜ್ಞಾನ, ಮೂಢನಂಬಿಕೆ ಮತ್ತು ಅಂಧಶ್ರದ್ಧೆಯಲ್ಲಿ ಬಳಲುತ್ತಿರುವಾಗ ಅವರ ಹಿತೈಷಿಯಾಗಿ ವಿಮೋಚಕಾರನಾಗಿ ಬಂದದ್ದು ಭಾರತೀಯ ದಲಿತ ಮಹಿಳೆಯರ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ದಲಿತ ಸಮಾಜವನ್ನು ಸುಧಾರಿಸುವ ಮತ್ತೊಂದು ಚಳುವಳಿಯನ್ನು ದೇವ ರಾಯ ಹೂಡಿದರು. ಅದು ಸತ್ತ ದನದ ಮಾಂಸವನ್ನು ತಿನ್ನುವದರ ವಿರುದ್ಧದ ಹೋರಾಟವಾಗಿತ್ತು. ಯುಗಯುಗಾಂತರದಿಂದಲೂ ಮಾಂಸ ಸೇವಿಸುವದು ಶೂದ್ರ ಮತ್ತು ಅತಿಶೂದ್ರರಲ್ಲಿ ವಾಡಿಕೆಯಾಗಿತ್ತು. ಮುಂದೆ ಕೆಲವು ಕಾರಣಗಳಿಂದ ಸತ್ತ ದನದ ಮಾಂಸ ತಿನ್ನುವ ಪದ್ಧತಿ ಪ್ರಾರಂಭವಾಯಿತು. ೧೯೦೦ ರ ಪ್ರಾರಂಭ ದಲ್ಲಿ ಇದನ್ನು ಸವರ್ಣೀಯರು ಅತಿ ತುಚ್ಛವಾಗಿ ಕಾಣುತ್ತಿದ್ದರು. ಊರಲ್ಲಿ ಯಾರ ದಾದರೂ ದನ ಸತ್ತರೆ ದಲಿತರಿಗೆ ಅಂದು ಹಬ್ಬವಾಗುತ್ತಿತ್ತು. ಯುಗಯುಗಗಳಿಂದ ಸವರ್ಣೀಯರ ಮನೆಯ ಖಜಾನೆ ಮತ್ತು ಖಣಜ ತುಂಬುತ್ತಿದ್ದ ದಲಿತರಿಗೆ ತಮ್ಮ ಮಾನ ಮುಚ್ಚಿಕೊಳ್ಳಲು ಮೂರು ಗೇಣು ಬಟ್ಟೆ, ಅರೆ ಹೊಟ್ಟೆಗೆ ತುತ್ತು ಕೂಳು ಸಿಗದಾಗ ಇಂಥ ಪದ್ಧತಿಯತ್ತ ಹೋಗಿದ್ದು ಆಶ್ಚರ್ಯವೇನಲ್ಲ. ಆದರೆ ಇದನ್ನೇ ಬಂಡವಾಳಮಾಡಿಕೊಂಡ ಸವರ್ಣೀಯರು ದಲಿತರನ್ನು ಹೊಲಸು ಜನ, ಅಸ್ಪೃಶ್ಯರು, ಚಾಂಡಾಲರು ಎಂದು ಜರೆದು, ಅವರನ್ನು ಊರ ಹೊರಗೆ ಇಟ್ಟು ಹೀನಾಯವಾಗಿಸಿದ್ದು, ಈ ದೇಶದ ಮುಂದುವರೆದ ಇತಿಹಾಸದ ಕುಚೋದ್ಯತನದ ಒಂದು ಅಧ್ಯಾಯ.

ಮನುಸ್ಮೃತಿಯೇ ಹೇಳುವಂತೆ ಶೂದ್ರರಿಗೆ ಮತ್ತು ಅತಿಶೂದ್ರರಿಗೆ ವ್ಯವಸಾಯ ಮತ್ತು ದನಕರುಗಳನ್ನು ಸಾಕುವ ಹಕ್ಕಿರಲಿಲ್ಲ. ಅವರು ಯಾವ ಸ್ವತ್ತನ್ನೂ ಹೊಂದು ವಂತೆ ಇರಲಿಲ್ಲ. ಊಟಕ್ಕೆ ಹಾಲು ತುಪ್ಪ ಮೊಸರು ಇತ್ಯಾದಿಗಳನ್ನೂ ಉಪಯೋಗಿ ಸುವ ಹಾಗಿರಲಿಲ್ಲ. ಹೊಸ ಉಡಿಗೆ, ತೊಡಿಗೆ ತೊಡುವುದನ್ನೂ ನಿಷೇಧಿಸಲಾಗಿತ್ತು.[೧] ಒಟ್ಟನಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಮತ್ತು ರಾಜ ಕೀಯವಾಗಿ ನಿರ್ಬಂಧಿಸಲು ಕಪ್ಪು ಕಾನೂನಿನ ಕರಾಳ ಹಸ್ತಗಳನ್ನು ಉಪಯೋಗಿಸಿ ದ್ದರು' ಇದರಿಂದ ಗತ್ಯಂತರವಿಲ್ಲದೆ ಈ ಜನಾಂಗ ಸೃಷ್ಟಿಯಲ್ಲಿ ಸಿಗುವ ಪ್ರತಿಯೊಂದು ವಸ್ತುವಿನಿಂದ ವಂಚಿತರಾದರು. ಬದುಕುವುದು ದುಸ್ತರವೆನಿಸಿದಾಗ ಹೊಟ್ಟೆಪಾಡಿಗೆ ಸತ್ತ ದನದ ಮಾಂಸ ತಿನ್ನಲು, ಮಾನ ಮುಚ್ಚಿಕೊಳ್ಳಲು ಸತ್ತ ಜನರ ಬಟ್ಟೆ ಧರಿಸಲು ಮುಜುಗರವೇನೂ ಎನಿಸಲಿಲ್ಲ.

ಆದರೆ ಈ ಕಾಲಕ್ಕೆ ಭಾರತದಲ್ಲಿ ಪರಿಸ್ಥಿತಿ ಮುಂಚಿನ ಹಾಗೆ ಇರಲಿಲ್ಲ. ಪಾಶ್ಚಾತ್ಯ ಸಂಸ್ಕೃತಿಯ ಬಿರುಗಾಳಿ ಹೊಸ ಆವಿಷ್ಕಾರವನ್ನು ತಂದಿತ್ತು. ೧೮೫೭ ರ ನಂತರ

---

೧. ಡಾ ಎನ್. ಡಿ. ಕಾಂಬಳೆ : ರೆಫರೆನ್ಸ್ ೯ ನೋಡಿ.

ಕಡೆಗಣಿಸಲ್ಪಟ್ಟಿದ್ದ ಮುಸ್ಲಿಂರಿಗೆ ಪ್ರತ್ಯೇಕ ಚುನಾವಣಾ ಪ್ರಾವಿಷನ್ ಸಿಕ್ಕಾಗ, ಅರೆಬರೆಯಾಗಿ ಶಿಕ್ಷಣ ಪಡೆದಿದ್ದ ದಲಿತರೂ ಎಚ್ಚತ್ತರು. ಆಗ ಅವರು, ಮೇಲ್ಜಾತಿಯವರು 'ಧರ್ಮ' ಎಂಬ ಆಯುಧದಿಂದ ಇರಿದದ್ದನ್ನು ಕಂಡುಕೊಂಡರು. ತಾವೂ ತಮ್ಮ ಜನಾಂಗವನ್ನು ಸುಧಾರಿಸುವ ಪ್ರಯತ್ನ ಮಾಡಿದರು. ಆ ಪ್ರಯತ್ನದ ಫಲವಾಗಿಯೇ ದೇವರಾಯ ಇಂತಹ ದಿಟ್ಟ ಹೆಜ್ಜೆ ಇಡಲು ಸಹಾಯಕವಾಯಿತು. ದೇವರಾಯ ಅವರು ಸತ್ತ ದನದ ಮಾಂಸ ತಿನ್ನದಿರಲು ಮತ್ತು ಶುಚಿಯಾಗಿರಲು ದಲಿತರಿಗೆ ಮನವಿ ಮಾಡಿದರು.

ದೇವರಾಯ ತಿಳಿದಂತೆ ಹೊಲೆ, ಮಾದಿಗರು ಸತ್ತ ದನದ ಮಾಂಸ ತಿನ್ನುವದನ್ನು ಬಿಡಲು ಸಿದ್ಧರಿರಲಿಲ್ಲ. ಕಾಲಾಂತರಗಳಿಂದ ನಡೆದುಬಂದ ಈ ಅನಿಷ್ಟ ಪದ್ಧತಿಗೆ ಮುಸುಕೆಳೆಯುವದಕ್ಕೆ ಅವರು ತಯಾರಿರಲಿಲ್ಲ. ಆದರೆ ಅಂಥ ಮಾಂಸ ತಿಂದಾಗ ಆಗುವ ದುಷ್ಪರಿಣಾಮಗಳ ಬಗ್ಗೆ ದೇವರಾಯ ಅವರಿಗೆ ತಿಳುವಳಿಕೆ ನೀಡಿದರು.

ಇದನ್ನು ಸಂಪೂರ್ಣವಾಗಿ ಬಿಡಿಸಲು ದೇವರಾಯ, ತನ್ನಿಂದ ಪ್ರಭಾವಿತರಾದ ಯುವಕರನ್ನು ಒಗ್ಗೂಡಿಸಿ, ಸತ್ತ ದನದ ಮಾಂಸದ ಮೇಲೆ ಸೀಮೆ ಎಣ್ಣೆ ಮತ್ತು ಮಣ್ಣು ಎರಚುತ್ತಿದ್ದರು. ಇದರಿಂದ ಎಷ್ಟೋ ಪಾಲು ಈ ಅನಿಷ್ಟ ಪದ್ಧತಿ ಕಡಿಮೆಯಾಗಿ, ಇಂದು ಸಂಪೂರ್ಣವಾಗಿ ಮರೆಯಾದುದನ್ನು ಕಾಣುತ್ತೇವೆ.

ಮೇಲೆ ಮಾಡಿದ ಈ ಸುಧಾರಣೆಗಳೆಲ್ಲ ದೇವರಾಯ ಅಸ್ಪೃಶ್ಯತೆಯನ್ನು ತೊಡೆದುಹಾಕುವದರ ಸಲುವಾಗಿಯೇ ಆಗಿವೆ. ಅವರು, ಹಿಂದೂಧರ್ಮಕ್ಕೆ ಅಸ್ಪೃಶ್ಯತೆ ಒಂದು ಕಲಂಕವೆಂದು ಹೇಳಿದರು. ಹರಿಜನರು ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಮುಂದೆ ಬಂದರೆ ಈ ಪೀಡೆ ತೊಲಗುವದೆಂದು ತಿಳಿದಿದ್ದರು. ಅವರು ತಮ್ಮ ಡೈರಿಯೊಂದರಲ್ಲಿ ಹೀಗೆ ಬರೆದಿದ್ದಾರೆ :

'ಚಂದ್ರನಿಗೆ ಕಲಂಕ
ಸೂರ್ಯನಿಗೆ ಕಪ್ಪು ಕಲೆ
ಸಿಹಿಯಾದ ಹಣ್ಣಿಗೆ ಕೀಡಿ (ಹುಳಿ) ಇರುವಂತೆ

ಆರ್ಯಧರ್ಮಕ್ಕೆ ಅಸ್ಪೃಶ್ಯತೆ ಒಂದು ಕಲಂಕ, ಕಪ್ಪು ಕಲೆ ಮತ್ತು ಕೀಡಿ. ಅವರು ತಮ್ಮ ಹಾಡೊಂದರಲ್ಲಿ ಅಸ್ಪೃಶ್ಯರ ದೀನ ಪರಿಸ್ಥಿತಿ ಕಂಡು-

'ದೇವಾ ಯಾಕೆ ಹುಟ್ಟಿಸಿದಿ ನಮ್ಮನು
ಈ ಪರಿ........' ಎಂದೂ

ಇನ್ನೊಂದರಲ್ಲಿ

ಎಚ್ಚರ ! ಎಚ್ಚರ ||
ಹಿಂದೂ ಜನಕೆ ಎಚ್ಚರ

ಎಂದೂ ಇಡೀ ವ್ಯವಸ್ಥೆಯ ಮೇಲೆ ಸಿಡಿಲಿನ ಹಾಗೆ ಎರಗುತ್ತಾರೆ. ಅಸ್ಪೃಶ್ಯನಾಗಿ ಹುಟ್ಟಿ, ಪಡಬಾರದ ಕಷ್ಟಪಟ್ಟ ದೇವರಾಯ ಜಾತಿಯ ಸರ್ವನಾಶಕ್ಕೆ ಟೊಂಕಕಟ್ಟಿ ನಿಲ್ಲುತ್ತಾರೆ. ಹರಿಜನರ ಮಕ್ಕಳನ್ನು ಹೇಯವಾಗಿ ಕಾಣುತ್ತಿದ್ದ ಈ ಕಾಲದಲ್ಲಿ ಅವರಿಗಾಗಿ ಪ್ರತ್ಯೇಕ ವಸತಿಗೃಹ ಮತ್ತು ಶಾಲೆಗಳನ್ನು ಪ್ರಾರಂಭಿಸುತ್ತಾರೆ. ೧೯೨೬ ರಲ್ಲಿ ಬೆಳಗಾವಿಯಲ್ಲಿ, ೧೯೩೬ 'ಲ್ಲಿ ಧಾರವಾಡದಲ್ಲಿ ವಸತಿಗೃಹಗಳನ್ನು ಪ್ರಾರಂಭಿಸಿದರು. ಅದರ ನಂತರ ೧೯೪೬ ರಲ್ಲಿ ಡಾ. ಅಂಬೇಡ್ಕರರು ತಮ್ಮ ಧರ್ಮ ಪತ್ನಿಯವರ ಹೆಸರಿನಿಂದ ಮತ್ತೊಂದು ವಸತಿಗೃಹ ಪ್ರಾರಂಭಿಸಿದರು. ಅಂದು ಸ್ಥಾಪಿಸಿದ ವಸತಿಗೃಹ, ಇಂದು ರೆಸಿಡೆನ್ಸಿಯಲ್ ಸ್ಕೂಲ ಆಗಿ ಪರಿವರ್ತನೆಯಾಗಿದೆ.

ರಾಜಕೀಯವಾಗಿ ಹರಿಜನರು ಮುಂದೆಬಂದರೆ ಅಸ್ಪೃಶ್ಯತೆಯನ್ನು ನಿರ್ನಾಮ ಗೊಳಿಸಬಹುದೆಂದು ಶ್ರೀ ದೇವರಾಯ ತಿಳಿದಿದ್ದರು. ಹೀಗಾಗಿ ಅವರು ೧೯೨೪ ರಲ್ಲಿ ನಿಪ್ಪಾಣಿಯಲ್ಲಿ ಬಹಿಷ್ಕೃತ ಭಾರತ ಪ್ರಾಂತಸಮ್ಮೇಳನ ಕರೆದು, ಅದಕ್ಕೆ ಡಾ. ಬಿ. ಆರ್. ಅಂಬೇಡ್ಕರ ಅವರನ್ನು ಆಹ್ವಾನಿಸಿ, ಸನ್ಮಾನಿಸಿ, ಅವರಿಗೆ ಹಮ್ಮಿಣಿ ಯನ್ನು ಅರ್ಪಿಸಿ ಜನಜಾಗ್ರತಿ ಮಾಡಿದರು. ಎಷ್ಟೋ ಬಾರಿ ಅವರು ಅಂಬೇಡ್ಕರ ಅವರಿಗೆ ಚಳುವಳಿಯನ್ನು ಮುನ್ನಡೆಸಲು ದುಡ್ಡು ಕಳುಹಿಸಿಕೊಟ್ಟರು ತಮ್ಮ ೧೯೨೪ ರ ಡೈರಿಯಲ್ಲಿ ಶ್ರೀ ದೇವರಾಯರು "ಇಂದು ಡಾ. ಅಂಬೇಡ್ಕರರ ಮೇಲೆ ಆಶೀರ್ವಾದ ಮಾಡಿದೆ" ಎಂದು ಬರೆದಿದ್ದಾರೆ. ಶ್ರೀ ಪಿ. ಪಿ. ಹೆಗ್ರೆ ಅವರು ಮೊದಲು ಡಾ. ಅಂಬೇಡ್ಕರ ದೇವರಾಯರಿಂದ ಸ್ಫೂರ್ತಿ ಪಡೆದರೆ, ತದನಂತರ ದೇವರಾಯ ಅಂಬೇಡ್ಕರರನ್ನು ಅನುಸರಿಸಿದರು ಎಂದು ಹೇಳುತ್ತಾರೆ.

ದೇವರಾಯ ಮತ್ತು ಅಂಬೇಡ್ಕರರಿಗಿದ್ದಂತಹ ಅಸ್ಪೃಶ್ಯರ ಬಗೆಗಿನ ಕಾಳಜಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಯಾವ ಮುಂದಾಳುವಿಗೂ ಇರಲಿಲ್ಲ. ಕಾಂಗ್ರೆಸ್ ಒಂದು ಸೆಕ್ಯೂಲರ ಪಕ್ಷವೆಂಬುದನ್ನು ತೋರಿಸಲು ಕಾಂಗ್ರೆಸ್ ಮುಂದಾಳು ಗಳು (ಗಾಂಧಿ ಸಹಿತ) ಅಸ್ಪೃಶ್ಯರನ್ನು ಕಾಂಗ್ರೆಸ್ ಪಕ್ಷ ಸೇರಲು ಕೇಳಿಕೊಂಡರು. ಆದರೆ ಡಾ. ಅಂಬೇಡ್ಕರ ಮತ್ತು ದೇವರಾಯ ಈ ಕಾಂಗ್ರೆಸ್ ನೀತಿಯನ್ನು ವಿರೋಧಿಸಿದರು. ಕಾಂಗ್ರೆಸ್ಸಿನಿಂದ ಹರಿಜನರ ಏಳ್ಗೆ ಸಾಧ್ಯವಿಲ್ಲವೆಂದು ಸಾರಿದರು. ಅದಕ್ಕಾಗಿ ೧೯೨೪ ಡಿಸೆಂಬರನಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಾವೇಶ ಗೊಂಡಾಗ ಇವರಿಬ್ಬರೂ ಮುಂದಾಳುಗಳು ಸೇರಿ ಒಂದು ಬಹಿರಂಗ ಸಭೆ ಕರೆದು, ಗಾಂಧಿಯನ್ನು ಮತ್ತು ಕಾಂಗ್ರೆಸ್ಸಿನ ನೀತಿಯನ್ನು ಕಟುವಾಗಿ ಟೀಕಿಸಿದರು. ಈ ಸಭೆಗೆ ದೇವರಾಯ ಸುಮಾರು ಹತ್ತು ಸಾವಿರ ಜನರನ್ನು ಆಹ್ವಾನಿಸಿದ್ದರು.೧ ಡಾ ಅಂಬೇಡ್ಕರರಿಗಿದ್ದಂತಹ ಕಾಂಗ್ರೆಸ್ಸಿನ ನೀತಿಗಳ ಪರಿಚಯ ದೇವರಾಯರಿಗಿದ್ದುದು

೧. ಖಡೇ ಬಜಾರ ಪೋಲಿಸ್ ದಾಖಲೆ.

ಗಮನಾರ್ಹ. ತಮ್ಮ ಜೀವನ ಪರ್ಯಂತ ದೇವರಾಯ ಒಮ್ಮೆಯೂ ಕಾಂಗ್ರೆಸ್ಸಿನತ್ತ ಒಲವು ತೋರದಿದ್ದುದು ಅವರ ದಿಟ್ಟತನವನ್ನು ತೋರಿಸುತ್ತದೆ.

ದೇವರಾಯ ಕೇವಲ ದಲಿತರ ಪರವಾಗಿಯಷ್ಟೇ ಹೋರಾಡಲಿಲ್ಲ. ಪ್ರಗತಿಪರ ವಿಚಾರಗಳನ್ನು ಹೊಂದಿದ ಅನೇಕ ಸವರ್ಣೀಯರು ದೇವರಾಯರ ಆಪ್ತರಾಗಿದ್ದರು. ಬೆಳಗಾವಿಯ ಶ್ರೀ. ಬೆಳವಿ ಮತ್ತು ದಳವಿ ಎಂಬ ಶಾಸಕರಿಗೆ ಚುನಾವಣಾ ನಿಧಿಯನ್ನು ಕೂಡಿಸಿಕೊಟ್ಟಿದ್ದನ್ನು ದೇವರಾಯರ ಡೈರಿಗಳು ದೃಢಪಡಿಸುತ್ತವೆ.

''ಬೆಳಗಾವಿ ಜಿಲ್ಲೆಯ ದಲಿತರು ಇಂದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ರಾಜಕೀಯವಾಗಿ ಕರ್ನಾಟಕದ ಇತರ ದಲಿತರಿಗಿಂತ ಮುಂದುವರೆದಿದ್ದಾರೆ. ಅದಕ್ಕೆ ಕಾರಣ ಶ್ರೀ ದೇವರಾಯ ಇಂಗಳೆ[೧].

ಶ್ರೀ ಪಿ. ಕೆ. ಭೋಗಲೆ ಅವರು ದೇವರಾಯರನ್ನು 'ಪ್ರಾಮಾಣಿಕವಾದ ಶ್ರೇಷ್ಠ ದರ್ಜೆಯ ರಾಜಕಾರಣಿ, ಸಮಾಜ ಸುಧಾರಕ ಮತ್ತು ಕರ್ನಾಟಕ ದಲಿತರ ಪಿತಾಮಹ' ಎಂದು ಕರೆದಿದ್ದಾರೆ. ದೇವರಾಯ ಪೋಷಿಸಿದ ಶ್ರೀ. ಬಿ. ಶಂಕರಾನಂದ ಮತ್ತು ಬ್ಯಾರಿಸ್ಟರ ಮಾನೆ ಅವರಂಥವರು ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಸೇರಿದರು. ಆದರೆ ಇವರನ್ನೆಲ್ಲ ಇಷ್ಟೆತ್ತರಕ್ಕೆ ಬೆಳೆಸಿದ್ದ ದೇವರಾಯ ಒಮ್ಮೆಯೂ ಕಾಂಗ್ರೆಸ್ಸಿನತ್ತ ಕಣ್ಣು ತೆರೆದು ನೋಡಲಿಲ್ಲ. ಹೀಗಾಗಿ ದೇವರಾಯ ದಲಿತರ ಪ್ರಾಮಾಣಿಕ ಮುಂದಾಳಾಗಿ ಉಳಿಯುತ್ತಾರೆ.

ಅಂಬೇಡ್ಕರರಂತಹ ಮಹಾನ್ ನಾಯಕರಿಗೆ ಸ್ಫೂರ್ತಿದಾಯಕರಾಗಿದ್ದ, ಶ್ರೀ ದಳವಿ ಮತ್ತು ಶ್ರೀ ಬೆಳವಿಯವರಂಥ ಶಾಸಕರಿಗೆ ಸಹಾಯ ಮಾಡಿದ, ಅದೂ ಅಲ್ಲದೆ ಇಂದು ಸಾವಿರಾರು ಜನ ದಲಿತರು ನವಭಾರತ ನಿರ್ಮಾಣದಲ್ಲಿ ತೊಡಗುವಂತೆ ಮಾಡಿದ ಈ ದಿಟ್ಟ ಹೋರಾಟಗಾರ ತನ್ನ ಕೊನೆಯ ದಿನಗಳನ್ನು ಹೊಟ್ಟೆಗೆ ಕೂಳಿಲ್ಲದೆ ಕಳೆದು, ನರಳಿ ಸತ್ತದ್ದು ಈ ದೇಶದ ಪ್ರಾಮಾಣಿಕ ಸಮಾಜ ಸುಧಾರಕರಿಗೆ ಸಿಕ್ಕ ಗೌರವ. ದೇವರಾಯ ೧೯೭೨ ರಲ್ಲಿ, ತನ್ನ ಸ್ವಂತ ಊರಾದ ಇಂಗಳಿಯಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ಮರಣ ಹೊಂದಿದರು. ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ, ಹಿಂದೂ ಧರ್ಮದ ಬೇರುಗಳನ್ನು ಅಲುಗಾಡಿಸಿ, ೫ ದಶಕಗಳವರೆಗೆ ದಲಿತರ ಕಣ್ಣೀರಿನಲ್ಲಿ ತನ್ನ ಕೈ ತೊಳೆದು ಸದ್ದಿಲ್ಲದೇ ಸತ್ತ ಈ ಮಹಾನುಭಾವ ಭಾರತೀಯ ದಲಿತರ ಧ್ರುವತಾರೆ.

**

೧. ಸರಜೂ ಕಾಟಕರ : ರೆಫೆರೆನ್ಸ್ ೧೧ ನೋಡಿ.

ರಾಸೀನರ'ಆಂದ್ರೋಮಾಕ' :ಪ್ರೇಮದ ವಿವಿಧ ಮುಖಗಳು

—ದೀಪಾ ಗೌಡರ

ಫ್ರೆಂಚ ಸಾಹಿತ್ಯದಲ್ಲಿ ೧೭ ನೆಯ ಶತಮಾನ ಮಾರ್ಗ(Classical)ಯುಗವಾಗಿದ್ದಿತು. ಅದು ಆ ಸಾಹಿತ್ಯದ ಸ್ವರ್ಣಯುಗ. ಈ ಶತಮಾನದ ಕೊನೆಯಾರ್ಧದಲ್ಲಿ ರಾಸೀನರು (೧೬೩೯-೧೬೯೯) ತಮ್ಮ ದುರಂತ ನಾಟಕಗಳ ಮೂಲಕ ಫ್ರೆಂಚ ಸಾಹಿತ್ಯದಲ್ಲಿ ಹೆಸರುವಾಸಿಯಾದರು. ಅವರು ೧೧ ದುರಂತ ನಾಟಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಆಂದ್ರೋಮಾಕ', ಲೇ ಪ್ಲೇದರ', 'ಬೆರೆನೀಜ', 'ಬಜಾಜೆ', 'ಮಿತ್ರಾದಾಕ', 'ಇಫಿಜಿನಿ', 'ಫೇದ್ರ', 'ಎಸ್ತರ' ಮತ್ತು 'ಅತಾಲಿ'ಗಳು ಮುಖ್ಯವಾದವುಗಳಾಗಿವೆ. 'ಆಂದ್ರೊಮಾಕ' ಕೃತಿ ೧೬೬೭ ರಲ್ಲಿ ರಚಿಸಲ್ಪಟ್ಟಿದೆ.

ರಾಸೀನರ ಕೃತಿಗಳು ಸರಳತೆ ಮತ್ತು ಸುಂದರತೆಗೆ ಹೆಸರಾಗಿವೆ. ಅವರ ನಾಟಕಗಳಲ್ಲಿ ಗಂಡು ಹೆಣ್ಣಿನ ಆಕರ್ಷಣೆಯೇ ಮಿಕ್ಕೆಲ್ಲ ಭಾವನೆಗಳಿಗಿಂತ ಹೆಚ್ಚು ಉತ್ಕಟವಾಗಿ ಕಂಡುಬರುತ್ತದೆ. ಈ ಪ್ರೇಮವೇ ಅವರ ನಾಟಕಗಳ ಜೀವಜೀವಾಳ. ರಾಸೀನರು ಬಹುಸೂಕ್ಷ್ಮವಾಗಿ ಮಾನವನ ಹೃದಯದ ಭಾವನೆಗಳ ಚಲನವಲನಗಳನ್ನು ಅರಿತು, ಅದನ್ನೇ ತಮ್ಮ ನಾಟಕಗಳ ಬಂಡವಾಳವಾಗಿ ಮಾಡಿಕೊಂಡಿದ್ದಾರೆ. ಗಂಡು-ಹೆಣ್ಣಿನ ಪ್ರೇಮಾಕರ್ಷಣೆಯೇ ಉಳಿದೆಲ್ಲ ಭಾವನೆಗಳ ಮೇಲೆ ತನ್ನ ಪ್ರಭುತ್ವವನ್ನು ಸಾಧಿಸುತ್ತದೆ. ಸಫಲವಾಗದ ಈ ಪ್ರೇಮದ ಅಂತರಾಳದ ಸಂಘರ್ಷಗಳಿಗೆ ಕಾರಣವಾಗಿ ನಾಟಕಗಳನ್ನು ದುರಂತದ ಪ್ರಪಾತಕ್ಕೆ ನೂಕುತ್ತವೆ. ಹೀಗೆ ರಾಸೀನರ ಕೃತಿಗಳಲ್ಲಿ ವಿನಾಶಕಾರಿಯಾದ ಗಂಡು-ಹೆಣ್ಣಿನ ಆಕರ್ಷಣೆ ಹಾಗೂ ಮೋಹಗಳನ್ನೇ ಕಾಣಬಹುದಾದರೂ "ಆಂದ್ರೋಮಾಕ"ನಲ್ಲಿ ಅವರು ಪ್ರೇಮದ ಇನ್ನೆರಡು ಸ್ವರೂಪಗಳನ್ನೂ ತೋರಿಸಿರುತ್ತಾರೆ. ಅವು ಹೀಗಿವೆ : ಪುತ್ರ ವಾತ್ಸಲ್ಯ ಮತ್ತು ದಾಂಪತ್ಯ ಪ್ರೇಮ. ಹೀಗಾಗಿ "ಆಂದ್ರೋಮಾಕ"ವು ಅವರ ಮಿಕ್ಕೆಲ್ಲ ಕೃತಿಗಳಲ್ಲಿಯೇ ವಿಶಿಷ್ಟ ಸ್ಥಾನವನ್ನು ಅಲಂಕರಿಸಿದೆ. ಫ್ರೆಂಚ್ ನಾಟಕಗಳಲ್ಲಿ ಈ ಹಿಂದೆ ಬಣ್ಣಿಸಲಾರದ ಮಾತೃಪ್ರೇಮ ಹಾಗೂ ದಾಂಪತ್ಯಪ್ರೇಮಗಳನ್ನು ರಾಸೀನರು ಆಂದ್ರೊಮಾಕ ಮೂಲಕ ವರ್ಣಿಸಿ, ಅವುಗಳನ್ನು ಅಮರಗೊಳಿಸಿದ್ದಾರೆ. "ಆಂದ್ರೊಮಾಕ" ನಾಟಕದ ಕಥೆಯನ್ನು ಈಗ ಪರಿಶೀಲಿಸಬಹುದು.

ಟ್ರಾಯ ಯುದ್ಧದಲ್ಲಿ ಅದರ ರಾಜನಾದ ಹೆಕ್ಟರನು ಕೊಲ್ಲಲ್ಪಟ್ಟ. ಆಗ ಅವನ ಹೆಂಡತಿ ಆಂದ್ರೊಮಾಕ ಮತ್ತು ಮಗ ಆಸ್ತಿನ್ಯಾಕ್ಸ ಈಗ ಎಪೀರದ ರಾಜನಾದ

ಪೀರೂಸನ ಸೆರೆಯಾಳಾಗುತ್ತಾರೆ. ಪೀರೂಸನಿಗೆ ಮೆನಾಲಾಸ ಮಗಳಾದ ಹೆರ್ಮಿಯಾನ ಳೊಂದಿಗೆ ಮದುವೆ ನಿಶ್ಚಯವಾಗಿತ್ತು. ತನ್ನ ಮದುವೆಗಾಗಿ ಹೆರ್ಮಿಯಾನ ಗ್ರೀಸ ದಿಂದ ಎಪೀರಕ್ಕೆ ಬಂದಿದ್ದಳು. ಆಗ ತಾನು ವರಿಸಬೇಕಾಗಿದ್ದ ರಾಜಕುಮಾರ ಪೀರೂ ಸನು ಸೆರೆಯಾಳಾದ ಆಂದ್ರೋಮಾಕನಲ್ಲಿ ಮೋಹಗೊಂಡುದನ್ನು ಕಂಡು ಸಹಿಸದಾ ದಳ. ಆಂದ್ರೊಮಾಕಳು ತನ್ನ ಮಗ ಆಸ್ತಿನ್ಯಾಕ್ಸನನ್ನು ಪಾರು ಮಾಡಿಕೊಂಡು ತಂದಿರುವಳೆಂದೂ ಈಗ ಅವನು ಪೀರೂಸನ ಆಶ್ರಯದಲ್ಲಿಯೇ ಇರುವನೆಂಬುದೂ ಗ್ರೀಕರಿಗೆ ಹೇಗೋ ಸುದ್ದಿ ಮುಟ್ಟಿತು ಹೆಕ್ಟರನ ಮಗ ಇನ್ನೂ ಜೀವಂತವಾಗಿರುವು ದನ್ನು ಕೇಳಿದ ಗ್ರೀಕರು ಚಿಂತಿತರಾದರು. ಅವನೂ ಸತ್ತಿರುವನೆಂದೇ ಅವರು ಭಾವಿಸಿ ದ್ದರು. ಅದಕ್ಕೆ ಆಸ್ತಿನಾಕ್ಸನನ್ನು ತಮಗೆ ಒಪ್ಪಿಸಬೇಕೆಂದು (ಅವನನ್ನು ಮುಗಿಸಿ ಬಿಡಬೇಕೆಂದೇ) ಕೇಳಲು ಎಪೀರಕ್ಕೆ ಪೀರೂಸನ ಕಡೆಗೆ ಓರೆಸ್ಥ ಎಂಬುವನನ್ನು ರಾಯ ಭಾರಿಯನ್ನಾಗಿ ಕಳಿಸುತ್ತಾರೆ ಆಂದ್ರೊಮಾಕಳು ಪೀರೂಸನನ್ನು ವರಿಸಲು ನಿರಾ ಕರಿಸಿದಾಗ, ಪೀರೂಸನು ಓರೆಸ್ಥ ಬಂದ ಕಾರಣವನ್ನು ಅವಳಿಗೆ ತಿಳಿಸಿ, ಅವಳು ತನ್ನ ಜೊತೆ ಮದುವೆಗೆ ಒಪ್ಪಿದರೆ; ಆಸ್ತಿನ್ಯಾಕ್ಸನಿಗೆ ತಂದೆಯಾಗಿ ಅವನನ್ನು ರಕ್ಷಿಸುವ ದಾಗಿಯೂ ಅವಳು ಒಪ್ಪದಿದ್ದರೆ ಅವನನ್ನು ಗ್ರೀಕರಿಗೆ ಒಪ್ಪಿಸುವದಾಗಿಯೂ ತಿಳಿಸು ತ್ತಾನೆ. ಮಡಿದ ತನ್ನ ಪತಿಗೆ ನಿಷ್ಠಾವಂತಳಾಗಿ ಇರಬಯಸಿದ್ದ ಆಂದ್ರೊಮಾಕ, ಮಗನ ಜೀವ ರಕ್ಷಣೆ ಮತ್ತು ಭವಿಷ್ಯಕ್ಕಾಗಿ ಮನಸ್ಸಿಲ್ಲದೇ ಮದುವೆಗೆ ಒಪ್ಪುವಳು (ತನ್ನ ಮಗನನ್ನು ರಕ್ಷಿಸುವದಾಗಿ ಅವನು ಮಾತು ಕೊಟ್ಟ ಮೇಲೆ ಮದುವೆಯ ವಿಧಿ ಗಳು ಇನ್ನೂ ನಡೆದಿರುವಾಗಲೇ ಆತ್ಮಹತ್ಯೆ ಮಾಡಿಕೊಳ್ಳಲು ಅವಳು ಮನದಲ್ಲಿಯೇ ನಿಶ್ಚಯಿಸಿದ್ದಳು). ಪೀರೂಸ ಮತ್ತು ಆಂದ್ರೊಮಾಕರ ಮದುವೆ ನೆರವೇರುವದೆಂದು ಕೇಳಿ, ಹೆರ್ಮಿಯಾನ ತನ್ನ ಪ್ರೇಮ ಫಲಿಸದಿದ್ದುದನ್ನು ಕಂಡು, ಅಸೂಯೆಯಿಂದ ಪೀರೂಸನನ್ನು ಕೊನೆಗಾಣಿಸಬೇಕೆಂದು ಯೋಚಿಸುತ್ತಾಳೆ ತಾನು ಇಷ್ಟು ದಿನ ನಿರ್ಲಕ್ಷಿಸಿದ ಓರೆಸ್ತನನ್ನು ಕರೆಸಿ, ಪಿರೂಸನನ್ನು ಕೊಂದರೆ, ತಾನು ಅವನೊಂದಿಗೆ ಗ್ರೀಸಕ್ಕೆ ಹಿಂದಿರುಗುವದಾಗಿ ಹೇಳುವಳು. ಆದರೆ ಓರೆಸ್ಥನ ಬಾಯಿಯಿಂದ ಪೀರೂ ಸನ ಕೊಲೆಯ ಬಗ್ಗೆ ಕೇಳಿ, ತನ್ನ ಪ್ರಿಯಕರನ ಸಾವನ್ನು ತಾಳಲಾರದೆ ಓಡಿಹೋಗಿ, ಅವನ ದೇಹದ ಮೇಲೆಯೇ ತನ್ನ ಪ್ರಾಣ ಬಿಡುತ್ತಾಳೆ. ಹೆರ್ಮಿಯಾನಳ ಸಾವನ್ನು ಕಂಡು ಓರೆಸ್ಥನಿಗೆ ಹುಚ್ಚು ಹಿಡಿಯುವುದು. ಈಗ ಆಂದ್ರೊಮಾಕ ಮತ್ತು ಅವಳ ಮಗ ಎಲ್ಲ ವಿಪತ್ತಿನಿಂದ ಪಾರಾದರು.

ರಾಸೀನರ ಮಿಕ್ಕೆಲ್ಲ ನಾಟಕಗಳಲ್ಲಿರುವಂತೆ ಇಲ್ಲಿಯೂ ಗಂಡು-ಹೆಣ್ಣಿನ ಪ್ರೇಮಾ ಕರ್ಷಣೆಯೇ ನಾಟಕದ ಮೂಲದ್ರವ್ಯವಾಗಿದೆ. ಮೊದಲನೆಯದಾಗಿ ಈ ಪ್ರೇಮ ಕುರುಡು. ಇದು ಮೊದಲ ನೋಟದಲ್ಲಿಯೇ ಅಂಕುರಿಸಿ, ಅವರನ್ನು ಇಡಿಯಾಗಿ ಆವರಿಸಿ ಬಿಡುತ್ತದೆ. ಪ್ರೇಮದ ಮುಂದೆ ಪಾತ್ರಗಳು ತಮ್ಮ ಶೌರ್ಯ-ವೀರತನ,

ವ್ಯಕ್ತಿತ್ವವನ್ನೆಲ್ಲ ಕಳೆದುಕೊಂಡು ದುರ್ಬಲವಾಗುತ್ತವೆ. ಅದೊಂದು ಜ್ವಾಲೆಯಾಗಿ ಅವರ ಹೃದಯದಲ್ಲಿ ಹರಡಿ, ಅವರ ವಿಚಾರಶಕ್ತಿ ಕುಂದಿ ಹೋಗುತ್ತದೆ. ಈ ಭಾವೋದ್ರೇಕದ ಎದುರು ಸದ್ಗುಣ, ಕೀರ್ತಿ, ಕರ್ತವ್ಯಗಳೆಲ್ಲ ಕ್ಷಣಿಕವಾಗಿ ಕಂಡು ಬರುತ್ತವೆ ರಾಜ ಪೀರೂಸನು ಸೆರೆಯಾಳಾದ ಅಂದ್ರೊಮಾಕಳ ಮೋಹದಲ್ಲಿ ಸಿಲುಕಿ, ಕರ್ತವ್ಯ ವಿಮುಖನಾಗುತ್ತಾನೆ. ರಾಜನಾಗಿ ದೇಶ ರಕ್ಷಣೆ, ಪ್ರಜಾರಕ್ಷಣೆ ಮಾಡುವುದನ್ನು ಬಿಟ್ಟನು. ತನ್ನ ಪ್ರೇಯಸಿಗಾಗಿ ಪ್ರಬಲರಾದ ಗ್ರೀಕರೊಂದಿಗೆ ಯುದ್ಧ ಸಾರಲು ಸನ್ನದ್ಧನಾಗುತ್ತಾನೆ. ಪ್ರೇಮ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದ ಇವನಿಗೆ ತನ್ನ ವಂಶದ ಮರ್ಯಾದೆ, ಗೌರವದ ಬಗೆಗೆ ಎಳ್ಳಷ್ಟೂ ಚಿಂತೆಯಿಲ್ಲ. ಶತ್ರುವಿನ ಮಗನಾದ ಅಸ್ತಿನ್ಯಾಕ್ಸ್‌ನಿಗೆ ತಂದೆಯಾಗಿ, ಅವನಿಗೆ ಪಟ್ಟಗಟ್ಟಲೂ ಈತ ಸಿದ್ಧ. ಆದರೆ ಅವನ ಪ್ರೇಯಸಿ ಮಾತ್ರ ಅವನವಳಾಗಬೇಕು. ಅಸ್ತಿನ್ಯಾಕ್ಸನನ್ನು ಕರೆದುಕೊಂಡು ಹೋಗಲು ರಾಯಭಾರಿಯಾಗಿ ಬಂದ ಓರೆಸ್ಥ, ಅವನನ್ನು ಹಿಂದಿರುಗಿ ಕರೆದುಕೊಂಡು ಹೋಗುವುದಕ್ಕಿಂತ ತನ್ನ ಪ್ರೇಯಸಿ ಹೆರ್ಮಿಯಾನಳ ಮನವೊಲಿಸಿ, ಅವಳನ್ನು ಕರೆದುಕೊಂಡು ಹೋಗುವದರಲ್ಲಿ ಹೆಚ್ಚು ನಿರತನಾಗುತ್ತಾನೆ. ಅದರಲ್ಲಿಯೇ ಅವನಿಗೆ ಹೆಚ್ಚಿನ ಆಸ್ಥೆ. ಹೀಗೆ ಇವರಿಬ್ಬರೂ ತಮ್ಮ ಕರ್ತವ್ಯಗಳಾದ ದೇಶ ರಕ್ಷಣೆ ಮತ್ತು ರಾಯಭಾರತ್ವಗಳಿಗೆ ಚ್ಯುತಿ ತಂದಿದ್ದಾರೆ.

ಆದರೆ ಈ ಪ್ರೇಮ ಪರಸ್ಪರ ಪ್ರೇಮವಲ್ಲ. ಇದು ಏಮ್ಮುಖ ಪ್ರೇಮ. ನದಿಯ ನೀರಿನ ಹಾಗೆ ಇದು ಒಂದೇ ದಿಕ್ಕಿನಲ್ಲಿ ಹರಿದಿದೆ. ಓರೆಸ್ಥ ಹೆರ್ಮಿಯಾನಳನ್ನು ಪ್ರೀತಿಸುವನು. ಆದರೆ ಅವಳು ಪೀರೂಸನನ್ನು ಪ್ರೇಮಿಸುವಳು. ಪೀರೂಸನು ಅಂದ್ರೋಮಾಕನನ್ನು ಪ್ರೇಮಿಸುವನು. ಅವಳು ತನ್ನ ಪತಿಯನ್ನು ಪ್ರೀತಿಸುವಳು. ಇದನ್ನು ಹೀಗೆ ಹೇಳಬಹುದು : ಓರೆಸ್ಥ–ಹೆರ್ಮಿಯಾನ–ಪೀರೂಸ–ಅಂದ್ರೋಮಾಕ.

ಹೀಗಾಗಿ ಈ ಪ್ರೇಮ ಫಲಿಸದೆ, ತಿರಸ್ಕರಿಸಲ್ಪಡುವದು. ಈ ರೀತಿ ತಿರಸ್ಕರಿಸಲ್ಪಟ್ಟ ಪ್ರೇಮ, ಅಸೂಯೆಯಾಗಿ ಮಾರ್ಪಡುತ್ತದೆ. 'ಅಸೂಯೆೀ ನಿನ್ನ ಹೆಸರು ಹೆಣ್ಣು' ಎಂದ ಶೇಕ್ಸಪಿಯರನ ಸಾಲು ಇಲ್ಲಿ ನೆನಪಿಗೆ ಬರುತ್ತದೆ. ತನ್ನ ಪತಿಯಾಗಬೇಕಾಗಿದ್ದ ತನ್ನ ಪ್ರಿಯಕರ ಪೀರೂಸ ಅಂದ್ರೋಮಾಕಳಲ್ಲಿ ಮೋಹಗೊಂಡುದನ್ನು ಕಂಡು, ಹೆರ್ಮಿಯಾನ ಅವಳಲ್ಲಿ ಅಸೂಯೆಗೊಳ್ಳುತ್ತಾಳೆ. ಅಂದ್ರೋಮಾಕ ತಾನು ಹಾಗೂ ತನ್ನ ಮಗ ಯಾವ ನಡುಗಡ್ಡೆಯಲ್ಲಾದರೂ ತಲೆ ಮರೆಸಿಕೊಂಡು ಇರಲು ಹೆರ್ಮಿಯಾನ ಅವಳೊಂದಿಗೆ ಬಹು ಕ್ರೂರವಾಗಿ ವರ್ತಿಸುವಳು. "ಅವಳು ನನಗೆ ಕೊಟ್ಟ ಯಾತನೆಗಳನ್ನೇ ಅವಳೂ ಅನುಭವಿಸಲಿ" ಎಂದು ನುಡಿಯುತ್ತಾಳೆ.

ಪೀರೂಸ ತನ್ನವನಾಗದಾಗ ಅಸೂಯೆಗೊಂಡ ಪ್ರೇಮ, ಈಗ ಅಂದ್ರೋಮಾಕಳ ಸ್ವತ್ತೆಂದು ತಿಳಿದು, ದ್ವೇಷದಲ್ಲಿ ಪರಿವರ್ತನೆಗೊಳ್ಳುತ್ತದೆ. ದ್ವೇಷದ

ಪರಾಕಾಷ್ಠೆ ತಲುಪಿದ ಹೆರ್ಮಿಯೋನಳಿಗೆ ತನ್ನ ಹೃದಯವೇ ಅಪರಿಚಿತವಾಗಿ ತೋರುತ್ತದೆ. ತಾನು ಪೀರೂಸನನ್ನು ಪ್ರೀತಿಸುತ್ತೇನೋ ಅಥವಾ ದ್ವೇಷಿಸುತ್ತೇನೊ ಎಂಬ ಸಂದಿಗ್ಧಸ್ಥಿತಿಯನ್ನು ಹೆರ್ಮಿಯೋನಳು ತಲುಪಿದ್ದಾಳೆ. ಆದರೆ ತನ್ನ ಪ್ರೀತಿಯನ್ನು ಧಿಕ್ಕರಿಸಿದ ಪೀರೂಸನನ್ನು ಆನಂದದಿಂದ ಇರಗೊಡಬಾರದೆಂದು ಅವನ ಮೇಲೆ ಸೇಡು ತೀರಿಸಿಕೊಳ್ಳಬಯಸುತ್ತಾಳೆ. ಈ ಕೆಲಸಕ್ಕಾಗಿ ತನ್ನನ್ನು ಪ್ರೇಮಿಸಿದ ಓರೆಸ್ಥನನ್ನು ಉಪಯೋಗಿಸಿಕೊಳ್ಳುತ್ತಾಳೆ. ಅವನು ಅವಳ ಪ್ರೀತಿಗಾಗಿ ತಾನು ಗೌರವಿಸುತ್ತಿದ್ದ ರಾಜನನ್ನು ಕೊಲ್ಲಲು ಹಿಂದುಮುಂದು ನೋಡುವುದಿಲ್ಲ. ಅಷ್ಟೇ ಅಲ್ಲದೆ ಇದರಿಂದ ತನ್ನ ವಂಶಕ್ಕೆ ಗ್ರೀಕರಿಗೆ ಎಂಥ ಕಳಂಕವಾಗುವುದೆಂಬುದನ್ನು ಅರಿತೂ, ಅವನು ತನ್ನ ಪ್ರೇಯಸಿಗಾಗಿ ಈ ಹೇಯಕಾರ್ಯ ಮಾಡಲು ಒಪ್ಪುತ್ತಾನೆ.

ಅಸೂಯೆ ಮತ್ತು ದ್ವೇಷಗಳೆರಡೂ ಪ್ರೇಮದ ಬೇರೆ ಸ್ವರೂಪವಾಗಿರುವದರಿಂದ, ಅಸಫಲವಾದ ಪ್ರೇಮ ಈ ರೂಪದಲ್ಲಿ ಕಾಣಬರುತ್ತದೆ. ಆಗ ಪಾತ್ರಗಳು ತಮ್ಮ ವಿವೇಚನಾಶಕ್ತಿಯನ್ನು ಕಳೆದುಕೊಂಡು, ತಮ್ಮ ಭಾವನೆಗಳ ಕೈಗೊಂಬೆಯಾಗುತ್ತವೆ. ಅಸೂಯೆಯಲ್ಲಿ ತಿರುಗಿದ ಪ್ರೇಮ ಪ್ರಿಯಕರನಿಗೂ ಪ್ರಾಣಾಂತಕವಾಗಿ ಪರಿಣಮಿಸುತ್ತದೆ. ದ್ವೇಷವು ಪಾಪಕೃತ್ಯದಲ್ಲಿ ಕೊನೆಗೊಂಡರೆ, ಪ್ರೀತಿ ಆತ್ಮಹತ್ಯೆಯಲ್ಲಿ ಕೊನೆಗೊಳ್ಳುತ್ತದೆ. ಅಂತೆಯೇ ಹೆರ್ಮಿಯೋನಳ ದ್ವೇಷ ಪೀರೂಸನ ಕೊಲೆ ಮಾಡಿಸಿದರೆ, ಅವನಿಗಿರುವ ಪ್ರೇಮಕ್ಕಾಗಿ ಅವನ ಹೆಣದ ಮೇಲೆಯೇ ಆಕೆ ಪ್ರಾಣ ಬಿಡುತ್ತಾಳೆ.

ಆಂದ್ರೋಮಾಕ ಅಸ್ತ್ಯನ್ಯಾಕ್ಸನ ತಾಯಿ ಮತ್ತು ಹೆಕ್ಟರನ ಪ್ರಿಯ ಮಡದಿ ಈಗ ವಿಧವೆ. ಅವಳು ಅವರಿಬ್ಬರನ್ನೂ ಗಾಢವಾಗಿ ಪ್ರೀತಿಸುತ್ತಿದ್ದಳು. ಅವಳು ಮಡಿದ ತನ್ನ ಪತಿಗೆ ನಿಷ್ಠಾವಂತಳಾಗಿಯೇ ಉಳಿಯ ಬಯಸುತ್ತಾಳೆ. ಮತ್ತು ತನ್ನ ಪ್ರೀತಿಯ ಮಗನನ್ನು ರಕ್ಷಿಸಿ, ಅವನ ಭವಿಷ್ಯವನ್ನು ಭದ್ರಗೊಳಿಸಲಿಚ್ಛಿಸುವಳು. ಹೀಗೆ ಪತಿಯ ಪ್ರೇಮ ನಿಷ್ಠೆ ಮತ್ತು ಪ್ರೀತಿವಾತ್ಸಲ್ಯಗಳೆರಡೂ ಅವಳನ್ನು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಸುತ್ತವೆ. ಅವಳು ತನ್ನ ಪತಿಗೆ ನಿಷ್ಠಾವಂತಳಾಗಿ ಇರಬಯಸಿ, ಪೀರೂಸನ ಪ್ರೇಮವನ್ನು ನಿರಾಕರಿಸಿದಾಗ, ಅವನು ಅವಳಿಗೆ ಬೆದರಿಕೆ ಹಾಕುತ್ತಾನೆ. ಅವಳು ತನ್ನ ಮಗನನ್ನು ಗಾಢವಾಗಿ ಪ್ರೀತಿಸುವದು ಅವನಿಗೆ ಗೊತ್ತಿದ್ದಿತು. 'ತಾಯಿಯ ತಪ್ಪಿಗೆ ಮಗ ಶಿಕ್ಷೆ ಅನುಭವಿಸುವನೆಂದು' ಬೆದರಿಕೆ ಹಾಕುತ್ತಾನೆ. ಆಗ ಅವಳು ತಾನೂ ತನ್ನ ಮಗನೊಂದಿಗೆ ಸತ್ತು ಸಾವಿನಲ್ಲಾದರೂ ಮೂವರು ಒಂದಾಗುವೆವೆಂದು ಹೇಳುತ್ತಾಳೆ. ಅವಳು ತನ್ನ ಸತ್ತ ಪತಿಗೆ ನಿಷ್ಠೆಯಿಂದಿರಬೇಕಾದರೆ ಮಗನ ಬಲಿಕೊಡಬೇಕು. ಮಗನ ಭವಿಷ್ಯ ಉಜ್ವಲವಾಗಬೇಕಾದರೆ ಪತಿಗೆ ದ್ರೋಹಬಗೆಯಬೇಕು. ಅವಳು ಈಗ ಇವುಗಳಲ್ಲಿ ಒಂದನ್ನು ಮಾತ್ರ ಆರಿಸಿಕೊಳ್ಳಬೇಕಾಯಿತು. ಅವಳಿಗೆ ಮಗನೇ ಈಗ ಸರ್ವಸ್ವ, ಅವನಿಗಾಗಿ ತನ್ನ ಪ್ರಾಣವನ್ನೂ ತ್ಯಾಗಮಾಡಲು ಅವಳು ಸಿದ್ಧಳಾಗಿದ್ದಳು. ಆದರೆ ಮಗನ ಭವಿಷ್ಯಕ್ಕಾಗಿ ಅವಳು

ತನ್ನ ಪತಿಗೆ ದ್ರೋಹಬಗೆಯಲು ಸಿದ್ಧಳಿಲ್ಲ. ಆಗ ಅವಳ ಪರಿಚಾರಿಕೆ ಅವಳಿಗೆ 'ನಿಮ್ಮ ಅತಿಯಾದ ಸದ್ಗುಣಗಳೇ ನಿಮ್ಮನ್ನು ಕೊಲೆಗಾರ್ತಿಯನ್ನಾಗಿಸುವವು' ಎಂದು ಎಚ್ಚರಿಸುತ್ತಾಳೆ. ಆಗ ಅವಳು "ಈ ಮಗ, ನನ್ನ ಏಕೈಕ ಸಂತೋಷ ಮತ್ತು ಹೆಕ್ಟರಿನ ಪ್ರತಿಬಿಂಬ. ತನ್ನ ಪ್ರೇಮದ ಕುರುಹಾದ ಈ ಮಗನನ್ನು ನನ್ನ ಮಡಿಲಿಗೆ ಹಾಕಿ ಹೋಗಿರುವರು" ಯುದ್ಧದಲ್ಲಿ ನಾನು ವೀರ ಮರಣಹೊಂದಿದರೆ 'ಮಗನಿಗೆ ನೀನು ಅವನ ತಂದೆಯನ್ನು ಎಷ್ಟು ಪ್ರೀತಿಸುತ್ತಿದ್ದಿ ಎಂಬುದನ್ನು ತೋರಿಸು' ಎಂದು ಹೆಕ್ಟರ ಹೇಳಿದ್ದನ್ನು ನೆನಪಿಸಿಕೊಳ್ಳುವಳು.

ಹೀಗೆ ಅವಳು ಮಗನಲ್ಲಿ ತನ್ನ ಪತಿಯನ್ನೂ ತಮ್ಮಿಬ್ಬರ ಅನ್ಯೋನ್ಯ ಪ್ರೀತಿಯನ್ನೂ ಕಾಣುವಳು. ಹೆಕ್ಟರನ ರಕ್ತ ಹಂಚಿಕೊಂಡು ಹುಟ್ಟಿರುವ ಮಗ ಅಸ್ತಿನ್ಯಾಕ್ಸನನ್ನು ಸಾವಿನಿಂದ ಪಾರುಮಾಡಲು ನಿಶ್ಚಯಿಸುತ್ತಾಳೆ.

ತನ್ನ ನಂಬುಗೆಯ ಪರಿಚಾರಿಕೆಯನ್ನು ಕರೆದು, ನನ್ನನ್ನು ಪತಿದ್ರೋಹಿಯೆಂದು ಬಗೆಯಬೇಡ. "ನಾನೊಬ್ಬಳೇ ಹೋಗಿ ಹೆಕ್ಟರನನ್ನು ಕೂಡಿಕೊಳ್ಳುವೆ". ನಾನು ಸತ್ತ ಮೇಲೆ "ಪ್ರತಿದಿನವೂ ಅಸ್ತಿನ್ಯಾಕ್ಸನಿಗೆ ಅವನ ತಂದೆಯ ಸದ್ಗುಣ, ಶೌರ್ಯಗಳ ಬಗ್ಗೆ ಹೇಳು. ಒಮ್ಮೊಮ್ಮೆ ಅವನ ತಾಯಿಯ ಬಗೆಗೂ ಹೇಳು" ಎಂದು ಹೇಳುವಳು. ಹೀಗೆ ಅವಳು ಮಗನ ಭವಿಷ್ಯಕ್ಕಾಗಿ, ಪತಿನಿಷ್ಠೆಗಾಗಿ ತನ್ನನ್ನೇ ಬಲಿಕೊಡಲು ನಿಶ್ಚಯಿಸಿದಾಗ, ವಿಧಿಯ ಕೈವಾಡದಿಂದ ಪೀರೂಸ ಕೊಲೆಗೈಯಲ್ಪಟ್ಟು, ಹೆರ್ಮಿಯೂನ ಸಾವನ್ನಪ್ಪುವಳು. ಈಗ ಆಂದ್ರೋಮಾಕಳೇ ಎಪೀರದ ರಾಣಿ.

ಹೀಗೆ ರಾಸೀನರ 'ಆಂದ್ರೋಮಾಕ'ನಲ್ಲಿ ಪ್ರೇಮದ ವಿನಾಶಕಾರಿ ಹಾಗೂ ಭಯಾನಕ ಮುಖಗಳಾದ ಆಕರ್ಷಣೆ, ಪ್ರೇಮದ ಸ್ವಾರ್ಥತೆಯಿಂದ ಉದ್ಭವಿಸುವ ಅಸೂಯೆ, ದ್ವೇಷ, ಹಗೆತನ, ಕೊಲೆಗಡುಕತನಗಳ ಚಿತ್ರಣ ಒಂದು ಕಡೆಗಿದ್ದರೆ, ಅದೇ ಪ್ರೇಮದ ಸುಂದರಮುಖಗಳಾದ ಪತಿನಿಷ್ಠೆ, ಪುತ್ರವಾತ್ಸಲ್ಯ, ನಿಸ್ವಾರ್ಥತೆ ಹಾಗೂ ಅರ್ಪಣ ಮನೋಭಾವಗಳ ಚಿತ್ರಣ ಇನ್ನೊಂದೆಡೆಗೆ ಕಂಡುಬರುತ್ತವೆ.

ಸಹಾಯಕ ಗ್ರಂಥಗಳು

1. XIX siecle, les grands auteurs francaise de programme by A, Lagarde and L. Michard Bordas Pari 1969.
2. Andsomaque Racine Norveau classique Laraisse Librarie Laraisse 1959.
3. Les grandes Etapes de la literature francaise. by Dr. C. Cadoux. University ? Poona. 1961.

* *

ಬನವಾಸಿಯ ವಿಷ್ಣು ವಿಗ್ರಹದ (೪-೫ ನೆಯ ಶತಮಾನ) ಭಗ್ನಾವಶೇಷ

-ಅ. ಸುಂದರ

ಮೌರ್ಯ ವಂಶದ ಅಶೋಕ ಚಕ್ರವರ್ತಿ (ಸು.ಕ್ರಿ. ಪೂ. ೨೭೩-೨೩೪) ಯ ಕಾಲದಿಂದ ಬನವಾಸಿ (ಸಿರ್ಸಿ, ತಾ. ಉ. ಕನ್ನಡ ಜಿಲ್ಲೆ)ಯ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಹತ್ವವು ಹೆಚ್ಚುತ್ತಲೆ ಬಂತು (ಸುಂದರ. ಅ: ೧೯೭೯).ಈ ಚಕ್ರ-ವರ್ತಿಯ ಕಾಲದಲ್ಲಿ ಈ ಪ್ರದೇಶದಲ್ಲಿ ಬೌದ್ಧ ಮತವು ಪ್ರಸಾರವಾಯಿತು. ಕ್ರಿಸ್ತ ಶಕಾರಂಭದಿಂದ ಇದು ದಕ್ಷಿಣ ಭಾಗವನ್ನು ಆಳುತ್ತಿದ್ದ ಶಾತವಾಹನರ ರಾಜ್ಯದ ಭಾಗವಾಗಿತ್ತು (ನರಸಿಂಹ ಮೂರ್ತಿ ಎ. ವಿ.ಮತ್ತು ರಘುನಾಥ ಭಟ್ ಎಚ್. ಆರ್. ೧೯೭೪) ಇದರ ಮಾಂಡಲಿಕರಾದ ಚುಟು ಅರಸರು ಬನವಾಸಿಯಿಂದ ಆಳುತ್ತಿದ್ದರು. ಕದಂಬ ರಾಜ್ಯಸ್ಥಾಪಕ ಮಯೂರ ಶ(ವ)ರ್ಮನು (ಸು. ೩೨೫-೩೪೫) ಬನವಾಸಿಯನ್ನು ತನ್ನ ರಾಜ್ಯದ ರಾಜಧಾನಿಯಾಗಿ ಮುಂದುವರೆಸಿದನು. ೬ ನೇ ಶತಮಾನದ ಮಧ್ಯದವರೆಗೂ ಬನವಾಸಿಯು ಈ ಕದಂಬ ಸ್ವತಂತ್ರ ರಾಜಧಾನಿಯಾಗಿ ಮೆರೆಯಿತು.

ಚುಟುವಂಶದ ವಿಷ್ಣುಸ್ಕಂದ ಚುಟುಕುಲಾನಂದನ ಶಾತಕರ್ಣಿಯ ಮಗಳಾದ ರಾಜಕುಮಾರಿ ಶಿವಸ್ಕಂಧ ನಾಗಶ್ರೀಯು ಇಲ್ಲಿ ಒಂದು ಕೆರೆಯನ್ನು ನಿರ್ಮಿಸಿ, ಒಂದು ವಿಹಾರವನ್ನು ಕಟ್ಟಿಸಿ ಮತ್ತು (ಮುಚಲಿಂದ) ನಾಗಪ್ರತಿಮೆಯನ್ನು ಮಾಡಿಸಿ ದಾನ ಕೊಟ್ಟಳು. ಈ ವಿಷಯವನ್ನು ತಿಳಿಸುವ ಶಾಸನವುಳ್ಳ ನಾಗಪ್ರತಿಮೆಯು ಈ ಊರಿನ ಮಧುಕೇಶ್ವರ ದೇವಾಲಯದ ಆವರಣದಲ್ಲಿದೆ. ಈಚಿನ ಎರಡು ದಶಕಗಳಲ್ಲಿ ಇಲ್ಲಿ ಚುಟು-ಕದಂಬ ಕಾಲದ ಶಾಸನಗಳು, ಮೂರ್ತಿಶಿಲ್ಪಗಳು ಆಕಸ್ಮಿಕವಾಗಿ ಶೋಧವಾಗಿವೆ (ಸುಂದರ; ೧೯೮೯. ನರಸಿಂಹಮೂರ್ತಿ ಎ.ವಿ. ಅದೇ ಕಡೆ ಗೋಪಾಲ ಬಿ. ಆರ್: ೧೯೮೫). ೧೯೭೦-೭೩ ರಲ್ಲಿ ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯದ ಶಾಖೆಯು ಮತ್ತು ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗವು ಇಲ್ಲಿ ನಡೆಸಿದ ಉತ್ಖನನದಲ್ಲಿ ಎರಡು ಬೃಹತ್ ಗಜ ಪೃಷ್ಠಾಕೃತಿಯ ಇಟ್ಟಿಗೆ ಕಟ್ಟಡಗಳು (ಶೇಷಾದ್ರಿ ಎಂ. ೧೯೭೦ ೭೧ : ೫೬-೫೭ ಐ. ಎ. ಆರ್. ೧೯೭೦-೭೧: ೨೮.೨೯) ಮತ್ತು ಒಡೆದ ಒಂದು ಕಾರ್ತಿಕೇಯ (?) ನ ಮೂರ್ತಿಯು (ಸುಂದರ ; ೧೯೮೯) ದೊರೆತವು.


ಸಚಕ್ರಹಸ್ತ

ಈಗ್ಯೆ ಏಳೆಂಟು ವರ್ಷಗಳಿಂದೀಚೆಗೆ ಆಕಸ್ಮಿಕವಾಗಿ ಹಲವಾರು ಶಿಲಾಮೂರ್ತಿಗಳ ಭಗ್ನಾವಶೇಷಗಳು ಶೋಧವಾಗಿವೆ (ಸುಂದರ. ಅ. ೧೯೭೯). ಇವೆಲ್ಲವನ್ನೂ ಕೇಂದ್ರ ಸರಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಆಗಾಗ್ಯೆ ಸಂಗ್ರಹಿಸಿ ತಮ್ಮ ಸ್ಥಳೀಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸುರಕ್ಷಿತವಾಗಿಟ್ಟಿದ್ದಾರೆ. ಇವುಗಳಲ್ಲಿ ಚಕ್ರವನ್ನು ಪ್ರಯೋಗ ಮಾಡುವ ಹಾಗೆ ಹಿಡಿದ ಹಸ್ತವು ಒಂದು. ಇದನ್ನು ಇಲ್ಲಿ ವಿವೇಚಿಸಲಾಗಿದೆ. ಇದೂ ಕೂಡ ಆದಿ ಮಧುಕೇಶ್ವರ ದೇವಾಲಯದ ಹತ್ತಿರ ನದಿ ಪಾತ್ರದಲ್ಲಿ ಸಿಕ್ಕಿತು.

ಕರಿಕಲ್ಲಿನಲ್ಲಿ (ಬಳಪದ ಕಲ್ಲು) ಮಾಡಿದ ಇದು ಚತುರ್ಭುಜ ವಿಷ್ಣುಶಿಲ್ಪದ ಭಾಗ. ಬಹುಶಃ ಮೇಲೆತ್ತಿ ಹಿಡಿದ ಬಲಹಸ್ತ, ಮಣಿ ಖಚಿತ ಎರಡು ಬಳೆಗಳುಳ್ಳ ಈ ಊರ್ಧ್ವಹಸ್ತವು ಒಳ್ಳೆ ಮಾಟವಾಗಿ ನೀಳವಾಗಿದೆ. ಹೆಬ್ಬೆರಳು ಮತ್ತು ತರ್ಜನೀ ಬೆರಳುಗಳಲ್ಲಿ ಎಸೆಯುವಂತೆ ಚಕ್ರವನ್ನು ಹಿಡಿಯಲಾಗಿದೆ. ಈ ರೀತಿ ಹಿಡಿದಾಗ ಉಳಿದ ಬೆರಳುಗಳ ಸ್ಥಿತಿಯನ್ನು ಸಹಜವಾಗಿ ಬಿಡಿಸಲಾಗಿದೆ. ಚಕ್ರದ ಎರಡು ಬದಿಗಳು ಉಬ್ಬಿವೆ. ಸರಳ ಅಂಚಿನ ತುದಿಯು ಅಷ್ಟೇನು ಚೂಪಾಗಿಲ್ಲ. ಅರಳಿದ ಕಮಲದಂತಿರುವ ಗುಂಬ (hub) ದಿಂದ ಅಂಚಿಗೆ ಸೇರಿದ ಸುತ್ತಲಿನ ಸುಮಾರು ೩೨ ಅರಗಳನ್ನು (spoker) ಸ್ವಲ್ಪ ಉಬ್ಬಿದ ರೇಖೆಗಳಿಂದ ತೋರಿಸಲಾಗಿದೆ. ಇತ್ತೀಚೆಗೆ ಸಂಘೋಲದಲ್ಲಿ ದೊರೆತ ಕುಷಾಣರ ಕಾಲದ ಚಕ್ರಧ್ವಜ ಶಿಲ್ಪದಲ್ಲಿರುವ ಚಕ್ರವನ್ನು ನೆನಪಿಗೆ ತರುತ್ತದೆ (ಗುಪ್ತ, ಎಸ್. ಪಿ. ೧೯೮೫: ೭೬-೭೭). ಈ ತರಹದ ಚಕ್ರವು ಸಾಮಾನ್ಯವಾಗಿ ೩-೪ ನೇ ಶತಮಾನ (ಅಂದರೆ ಗುಪ್ತಪೂರ್ವ ಕಾಲದ) ದ ಶಿಲ್ಪವೆಂದು ಶೈಲಿಯಿಂದಲೂ ತರ್ಕಿಸಬಹುದು.

ವಿವೇಚನೆ : ಈ ಹಸ್ತವು ವಿಷ್ಣುಶಿಲ್ಪದ್ದೆಂದು ಗುರುತಿಸಿದ್ದು ಸರಿಯಾಗಿದ್ದಲ್ಲಿ ಇದು ಮಹತ್ವದ್ದೆ ಸರಿ. ಬನವಾಸಿಯಲ್ಲಿ ದೊರೆತ ಶಾಸನಗಳಲ್ಲಿ ಪ್ರಾಚೀನ ಕದಂಬರದ್ದು ಒಂದೇ ಒಂದು. ಇದು ಮೃಗೇಶವರ್ಮನ ಕಾಲದ ಸ್ಥಂಭಶಾಸನ (ಗೋಪಾಲ. ಬಿ. ಆರ್. ೧೯೮೫: ೮೧-೯೧). ಇದು ವಿಷ್ಣು ಸ್ತುತಿಯಿಂದ ಆರಂಭವಾಗುತ್ತದೆ. ಈ ಶಾಸನಸ್ತಂಭವು ವಿಷ್ಣು ದೇವಾಲಯದ ಮುಂದಿನ ಗರುಡಧ್ವಜವೆಂದು ಊಹಿಸಬಹುದಾಗಿದೆ. ಆದ್ದರಿಂದ ಈ ಸ್ತಂಭ ದೊರೆತ ಸ್ಥಳದಲ್ಲಿ ವಿಷ್ಣುದೇವಾಲಯದ ಭಾಗಗಳೂ ದೊರೆಯಬಹುದು. ಉತ್ಖನನ ಮಾಡಿ ಶೋಧಿಸಬೇಕಾಗಿದೆ. ಮೇಲೆ ವರ್ಣಿಸಿದ ಚಕ್ರಧಾರಿ ಹಸ್ತವು ಈ ದೇವಾಲಯದ ವಿಷ್ಣುಮೂರ್ತಿಯದೆಂದು ನನ್ನ ಅನುಮಾನ.

ಸದ್ಯ ಬನವಾಸಿಯ ಮಧುಕೇಶ್ವರ ದೇವಾಲಯದ ಅತ್ಯಂತ ಪ್ರಾಚೀನ ಭಾಗಗಳಲ್ಲಿ ಒಂದಾದ ಬಿಳಿಕಲ್ಲಿನ (granite) ಸಭಾಮಂಟಪದ ಈಶಾನ್ಯದ ಮೂಲೆಯಲ್ಲಿ



ಬನವಾಸಿಯ ವಿಷ್ಣು ವಿಗ್ರಹದ ಭಗ್ನಾವಶೇಷ

ಆದಿ ಮಾಧವ ಎಂಬ ಹೆಸರಿನ ಒಂದು ವಿಷ್ಣುವಿನ ಮೂರ್ತಿಯಿದೆ. **ಪದ್ಮ ಪುರಾಣ ಪಾತಾಳ ಖಂಡದಲ್ಲಿಯ ಹಾಗೂ ರೂಪ ಮಂಡನದಲ್ಲಿಯ** ವಿಷ್ಣುವಿನ ಚತುರ್ವಿಂಶತಿ ರೂಪಗಳ ಲಕ್ಷಣಗಳ ಪ್ರಕಾರ ಈ ಮೂರ್ತಿಯನ್ನು ಮಾಧವನೆಂದು ಗುರುತಿಸಬಹುದು. ಶೈಲಿಯ ದೃಷ್ಟಿಯಿಂದ ಇದು ೮ ನೇ ಶತಮಾನ ಅಂತ್ಯ ಇಲ್ಲವೆ ೯ ನೇ ಶತಮಾನದ ಆದಿ ಭಾಗದ್ದು. ಆದರೆ ಈ ಕಾಲದ ವಿಷ್ಣು ಶಿಲ್ಪಗಳಲ್ಲಿ ಕಾಣದಂಥ ಕೆಲವು ವಿಶಿಷ್ಟ ಲಕ್ಷಣಗಳು ಇದರಲ್ಲಿವೆ. ಅಂಡಾಕಾರದ ಮಕರ ತೋರಣ, ಮಾಧವನ ಎಡ ಬಲ ಬದಿಗಳಲ್ಲಿ ಸರಸ್ವತಿ, ಲಕ್ಷ್ಮಿಯು, ಪದ್ಮಪೀಠದ, ಎಡ ಬದಿಗಳಲ್ಲಿ ದುರ್ಗೆಯು ಮತ್ತು ಮೊಣಕೈಯೂರಿ ನಮಿಸುತ್ತಿರುವ ಗರುಡನ ಶಿಲ್ಪಗಳಿವೆ. ತೋರಣದ ಮೇಲಿನ ದಶಾವತಾರಗಳಲ್ಲಿ ಮತ್ಸ್ಯ, ಕೂರ್ಮ, ವರಾಹ ಮತ್ತು ನರಸಿಂಹ ಇವುಗಳನ್ನು ಬಿಟ್ಟು ಉಳಿದೆಲ್ಲ ಅವತಾರಗಳ ರೂಪಣವು ಒಂದೇ ಮಾದರಿಯದು : ಈ ಲಕ್ಷಣಗಳು ಬಾದಾಮಿ ಚಾಲುಕ್ಯ–ವಿಜಯನಗರ ಕಾಲದ ವರೆಗಿನ ಯಾವುದೇ ವಿಷ್ಣು ಶಿಲ್ಪ ಮಾದರಿಗಳಲ್ಲಿಲ್ಲ. ಮುಖ್ಯವಾಗಿ ಲಕ್ಷ್ಮಿ, ಸರಸ್ವತಿ ಮತ್ತು ದುರ್ಗಾ ಇವರನ್ನು ತೋರಿಸಿರುವುದು ಗಮನಾರ್ಹ.

ಶೇಷಶಾಯಿ ವಿಷ್ಣುವಿನ ನಾಭಿಕಮಲದಲ್ಲಿದ್ದ ಬ್ರಹ್ಮನಿಂದ ವೇದಗಳನ್ನು ಕಸಿದು ಕೊಂಡು ಹೋದ ಮಧು–ಕೈಟಭ ರಾಕ್ಷಸರನ್ನು ದೇವಿ ಭಗವತಿಯ ಸೂಚನೆಯಂತೆ ವಿಷ್ಣುವು ಸಂಹಾರ ಮಾಡಿದ ಕಥೆಯನ್ನು ಲಕ್ಷ್ಮಿಯೊಡನೆ ದೇವಿ ಭಗವತಿ, ಸರಸ್ವತಿಯನ್ನೂ ಸಾಂಕೇತಿಕವಾಗಿ ಈ ಮಾಧವ ರೂಪದ ವಿಷ್ಣುಮೂರ್ತಿಯಲ್ಲಿ ತೋರಿಸಿರಬಹುದು. ಮಾಧವ ಎಂಬ ಶಬ್ದಕ್ಕೆ (ಮಾ = ಲಕ್ಷ್ಮಿ, ಧವ = ಪತಿ) ಲಕ್ಷ್ಮಿಯ ಪತಿ ಎಂಬ ಅರ್ಥವಲ್ಲದೆ ಮಧು ಎಂಬ ರಾಕ್ಷಸನನ್ನು ಸಂಹಾರ ಮಾಡಿದವನು ಎಂದು ಮತ್ತೊಂದು ಅರ್ಥವಿದೆ.

ಈ ಸಂದರ್ಭದಲ್ಲಿ ಈ ಕಥೆಯ ಮತ್ತೊಂದು ಅಂಶ ಗಮನಾರ್ಹ. ಮಧು ರಾಕ್ಷಸನ ಗಟ್ಟಿಯಾದ ಮೇಧಸ್ಸೆ ಈ ಭೂಮಿಯೆಂದು, ಆದ್ದರಿಂದ ಈ ಭೂಮಿಗೆ "ಮೇದಿನೀ" ಎಂಬ ಹೆಸರು ಬಂದಿತು. ಈ ಪೌರಾಣಿಕ ಕಥೆಯು ವಿಶೇಷವಾಗಿ ಈ ಪ್ರದೇಶದಲ್ಲಿ ಪ್ರಾಚೀನ ಆಳರಸರಿಗೆ ಪ್ರಿಯವಾಗಿದ್ದುದರಿಂದಲೊ ಏನೋ ಈ ಪ್ರದೇಶದಲ್ಲಿ "ಮೇದಿನೀ" ಎಂಬ ಹೆಸರಿನ ಊರು (ಕುಮಠ ತಾ: ಕನ್ನಡಜಿಲ್ಲೆ) ಮಧು ರಾಕ್ಷಸನನ್ನು ಸಂಹಾರ ಮಾಡಿ ಈ ಭೂಮಿಯ ಸೃಷ್ಟಿಗೆ ಕಾರಣನಾದ ವಿಷ್ಣುವಿನ ಮಾಧವ ರೂಪವು ಇಲ್ಲಿ ವಿಶೇಷವಾಗಿರುವಂತೆ ಕಾಣುತ್ತದೆ. ಬನವಾಸಿಯಲ್ಲದೆ ಸುಂಕೇರಿಯಲ್ಲಿಯೂ ಪ್ರಾಚೀನ ಕಾಲದ ಮಾಧವ ರೂಪದ ವಿಷ್ಣು ಮೂರ್ತಿಯಿದೆ (ಸುಂದರ: ೧೯೯೦). ಈ ಪ್ರದೇಶದಲ್ಲಿಯ ಕುಪ್ಪಗದ್ದೆ, ಅರಗೆ ಮೊದಲಾದ ಸ್ಥಳಗಳಲ್ಲಿ ೧೬ನೇ ಶತಮಾನದ ಮಾಧವನ ದೇವಾಲಯಗಳಿವೆ.

ಬನವಾಸಿ ಮೂರ್ತಿಯ ಸ್ಥಳೀಯ ಹೆಸರು **ಆದಿಮಾಧವ ಅರ್ಥಗರ್ಭಿತ.** ಈ ಮೂರ್ತಿಯ (ಬಾದಾಮಿ ಚಾಲುಕ್ಯ –ರಾಷ್ಟ್ರಕೂಟ) ಕಾಲದ ವಿಷ್ಣುಮೂರ್ತಿಗಳು ಬಾದಾಮಿ - ಐಹೊಳೆ ಪ್ರದೇಶದಲ್ಲಿ ಹಲವಾರು ಇವೆ. ಮತ್ತು ಬನವಾಸಿಯು ಚಾಲುಕ್ಯ ರಾಷ್ಟ್ರಕೂಟ ಆಡಳಿತಕ್ಕೆ ಒಳಪಟ್ಟಿತ್ತು. ಒಂದು ವೇಳೆ ಈ ಮೂರ್ತಿಯೇ ಇಲ್ಲಿಯ ಪ್ರಪ್ರಥಮ ಈ ಕಾಲದ ಮಾಧವಮೂರ್ತಿಯಾಗಿದ್ದರೆ ಇದರಲ್ಲಿ ಮೇಲೆ ಹೇಳಿದ ವಿಶಿಷ್ಟ ಲಕ್ಷಣಗಳಿರುತ್ತಿರಲಿಲ್ಲ. ಆದ್ದರಿಂದ ಇದಕ್ಕೂ ಮೊದಲು ಅಂದರೆ ಬಾದಾಮಿ ಚಾಲುಕ್ಯ ಕಾಲಕ್ಕೂ ಪೂರ್ವದಲ್ಲಿ ವಿಶಿಷ್ಟ ಲಕ್ಷಣಗಳಿಂದ ಕೂಡಿದ ಒಂದು ಮಾಧವಮೂರ್ತಿಯಿದ್ದಿರಬೇಕು. ಸ್ತಂಭಶಾಸನದ ವಿಷ್ಣುಸ್ತುತಿಯು **"...ಜ್ಯೋತಿರ್ಮಯಂ ಬ್ರಹ್ಮವಿದಾಂ ಶರಣ್ಯಂ. ವಿಶ್ವಸ್ಯಕರ್ತಾರಂ ಅನೇಕ ರೂಪಂ, ವಿಭುಂ, ಪತಿಂ ಸ್ಥಾವರಜಂಗಮಾನಾಂ, ವಿಷ್ಣುನ್ನಮಸ್ಯಾಮಿ...."** ಈ ಮೂರ್ತಿಯ ವಿಶಿಷ್ಟ ಲಕ್ಷಣಗಳನ್ನು ಸೂಚಿಸುವಂತಿದೆ. ಕಾರಣಾಂತರದಿಂದ ಅದು ಭಗ್ನವಾಯಿತೇನೊ, ಅದರಂತೆ ಮತ್ತೊಂದು ಮೂರ್ತಿಯನ್ನು ಮಾಡಿಸಿದುದರಿಂದಲೇ ವಿಶಿಷ್ಟ ಲಕ್ಷಣಗಳು ಅದರಲ್ಲಿದ್ದು ಮೊದಲಿನ ವಿಷ್ಣುವಿ (ಮಾಧವ)ನ ಮೂರ್ತಿಯ ಪ್ರತಿರೂಪವಾದ ಇದನ್ನೆ ಮೃಗೇಶವರ್ಮನ ಶಾಸನವುಳ್ಳ (ಧ್ವಜ) ಸ್ತಂಭ ಹತ್ತಿರವಿದ್ದ ದೇವಾಲಯದಲ್ಲಿ ಪ್ರತಿಷ್ಠಾಪಿಸಿರುವ ಸಾಧ್ಯತೆಯಿದೆ. ಕ್ರಮೇಣ ಅದನ್ನೆ ಆದಿಮಾಧವನೆಂದು ರೂಢಿಯಲ್ಲಿ ಕರೆಯುತ್ತಾ ಬಂದಿರಬೇಕು. ಕಾಲಾಂತರದಲ್ಲಿ ಈ ದೇವಾಲಯವನ್ನು ಸರಿಯಾಗಿ ನೋಡಿಕೊಳ್ಳುವವರಿಲ್ಲದಿದ್ದುದರಿಂದ ಇಲ್ಲಿಯ ಮೂರ್ತಿಯನ್ನು ಮಧುಕೇಶ್ವರ ದೇವಾಲಯಕ್ಕೆ ತಂದಿಡಲಾಯಿತೆಂದು ಕಾಣುತ್ತದೆ. ಸಕಾರಣವಾಗಿ ಸ್ವಲ್ಪ ಹಿಗ್ಗಿಸಿದ ಈ ದೀರ್ಘ ವಿವೇಚನೆಯ ಹಿನ್ನೆಲೆಯಲ್ಲಿ ಮೇಲೆ ವಿವರಿಸಿದ ಪ್ರಾಚೀನ ಚಕ್ರಧಾರಿ ಹಸ್ತವು ಈ ಮುಂಭಾಗದಲ್ಲಿ ವಿಷ್ಣು ಸ್ತುತಿಯಲ್ಲಿ ಪ್ರಾರಂಭವಾದ ಶಾಸನವುಳ್ಳ ಸ್ತಂಭವಿದ್ದ ದೇವಾಲಯದ ಮೂಲ ಮಾಧವ ಮೂರ್ತಿಯ ಭಗ್ನಭಾಗವೆಂದು ನನ್ನ ಸಮಂಜಸವಾದ ಅನುಮಾನ.

ಆದ್ದರಿಂದ ಇದು ಗಮನ ಸೆಳೆಯುವಂಥ ಭಗ್ನಾವಶೇಷವಲ್ಲದಿದ್ದರೂ ಗಣನೀಯವಾಗಿ ಮಹತ್ವದ್ದೆಂದೇ ಹೇಳಬಹುದು. ಬನವಾಸಿಯಲ್ಲಿಯ ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆಯ ಸ್ಥಳೀಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿ ಇಟ್ಟ ಈ ಪುರಾತತ್ವ ಅವಶೇಷಗಳನ್ನು ಅಧ್ಯಯನ ಮಾಡಲು, ಛಾಯಾಚಿತ್ರಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಿದ ಪುರಾತತ್ವ ಇಲಾಖೆಗೂ ಸಹಾಯ ಮಾಡಿದ ಇಲಾಖೆಯ ಅಧಿಕಾರಿಗಳಾದ ಶ್ರೀ ಕೆ.ಪಿ. ಪೂಣಚ್ಚ ಮತ್ತು ಸ್ಥಳೀಯ ಸಿಬ್ಬಂದಿ ವರ್ಗದವರಿಗೂ, ನನ್ನ ಲೇಖನದ ಪ್ರತಿಯನ್ನು ಬರೆದುಕೊಟ್ಟ ಶ್ರೀಮತಿ ಭಾಗ್ಯಲಕ್ಷ್ಮಿ ಸುಂದರ ಅವರಿಗೂ ಮತ್ತು ಇದರ ಬೆರಳಚ್ಚು ಪ್ರತಿಯನ್ನು ಅಂದವಾಗಿ ಮಾಡಿಕೊಟ್ಟ ಶ್ರೀ ಗಿರೀಶ ಕುಲಕರ್ಣಿಯವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

೧. ನರಸಿಂಹಮೂರ್ತಿ, ಎ. ವಿ. ಮತ್ತು ರಘುನಾಥ ಭಟ್, ಎಚ್. ಆರ್: ೧೯೭೪: ''ಬನವಾಸಿ ಇನಸ್ಕ್ರಿಪ್ಸನ್ಸ ಆಫ್ ಶಿವಸಿರಿ ಪುಳು-ಮಾವಿ'' **ಜರ್ನಲ್ ಆಫ್ ದಿ ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ** ಸಂ. ೧, ಮೈಸೂರು.

೨. ಗೋಪಾಲ, ಬಿ. ಆರ್; ೧೯೮೫, **ಕಾರ್ಪಸ ಆಫ್ ಕದಂಬ ಇನಸ್ಕ್ರಿಪ್ಸನ್ಸ** ಸಂ. ೧ **ಕದಂಬ ಇನಸ್ಟಿಟ್ಯೂಟ ಆಫ್ ಕಲ್ಚರಲ್ ಸ್ಟಡೀಸ್** (೦), ಸಿರ್ಸಿ (ಉತ್ತರಕನ್ನಡ).

೩. ಐ ಎ ಆರ್ : ಇಂಡಿಯನ್ ಆರ್ಕಿಯಾಲಜಿ, ಎ ರಿವ್ಯೂ, ಕೇಂದ್ರ ಸರ್ಕಾರದ ಪುರಾತತ್ವ ಸರ್ವೇಕ್ಷಣ ಇಲಾಖೆಯ ವಾರ್ಷಿಕ ವರದಿ

೪. ಶೇಷಾದ್ರಿ, ಎಂ: ೧೯೭೦-೭೧, ''ಆ್ಯನ್ ಆ್ಯಪಸೈಡಲ್ ಬ್ರಿಕ್‌ಲ್ ಟೆಂಪಲ್ ಆ್ಯಟ ಬನವಾಸಿ'' **ಪುರಾತತ್ವ** ಸಂ.೪, ಇಂಡಿಯನ್ ಆರ್ಕಿಯಾಲಾಜಿಕಲ್ ಸೊಸೈಟಿ, ದೆಹಲಿ.

೫. ಸುಂದರ, ಅ. ೧೯೭೯, ''ಸಮ್ ನೋಟ ವರ್ದಿ ಆ್ಯಂಟಿಕ್ವಿಂಟೀಸ ಆಫ್ ಬನವಾಸಿ ಏರಿಯಾ'' **ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ** ಸಂ. LXX ಸಂ ೩, ಮಿಥಿಕ್ ಸೊಸೈಟಿ, ಬೆಂಗಳೂರು.

೬. ಸುಂದರ, ಅ. ೧೯೮೯: ''ಬನವಾಸಿಯ ಕೆಲವು ಅಪೂರ್ವ ಪ್ರಾಚೀನ ಶಿಲ್ಪಗಳು'' **ಕರ್ನಾಟಕ ಭಾರತಿ** ಸಂ. ೨೧, ಸಂ. ೩-೪, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಸುಂದರ, ಅ. ೧೯೯೦ : ''ಸಿದ್ಧರ ಮತ್ತು ಸುಂಕೇರಿ ಗ್ರಾಮಗಳಲ್ಲಿಯ ಎರಡು ಅಪರೂಪದ ಶಿಲಾಮೂರ್ತಿಗಳು'' **ಕರ್ನಾಟಕ ಭಾರತಿ** ಸಂ. ೨೨, ಸಂ. ೩, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**

ಕ್ವಾಟಿ ಜಕ್ಕವ್ವನ ಕೋಲುಪದ

–ಸಂ. ಬಿ. ಪಿ. ಪಾಟೀಲ

ವಿಜಾಪುರ ಜಿಲ್ಲೆಯ ಹಲಸಂಗಿ ಗ್ರಾಮದ ಕೋಟಿ ಕಟ್ಟಿಸುವಾಗ ಮಾದಿಗ ಜಕ್ಕವ್ವಳನ್ನು ಬಲಿಕೊಟ್ಟ ಕಥೆಯೇ ಈ ಕೋಲು ಪದದ ಕಥಾವಸ್ತು. ಸುಮಾರು ಮುನ್ನೂರು ವರ್ಷಗಳ ಹಿಂದೆ ಹಲಸಂಗಿಯು ವಿಜಾಪುರದ ಆದಿಲ್‌ಶಾಹಿಯ ಆಳ್ವಿಕೆಗೆ ಒಳಪಟ್ಟಿದ್ದಿತ್ತು. ಜಕ್ಕವ್ವ ಹುಟ್ಟಿದ್ದು ಹಲಸಂಗಿ ಗ್ರಾಮದಲ್ಲಿ. ಇವಳ ಜನನದ ವಾರ್ತೆ ಕೇಳಿದ ಕೊಡಲೇ ಅಲ್ಲಿಯ ಹೊಲೆ ಮುದುಕಿ "ಹೆಣ್ಣು ಹುಟ್ಟಿತು ಯಾಕೆ ಮಣ್ಣು" ಎಂದಳು. ಆದರೆ ಹಡೆದ ತಾಯಿ ''ಹೆಣ್ಣು ಹೊನ್ನು, ಕಣ್ಣಿದ್ರೆ ನೋಡಿ" ಎಂದು ಮಾರ್ಮಿಕವಾಗಿ ನುಡಿದಳು. ಮಗು ಬೆಳೆದು, ದೊಡ್ಡವಳಾದಳು. ವಾರಿಗೆಯ ಪುರುಷನೊಂದಿಗೆ ಮದುವೆಯಾಗಿ ಬಸುರಿಯಾದಳು.

ವಿಜಾಪುರದ ಆದಿಲ್‌ಶಾಹಿಯ ವಜೀರನೊಬ್ಬ ಹಲಸಂಗಿಯನ್ನು ಬೆಳೆಸಲು ಸಂಕಲ್ಪಿಸಿ, ಕೋಟೆಕಟ್ಟಿಸಲು ಅಣಿಯಾದ. ಆಗ ಹಲಸಂಗಿಯ ಮುದುಕನೊಬ್ಬ ವಜೀರನಲ್ಲಿಗೆ ಬಂದು, ಸಲಹೆಸೂಚಿಸಿದ. ಕೋಟೆಕಟ್ಟಿಸುವಾಗ ''ಒಳಮನಿಯೊಳು ಒಬ್ಬಳಿರಬೇಕು. ಚೊಚ್ಚಿಲ ಬಸಿರ್‍ಹೆಣ್ಣು, ಇಚ್ಛೇಲಿ ಬರಬೇಕು. ಮುಚ್ಚಿದ ಕೋಟ್ಯಾಗ ಇರಬೇಕು" ಈ ಮುದುಕನ ಸಲಹೆಯನ್ನು ವಜೀರ ಹಲಸಂಗಿಯಲ್ಲಿ ಡಂಗುರ ಹೊಯ್ಸಿಸಿ ಪ್ರಕಟಪಡಿಸಿದ. ಆದರೆ ಊರಲ್ಲಿ ಬಸುರಿಯಾದ ಹೆಣ್ಣುಮಕ್ಕಳು ತಾವು ಬಸಿರಿಲ್ಲವೆಂದು ಹೇಳಿದರು. ಬ್ರಾಹ್ಮಣ ಕುಲದ ಹೆಣ್ಣು ಮಗಳೊಬ್ಬಳು ಚೊಚ್ಚಿಲ ಬಸಿರಿದ್ದಳು. ಇದನ್ನು ತಿಳಿದ ವಜೀರ ಅವರ ಮನೆಯ ಮುಂದೆ ಡಂಗುರ ಹೊಯ್ಸಿದ. ಆದರೆ ಆ ಹೆಣ್ಣು ಮಗಳ ಮಾವ ತನ್ನ ಸೊಸೆಯನ್ನು ಈ ಅಪಾಯದಿಂದ ತಪ್ಪಿಸಲು ತನ್ನ ಮನೆಯ ಕದವನ್ನು ಗಟ್ಟಿಯಾಗಿ ಹಾಕಿಕೊಂಡ. ವಜೀರನು ಅವರಿಗೆ ಹೊಲ, ತೋಟಗಳ ಜಹಗೀರು ಕೊಡುವುದಾಗಿ ಆಶೆ ತೋರಿಸಿದ. ಆದರೆ ಅವರು ಅದಕ್ಕೆ ಆಶೆ ಮಾಡದೆ ಊರುಬಿಟ್ಟು ಹೊರಟುಹೋದರು.

ಇದನ್ನು ತಿಳಿದ ವಜೀರ ಚಿಂತೆಗೊಳಗಾದರೂ ಕೋಟಿ ಕಟ್ಟಲು ಆಜ್ಞೆಮಾಡಿದ. ಕೋಟಿ ಕಟ್ಟಲು ಪ್ರಾರಂಭಿಸಿದರು. ಆದರೆ ಕೋಟೆಯ ಕಲ್ಲು ನಿಲ್ಲಲಿಲ್ಲ. ಇದರಿಂದ ಗೋಡೆ ಕಟ್ಟುವವರಿಗೆ ಅಚ್ಚರಿಯಾಯಿತು. ವಜೀರ "ಕೋಟಿ ಕಟ್ಟುವದು ಸಾಕು. ಅಲ್ಲಾ ಬಯಸಿಲ್ಲಾ'' ಎಂದ. ಅಷ್ಟರಲ್ಲಿ ಊರ ವ್ಯಕ್ತಿಯೊಬ್ಬನಿಂದ ಮಾದಿಗ ಜಕ್ಕವ್ವ ಬಸುರಿ ಇದ್ದಾಳೆಂದು ಸುದ್ದಿ ಬಂದಿತು. ಆದರೆ ವಜೀರ ಕಾರಿಯ ಕಾಯಿ ಹಿಚುಕಿ ಫಲವೇನು ? ಎಂದ. ಆದರೆ ಗ್ರಾಮಸ್ಥನು ವಜೀರನಿಗೆ ತಿಳಿ ಹೇಳಿದ. ಮಾದಿಗ

ಮುದ್ದಣ್ಣನನ್ನು ಕರೆಯಕಳಿಸಿದ, ಮುದ್ದಣ್ಣ ಅಂಜುತ್ತ ಅಲ್ಲಿಗೆ ಬಂದ. ವಜೀರ ಅವನನ್ನು ಕೋಟೆಗೆ ಜಕ್ಕವ್ವನನ್ನು ಬಲಿಯಾಗಿ ಕೊಡಲು ಕೇಳಿದ. ಮುದ್ದಣ್ಣ ಕಸಿವಿಸಿಯಿಂದಲೇ ತನ್ನ ಸೊಸೆಯನ್ನು ಕೊಡಲು ಒಪ್ಪಿಕೊಂಡ. ಇದನ್ನರಿತ ಜಕ್ಕವ್ವ ನಕ್ಕು ''ನಾನೊಪ್ಪಿ ಹೋಗಗಿೀನಿ ನಿಂತದರೆ ನಿಲ್ಲಲಿ ಕೋಟೆ" ಎಂದು ಮಾವನಿಗೆ ಧೈರ್ಯ ಹೇಳುತ್ತಾಳೆ. ಜಕ್ಕವ್ವನಿಗೆ ಭೂದೇವಿ ಕನಸಿನಲ್ಲಿ ಬಂದು "ಬಾ'' ಎಂದು ಕರೆಯುತ್ತಾಳೆ. ಆಗ ಜಕ್ಕವ್ವ ತನ್ನ ಇಂಗಿತವನ್ನು ಮಾವನಿಗೆ ಹೇಳಿದಳು. ಇದನ್ನು ಕೇಳಿ ಗಾಬರಿಗೊಂಡ ಮಾವಬೇಡವೆನ್ನುತ್ತಾನೆ. ಆಗ ಜಕ್ಕವ್ವ "ಭೂದೇವಿಯ ಆಜ್ಞೆಯನ್ನು ಮೀರಬಾರದು ಮಾವಾ''ಎಂದು ನುಡಿಯುತ್ತಾಳೆ ನಿನ್ನ ಮಗನಿಗೆ ಇನ್ನೊಂದು ಮದುವೆ ಮಾಡೆಂದು ಅವನಿಗೆ ಸಲಹೆ ಮಾಡುತ್ತಾಳೆ. ನನಗೆ ಸಾವಿನ ಅಂಜಿಕೆಯಿಲ್ಲ. ಕತ್ತಲ ಮನೆಯ ಭಯವಿಲ್ಲ. ಭೂದೇವಿಯ ಹತ್ತಿರ ಇದ್ದೇ ಹೆರಿಗೆ ಮಾಡಿಸಿಕೊಳ್ಳುತ್ತೇನೆ. ನನ್ನ ಮಗುವನ್ನು ಅವಳು ಸಾಕುವಳೆಂದು ಜಕ್ಕವ್ವ ಧೈರ್ಯದಿಂದ ಹೇಳುತ್ತಾಳೆ. ಈ ಮಾತನ್ನು ಕೇಳಿದ ಸರಕಾರ ಸಂತೋಷಗೊಳ್ಳುತ್ತಾನೆ.

ಆ ಮೇಲೆ ವಜೀರ ಅತ್ಯಂತ ಉತ್ಸಾಹದಿಂದ ಕೋಟೆ ಕಟ್ಟಿಸಲು ಪ್ರಾರಂಭಿಸಿದ. ಜಕ್ಕವ್ವನಿಗೆ ದಿನ ತುಂಬಿದವು. ಊರ ಜನರು ಬಲಿ ಹೆಣ್ಣಿಗೆ ಆರುತಿ ಮಾಡಿದರು. ಕಣ್ಣೀರಿಡುತ್ತ ಜಕ್ಕವ್ವ ಪತಿಗೆ ನಮಸ್ಕರಿಸಿದಳು. ಮಾವನಿಗೆ 'ನನಗೊಬ್ಬಳು ಸವತಿ ಕರೆಸೆಂದು ಹೇಳಿ, ಹೆಜ್ಜೆಹಾಕುತ್ತ ಮೇಲೆ ಕಟ್ಟಿರಿ ಕ್ಯಾಟೆ, ಬಾಳಿರಿ ಲೆಸಾಗಿ ತಾಳಿರಿ ನನ್ನ ವಿರಹ' ಎಂದು ನುಡಿಯುತ್ತ ಮುನ್ನಡೆದಳು. ಕೋಟೆ ಕಟ್ಟಲ್ಪಟ್ಟಿತು. ಮುಂದೆ ಜಕ್ಕವ್ವ ನರಸಿಂಹ, ಹಿರಿಯೊಡೆಯ ಮಕ್ಕಳಿಗೆ ಜನ್ಮ ನೀಡಿದಳು. ಈ ಮಕ್ಕಳನ್ನು ಬೆಳಗಿನ ಜಾವ ತೊಟ್ಟಿಲಕ್ಕೆ ಹಾಕಿ ತೂಗುತ್ತ ಹಾಡುವದರೊಂದಿಗೆ ಸರ್ವರನ್ನು ಎಚ್ಚರಿಸುತ್ತಿದ್ದಳು. ಜಕ್ಕವ್ವನ ಈ ಹಾಡನ್ನು ಆಲಿಸುತ್ತಿದ್ದ ಸೋಮಾರಿ ಸೊಸೆಯೊಬ್ಬಳು ಬೆಳಗಿನ ಜಾವ ಏಳದೆ ಶಾಪಕೊಟ್ಟಳು. ಅವಳ ಶಾಪಕ್ಕೆ ಜಕ್ಕವ್ವ ತನ್ನ ಎರಡೂ ಮಕ್ಕಳನ್ನು ಬಚ್ಚಲ ಮೋರಿಯಲ್ಲಿ ತುರುಕಿ ಪ್ರಾಣಬಿಡುತ್ತಾಳೆ. ಕಾಲ ಉರುಳಿತು. ಭೂದೇವಿ ವಜೀರನ ಕನಸಿನಲ್ಲಿ ಬಂದು ಕೋಟೆಯ ಒಳ ಹೊರಗೆ ದೇವರಿಬ್ಬರು ಒಡಮೂಡಿದ್ದಾರೆ ಒಳಗಿನ ದೇವರು ನರಸಿಂಹ, ಹೊರಗಿನ ದೇವರು ಹಿರಿಯೊಡೆಯ. ಹರಿಜನರಿಗೆ ಹೊರಗಿನ ದೇವರು, ಉಳಿದವರಿಗೆ ಒಳಗಿನ ದೇವರು, ಇವರನ್ನು ಅರ್ಚಿಸಿ ಎಂದು ಹೇಳಿದಳು. ಈ ಸಂಗತಿ ಊರ ಜನರಿಗೆ ತಲುಪುತ್ತದೆ. ಅಂದಿನಿಂದ ಊರಿನವರೆಲ್ಲರೂ ಜಕ್ಕವ್ವನನ್ನು ಪೂಜಿಸಲು ಆರಂಭಿಸುತ್ತಾರೆ ಹಲಸಂಗಿಯಲ್ಲಿ ಇಂದಿಗೂ ಜಾತಿಭೇದ ಮರೆತು ಎಲ್ಲರೂ ಈ ದೇವಿಯನ್ನು ಆರಾಧಿಸುತ್ತಾರೆ. ಹೀಗೆ ಪರಹಿತಕ್ಕಾಗಿ ಜಕ್ಕವ್ವ ತನ್ನ ಬಲಿದಾನದ ಮೂಲಕ ಗ್ರಾಮದೇವತೆಯಾಗಿ ಪರಿಣಮಿಸಿದಳು. ದೇವತ್ವಕ್ಕೇರಿದ ಜಕ್ಕವ್ವಳನ್ನು ಕುರಿತ ಈ ಕೋಲುಪದ ಹೀಗಿದೆ:

ಜಕ್ಕವ್ವ ಜಾಣೆಯ ಕಥೆಯೊಂದು ಹೇಳ್ತೀನಿ
ದಕ್ಕಾಗಿ ಕೇಳಿರೊ ಜನರೆಲ್ಲ ಕೋಲ ಜನವೆಲ್ಲ ಕೋಲ.

ಹೊಲೆಹೆಣ್ಣು ಆದರೂ ಬಲಿಯಾಗಿ ಬಂದಾಳು
ಹಲಸಂಗಿ ಕ್ವಾಟೆಯ ಬಾಯಿಗೆ ಕೋಲ.

ಬಸುರಾದ ಎಳೆಹೆಣ್ಣು ಕ್ವಾಟೆಯ ಬುಡದಾಗ
ಹಸಗೂಸು ಹಡದೆತ್ತಿ ಹರಿಸ್ಯಾಳ ಕೋಲ.

ಹಸನಾದ ಸಂಸಾರ ಹಾಡಾಡ್ತ ದಾಟಿಸಿ
ಸಿಸು ಕೂಡ ಶಿವನೊಳಗ ಕೂಡ್ಯಾಳ ಕೋಲ.

ಮುನ್ನೂರು ವರ್ಷದ ಹಳೆಯೂರು ಹಲಸಂಗಿ
ಎಂದಿಗೂ ಮರೆಯಲಾಗದ ಹಳ್ಳಿ ಕೋಲ.

ಆದಿಲ್‌ಶಾಹಿಯ ಅಮಲ ದಾನಿಯೊಳಗೊರಗ
ಆದಿಯ ಮಾಡೀತು ಹಲಸಂಗಿ ಕೋಲ.

ವಿಜಾಪುರಲಿಂದೊಬ್ಬ ಸರದಾರ ವಜೀರ
ಹಸಿವ್ಯಾಗಿ ಬಾಯಾರಿ ಬರಲಾಗ ಕೋಲ.

ಹೆಂಗರುಳ ಹಡಿದವ್ವ ಸಂಗಿಯಂಬಾಕ್ಯಾವಗ
ಬಂಗಾರದೂಟಕ್ಕೆ ಹಾಕ್ಯಾಳ ಕೋಲ.

ಬಲುಮೆಚ್ಚಿ ವಜೀರ ಕುಲುಕುಲು ನಗಿಯಿಂದ
ಬಲಕವಳ ಕರಪ್ಪಿಂಗ ಹೇಳ್ಯಾನ ಕೋಲ.

ಹಲ್ಲುಹಾದರ ಸಂಗಿ ಕಳ್ಳು ಬಲು ಚೆಲುವೈತಿ
ಹಲಸಂಗಿಯೆಂದು ಹೆಸರಿರಲಿ ಕೋಲ.

ಹಲಸಂಗಿಯೆಂದು ನಿನ್ನೂರ ಕರಿಬೇಕು
ಬಲ್ಲವರೆಲ್ಲರೂ ಧರಿವ್ಯಾಗ ಕೋಲ.

ಹಲ್ಲು ಸಂಗಿಯು ಈಗ ಹಲಸಂಗಿ ಆಗೇದ
ಹಲವು ಸಂಗಿಗಳಿಂದ ಕೂಡ್ಯಾದ ಕೋಲ.

ನವಿಲ ಕೂಗಿಗೆ ಮೆಚ್ಚಿ ಮರುಳಾದ ಹಲಸಂಗಿ
ಸವೆದವರು ಸರಿಯದ ಕಲ್ಲೂರು ಕೋಲ.

ಈ ಊರ ಹೊರಗಿನ ಹೊಲೆ ಓಣಿ ಮನಿಯಾಗ
ಸಾವಿಗಂಜದ ಜಾಣಿ ಹುಟ್ಯಾಳ ಕೋಲ.

ತಕ್ಕ ತೊಟ್ಟಿಲ ಹಾಹತ್ತತ್ತು ಕೊಡಸ್ಥೆಣ್ಣು
ಜಕ್ಕವ್ವ ಎಂದೊದರಿ ಕೂಗ್ಯಾರ ಕೋಲ.

ಹೆಣ್ಣು ಹುಟ್ಟಿತು ಯಾಕ ಮಣ್ಣೆಂದು ಹೊಲೆ ಮುದಿಕಿ
ಸಣ್ಣಾಗಿ ಬಯ್ದಳು ಕೂಸಿಗೆ ಕೋಲ.

ಹೆಣ್ಣಾದರೇನವ್ವ ಹೋನ್ನಾದರೂ ಆದೀತು
ಕಣ್ಣಿದ್ರ ನೋಡೆಂದಳು ಹಡೆದಾಕಿ ಕೋಲ.

ಕೂಸಾಗಿ ಅತ್ತಾಳು ಮೊಲೆಹಾಲು ಕುಡಿದಾಳು
ಲೇಸಾಗಿ ಬೆಳೆದಾಳು ಜಕ್ಕವ ಕೋಲ.

ನಡೆದಾಳು ಓಣ್ಯಾಗ ಹೊಲಸು ಕೊಂಚಿಗೆ ತೊಟ್ಟು
ಹುಡಿಯೊಳಗೆ ಹೂಳಟ್ಟ ಹರಳಂತೆ ಕೋಲ.

ಬಡದಾಟ ಮಾಡ್ಯಾಳ್ಕ ಕಾಲೆಡವಿ ಬಿದ್ದಾಳ
ಗೆಣತಿಯ ಗೊಂಬಿಯ ಕಸಿದಾಳ ಕೋಲ.

ಕೂಸಾಗಿ ಇದ್ದಾಗ ಬಳಗಿದ್ದ ಕಿಡಿರಾಶಿ
ಸಾಸಿವಿ ಕಾಳಷ್ಟು ಕಾಣದು ಕೋಲ.

ಮುಂದ್ಮುಂದ ಹುಡಗ್ತೀನಿ ಹಚ್ಚದ ಬಳಗೆsನ
ಚೆಂದಾದ ಗಿಡಕೊಯ್ದು ಕೂಡಸ್ಯಾರ ಕೋಲ.

ಹರೆಯದ ಕೊಡೆತುಂಬಿ ತುಂಬಿರಲು ಜಕ್ಕವ್ವ
ವಾರ್ತೀಗಿ ಪುರುಷನ ಕೂಡ್ಯಾಳ ಕೋಲ.

ದೇವರ ನೇಮವು ಯಾರಿಗೂ ತಿಳಿಯದು
ಜೀವದ ಬೀಜವ ತಲೆದಾಳ ಕೋಲ.

ಜಕ್ಕವ್ವ ಚೊಚ್ಚಿಲ ಬಸಿರೆಂದು ಕೇರ್ಯಾಗ
ಹಿಗ್ಗಿಗ್ಗಿ ಹೇಳ್ಯಾರ ಗೆಳತೇರ ಕೋಲ.

ಊರ ಬಿಟ್ಟನು ಗಂಡ ನಾಚಿಗಿಡ ಕಡಕೋತ
ಕೋರಿ ಬೆಳೆದಳು ಬಸರ ಜಕ್ಕವ್ವ ಕೋಲ.

ಬಚ್ಚ ಬಾಯಿಯ ಮಾವ ನಿಚ್ಚಮಲ್ಲಿಗೆ ತಂದು
ಮುಡಿಯೆಂದು ಕೊಟ್ಟಾನು ಬಸರಿಗೆ ಕೋಲ.

ಇರತಿರತ ವಜೀರ ಜಂದ್ರೀನ ಮನದಾಗ
ತರಬೇಕು ಈ ಊರ ಮ್ಯಾಲೆಂದು ಕೋಲ.

ಚಚ್ಚೌಕ ಕ್ವಾಟೇಯು ಗಟ್ಯಾಗಿ ಕಟ್ಟೇಸಿ
ಇಚ್ಛೇಲಿ ಇರಬೇಕು ಎಂದಾನು ಕೋಲ.

ಮನದಾಗ ಮೂಡಲು ಕ್ಷಣದಾಗ ಮಾಡಾವ
ಘನಕಟ್ಟುಗಾರರನ ಕರಿಸ್ಯಾನ ಕೋಲ.

ಝಣ ಝಣ ನಾಣ್ಯವ ಬಾರಿಸಿ ಅವರಿದಿರು
ಖಣ ಖಣ ಕಲ್ಲು ಕಟ್ಟರೆಂದ ಕೋಲ.

ಸುತ್ತಾಗಿ ಪಾಯವ ಗುತ್ತಾಗಿ ಹಾಕಲು
ಕೆತ್ತಿದರು ನೆಲವನು ಗಂಡಾಳು ಕೋಲ.

ಇತ್ತಾರ ವಜೀರ ಕನಸೀಲಿ ಮುದುಕೊಬ್ಬ
ಹತ್ತೀನ ಬಂದ್ಹಂಗ ಹೇಳ್ಯಾನ ಕೋಲ.

ತಿಳಿದೇನೋ ಊರದೊರಿ ಕ್ವಾಟೆಯ ಕಟ್ಟಾಕ
ಒಳಮನಿಯೊಳಗೊಬ್ಬಳಿರಬೇಕು ಕೋಲ.

ಚೊಚ್ಚಿಲ ಬಸಿರ್ಹೆಣ್ಣು ಇಚ್ಛೇಲಿ ಬರಬೇಕು
ಮುಚ್ಚಿದ ಕ್ವಾಟ್ಯಾಗ ಇರಬೇಕು ಕೋಲ.

ಬಲಿಯಿಲ್ದ ಭೂದೇವಿ ಎಂದಾಗ ಭಾರವ
ತಲಿಮ್ಯಾಲ ಹೊತ್ತಾಳ ತಾಳ್ಯಾಳ ಕೋಲ.

ಇದು ಕೇಳಿ ವಜೀರ ಎದೆನಡುಗಿ ಎದ್ದಾನ
ಹದಕೆಟ್ಟು ತಂದಾಗ ಮಿಡುಕ್ಯಾನ ಕೋಲ.

ಕೆಲಸವ ಕೆಲದಿವಸ ನಿಲ್ಲಿಸಿ ಯೋಚಿಸಿ
ಬಲುಗಟ್ಟಿ ಮನವನ್ನು ಮಾಡ್ಯಾನ ಕೋಲ.

ಊರಾಗ ಡಂಗುರವ ಸಾರಾಕ ಹೇಳ್ಯಾನ
ಯಾರ್‍ಯಾರು ಬಸರ್ಹೆಣ್ಣು ಬರಲೆಂದು ಕೋಲ.

ಕ್ವಾಟೇಯು ಕಟ್ಟದರ ಹೊರಗಿನ ಹಗೆಗಳ
ಕಾಟವು ತಪ್ಪೀತು ಬರಬೇಕು ಕೋಲ.

ಡಂಗುರ ಒಬ್ಬಾಕಿ ತಂಗೆವ್ವ ಬಸರಿಲ್ಲ
ಪಾಡಿತು ಎಂದಂದು ಹಿಗ್ಗ್ಯಾಳ ಕೋಲ.

ಬಸರಿದ್ದ ಹೆಂಗಳಲಿ ಮೊದಲು ಬಸರಿಲ್ಲೆಂದು
ಸೊಸೆಯೊಬ್ಬಳು ನೊಂದು ಕುಳಿತಾಳ ಕೋಲ.

ಊರೊಳಗೆ ಆರಿಸಿ ತೆಗೆದಾರ ಒಬ್ಬಾಕಿ
ಹಾಕವಳು ಚೊಚ್ಚಿಲ ಬಸಿರ್ಹೆಣ್ಣು ಕೋಲ.

ಆಕೆಯ ಮನಿ ಮುಂದ ಡಂಗುರವ ಹೊಡಿಲಾಗ
ನಾಕೈದು ಮೊಳಹಿಂದೆ ಹಾರ್ಯಾಳ ಕೋಲ.

ಬಾಗಿಲ ಇಕ್ಕಿದನು ಮುದಕ ಮಾವ ಪುಕ್ಕ
ತಪ್ಪಿತು ಸೊಸಿಗೋಳು ಎಂದೆಂದು ಹಾರುವ
ತೆಪ್ಪಗೆ ಇರೆಂದು ವಜೀರ ಕೋಲ.

ಹೊಲ ತೋಟ ಜಾಗೀರ ಕೊಡುವೆನೋ ಹಾರುವ
ಬಲಿಯಾಗಿ ಕೊಡು ನಿನ್ನ ಸೊಸೆಯೆಂದ ಕೋಲ.

ಎದಿ ಬಡದು ಹಾರುವ ಅಂದು ಒಲ್ಲೆಯಾವುದು
ಇದೆ ಸಾಕು ಇರಲೆಂದು ಬೇಡ್ಯಾನ ಕೋಲ.

ಮರುದಿವ್ಸ ಸಂಸಾರವಲ್ಲಿಂದ ಕಿತ್ಹಾಕಿ
ಹಾರುವ ಹಾರ್ಯಾನ ಬೇರೂರ್ಗೆ ಕೋಲ.

ಇತ್ತ ಈ ವಜೀರ ಬಲಹೆಣ್ಣು ಕಾಣದೆ
ಮೆತ್ತನ್ನ ಮಾರಿಯು ಮಾಡ್ಯಾನ ಕೋಲ.

ಬಸಿರಾದ ಜೀವಂತ ಹೆಣ್ಣಾರ ಬಂದಾಳು
ಕುಸುರಿನ ಕ್ವಾಟೀಯು ಕಟ್ಟಿಂದ ಕೋಲ.

ಕಟ್ಟ್ಯಾಕ ನಿಂತಾರ ಕಲ್ಲು ನಿಲ್ಲೊಲ್ಲದ
ಗಟ್ಟ್ಯಾದ ಗಚ್ಚು ಅಳಕಾಯಿತು ಕೋಲ.

ಹುಚ್ಚ್ಯಾಗಿ ನಿಂತರು ಗ್ವಾಡೀಯು ಕಟ್ಟ್ಯೋರು
ಅಚ್ಚರಿಬಟ್ಟನು ವಜೀರ ಕೋಲ.

ಕಟ್ಟ್ಯಗಿ ಸಾಕಿನ್ನು ಅಲ್ಲಾನು ಬಯಸಿಲ್ಲ
ಇಷ್ಟ್ಯಾಡಿ ವಜೀರ ಇರುವಾಗ ಕೋಲ.

ಮಾದಿಗ ಜಕ್ಕವ್ವ ಮೊದಲು ಬಸಿರೆಂದು
ಸುದ್ದಿಯ ತಂದನು ಗ್ರಾಮಸ್ಥನು ಕೋಲ.

ಹಾರುವನೊಲ್ಲೆಂದ ಹೊಲೆಯನ್ಯಾತಕ ಬರುವ
ಕಾರಿಕಾಯಿಯ ಹಿಚುಕಿ ಫಲವೇನು ಕೋಲ.

ಹಾಗಲ್ಲ ಧೊರಿ, ನಮ್ಮ ಮಾದಿಗ ಮುದ್ದಣ್ಣ
ಲೋಕದೊಳಗೆ ಹೆಚ್ಚಿನ್ಹಾರುವ ಕೋಲ.

ತಟ್ಟಿನ ಮನಿಕಂಡು ಕರಿಸಿದ ವಜೀರ
ಜಟ್ಟಿಯು ಜಕ್ಕವ್ವ ಮಾವನ ಕೋಲ.

ದೊರಿಯಾದ ಅಪ್ಪಣೆ ಕಿರಿಯಾದ ಕೂಸಿಗೆ
ಕರಿಸಿದ ಯಾರೆಂದ ಮುದ್ದಣ್ಣ ಕೋಲ.

ಅದನಾಡಿ ಇದನಾಡಿ ವಚನವ ತಕ್ಕೊಂಡು
ಬಸರ್ಹೆಣ್ಣು ಬೇಕೆಂದ ವಜೀರ ಕೋಲ.

ಒಲ್ಲೆನ್ನಲಾರದೆ ಸೆಲ್ಲೆಯ ಮುಚಗೊಂಡ
ಒಳ್ಹೋದು ಎಂದಂದ ಒಳಗಳುತ ಕೋಲ.

ಹೆಜ್ಜೆಜ್ಜೆಗೊಂದು ಕಣ್ಣೀರ ಹನಿಹಾಕಿ
ಸಜ್ಜಿಯು ಕಾಳಾಗಿ ಮನಿಗ್ಹೋದ ಕೋಲ.

ಬಸರಿನ ಬೆಡಗೀಲಿ ಆನೀಯ ನಡಗೀಲಿ
ಮಿಸುಕಾಡುತ್ತಿದ್ದಳು ಜಕ್ಕವ್ವ ಕೋಲ.

ಇಂದು ಯಾಕೋ ಮಾವಯ್ಯ ದೊರಿ ಏನು ಅಡಿದ
ಅದು ಏನು ರಾಜ್ಯಾದ ಸೊಕ್ಕೇನು ಕೋಲ.

ಸೊಸೆ ತಾಯಿ ಮುಖನೋಡಿ ಪ್ರೀತಿಯ ಸಸಿನೋಡಿ
ಕಸಿವಿಸಿ ಬಿಡುತಿತ್ತ ಮುದ್ದಣ್ಣ ಕೋಲ.

ಸಾಕಿದೆ ನಿನ್ನೆತ್ತಿ ಕ್ವಾಟೀಯ ಕೈಯಾಗ
ಸಾಕಲು ಕೊಡು ಎಂದ ದೊರಿ ಕೇಳ ಕೋಲ.

ಜಕ್ಕವ್ವ ಝುಗ್ಗನೆ ನಗಿಯೊಂದ ನಕ್ಕಾಳು
ದುಕ್ಕಿಸುವ ಮಾವಗ ಹೇಳ್ಯಾಳ ಕೋಲ.

ಚಿಂತಿಯು ಬಿಡು ಮಾವ ನಾನೊಪ್ಪಿ ಹೊಗತೀನಿ
ನಿಂತರ ನಿಲ್ಲಲಿ ಕ್ವಾಟೆಯು ಕೋಲ.

ಭೂದೇವಿ ರಾತ್ರ್ಯಾಗ ಕನಸೀಲಿ ಬಂದೆನಗ
ಬಾಜಕ್ಕಿ ಎಂದ್ಹೇಳಿ ಕರದಾಳ ಕೋಲ.

ನೀ ಹೋಗಿ ವಜೀರ್ಗ ಜಕ್ಕವ್ವ ಬರತಾಳ
ಅವಳಿರುವ ನೆಲಮನಿ ಕಟ್ಹೇಳ ಕೋಲ.

ಮುದ್ದಣ್ಣ ಗಾಬರಿಗಣ್ಣಿಂದ ನೋಡುತ್ತ
ಇದ್ದಾಕಿ ಒಬ್ಬಾಕಿ ಬ್ಯಾಡೆಂದ ಕೋಲ.
ದೇವತಿ ಆಜ್ಞೆಯ ದಾಟಬಾರದು ಮಾವ
ದೇವತಿ ಕೊಟ್ಟರೂ ಕಡಿಮೇನು ಕೋಲ.
ನಿನ್ನ ಮಗಗಿನ್ನೊಂದು ಹೆಣ್ಣೀನ ಕೊಡಿಸ
ಚಂದಾಗಿ ಮದವೀಯ ಮಾಡಿಸು ಕೋಲ.
ಇನ್ನೊಂದು ತಿಂಗಳಿಗೆ ಇನ್ನೊಂದು ಬಸಿರ್ಹೆಣ್ಣ
ಕಣ್ಮುಂದ ಸುಳದೀತು ಚಿಂತ್ಯಾಕ ಕೋಲ.
ನನಗಿಲ್ಲ ಸಾವಿನ ಅಂಜೀಕಿ ಮಾವಯ್ಯ
ನನಗಿಲ್ಲ ಕತ್ತಲಿ ಮನಿಭಯ ಕೋಲ.
ಭೂದೇವಿ ಬದಿಲಿದ್ದು ಕೂಸಿನ ಹಡದೇನ
ಆ ದೇವಿ ಸಾಕ್ಯಾಳ ನಾ ಹೋಗ ಕೋಲ.
ದೇವತಿ ನುಡಿಯಂತೆ ಬಾಳುವೆ ಮಾಡೋದು
ಸಾವಿನ ಸಂಸಾರ ಗುಟ್ಟಲ್ಲೆ ಕೋಲ.
ಜಕ್ಕವ್ವ ಒಪ್ಪಿದ ಮಾತಲ್ಲೆ ವಜೀರ
ಕೇಳಿದ ಮನತುಂಬ ಕುಣಿದಾಡಿ ಕೋಲ.
ದಕ್ಷಿಣ ಗ್ವಾಡಿಯ ನಡುವಿನ ಬುಡದಾಗ
ಕ್ವಾಟೀಯ ಕಟ್ಟೀಸ ಹಚ್ಯಾನ ಕೋಲ.
ಮ್ಯಾಲೀನ ಭಾಗಕ್ಕ ನಾಲ್ಕು ಬೆಳಕಿಂಡಿಗಳ
ಸಾಲಾಗಿ ಇರಿಸೆಂದು ಹೇಳ್ಯಾನ ಕೋಲ.
ಕ್ವಾಟೀಯ ಮೂಲೆಗೆ ಬಚ್ಚಲವೊಂದನು
ಬಾಣಂತಿ ಜಳಕಕ್ಕ ಕಟ್ಸೆಂದ ಕೋಲ.
ಕೂಸಿಗೆ ತೊಟ್ಟಿಲ ಹಾಸಿಗೆ ಹೊರಸನು
ಹಾಸಿಲೆ ಮಾಡಿಸಿ ಇಟ್ಟಾನ ಕೋಲ.
ಅಕ್ಕಿಯ ಜ್ವಾಳನ ಬ್ಯಾಳೀಯ ಗೋದಿಽಯ
ಜಕ್ಕವ್ವ ಹೇಳುವ ತೆರನಾಗಿ ಕೇಳುತ
ಅಕ್ಕರತೆಯಿಂದಲಿ ಇಡಿಸೀದ ಕೋಲ.
ನೀರಿನ ದಸಿಯಿಂದಲಿ ಬಾವಿಯ ತೋಡಿಸಿ
ತಾಂಬ್ರದ ಪಾತ್ರೆಗಳೊಯ್ಯಿಸಿದ ಕೋಲ.

ಕಾಳಿನ ಹಿಟ್ಟಿಗೆ ಬೀಸುವ ಕಲ್ಲೊಂದು
ಕಾರಕ್ಕ ಒಳ್ಳೊಂದು ಹಾಕ್ಯಾನ ಕೋಲ.

ಭೂತಾಯಿ ಸೊಸೆಗಾಗಿ ಹೊಸ ಅತ್ತಿಮನಿಯನು
ಪಾತಾಳದೊಳಗ ಬಳಗ ಮಾಡ್ಯಾನ ಕೋಲ.

ದಿನದಾಗ ಬಿದ್ದಾವು ಜಕ್ಕವ್ವ ಜಾಣಿಗೆ
ಮನಿ ಬಿಡಲು ಎದ್ದಳು ಮಾತಾಯಿ ಕೋಲ.

ಊರಿನ ಜನರೆಲ್ಲ ಉಡಿತುಂಬ ಬಚ್ಚಿಟ್ಟು
ಆರುತಿ ಮಾಡ್ಯಾರ ಬಲಿಹೆಣ್ಣಾ ಕೋಲ.

ಗಂಡಗ ಎರ್ರಾಸ್ಯಾಳ ಕಣ್ಣೀರಲಿ ತೊಳದ್ಯಾಳ
ಚೆಂಡುಮಲ್ಲಿಗೆ ರಾಯನಡಿಗಳ ಕೋಲ.

ಮಾವ ಮುದ್ದಣ್ಣಯೆಂದಾಳ ನನಗೊಬ್ಬ
ಸವತಿಯು ಕರಿಸಣ್ಣಯೆಂದಾಳ ಕೋಲ.

ಎಲ್ಲರಿಗೂ ವಂದಿಸಿ ಬಲ್ಲಿದರಿಗೂ ಹೇಳಿದ
ಕಾಲಡಿ ಕತ್ತಲಿ ಮನಿಸೇರ ಕೋಲ.

ಮ್ಯಾಲೆ ಕಟ್ಟೇರಿ ಕ್ವಾಟಿ ಬಾಳಿರಿ ಲೇಸಾಗಿ
ತಾಳಿರಿ ನನ್ನ ವಿರಹ ಎಂದಾಳ ಕೋಲ.

ಕ್ವಾಟಿಯು ಕಟ್ಟಡ ಗಸಗಸ ಸಾಗಿತು
ಸಾಟಿಯು ಇದಕಿಲ್ಲ ಎಂದರು ಕೋಲ.

ಕಾಲವು ತಿರುಗಣಿ ಮಡದಂತೆ ತಿರುಗಲು
ಬಾಲನ ಹೆತ್ತಳು ಜಕ್ಕವ್ವ ಕೋಲ.

ತಾ ಸೂಲಗಿತ್ಯಾಗಿ ಹೇಸದೆ ಮಾಡ್ಯಾಳ
ಕೂಸಿಗೆ ಬೇಕಾದ ಸೇವೆಯ ಕೋಲ.

ಮೊಲೆಹಾಲು ಚಿಮ್ಮ್ಯೆತಿ ಕರಿಬಾಲ ಮೊಗನೋಡಿ
ಚೆಲುವಿನ ಕಂಡ್ಹಿಗ್ಗು ಬರುವಂತೆ ಕೋಲ.

ದಿನದಿನ ನಡಿಯಿತು ಕೂಸಿನ ಹೊಟ್ಟೆಯು
ಮನದಲ್ಲಿ ನಲಿದಾಳ ಜಕ್ಕವ್ವ ಕೋಲ.

ಬೆಳಗಿನ ಜಾವದಿ ಬಲುಬೇಗ ತಾ ಎದ್ದು
ಮಲಗಿದ ಮಗುವೆತ್ತಿ ಎಂದಾಳು ಕೋಲ.

ಎರಡು ತೊಟ್ಟಿಲ ಹಾಕಿ ಜೋಗುಳ ಹಾಡುತ
ಊರಿನ ಜನರೆಬ್ಬಿಸುತಾಳ ಕೋಲ.

ಅವಳ ಹಾಡಿಗೆ ಒಬ್ಬ ಸೋಮಾರಿ ಸೊಸೆತಾನು
ಏಳದೆ ಶಪಸುತಲಿರುವಾಗ ಕೋಲ.

ಬೆಳದಿರು ಮನೆಮಾರು ಹೊಲ ಕಾಳು ಕಡಿಗಳು
ಹಾಳು ಮಾಡಿಟ್ಟಳು ಮಾಮಾರಿ ಕೋಲ.

ಕ್ವಾಟೆಯು ನಾಲ್ಕು ದಿಕ್ಕಿಗೆ ಏರಿ ದಿಗ್ಗೆಂದು
ಕಟುಗರಾಡಾಗಿ ನಿಂತಿತು ಕೋಲ.

ಅರಮನಿಯೊಂದಾತು ಅಂತಃಪುರವು ಆತು
ಬುರಜಗಳೆದ್ದಾವು ಮೂಲಿಗೆ ಕೋಲ.

ವಜೀರ ವೈಭವ ಶಸ್ತ್ರದ ಸೌಭಾಗ್ಯ
ಗಜಗಜ ಎನ್ನುತ ಬಂದವು ಕೋಲ.

ಕಾಲವು ಉರಳಿತು ಮರವೀನ ತೆಗ್ಗಿಲಿ
ಏರಿತು ಹಲಸಂಗಿ ಕ್ವಾಟೀನ ಕೋಲ.

ಜಕ್ಕವ್ವ ಹೊಕ್ಕಿರೋ ಸಿರಿಮನೆ ವ್ಯಾಲಕ
ನಕ್ಕಿತೋ ಅರಮನೆ ನಿಂತಿತು ಕೋಲ.

ಅವಳೆಷ್ಟು ದಿನ ಕಾಲ ವಿಷವನ ಕುಡಿದಳೋ
ಎಳಗೂಸು ತಾನೆಷ್ಟು ದಿನವಿತ್ತೋ ಕೋಲ.

ತಿಳಿಯದ ಜನವೆಲ್ಲ ಮಬ್ಬಿನಲ್ಲಿ ಇದ್ದಿತ್ತು
ಹೊಲೆ ಹೆಣ್ಣ ಧೈರ್ಯದ ನೆನಸಂತ ಕೋಲ.

ಕಡಿಗೊಮ್ಮೆ ಭೂದೇವಿ ದೊರೆಯಂದ ಕನಸೀಲಿ
ತಡಿಯಲಾರದ ಬಂದು ಹೇಳ್ಯಾಳ ಕೋಲ.

ಬೆಳಗಿನ ವಾರ್ತೆಯು ಕೇಳೂತ ದೊರೆ ವಜೀರ
ಸರಿಯಾಗಿ ಊರಿಗೆ ಕೇಳಿಸಲು ಕೋಲ.

ಜಕ್ಕವ್ವ ಜಾಣೆಯು ಕೂಸೆರವ ಬಚ್ಚಲದ
ಸುಕ್ಕದ ನೀರೀನ ಮೋರಿಯು ಕೋಲ.

ಹೊರಗಿನ ಒಳಗಿನ ಕ್ವಾಟೇಯು ತಡಿಯೊಳಗ
ದೇವರಿಬ್ಬರು ಒಡಮೂಡ್ಯಾರ ಕೋಲ.

ಒಳಗಿನ ನರಸಿಂಹ ಹೊರಗಿನ ಹಿರಿಯೊಡೆಯ
ಬಲಿಹೆಣ್ಣ ನೀರಿಗೆ ಬಲಿದಾರ ಕೋಲ.

ಮಾದರು ಹೊರಗಿನ ದೇವರಿಗೆ ನಡಕೊಳ್ಳಿ
ಉಳಿದವರು ನರಸಿಂಹ್ಗ ನಡಕೊಳ್ಳಿ ಕೋಲ.

ಮಂದಿಯ ಕಿವಿಗಳಿಗೆ ಈ ಸುದ್ದಿ ಹೋಯಿತು
ಅಂದಾಗ ತಿಳಿದವರು ಜಕ್ಕವ್ವ ಕೋಲ.

ಇಂದಿಗೂ ನಡಿದಾದ ಜಕ್ಕವ್ವನ ಹೆರಿಗೆಯು
ಚೆಂದಾದ ದೇವರ ಪೂಜೆಯು ಕೋಲ.

ಹೊಲೆಜಾತಿ ಹೊರಗಿರುವ ಜಾತಿಯು ಹಂಗರುವ
ಹಲಸಂಗಿಯೊಳಗಿರಲು ಜಕ್ಕವ್ವ ಕೋಲ.

ಅವಳಿಂದ ನೀರಿನ ತಿಳಿದೊಳಗ ಹುಟ್ಟಿದ
ನವನಾರಸಿಂಹಗ ಮುಟ್ಟುವರು ಕೋಲ.

ಮುಟ್ಟುವರು ಮಡಿಯಾಗಿ ತೊಳಿಯುವರು ಬ್ರಾಹ್ಮಣರು
ಕೆಟ್ಟದ್ದು ಬಿಡಿಸೆಂದು ಬೇಡುವರು ಕೋಲ.

* *

'ಕರ್ನಾಟಕ ಭಾರತಿ'ಯ ಲೇಖನ ಸೂಚಿ*
(ಸಂಪುಟ ೧೧ ರಿಂದ ೨೦ ರ ವರೆಗೆ

–ಹನುಮಾಕ್ಷಿ ಗೋಗಿ

೧. *ಅಕ್ಕನ ಅರಿವಿನ ಕಣ್ಣು (ವಿಮರ್ಶೆ)
ಸನದಿ (ಬಿ. ಎ.)
ಸಂ : ೧೪, ಸಂ: ೩–೪, ಪು: ೯೪–೧೦೦, ಜನವರಿ ಮೇ ೮೨

೨. ಅಕ್ಕಮಹಾದೇವಿಯ ವಚನ : ಒಂದು ವಿಶ್ಲೇಷಣೆ (ವಿಮರ್ಶೆ)
ಆರಾಧ್ಯ (ಯು. ಎಸ್. ಎಸ್.)
ಸಂ: ೧–೨, ಸಂ: ೪. ಪು: ೧೨೧–೧೨೯ ಮೇ ೮೦

೩. ಅಗ್ರಹಾರ ತುಂಬಿಗೆ ಹಾಗೂ ಅಲ್ಲಿನ ಮೂರು ಸ್ತಂಭಶಾಸನಗಳು(ಶಾಸನ)
ಕೊಪ್ಪ (ಎಸ್. ಕೆ.) ಮತ್ತು ಬಿರಾದಾರ (ಎಚ್. ಎಸ್.)
ಸಂ: ೧೭, ಸಂ: ೧, ಪು: ೧೩೯–೧೪೭, ಅಗಸ್ಟ ೮೪

೪. ಅಗ್ರಹಾರ ಸೀಲಗುಂದ (ಇತಿಹಾಸ)
ರಾಜಶೇಖರ (ಎಸ್)
ಸಂ: ೧೧, ಸಂ: ೪, ಪು: ೭೯–೮೪, ಮೇ ೭೯

೫. ಅಜ್ಜಿಯ ಮಗ್ಗುಲಲ್ಲಿ (ಕವನ)
ಕಣ್ಣಿ (ಶ್ರೀಪಾದ ಹೆಗಡೆ)
ಸಂ: ೧೨, ಸಂ: ೧–೨, ಪು: ೪೪, ಅಗಸ್ಟ–ನವಂಬರ ೭೯

೬. ಅಡಿಯ ಬುಡದಲ್ಲಿ (ಕವನ)
ಹಕಾರಿ (ದೇವೇಂದ್ರ ಕುಮಾರ)
ಸಂ: ೧೫, ಸಂ: ೧–೨, ಪು: ೧೧೫–೧೧೬, ಅಗಸ್ಟ–ನವಂಬರ ೮೨

* ಈ ಲೇಖನಸೂಚಿಯನ್ನು ಸಿದ್ಧಪಡಿಸುವಲ್ಲಿ ಸಹಾಯಹಸ್ತ ನೀಡಿದ ಸೋದರ ಪ್ರವೀಣ ಕುಮಾರನಿಗೆ ನನ್ನ ಕೃತಜ್ಞತೆಗಳು.

೭. ಅನುಭವ ಮಂಟಪ (ಕವನ)
ಸಿದ್ಧಲಿಂಗಯ್ಯ (ಜಿ. ಎಸ್.)
ಸಂ: ೧೫. ಸಂ: ೧–೨, ಪುಟ : ೧೧೪ ಅಗಸ್ಟ–ನವಂಬರ ೮೧

೮. ಅನುಭವ ಮಂಟಪದ ಪ್ರೇರಣೆಗಳು (ಚಿಂತನ)
ಮಲ್ಲಾಪುರ (ಬಿ. ವ್ಹಿ.)
ಸಂ: ೧೭, ಸಂ: ೧, ಪು: ೯–೨೩, ಅಗಸ್ಟ–೮೪

೯. ಅಪಾತ್ರೇ ರಮತೇ ನಾರೀ ....?....?
ಜನ್ನನ ಅಮೃತಮತಿಯನ್ನು ಕುರಿತು (ವಿಮರ್ಶೆ)
ಶಾಲಿನಿ ರಘುನಾಥ
ಸಂ: ೨೦, ಸಂ:೩, ಪು: ೨೩–೩೧ ಜನವರಿ ೮೮

೧೦. ಅಭಿಮನ್ಯುವಿನ ದುಂದುಮೆ (ಜಾನಪದ)
ರಾಜೂರ (ವೀರಣ್ಣ)
ಸಂ: ೧೨, ಸಂ: ೪, ಪು: ೫೪–೮೨, ಮೇ ೮೦

೧೧. ಅಮರಮೂರ್ತಿ ಗೊಮ್ಮಟೇಶ (ಕವನ)
ಪಾಟೀಲ (ಸದಾನಂದ ಸಿ.)
ಸ: ೧೩, ಸಂ: ೩–೪, ಪು: ೫೬–೫೭, ಜನವರಿ–ಮೇ ೮೧

೧೨. ಅಯ್ಯಾವೊಳೆ ಐನೂರ್ವರ ಪ್ರಶಸ್ತಿಗಳು (ಶಾಸನ)
ಹಿರೇಮಠ (ಬಿ. ಆರ್.)
ಸಂ: ೧೭. ಸಂ: ೩, ಪು: ೧೪೦–೧೬೧, ಜನವರಿ ೮೫

೧೩. ಅರಿವಿನ ಜಾಗೃತಿ ಪದ್ಧತಿಯ ಅನ್ವಯ (ಶಿಕ್ಷಣಶಾಸ್ತ್ರ)
ಕಿರಣ ಕಮಲಾ ಪ್ರಸಾದ (ಜೆ. ಸ)
ಸಂ: ೧೮, ಸಂ: ೪, ಪು: ೯–೩೦, ಮೇ ೮೬

೧೪. ಅವೆತಿಕ್ ಇಸ್ಸಾಕ್ಯಾನ್ ಅವರ ಕಾವ್ಯ (ವಿಮರ್ಶೆ)
ಹಿಂಗಮಿರೆ (ಬುದ್ದಣ್ಣ)
ಸಂ: ೧೯, ಸಂ: ೨, ಪು: ೧೦೦–೧೦೮, ನವಂಬರ ೮೬

೧೫. ಅಷ್ಟಕಗಳು : ಸಂಪುಟ ೧ : ಸಂ. ಭೋಜರಾಜ ಪಾಟೀಲ (ಪುಸ್ತಕ ವಿಮರ್ಶೆ)
ರಾಜೂರ (ವೀರಣ್ಣ)
ಸಂ: ೧೧, ಸಂ: ೩, ಪು: ೧೫೫–೧೫೭, ಫೆಬ್ರುವರಿ ೭೯

೧೬. ಅಸಂಗತ ನಾಟಕ (ವಿಮರ್ಶೆ)
ಯರವಿನತೆಲಿಮಠ (ಸಿ. ಆರ್.)
ಸಂ ೧೪, ಸಂ:೧–೨, ಪು: ೨೩–೩೪, ಅಗಸ್ಟ–ನವಂಬರ ೮೧

೧೭. ಅಂಗೈ ಮತ್ತು ಮೇಂಗೈ ಒಂದು ಚಿಂತನೆ (ಒರೆಗಲ್ಲು-ಭಾಷಾವಿಜ್ಞಾನ)
ಸುಬ್ಬಕೃಷ್ಣ (ಆರ್)
ಸಂ: ೧೨, ಸಂ: ೩, ಪುಟ: ೧೨೬-೧೨೮, ಜನವರಿ ೮೦

೧೮. ಅಂಬಲಿ (ಒರೆಗಲ್ಲು)
ಶ್ರೀಕಂಠಯ್ಯ (ಕೆ)
ಸಂ: ೧೧, ಸಂ: ೧, ಪು: ೧೪೭, ಅಗಸ್ಟ ೭೮

೧೯. ಅಂಬಿಗರ ಚೌಡಯ್ಯನ ವಚನಗಳಲ್ಲಿ ಸ್ತ್ರೀ (ವಿಮರ್ಶೆ)
ಸಬರದ (ವಿಜಯಶ್ರೀ)
ಸಂ: ೧೫. ಸಂ: ೧-೨, ಪು: ೬೧-೬೬, ಅಗಷ್ಟ-ನವಂಬರ ೮೨

೨೦. ಅಂಬಿಗರ ಚೌಡಯ್ಯ ಮತ್ತು ಬಂಡಾಯ (ವಿಮರ್ಶೆ)
ಸಬರದ (ಬಸವರಾಜ)
ಸಂ: ೧೮, ಸಂ: ೪, ಪು: ೧-೮, ಮೇ ೮೬

೨೧. ಆಕೆ-ಆತ (ಒರೆಗಲ್ಲು-ಭಾಷಾವಿಜ್ಞಾನ)
ಕುಳ್ಳಿ (ಜೆ. ಎಸ್.)
ಸಂ: ೧೧, ಸಂ: ೨, ಪು: ೧೭೫-೧೮೦, ನವಂಬರ ೭೮

೨೨. ಆಡಳಿತದಲ್ಲಿ ಅನುವಾದಿತ ಭಾಷೆ-ಪ್ರಾದೇಶಿಕ ಭಾಷೆ (ಸಂಕೀರ್ಣ)
ಕಲಬುರ್ಗಿ (ಎಂ. ಎಂ.)
ಸಂ: ೧೯, ಸಂ: ೪, ಪು: ೭೮-೮೫, ಮೇ ೮೭

೨೩. ಆಧುನಿಕ ಕನ್ನಡಸಾಹಿತ್ಯದಲ್ಲಿ ವಿಮರ್ಶೆ (ವಿಮರ್ಶೆ)
ಕಾಯಿ (ರುದ್ರಪ್ಪ)
ಸಂ: ೧೪, ಸಂ: ೧-೨, ಪು: ೯-೨೨, ಅಗಸ್ಟ-ನವಂಬರ ೮೧

೨೪. ಆಧುನಿಕ ತೆಲಗು ಕವಿತೆ: ಒಂದು ಸಮೀಕ್ಷೆ (ವಿಮರ್ಶೆ)
ಜಯಪ್ರಕಾಶ (ಎಸ್) ಮತ್ತು ಹರಿಕೃಷ್ಣ ಭರಣ್ಯ
ಸಂ: ೧೯, ಸಂ: ೪, ಪು: ೩೩-೫೧, ಮೇ ೮೭

೨೫. ಆನಂದಕಂದರ ಬಾನುಲಿ ರೂಪಕಗಳು (ವಿಮರ್ಶೆ)
ಕೋಶಿನ (ಎಸ್. ಎಸ್.)
ಸಂ: ೨೦, ಸಂ: ೪, ಪು: ೪೯-೮೦, ಮೇ ೮೮

೨೬. ಆವಂತಿಕಾ ಪ್ರವಾಸ : ಶಿರಂಕಲ್ಲು ಈಶ್ವರ ಭಟ್ಟ (ಪುಸ್ತಕ ವಿಮರ್ಶೆ)
ಪಾಟೀಲ (ಎಸ್. ಪಿ.)
ಸಂ: ೧೯, ಸಂ: ೨, ಪು: ೧೬೨-೧೬೩, ನವಂಬರ ೮೬

೨೭. ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ : ಒಂದು ಅಧ್ಯಯನ (ವಿಮರ್ಶೆ)
ಶಾಲಿನಿ ರಘುನಾಥ
ಸಂ: ೧೮, ಸ: ೧, ಪು: ೪೩–೭೨, ಅಗಸ್ಟ ೮೫

೨೮. ಇಟಲಿದೇಶದ ಬಂಡೆಚಿತ್ರ ಸಂಶೋಧನೆ ಮತ್ತು ತರಬೇತಿಯ ಅನುಭವಗಳು (ಇತಿಹಾಸ)
ಷಡಕ್ಷರಯ್ಯ (ರು. ಮು.)
ಸಂ: ೧೭ ಸಂ: ೧, ಪು: ೭೬–೯೩, ಅಗಸ್ಟ ೮೪

೨೯. ಇತ್ತೀಚಿನ ಕನ್ನಡ ವಾಙ್ಮಯದಲ್ಲಿ ವಿಚಾರಸಾಹಿತ್ಯ (ವಿಮರ್ಶೆ)
ವೃಷಭೇಂದ್ರ ಸ್ವಾಮಿ (ಎಸ್. ಎಂ.)
ಸಂ: ೧೯, ಸಂ: ೨, ಪು: ೧–೭, ಜನವರಿ ೮೭

೩೦. ಇತ್ತೀಚಿನ ಕನ್ನಡಸಾಹಿತ್ಯದ ಧೋರಣೆ–ದೃಷ್ಟಿಕೋನಗಳು (ಸಾಹಿತ್ಯಚರಿತ್ರೆ)
ಕೊಟ್ರಶೆಟ್ಟಿ (ಎಂ. ಬಿ.)
ಸಂ: ೧೭, ಸಂ: ೩, ಪು: ೪೧–೪೫, ಜನವರಿ ೮೫

೩೧: ಇನಾಂದಾರರ 'ಮಂಗಲ್ಯಾಂಡಿನಲ್ಲಿ ಮೂರುವಾರ' (ವಿಮರ್ಶೆ)
ಪ್ರಭು (ಎಂ. ಎಸ್.)
ಸಂ: ೧೨, ಸಂ: ೩, ಪು: ೧೦೩–೧೧೪, ಜನವರಿ ೮೦

೩೨. ಇಂಗ್ಲಂಡದಲ್ಲಿ ಕನ್ನಡ ಹಸ್ತಪ್ರತಿಗಳು (ಸಂಕೀರ್ಣ)
ಕಲಬುರ್ಗಿ (ಎಂ. ಎಂ.)
ಸ: ೧೮, ಸಂ: ೪, ಪು: ೬೦–೭೪, ಮೇ ೮೬

೩೩. ಇಂಡೋ–ಯುರೋಪಿಯನ್ ಭಾಷಾವಿಜ್ಞಾನದಲ್ಲಿ ಸಂಸ್ಕೃತದ ಸ್ಥಾನ (ಭಾಷಾ ವಿಜ್ಞಾನ)
ಅನಂತನಾರಾಯಣ (ಎಚ್. ಎಸ್.)
ಸಂ: ೧೭, ಸಂ: ೧, ಪು: ೪೪–೬೦, ಅಗಸ್ಟ ೮೪

೩೪. ಇಂದಿನ ಕನ್ನಡ ರಂಗಭೂಮಿಯಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ (ರಂಗ ಭೂಮಿ)
ಅಮರನಾಥ (ಎಚ್. ಆರ್)
ಸಂ: ೨೦, ಸಂ: ೨, ಪು: ೩೭–೪೮, ನವಂಬರ ೮೭

೩೫. ಈಡಿನ ಹಬ್ಬ (ಜಾನಪದ)
ತಿಪ್ಪೇಸ್ವಾಮಿ (ಜಿ. ಆರ್.)
ಸಂ: ೧೧, ಸಂ: ೪, ಪು: ೪೨–೪೭, ಮೇ ೭೯

೩೬. ಉಕ್ರೇನಿಯನ್ ಕವಿ ತರಾಸ್ ಶ್ಲೆವ್‌ಚಂಕೋ ಅವರ ಕತರಿನ್ ಕಾವ್ಯದ ನಾಟಕರೂಪ (ವಿಮರ್ಶೆ)
ಹಿಂಗಮಿರೆ (ಬುದ್ದಣ್ಣ)
ಸಂ: ೨೦, ಸಂ: ೩, ಪು: ೫೧–೫೭ ಜನವರಿ ೮೦

೩೭. ಉಚ್ಚಶಿಕ್ಷಣದಲ್ಲಿ ಕನ್ನಡ (ಪ್ರಬಂಧ)
ವೃಷಭೇಂದ್ರಸ್ವಾಮಿ (ಎಸ್. ಎಂ.)
ಸಂ: ೨೦, ಸಂ: ೩, ಪು. ೩೭–೪೪, ಜನವರಿ ೮೮

೩೮. ಉಯ್‌ಗುನ್ ಕವಿಯ ಎರಡು ಕವನಗಳು (ಕವನ–ಅನುವಾದ)
ಹಿಂಗಮಿರೆ (ಬುದ್ದಣ್ಣ)
ಸಂ: ೧೫, ಸಂ: ೩–೪, ಪು: ೧೧೭, ಜನವರಿ–ಮೇ ೮೩

೩೯. ಉಷ್ಣಶಕ್ತಿ ಸ್ಥಾವರಗಳು (ವಿಜ್ಞಾನ)
ದೊರಸ್ವಾಮಿ (ಎಂ. ಸಿ.)
ಸಂ: ೧೭, ಸಂ: ೨, ಪು: ೨೫–೩೦, ನವಂಬರ ೮೪

೪೦. ಎಕ್ಕಲಮ್ಮ–ಎಲ್ಲಮ್ಮ (ಸಂಶೋಧನೆ)
ಕಲಬುರ್ಗಿ (ಎಂ. ಎಂ.)
ಸಂ: ೧೭, ಸಂ: ೩, ಪು: ೪೬–೫೩, ಜನವರಿ ೮೫

೪೧. ಎಕ್ಕಸಂಬುಗೆಯ ಶಾಸನ (ಶಾಸನ)
ಗುರವ (ಆರ್. ಎನ್.)
ಸಂ: ೧೧, ಸಂ: ೨, ಪು: ೨೨–೪೨, ನವಂಬರ ೭೮

೪೨. A comparative study of Sarana and Dasa literature :
ಶ್ರೀನಿವಾಸ ಪಿ. ಎಸ್. (ಪುಸ್ತಕ ವಿಮರ್ಶೆ)
ಜವಳಿ (ಬಿ. ಸಿ.)
ಸಂ: ೧೫, ಸಂ: ೧–೨, ಪು: ೧೩೯–೧೪೮, ಅಗಸ್ಟ–ನವಂಬರ ೮೨

೪೩. ಎಮಿಲಿ ಝೋಲಾ (ವಿಮರ್ಶೆ)
ಸಿಂಪಿ (ವೀರೇಂದ್ರ)
ಸಂ: ೧೪, ಸಂ: ೩–೪, ಪು: ೪೧–೫೦, ಜನವರಿ–ಮೇ ೮೨

೪೪. ಎರಡು ಬೈಲೊರಶ್ಯನ್ ಪದ್ಯಗಳು (ಕವನ–ಅನುವಾದ)
ಹಿಂಗಮಿರೆ (ಬುದ್ದಣ್ಣ)
ಸಂ: ೧೪, ಸಂ: ೩–೪, ಪು: ೫೯–೬೦, ಜನವರಿ–ಮೇ ೮೨

೪೫. ಎರಡು ಮಿನಿಗವನಗಳು (ಕವನ)
ಅರಣಕಲ್ (ಪ್ರಭುರಾಜ)
ಸಂ: ೧೨, ಸಂ: ೪, ಪು: ೧೪೮, ಮೇ ೮೦

೪೬. ಎಲ್ಲಿ ಇರುವೆಯೋ ಮರುಳ ಎದೆಯಲಿ (ಕವನ)
ಬಾಲರಾಜು (ಎಚ್)
ಸಂ : ೧೩, ಸಂ: ೩-೪, ಪು: ೫೨-೫೩, ಜನವರಿ-ಮೇ ೮೧

೪೭. ಎಲಿಯಟ್‌ನ ದೃಷ್ಟಿಯಲ್ಲಿ 'ಕ್ಲಾಸಿಕ್' (ಕಾವ್ಯಮೀಮಾಂಸೆ)
ಕೊಟ್ರಶೆಟ್ಟಿ (ಎಂ. ಬಿ.)
ಸಂ: ೧೪, ಸಂ: ೧-೨, ಪು: ೧-೮, ಅಗಸ್ಟ-ನವಂಬರ ೮೧

೪೮. ಏಕಾಂತ ರಾಮಯ್ಯನ ವಿಗ್ರಹ ಮತ್ತು ದೇವಾಲಯ (ಸಂಶೋಧನೆ)
ಹಿರೇಮಠ (ಬಿ. ಆರ್)
ಸಂ: ೧೪, ಸಂ: ೧-೨, ಪು: ೧೪೨-೧೪೩, ಅಗಸ್ಟ-ನವಂಬರ ೮೧

೪೯. ಐದು ಹೊಸಸ್ವರವಚನಗಳು (ಸಂಪಾದನೆ)
ರಾಜೂರ (ವೀರಣ್ಣ)
ಸಂ: ೧೮, ಸಂ: ೧, ಪು: ೧೪೬-೧೫೩, ಅಗಸ್ಟ ೮೫

೫೦. ಒಕ್ಕಲಿಗ ಮತ್ತು ಹಕ್ಕಿ (ಜಾನಪದ)
ದಂಡೆ (ವಿ. ಎಸ್.)
ಸಂ: ೧೧, ಸಂ: ೪, ಪು: ೧೩೭-೧೪೦, ಮೇ ೭೯

೫೧. ಒರತೆಯ ರಾಮಯ್ಯ (ಒರೆಗಲ್ಲು-ಸಾಹಿತ್ಯಚರಿತ್ರೆ)
ರಾಜೂರ (ವೀರಣ್ಣ)
ಸಂ: ೧೧, ಸಂ: ೪, ಪು: ೧೩೭-೧೪೦ ಮೇ ೭೯

೫೨. ಒಂದು ಸಿಸುಪ್ರಾಸದ ಸಮೀಕ್ಷೆ : ಅತ್ತೆತ್ತಿ ಬಿದ್ದೆ (ಜಾನಪದ)
ಕಂಚ್ಯಾಣಿ (ಶರಣಪ್ಪ)
ಸಂ: ೧೭, ಸಂ: ೧, ಪು: ೧೨೦-೧೨೨, ಅಗಸ್ಟ ೮೪

೫೩. ಓಡೆಸಿ-ಒಂದು ವಿವೇಚನೆ (ವಿಮರ್ಶೆ)
ಮರಿಗುದ್ದಿ (ಗುರುಪಾದ)
ಸಂ: ೧೯, ಸಂ: ೪, ಪು: ೨೦-೨೬, ಮೇ ೮೭

೫೪. ಓಲೆಗರಿಯಲ್ಲಿ ದೊರೆತ ವಿಘ್ನೇಶ್ವರ ಚೌಪದ ಹಾಗೂ ಕವಿಪರಿಚಯ (ಸಂಪಾದನೆ)

ಶ್ರೀಧರ (ಎಚ್. ಜಿ.)
ಸಂ: ೨೦, ಸಂ: ೨, ಪು: ೮೩-೮೮ ನವಂಬರ ೮೭

೫೫. ಕಣಕದ ಆರತಿ : ಒಂದು ಸಂಪ್ರದಾಯ (ಜಾನಪದ)
ಪಾಟೀಲ (ಎ. ವ್ಹಿ.)
ಸಂ: ೧೨, ಸಂ:೪, ಪು: ೪೯-೫೩, ಮೇ ೮೦

೫೬. ಕನ್ನಡ ಅಧ್ಯಾಪಕರ ಅಪೂರ್ವ ಶಿಬಿರದ ವರದಿ (ವರದಿ)
ಕಲಬುರ್ಗಿ (ಎಂ. ಎಂ.)
ಸಂ: ೧೭, ಸಂ: ೪, ಪು: ೧೬೬-೧೬೮, ಎಪ್ರಿಲ್ ೮೫

೫೭. ಕನ್ನಡ ಅನುನಾಸಿಕ ಮತ್ತು ಅನುನಾಸಿಕ್ಯಗಳು (ಭಾಷಾವಿಜ್ಞಾನ)
ಮಾಡ್ತ (ವಿಲ್ಯಂ)
ಸಂ: ೧೧, ಸಂ: ೧, ಪು: ೨೫-೩೭ ಅಗಸ್ಟ ೭೮

೫೮. ಕನ್ನಡ ಕಾವ್ಯಗಳಲ್ಲಿ ನೃತ್ಯಕಲಾವೈಭವ (ವಿಮರ್ಶೆ)
ಶ್ರೀಕಂಠಯ್ಯ (ಕೆ)
ಸಂ: ೧೨, ಸಂ: ೩, ಪು: ೨೩-೩೮, ಜನವರಿ ೮೦

೫೯. ಕನ್ನಡಕ್ಕಾಗಿ ದುಡಿದ ಮಹಾತ್ಮ : ಕರ್ನಲ್ ಮೆಕೆಂಜಿ (ಸಾಹಿತ್ಯಚರಿತ್ರೆ)
ಬಿಳಿಮಲೆ (ಪುರುಷೋತ್ತಮ)
ಸಂ: ೧೨, ಸಂ: ೩, ಪು: ೩೯-೫೧, ಜನವರಿ ೮೦

೬೦. ಕನ್ನಡ ಗಾದೆಗಳು (ಜಾನಪದ)
ಅನಂತನಾರಾಯಣ (ಎಚ್. ಎಸ್.)
ಸಂ: ೧೮, ಸಂ: ೨-೩, ಪು: ೧-೭, ನವಂಬರ ೮೫, ಜನವರಿ ೮೬

೬೧. ಕನ್ನಡ ಜನಪದಸಾಹಿತ್ಯದಲ್ಲಿ ಸಾಮಾಜಿಕ ನ್ಯಾಯ (ಜಾನಪದ)
ಬಿರಾದಾರ (ಬಿ. ಬಿ.)
ಸಂ: ೨೦, ಸಂ: ೩, ಪು: ೭೧-೭೬, ಜನವರಿ ೮೮

೬೨. ಕನ್ನಡ ಜಾನಪದದಲ್ಲಿ ಭಾಷಿಕ ಆಟಗಳು (ಜಾನಪದ)
ಮಹೇಶ್ವರಯ್ಯ (ಎಚ್. ಎಂ.)
ಸಂ: ೧೫, ಸಂ: ೧-೨, ಪು: ೬೭-೭೩, ಅಗಸ್ಟ-ನವಂಬರ ೮೨

೬೩. ಕನ್ನಡ ಜೈನಕವಿಗಳು ಬೀರಿದ ಸಂದೇಶ (ಸಾಹಿತ್ಯಚರಿತ್ರೆ)
ಮಹೀಶವಾಡಿ (ಭುಜೇಂದ್ರ)
ಸಂ: ೧೨, ಸಂ: ೪, ಪು: ೪೧-೪೮, ಮೇ ೮೦

೬೪. ಕನ್ನಡದಲ್ಲಿ ಮಕ್ಕಳ ಕಥೆಗಳು : ಒಂದು ಸಮೀಕ್ಷೆ (ಸಂಕೀರ್ಣ)
ಗೋಗಿ (ಹನುಮಾಕ್ಷಿ)
ಸಂ: ೧೨, ಸಂ: ೧-೨, ಪು: ೩೧-೪೩, ಅಗಸ್ಟ್-ನವಂಬರ್ ೭೯

೬೫. ಕನ್ನಡದಲ್ಲಿ ಮಕ್ಕಳ ಸಾಹಿತ್ಯ:ಒಂದು ಸಮೀಕ್ಷೆ (ಸಂಕೀರ್ಣ)
ಹೆಗಡೆ (ಜಿ. ಎಂ.)
ಸಂ: ೧೨, ಸಂ: ೧-೨, ಪು: ೧೯-೩೦, ಅಗಸ್ಟ-ನವಂಬರ ೭೯

೬೬. ಕನ್ನಡದಲ್ಲಿ ರ್-ಱ್ ಕಾರಗಳ ಸಮರೂಪಧಾರಣೆ (ಭಾಷಾವಿಜ್ಞಾನ)
ಮುರಿಗೆಪ್ಪ (ಎ)
ಸಂ: ೧೯, ಸಂ: ೪, ಪು: ೮-೧೦, ಮೇ ೮೭

೬೭. ಕನ್ನಡದಲ್ಲಿ ವೃತ್ತಿಪದಕೋಶಗಳು (ಜಾನಪದ)
ಕುಲಕರ್ಣಿ (ಆರ್. ವಾಯ್.)
ಸಂ: ೨೦, ಸಂ: ೩, ಪು: ೪೫-೫೦, ಜನವರಿ ೮೮

೬೮. ಕನ್ನಡದಲ್ಲಿ ಸಮಾನವಾಕ್ಯ (ಭಾಷಾವಿಜ್ಞಾನ)
ಮಾಡ್ತ (ವಿಲ್ಯಂ)
ಸಂ: ೧೧, ಸಂ: ೪, ಪು: ೨೧-೨೮, ಮೇ ೭೯

೬೯. ಕನ್ನಡ ಭಕ್ತಿಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ (ಸಾಹಿತ್ಯಚರಿತ್ರೆ)
ಸಣ್ಣನಂಜೇಗೌಡ
ಸಂ: ೧೧, ಸಂ: ೨, ಪು: ೬೯-೭೪, ನವಂಬರ್ ೭೮

೭೦. ಕನ್ನಡ-ಮರಾಠಿ ಸಾಹಿತ್ಯಬಾಂಧವ್ಯ (ಸಾಹಿತ್ಯಚರಿತ್ರೆ)
ಪಾಟೀಲ (ಎಸ್. ಪಿ.)
ಸಂ: ೧೪, ಸಂ: ೩-೪, ಪು: ೫೧-೫೮, ಜನವರಿ-ಮೇ ೮೨

೭೧. ಕನ್ನಡ ಮಹಾಕಾವ್ಯ ಪರಂಪರೆಯಲ್ಲಿ ಶ್ರೀರಾಮಾಯಣದರ್ಶನಂ (ವಿಮರ್ಶೆ)
ಹೆಂಡಿ (ಬಿ. ಬಿ.)
ಸಂ: ೧೩, ಸಂ: ೧-೨, ಪು: ೧-೧೫, ಆಗಸ್ಟ-ನವಂಬರ ೮೦

೭೨. ಕನ್ನಡ ವರ್ಣಗಳು (ವ್ಯಾಕರಣ)
ಮಾಡ್ತ (ವಿಲ್ಯಂ)
ಸಂ: ೧೪, ಸಂ: ೧-೨, ಪು: ೧೦೩-೧೧೨, ಅಗಸ್ಟ-ನವಂಬರ ೮೧

೭೩. ಕನ್ನಡ ವೃತ್ತಿಪದಕೋಶ-೩ (ಜಾನಪದ)
ಶಿವಾನಂದ (ವಿ)
ಸಂ: ೧೧, ಸಂ: ೩, ಪು: ೮೯-೧೦೭ ಫೆಬ್ರುವರಿ ೭೯

೭೪. ಕನ್ನಡ ವೃತ್ತಿ ಪದಕೋಶ–೪ (ಜಾನಪದ)
ಶಿವಾನಂದ (ವಿ)
ಸಂ: ೧೧, ಸಂ: ೪, ಪು: ೧೦೫–೧೨೩, ಮೇ ೭೯

೭೫. ಕನ್ನಡ ಸಾಹಿತ್ಯಕ್ಕೆ ಕ್ರೈಸ್ತರ ಕಾಣಿಕೆ (ಸಾಹಿತ್ಯಚರಿತ್ರೆ)
ವೃಷಭೇಂದ್ರಸ್ವಾಮಿ (ಎಸ್. ಎಂ.)
ಸಂ: ೨೦, ಸಂ: ೪, ಪು: ೧–೬, ಮೇ ೮೮

೭೬. ಕನ್ನಡ ಸಾಹಿತ್ಯದಲ್ಲಿ ಸಂಶೋಧನೆ (ಸಂಕೀರ್ಣ)
ಹಿರೇಮಠ (ಬಿ. ಆರ್.)
ಸಂ: ೧೫, ಸಂ: ೧–೨, ಪು: ೭೪–೮೧, ಅಗಸ್ಟ–ನವಂಬರ ೮೨

೭೭. ಕನ್ನಡ ಸಂಖ್ಯಾಪುಂಜ–ಒಂದು ಆಕೃತಿಮಾತ್ಮಕ ಅಧ್ಯಯನ (ಭಾಷಾ ವಿಜ್ಞಾನ)
ಮುರಿಗೆಪ್ಪ (ಎ)
ಸಂ: ೧೮, ಸಂ: ೨–೩, ಪು: ೧೧೧–೧೧೬, ನವಂಬರ ೮೫–ಜನವರಿ ೮೬

೭೮. ಕನ್ನಡ ಸಂಖ್ಯಾಪುಂಜ : ಒಂದು ಆಕೃತಿಮಾತ್ಮಕ ಅಧ್ಯಯನ : ಒಂದು ಪ್ರತಿಕ್ರಿಯೆ (ಭಾಷಾ ವಿಜ್ಞಾನ)
ಪಾಟೀಲ (ಸದಾನಂದ)
ಸಂ: ೧೯, ಸಂ: ೩, ಪು: ೭೫–೭೭, ಜನವರಿ–೮೭

೭೯. ಕನ್ನಡ ಸಂಧಿ (ವ್ಯಾಕರಣ)
ಮಾಡ್ತ (ವಿಲ್ಯಂ)
ಸಂ: ೧೮, ಸಂ: ೧, ಪು: ೧೩–೩೨ ಅಗಸ್ಟ ೮೫

೮೦. ಕನ್ನಡ ಹಸ್ತಪ್ರತಿಗಳ ವಿಷಯ ವೈವಿಧ್ಯ (ಹಸ್ತಪ್ರತಿ)
ರಾಜೂರ (ವೀರಣ್ಣ)
ಸಂ: ೧೬, ಸಂ: ೧–೨, ಪು: ೭೭–೯೪, ಅಗಸ್ಟ–ನವಂಬರ ೮೩

೮೧. ಕನ್ನಡೇತರರಿಗೆ ಕನ್ನಡ ಕಲಿಸುವ ಕ್ರಮ (ಶಿಕ್ಷಣಶಾಸ್ತ್ರ)
ಸಣ್ಣೆಲ್ಲಪ್ಪನವರ (ಎಸ್. ಎಲ್.)
ಸಂ: ೧೮, ಸಂ: ೪, ಪು: ೯೩–೧೦೬, ಮೇ ೮೬

೮೨. ಕರ್ನಾಟಕ ಇಂದು ಮತ್ತು ನಾಳೆ : ಡಾ. ಶಿವರಾಮ ಕಾರಂತ (ಪುಸ್ತಕ ವಿಮರ್ಶೆ)
ಜವಳಿ (ಬಿ. ಸಿ.)
ಸಂ: ೨೦, ಸಂ: ೩, ಪು: ೧೨೭–೧೩೨, ಜನವರಿ ೮೮

೮೩. ಕರ್ನಾಟಕಕ್ಕೆ ಜೈನಧರ್ಮದ ಆಗಮನ ಹಾಗೂ ದಿಗಂಬರ-ಶ್ವೇತಾಂಬರ ಪಂಥಗಳ ಉಗಮ (ಧರ್ಮತತ್ವ)
ದಿಬ್ಬದ (ಶಾಂತಿನಾಥ)
ಸಂ: ೧೪, ಸಂ: ೩-೪, ಪು: ೬೪-೭೦, ಜನವರಿ-ಮೇ ೮೨

೮೪. ಕರ್ನಾಟಕದ ಜೈನ ಮಂತ್ರಿಗಳು-ಸೇನಾಪತಿಗಳು (ಇತಿಹಾಸ)
ಪಾಟೀಲ (ಎಸ್. ಪಿ.)
ಸಂ: ೧೧, ಸಂ: ೩, ಪು: ೭೪-೮೮, ಫೆಬ್ರುವರಿ ೭೯

೮೫. ಕರ್ನಾಟಕದ ಗ್ರಾಮವೊಂದರಲ್ಲಿನ ಹಾಗೂ ಅದರ ಸುತ್ತಮುತ್ತಲ ಸ್ಥಳನಾಮಗಳು (ಜಾನಪದ)
ಮಹೇಶ್ವರಯ್ಯ (ಎಚ್. ಎಂ.)
ಸಂ: ೧೯, ಸಂ: ೨, ಪು: ೪೮-೫೯, ನವಂಬರ ೮೬

೮೬. ಕರ್ನಾಟಕದ ಜಾನಪದ ಕಲೆಗಳು (ಜಾನಪದ)
ಹಿರೇಮಠ (ಬಿ. ಆರ್.)
ಸಂ: ೧೨, ಸಂ: ೪, ಪು: ೯೯-೧೦೩, ಮೇ ೮೦

೮೭. ಕರ್ನಾಟಕದಲ್ಲಿ ಗ್ರಾಮೀಣ ವಿದ್ಯುದೀಕರಣ: ಒಂದು ಪಕ್ಷಿನೋಟ (ವಿಜ್ಞಾನ)
ಮುಂದಿನಮನಿ (ಪಿ. ಎಸ್)
ಸಂ: ೧೬, ಸಂ: ೨, ಪು: ೬೯-೭೪, ನವಂಬರ ೮೪

೮೮. ಕರ್ನಾಟಕದಲ್ಲಿ ಜನಸಂಖ್ಯಾ ಸಮಸ್ಯೆ (ಸಮಾಜವಿಜ್ಞಾನ)
ಕೊಡ್ಲಿ (ಎಂ. ಸಿ.)
ಸಂ: ೧೨, ಸಂ: ೩, ಪು: ೯೧-೯೨, ಜನವರಿ ೮೦

೮೯. ಕರ್ನಾಟಕದಲ್ಲಿ ನೀರಾವರಿ ಪ್ರಗತಿ (ಸಮಾಜವಿಜ್ಞಾನ)
ಮುಂದಿನಮನಿ (ಪಿ. ಎಸ್.)
ಸಂ: ೧೫, ಸಂ: ೩-೪ ಪು: ೮೮-೯೩ ಜನವರಿ-ಮೇ ೮೩

೯೦. ಕರ್ನಾಟಕದಲ್ಲಿಯ ಪ್ರಾಕೃತಭಾಷಾ ಶಾಸನಗಳು (ಶಾಸನ)
ಕೊಪ್ಪ (ಎಸ್. ಕೆ.)
ಸಂ: ೧೧, ಸಂ: ೧, ಪು: ೩-೧೫, ಅಗಸ್ಟ ೭೮

೯೧. ಕರ್ನಾಟಕ ಭಾಷಾಭೂಷಣದ ಕರ್ತೃ (ಸಾಹಿತ್ಯಚರಿತ್ರೆ)
ಬಿರಾದಾರ (ಸಂಗಮೇಶ)
ಸಂ: ೧೪, ಸಂ: ೧-೨, ಪು: ೧೧೩-೧೨೮, ಅಗಸ್ಟ-ನವಂಬರ ೮೧

೯೨. ಕರ್ನಾಟಕ ಮತ್ತು ಆಂಧ್ರಗಳ ಸಂಬಂಧದಲ್ಲಿ ಜೈನಧರ್ಮದ ಪಾತ್ರ (ಧರ್ಮತತ್ತ್ವ)
ಹಳಕಟ್ಟಿ (ಎಸ್. ವ್ಹಿ. ಪಿ.)
ಸಂ: ೧೮, ಸಂ: ೪, ಪು: ೫೩-೫೯, ಮೇ ೮೬

೯೩. ಕಪ್ಪು ಅಧ್ಯಾಯದ ಕೆಂಪು ಅಕ್ಷರಗಳಿಗೆ (ಕವನ)
ಸೊಪ್ಪಿಮಠ (ಬಸವಲಿಂಗ)
ಸಂ: ೧೭, ಸಂ: ೧, ಪು: ೧೫೮-೧೫೯, ಆಗಸ್ಟ ೮೪

೯೪. ಕಪಿಂಟೆಡ್ ಕವನಗಳು : ರಮೇಶ (ಬಿ. ಎಂ.) (ವಿಮರ್ಶೆ)
ಹಿಂಗಮಿರೆ (ಬುದ್ದಣ್ಣ)
ಸಂ: ೧೧, ಸಂ: ೧, ಪು: ೧೫೧-೧೫೨, ಆಗಸ್ಟ ೭೮

೯೫. ಕರಿಕೆ-ಕಣಗಿಲು : ಒಂದು ಸಮಾಲೋಚನೆ (ವಿಮರ್ಶೆ)
ಕಾಪಸೆ (ಗುರುಲಿಂಗ)
ಸಂ. ೧೧, ಸಂ: ೧, ಪು: ೧೨೪-೧೩೧, ಆಗಸ್ಟ ೭೮

೯೬. ಕಲಾವಿದ ಡಿ. ವ್ಹಿ. ಹಾಲಭಾವಿ (ಜೀವನ ಚರಿತ್ರೆ)
ಪಾಟೀಲ (ಎಸ್. ಸಿ.)
ಸಂ: ೧೯, ಸಂ: ೩, ಪು: ೧೦೨-೨೧೭ ಜನವರಿ ೮೭

೯೭. ಕಲೆ ಮತ್ತು ಸಮಾಜ (ಸಂಕೀರ್ಣ)
ವೃಷಭೇಂದ್ರಸ್ವಾಮಿ (ಎಸ್. ಎಂ.)
ಸಂ: ೧೯, ಸಂ: ೨, ಪು: ೧-೫, ನವಂಬರ ೮೬

೯೮. ಕವಿ-ಕಾವ್ಯ-ವಿಮರ್ಶೆಗಳ ಒರೆಗಲ್ಲು 'ಬೆಂಕಿ' (ಪುಸ್ತಕ-ವಿಮರ್ಶೆ)
ಪಡೇಸೂರ (ಚಂದ್ರಕಾಂತ)
ಸಂ: ೧೮, ಸಂ: ೨-೩, ಪು: ೧೩೮-೧೪೪, ನವಂಬರ ೮೫-ಜವವರಿ ೮೬

೯೯. ಕವಿಗಳ ವರ್ಗೀಕರಣ ಮತ್ತು ಕಾವ್ಯಾಭ್ಯಾಸ (ಸಾಹಿತ್ಯಚರಿತ್ರೆ)
ಸನದಿ (ಬಿ. ಎ.)
ಸಂ: ೧೨, ಸಂ: ೪, ಪು: ೮೭-೯೨, ಮೇ ೮೦

೧೦೦. ಕವಿ ಗೋಪಾಲಕೃಷ್ಣ ಅಡಿಗರ ಕಾವ್ಯದ ಧೃತಿ-ಧೋರಣೆ (ವಿಮರ್ಶೆ)
ವೃಷಭೇಂದ್ರಸ್ವಾಮಿ (ಎಸ್. ಎಂ.)
ಸಂ: ೧೫, ಸಂ: ೧-೨, ಪು: ೧-೬, ಆಗಸ್ಟ-ನವಂಬರ ೮೨

೧೦೧. ಕಾದಂಬರಿಯಲ್ಲಿ ಪ್ರಣಯ ನಿರೂಪಣೆ (ವಿಮರ್ಶೆ)
ಮಲ್ಲಾಪುರ (ಬಿ. ವಿ.)

ಸಂ: ೧೪, ಸಂ: ೧-೨, ಪು: ೮೪-೯೧, ಅಗಸ್ಟ-ನವಂಬರ ೮೧

೧೦೨. ಕಾಯುತ್ತಿರುವೆ (ಕವನ)
ಅಣ್ಣಾನವರ (ರಾಜೇಂದ್ರ)
ಸಂ: ೧೩, ಸಂ: ೩-೪, ಪು: ೬೨-೬೩, ಜನವರಿ–ಮೇ ೮೧

೧೦೩. ಕಾರಕ ಮತ್ತು ವಿಭಕ್ತಿ (ವ್ಯಾಕರಣ)
ಮಾಡ್ತ (ವಿಲ್ಯಂ)
ಸಂ: ೧೧, ಸಂ: ೩, ಪು: ೧೧–೩೩, ಫೆಬ್ರುವರಿ ೭೯

೧೦೪. ಕಾರಂಜನದಿ ಪ್ರದೇಶದ ಪ್ರಾಗೈತಿಹಾಸಿಕ ನೆಲೆಗಳ ಶೋಧನೆ (ಇತಿಹಾಸ)
ಷಡಕ್ಷರಯ್ಯ (ರು. ಮ.)
ಸಂ: ೧೧, ಸಂ: ೪, ಪು: ೧೦೧–೧೦೪, ಮೇ ೭೯

೧೦೫. ಕಾರಂತರ ಶಿಶುಸಾಹಿತ್ಯ (ವಿಮರ್ಶೆ)
ಕುಲಕರ್ಣಿ (ವಿ. ಜಿ.)
ಸಂ: ೧೨, ಸಂ: ೧–೨, ಪು: ೭೦–೭೭, ಅಗಸ್ಟ–ನವಂಬರ ೭೯

೧೦೬. ಕಾವ್ಯ ವಿಚಾರ : ವ್ಯಾಸಿಲಸ್ ವಿಟ್ಸಾಸ್ಯಿಕ್ಸಿಸ್ (ಕಾವ್ಯಮೀಮಾಂಸೆ)
ಅನು:ನಾಯಕ (ವಿನಾಯಕ)
ಸಂ: ೧೨, ಸಂ: ೩, ಪು: ೫೨–೬೦, ಜನವರಿ ೮೦

೧೦೭. 'ಕಾಳಗವನೇ ಬಲಿದು ಬಹೆನು' (ವಿಮರ್ಶೆ)
ಮಧು ವೆಂಕಾರೆಡ್ಡಿ
ಸಂ: ೨೦, ಸಂ: ೩, ಪು: ೩೨–೩೬, ಜನವರಿ ೮೮

೧೦೮. ಕಾಂಚೀಪುರದ ವರದರಾಜ ಸ್ವಾಮಿ ದೇವಾಲಯ ರಚನಾಕ್ರಮ (ಇತಿಹಾಸ)
ಕುಪ್ಪುಸ್ವಾಮಿ (ಜಿ. ಆರ್.)
ಸಂ: ೧೨, ಸಂ: ೩, ಪು: ೬೧–೬೬, ಜನವರಿ ೮೦

೧೦೯. ಕಾಂತೀಯ ದ್ರವಗತಿಯ ವಿಧಾನದಿಂದ ಶಕ್ತಿಯ ರೂಪಾಂತರ (ವಿಜ್ಞಾನ)
ಭಟ್ (ರಾಮಚಂದ್ರ)
ಸಂ: ೧೭, ಸಂ: ೨, ಪು: ೭–೧೪, ನವಂಬರ ೮೪

೧೧೦. ಕ್ರಾಂತಿಕಾರಿ ಸಾಹಿತಿ 'ಅಜ್ಞೇಯ' (ಸಾಹಿತ್ಯಚರಿತ್ರೆ)
ಭಟ್ (ಟಿ. ಆರ್.)
ಸಂ: ೧೧, ಸಂ: ೩, ಪು: ೧೨೭–೧೩೪, ಫೆಬ್ರುವರಿ ೭೯

೧೧೧. ಕೀಚಕ ವಿಡಂಬದಲ್ಲಿ ದ್ರೌಪದಿಯ ಪಾತ್ರಚಿತ್ರಣ : ತೌಲನಿಕ ಅಧ್ಯಯನ (ವಿಮರ್ಶೆ)

ಶ್ರೀಕೃಷ್ಣಭಟ್ಟ (ಪಿ. ಕೆ.)
ಸಂ: ೧೭, ಸಂ: ೩, ಪು: ೯೮–೧೨೦, ಜನವರಿ ೮೫

೧೧೨. ಕುಮಾರ ವಾಲ್ಮೀಕಿಯ ಒಂದು ಪದ್ಯದ ಬಗೆತ (ಒರೆಗಲ್ಲು–ವಿಮರ್ಶೆ)
ವೆಂಕಟರಾಯಾಚಾರ್ಯ (ಕೆ)
ಸಂ: ೧೧, ಸಂ: ४, ಪು: ೧४४–೧४೬, ಮೇ ೭೯

೧೧೩. ಕುವೆಂಪು–ಅರವಿಂದ (ವಿಮರ್ಶೆ)
ಮಾಳವಾಡ (ಸ. ಸ.)
ಸಂ: ೧೩, ಸಂ: ೧–೨, ಪು: ೩೩–४೬, ಅಗಸ್ಟ–ನವಂಬರ ೮೦

೧೧४. ಕುವೆಂಪು ಅವರ ಪ್ರಬಂಧಗಳ ವ್ಯಾಪ್ತಿ–ಸಾಧನೆ (ವಿಮರ್ಶೆ)
ಮಲ್ಲಾಪುರ (ಬಿ. ವ್ಹಿ.)
ಸಂ: ೧೩, ಸಂ: ೧–೨, ಪು: ೧೩೫–೧೫४, ಅಗಸ್ಟ–ನವಂಬರ ೮೦

೧೧೫. ಕುವೆಂಪು ಕವಿತೆಗಳಲ್ಲಿ ಪೂರ್ಣದೃಷ್ಟಿ (ವಿಮರ್ಶೆ)
ಹರಾರಿ (ದೇವೇಂದ್ರ ಕುಮಾರ)
ಸಂ: ೨೦, ಸಂ: ೩, ಪು: ೧೩–೨೨, ಜನವರಿ ೮೮

೧೧೬. ಕುವೆಂಪು ಕೃತಿಗಳ ವಿಮರ್ಶೆಯ ನೆಲೆಗಳು (ವಿಮರ್ಶೆ)
ನಾರಾಯಣ (ಕೆ. ವಿ.)
ಸಂ: ೧೩, ಸಂ: ೧–೨, ಪು: ೧೫೫–೧೭೧ ಅಗಸ್ಟ–ನವಂಬರ ೮೦

೧೧೭. ಕುವೆಂಪು ಛಂದಸ್ಸು (ವಿಮರ್ಶೆ)
ಕಲಬುರ್ಗಿ (ಎಂ. ಎಂ.)
ಸಂ: ೧೩, ಸಂ: ೧–೨, ಪು: ೧೦೦–೧೦೭, ಅಗಸ್ಟ–ನವಂಬರ ೮೦

೧೧೮. ಕುವೆಂಪು ನಾಟಕಗಳ ವಸ್ತು ಮತ್ತು ರೂಪ (ವಿಮರ್ಶೆ)
ಮರುಳಸಿದ್ದಪ್ಪ (ಕೆ)
ಸಂ: ೧೩, ಸಂ: ೧-೨, ಪು: ೧೨೫–೧೩४, ಅಗಸ್ಟ–ನವಂಬರ ೮೦

೧೧೯. ಕುವೆಂಪು ಪ್ರಕೃತಿ ಕವನಗಳ ಒಲವು–ನಿಲವು (ವಿಮರ್ಶೆ)
ರಾಪಸೆ (ಜಿ. ಎಸ್.)
ಸಂ: ೧೩, ಸಂ: ೧–೨, ಪು: ೮೫–೯೧ ಅಗಸ್ಟ–ನವಂಬರ ೮೦

೧೨೦. ಕುವೆಂಪು ಪ್ರಣೀತ ವಿಮರ್ಶೆಯ ಕೆಲವು ಸೂತ್ರಗಳು (ವಿಮರ್ಶೆ)
ಜವರೇಗೌಡ (ದೇ)
ಸಂ: ೧೩, ಸಂ: ೧–೨, ಪು: ೭೩–೮४, ಅಗಸ್ಟ–ನವಂಬರ ೮೦

೧೨೧. ಕುವೆಂಪು ಸಾಮಾಜಿಕ ಕವನಗಳ ನೆಲೆ–ಬೆಲೆ (ವಿಮರ್ಶೆ)

ಹಿಂಗಮಿರೆ (ಬುದ್ದಣ್ಣ)
ಸಂ: ೧೩, ಸಂ: ೧-೨, ಪು: ೯೨-೯೯, ಅಗಸ್ಟ-ನವಂಬರ ೮೦

೧೨೨. ಕುವೆಂಪು ಹಾಸ್ಯ (ವಿಮರ್ಶೆ)
ಸುಂಕಾಪುರ (ಎಂ. ಎಸ್.)
ಸಂ: ೧೩, ಸಂ: ೧-೨, ಪು: ೧೭೨-೧೮೦, ಅಗಸ್ಟ-ನವಂಬರ ೮೦

೧೨೩. ಕೆಲವು ಹೊಸ ಶೂಲಬ್ರಹ್ಮ ಶಿಲ್ಪಗಳು (ಸಂಶೋಧನೆ)
ರಾಜಶೇಖರಪ್ಪ (ಬಿ)
ಸಂ: ೧೪, ಸಂ: ೧-೨, ಪು: ೧೨೯-೧೩೯, ಅಗಸ್ಟ-ನವಂಬರ ೮೧

೧೨೪. ಕೆಸರು-ಮೊಸರು (ಕವನ)
ಶ್ಯಾಮಸುಂದರ (ಕೋಚಿ)
ಸಂ: ೧೫, ಸಂ: ೧-೨, ಪು: ೧೧೯-೧೨೦, ಅಗಸ್ಟ-ನವಂಬರ ೮೨

೧೨೫. ಕೆಂಭಾವಿ ರೇವಣಸಿದ್ಧೇಶ್ವರ ದೇವಸ್ಥಾನದ ಶಾಸನ (ಶಾಸನ)
ಪಾಟೀಲ (ಲಿಂಗನಗೌಡ ಗು.)
ಸಂ: ೧೯, ಸಂ: ೪, ಪು: ೫೭-೬೨, ಮೇ ೮೭

೧೨೬. ಕ್ರೈಸ್ತೋಪಾಸನೆ ಮತ್ತು ಸಂಸ್ಕಾರಗಳು : ಜಾನಪದ ವೈಜ್ಞಾನಿಕ ಭಾಷ್ಯ (ಧರ್ಮತತ್ವ)
ಮಾಡ್ತ (ವಿಲ್ಯಂ)
ಸಂ: ೧೫, ಸಂ: ೧-೨, ಪು: ೧೨೧-೧೩೬, ಅಗಸ್ಟ-ನವಂಬರ ೮೨

೧೨೭. ಕೊಕಟನೂರು : ಒಂದು ಐತಿಹಾಸಿಕ ಸಮೀಕ್ಷೆ (ಇತಿಹಾಸ)
ಮಾಳಿ (ವ್ಹಿ. ಎಸ್.)
ಸಂ: ೧೯, ಸಂ: ೪, ಪು: ೧೧-೧೯, ಮೇ ೮೭

೧೨೮. ಕೊಡಗಿನ ಹಾಲೇರಿ ರಾಜರು ಮತ್ತು ಕನ್ನಡಭಾಷೆ ಬಳಕೆಯ ಪ್ರಯತ್ನಗಳು (ಇತಿಹಾಸ)
ಮಾರಿಹಾಳ (ವಿ. ಜಿ.)
ಸಂ: ೧೨, ಸಂ: ೩, ಪು: ೮೦-೯೦, ಜನವರಿ ೮೦

೧೨೯. ಕೊಲರಿಜ್‌ನ ದೃಷ್ಟಿಯಲ್ಲಿ ಇಮ್ಯಾಜಿನೇಶನ್ (ಕಾವ್ಯಮೀಮಾಂಸೆ)
ಕೊಟ್ರಶೆಟ್ಟಿ (ಎಂ. ಬಿ)
ಸಂ: ೧೫, ಸಂ: ೧-೨, ಪು: ೭-೧೬, ಅಗಸ್ಟ-ನವಂಬರ ೮೨

೧೩೦. ಕೊಲ್ಲಾಪುರ ಶ್ರೀಲಕ್ಷ್ಮೀಸೇನ ಭಟ್ಟಾರಕ ಜೈನಮಠದ ಹಸ್ತಪ್ರತಿ ಭಂಡಾರ (ಹಸ್ತಪ್ರತಿ)

ಹಿರೇಮಠ (ಬಿ. ಆರ್.)
ಸಂ: ೧೧, ಸಂ: ೧, ಪು: ೧೪೪–೧೪೬, ಅಗಸ್ಟ ೭೮

೧೩೧. ಕೋಗಿಲೆ (ಕವನ)
ಪಟೇಲ (ಎಚ್. ಎಂ.), ರಂಗೇನಹಳ್ಳಿ
ಸಂ: ೧೭, ಸಂ: ೧, ಪು: ೧೬೦, ಅಗಸ್ಟ ೮೪

೧೩೨. ಕೋರ್ಟಿನಲ್ಲಿ (ಕವನ)
ಕಾಡನಕುಪ್ಪೆ (ಶಿವರಾಮು)
ಸಂ: ೧೧, ಸಂ: ೪, ಪು: ೪೮–೪೯, ಮೇ ೭೯

೧೩೩. ಕ್ರೋಚೇನ ಅಭಿವ್ಯಕ್ತಿತತ್ವ ವಿವೇಚನೆ (ಕಾವ್ಯಮೀಮಾಂಸೆ)
ಕೊಟ್ರಶೆಟ್ಟಿ (ಎಂ. ಬಿ.)
ಸಂ: ೧೧, ಸಂ: ೨, ಪು: ೪೪-೫೨, ನವಂಬರ ೭೮

೧೩೪. ಗಣಕಯಂತ್ರದಲ್ಲಿ ಮುದ್ದಣ ಕವಿ (ಸಂಕೀರ್ಣ)
ಗುಂಜಾಳ (ಎಸ್. ಆರ್.)
ಸಂ: ೧೧, ಸಂ: ೩, ಪು: ೪೨-೫೦, ಫೆಬ್ರುವರಿ ೭೯

೧೩೫. ಗದಗ–ಬೆಟಗೇರಿ ಶಾಸನಗಳು (ಶಾಸನ)
ಕೊಪ್ಪ (ಎಸ್. ಕೆ)
ಸಂ: ೧೨, ಸಂ: ೩, ಪು: ೭–೨೨, ಜನವರಿ ೮೦

೧೩೬. ಗರಣಿಯ ಬಸವಲಿಂಗ ಕೃತ ತೋಂಟದ ಸಿದ್ಧೇಶ್ವರನ ಪವಾಡದ ತಾರಾವಳಿ (ಸಂಪಾದನೆ)
ಹಿರೇಮಠ (ಬಿ. ಆರ್.)
ಸಂ: ೧೯, ಸಂ: ೩, ಪು: ೪೪-೫೨, ಜನವರಿ ೮೭

೧೩೭. ಗಂಡಿನೊಳ್ ಭೀಮಸೇನಂ (ವಿಮರ್ಶೆ)
ವೃಷಭೇಂದ್ರಸ್ವಾಮಿ (ಎಸ್. ಎಂ.)
ಸಂ: ೧೩, ಸಂ: ೩-೪, ಪು: ೮೨–೯೧, ಜನವರಿ–ಮೇ ೮೧

೧೩೮. ಗಾಳಿಗುದರಿ : ವಾಡಪ್ಪಿ ಬಿ. ಆರ್. (ಪುಸ್ತಕ ವಿಮರ್ಶೆ)
ಯಕ್ಕುಂಡಿಮಠ (ಬಿ. ವ್ಹಿ.)
ಸಂ: ೧೯, ಸಂ: ೪, ಪು: ೮೮–೯೧, ಮೇ ೮೭

೧೩೯. ಗಾಳಿಶಕ್ತಿ (ವಿಜ್ಞಾನ)
ಜಗದೀಶ (ಬಿ. ಎಸ್.)
ಸಂ: ೧೭, ಸಂ: ೨, ಪು: ೫೬–೬೦, ನವಂಬರ ೮೪

೧೪೦. ಗಾಯ್ ಡಿ ಮೊಪಾಸಾ (ವಿಮರ್ಶೆ)
ಸಿಂಪಿ (ವೀರೇಂದ್ರ)
ಸಂ: ೧೫, ಸಂ: ೧–೨, ಪು: ೩೯–೪೮, ಆಗಸ್ಟ–ನವಂಬರ ೮೨

೧೪೧. ಗ್ರಾಮೀಣ ಪ್ರೌಢ ಮಹಿಳೆಯರಿಗೆ ಶಿಕ್ಷಣ (ಶಿಕ್ಷಣಶಾಸ್ತ್ರ)
ಲಲಿತಾಂಬ ವೃಷಭೇಂದ್ರ ಸ್ವಾಮಿ
ಸಂ: ೧೪, ಸಂ: ೩–೪ ಪು: ೭೩–೭೯, ಜನವರಿ-ಮೇ ೮೨

೧೪೨. ಗಾಂಧೀ ಚಿತ್ರ (ಕವನ)
ಮೂಲಿಮನಿ (ಶಿವಾನಂದ)
ಸಂ: ೧೧, ಸಂ: ೨, ಪು: ೮೫, ನವಂಬರ ೭೮

೧೪೩. "ಗಿರಿಯ ಪರಂಜ್ಯೋತಿ" (ವಿಮರ್ಶೆ)
ಜವಳಿ (ಬಿ. ಸಿ.)
ಸಂ: ೧೯, ಸಂ: ೨, ಪು: ೧೫೪–೧೬೧, ನವಂಬರ ೮೬

೧೪೪. ಗೀತೆಯಲ್ಲಿ ಕಾಣುವ ಮಾತೃಪದ ಪದ್ಧತಿ (ಸಮಾಜವಿಜ್ಞಾನ)
ಬೆಂಗೇರಿ (ಎಚ್. ಜಿ.)
ಸಂ: ೧೧, ಸಂ: ೪, ಪು: ೩೬–೪೧, ಮೇ ೭೯

೧೪೫. ಗುಂಡಬಸವನನ್ನು ಕುರಿತ ಸ್ವರವಚನಗಳು (ಸಂಪಾದನೆ)
ಹಿರೇಮಠ (ಬಿ. ಆರ್.)
ಸಂ: ೧೯, ಸಂ: ೨, ಪು: ೧೪೬–೧೫೩, ನವಂಬರ ೮೬

೧೪೬. ಗೊಮ್ಮಟ : ವರ್ತಮಾನಕ್ಕೂ ಸವಾಲು (ಕವನ)
ಹಿಂಗಮಿರೆ (ಬುದ್ದಣ್ಣ)
ಸಂ: ೧೩, ಸಂ: ೩–೪, ಪು: ೬೦–೬೧, ಜನವರಿ–ಮೇ ೮೧

೧೪೭. ಗೊಮ್ಮಟ ಮತ್ತು ದಿಗಂಬರತ್ವ (ಕವನ)
ಮಹೀಶವಾಡಿ (ಬಿ. ಬಿ.)
ಸಂ: ೧೩, ಸಂ: ೩–೪, ಪು: ೪೭–೫೧, ಜನವರಿ–ಮೇ ೮೧

೧೪೮. ಗೊಮ್ಮಟೇಶ (ಕವನ)
ಇಮ್ರಾಪೂರ (ಸೋಮಶೇಖರ)
ಸಂ: ೧೩, ಸಂ: ೩–೪, ಪು: ೫೮–೫೯, ಜನವರಿ–ಮೇ ೮೧

೧೪೯ ಗೋವಿಂದ ಪೈಗಳ ಇತರ ಸಂಶೋಧನೆ (ವಿಮರ್ಶೆ)
ರಾಜೂರು (ವೀರಣ್ಣ)
ಸಂ: ೧೬, ಸಂ: ೩–೪, ಪು: ೧೦೪–೧೧೮, ಜನವರಿ–ಮೇ ೮೪

೧೫೦. ಗೋವಿಂದ ಪೈಗಳ ಇತಿಹಾಸ ಸಂಶೋಧನೆ (ವಿಮರ್ಶೆ)
ವೆಂಕಟಾಚಲಶಾಸ್ತ್ರಿ (ಟಿ. ವಿ.)
ಸಂ: ೧೬, ಸಂ: ೩–೪, ಪು: ೮೨–೧೦೩, ಜನವರಿ–ಮೇ ೮೪

೧೫೧. ಗೋವಿಂದ ಪೈಯವರ ನಾಟಕಗಳು (ವಿಮರ್ಶೆ)
ಭಟ್ಟ (ಲಕ್ಷ್ಮೀ ನಾರಾಯಣ)
ಸಂ: ೧೬, ಸಂ: ೩–೪, ಪು: ೧೯–೩೩, ಜನವರಿ–ಮೇ ೮೪

೧೫೨. ಗೋವಿಂದ ಪೈಯವರ ಪತ್ರ–ಪ್ರಬಂಧ–ಸಾಹಿತ್ಯ (ವಿಮರ್ಶೆ)
ಪಾಟೀಲ (ಎಸ್. ಪಿ.)
ಸಂ: ೧೬, ಸಂ: ೩–೪, ಪು: ೩೪–೪೯, ಜನವರಿ–ಮೇ ೮೪

೧೫೩. ಗೋವಿಂದ ಪೈಯವರ ಸಾಹಿತ್ಯಸಂಶೋಧನೆ (ವಿಮರ್ಶೆ)
ಮಲ್ಲಾಪುರ (ಬಿ. ವ್ಹಿ.)
ಸಂ: ೧೬, ಸಂ: ೩–೪, ಪು: ೬೩–೮೧, ಜನವರಿ–ಮೇ ೮೪

೧೫೪. ಗೋವಿಂದ ಪೈ : ಶತಮಾನದ ಪುಣ್ಯಸ್ಮರಣೆ (ವಿಮರ್ಶೆ)
ರೈ (ಕಯ್ಯಾರ ಕಿಞ್ಞಣ್ಣ)
ಸಂ: ೧೬, ಸಂ: ೩-೪, ಪು: ೧–೧೮, ಜನವರಿ–ಮೇ ೮೩

೧೫೫. ಗೋವೆಯ ಕದಂಬ ಮೂರನೇಯ ಗೂವಲದೇವನ ಆಳಿಕೆಯ ಪ್ರಾಚೀನ ಶಾಸನ (ಶಾಸನ)
ಹಿರೇಮಠ (ಬಿ. ಆರ್.)
ಪಾಟೀಲ (ಎಸ್. ಪಿ.)
ವೀರಣ್ಣ (ಕೆ. ಪಿ.)
ಸಂ: ೨೦, ಸಂ: ೩, ಪು: ೭೭–೮೬, ಜನವರಿ ೮೮

೧೫೬. ಘಳಿಗೆವಟ್ಟಲು (ಒರೆಗಲ್ಲು)
ಶ್ರೀಕಂಠಯ್ಯ (ಕೆ)
ಸಂ: ೧೧, ಸಂ: ೩, ಪು: ೧೫೦–೧೫೨, ಫೆಬ್ರುವರಿ ೭೯

೧೫೭. ಚಕ್ರವರ್ತಿ ಭುವನನೈಕಮಲ್ಲದೇವನ ಬೆಳವಡಿ ಶಾಸನ (ಶಾಸನ)
ಗುರವ (ಆರ್. ಎನ್.)
ಸಂ: ೧೧, ಸಂ: ೪, ಪು: ೨೯–೩೫, ಮೇ ೭೯

೧೫೮. ಚನ್ನಬಸವೇಶ್ವರರ 'ಶೂನ್ಯಮಂತ್ರಗೋಪ್ಯ' (ಒರೆಗಲ್ಲು–ಸಾಹಿತ್ಯಚರಿತ್ರೆ)

ರಾಜೂರ (ವೀರಣ್ಣ)
ಸಂ: ೧೧, ಸಂ: ೪, ಪು: ೧೪೦-೧೪೩, ಮೇ ೭೯

೧೫೯. ಚಲದೊಳ್ ದುರ್ಯೋಧನಂ (ವಿಮರ್ಶೆ)
ಹಿಂಗಮಿರೆ (ಬುದ್ದಣ್ಣ)
ಸಂ: ೧೩, ಸಂ: ೩-೪ ಪು: ೬೬-೭೩, ಜನವರಿ-ಮೇ ೮೧

೧೬೦. ಚಾಪವಿದ್ಯಾ ಬಲದೊಳ್ ಕುಂಭೋದ್ಭವಂ (ವಿಮರ್ಶೆ)
ಮಲ್ಲಾಪುರ (ಬಿ. ವ್ಹಿ.)
ಸಂ: ೧೩, ಸಂ: ೩-೪, ಪು: ೧೦೧-೧೧೩, ಜನವರಿ-ಮೇ ೮೧

೧೬೧. ಚಾವುಂಡರಾಯನ ಧಾರ್ಮಿಕ ಸಾಧನೆ (ಇತಿಹಾಸ)
ಮಹೀಶವಾಡಿ (ಬಿ. ಬಿ.)
ಸಂ: ೧೩, ಸಂ: ೩-೪, ಪು: ೩೩-೩೮, ಜನವರಿ-ಮೇ ೮೧

೧೬೨. ಚಾವುಂಡರಾಯನ ರಾಜಕೀಯ ಸಾಧನೆ (ಇತಿಹಾಸ)
ಶಿರೂರ (ಬಿ. ವ್ಹಿ.)
ಸಂ: ೧೩, ಸಂ: ೩-೪, ಪು: ೩೯-೪೬, ಜನವರಿ-ಮೇ ೮೧

೧೬೩. ಚಿತ್ರಾಂಗದೆಯ ಕನಸುಗಳು-ಒಂದು ವಿಶ್ಲೇಷಣೆ (ವಿಮರ್ಶೆ)
ಇಕ್ಬಾಲ (ಎಂ)
ಸಂ: ೧೮, ಸಂ: ೪, ಪು: ೩೧-೩೮, ಮೇ ೮೬

೧೬೪. ಚಿರಂತನ ಪ್ರೀತಿ (ಕವನ-ಅನುವಾದ)
ಹಿಂಗಮಿರೆ (ಬುದ್ದಣ್ಣ)
ಸಂ: ೧೯, ಸಂ: ೨, ಪು: ೧೦೯-೧೧೩, ನವಂಬರ ೮೬

೧೬೫. ಚೇತನ-ಸಂ. ಕೆ. ವಿರೂಪಾಕ್ಷಗೌಡ (ಪುಸ್ತಕ ವಿಮರ್ಶೆ)
ಸಣ್ಣಕ್ಕಿ (ನಿಂಗಣ್ಣ)
ಸಂ: ೧೧, ಸಂ: ೨, ಪು: ೧೮೨-೧೮೩, ನವಂಬರ ೭೮

೧೬೬. ಚೋಳನಾಯಕರು (ಸಮಾಜವಿಜ್ಞಾನ)
ಕುಳ್ಳಿ (ಜಯವಂತ)
ಸಂ: ೧೪, ಸಂ: ೧-೨, ಪು: ೫೬-೬೬, ಅಗಸ್ಟ-ನವಂಬರ ೮೧

೧೬೭. ಜಡಭರತರ ನಾಟಕಗಳು (ವಿಮರ್ಶೆ)
ಸಬರದ (ಬಸವರಾಜ)
ಸಂ: ೧೯, ಸಂ: ೩, ಪು: ೨೭-೩೭, ಜನವರಿ ೮೭

೧೬೮. ಜನಪದ ಕಲೆಗಳು ಮತ್ತು ಶರಣರು (ಜಾನಪದ)
ಹಕಾರಿ (ದೇವೇಂದ್ರಕುಮಾರ)
ಸಂ: ೧೪, ಸಂ: ೧-೨, ಪು: ೬೭-೮೩, ಅಗಸ್ಟ-ನವಂಬರ ೮೧

೧೬೯. ಜನಪದ ಕವಿಚರಿತೆ (ಜಾನಪದ)
ಲಠ್ಠೆ (ಎಂ. ಎಸ್.)
ಸಂ: ೧೧, ಸಂ: ೨, ಪು: ೫೭-೬೭, ನವಂಬರ ೭೮

೧೭೦. ಜನಪದ ಕವಿ ಚರಿತೆ (ಜಾನಪದ)
ಲಠ್ಠೆ (ಎಂ. ಎಸ್.)
ಸಂ: ೧೧, ಸಂ: ೨, ಪು: ೫೩-೬೭, ನವಂಬರ ೭೮

೧೭೧. ಜನಪದ ಕವಿಚರಿತೆ (ಜಾನಪದ)
ಲಠ್ಠೆ (ಎಂ. ಎಸ್.)
ಸಂ: ೧೧, ಸಂ: ೩, ಪು: ೧೩೫-೧೪೯, ಫೆಬ್ರುವರಿ ೭೯

೧೭೨. ಜನಪದ ಕವಿಚರಿತೆ (ಜಾನಪದ)
ಲಠ್ಠೆ (ಎಂ. ಎಸ್.)
ಸಂ: ೧೧, ಸಂ: ೪, ಪು: ೫೫-೭೮, ಮೇ ೭೯

೧೭೩. ಜನಪದ-ತ್ರಿಪದಿಸಾಹಿತ್ಯದಲ್ಲಿ ಮಕ್ಕಳು (ಜಾನಪದ)
ಹಕಾರಿ (ದೇವೇಂದ್ರಕುಮಾರ)
ಸಂ: ೧೨, ಸಂ: ೧-೨, ಪು: ೧-೮, ಅಗಸ್ಟ-ನವಂಬರ ೭೯

೧೭೪. ಜನಪದ ಭಾಷಾವಿಜ್ಞಾನ : ಕ್ಷೇತ್ರಕಾರ್ಯ (ಭಾಷಾವಿಜ್ಞಾನ)
ಮಾಡ್ತ (ವಿಲ್ಯಂ)
ಸಂ: ೧೫, ಸಂ: ೩-೪, ಪು: ೫೦-೬೨, ಜನವರಿ-ಮೇ ೮೩

೧೭೫. ಜನಪದ ಸಾಹಿತ್ಯದಲ್ಲಿ ಎಲ್ಲಮ್ಮನ ಸಂಪ್ರದಾಯದ ಸುಳುಹುಗಳು (ಜಾನಪದ)
ಪಾಟೀಲ (ಆ. ಎ.)
ಸಂ: ೧೪, ಸಂ: ೧-೨, ಪು: ೧೪೪-೧೫೨, ಅಗಸ್ಟ-ನವಂಬರ ೮೧

೧೭೬. ಜನಸಂಖ್ಯಾ ನಿಯಂತ್ರಣ (ಕವನ)
ಮೂಲಿಮನಿ (ಶಿವಾನಂದ)
ಸಂ: ೧೫, ಸಂ: ೩-೪, ಪು: ೧೧೬, ಜನವರಿ-ಮೇ ೮೩

೧೭೭. ಜಪಾನಿನ ನೋ ನಾಟಕಗಳು (ವಿಮರ್ಶೆ)
ನಾಯ್ಕರ (ಬಸವರಾಜ)
ಸಂ: ೨೦, ಸಂ: ೪, ಪು: ೧೮೧-೧೮೯ ಮೇ ೮೮

೧೭೮. ಜಲಜನಕ ಭವಿಷ್ಯತ್ತಿನ ಇಂಧನ (ವಿಜ್ಞಾನ)
ಮೂರ್ತಿ (ಪಿ.ಎಸ್.)
ಸಂ: ೧೭, ಸಂ: ೨, ಪು: ೪೯–೫೫, ನವಂಬರ ೮೪

೧೭೯. ಜಲವಿದ್ಯುತ್‌ಶಕ್ತಿ ಸ್ಥಾವರಗಳು (ವಿಜ್ಞಾನ)
ಕುಲಕರ್ಣಿ (ವ್ಹಿ.ಜಿ.)
ಸಂ: ೧೭, ಸಂ: ೨, ಪು: ೩೧–೩೯, ನವಂಬರ ೮೪

೧೮೦. ಜಾತ್ರೆಗಳು ಮತ್ತು ಕಲೆ (ಜಾನಪದ)
ಹಕಾರಿ (ದೇವೇಂದ್ರಕುಮಾರ)
ಸಂ: ೧೭, ಸಂ: ೩, ಪು: ೮೨-೯೭, ಜನವರಿ ೮೫

೧೮೧. ಜಾನಪದದಲ್ಲಿ ಕ್ಷೇತ್ರಕಾರ್ಯ: ಕೆಲವು ವಿಚಾರಗಳು (ಜಾನಪದ)
ಸತ್ಯನಾಥ (ಟಿ.ಎಸ್.)
ಸಂ: ೧೧, ಸಂ: ೨, ಪು: ೫೧–೭೨, ಫೆಬ್ರವರಿ ೭೯

೧೮೨. ಜಾನಪದ ಸಾಹಿತ್ಯದಲ್ಲಿ ಮಗನ ಪ್ರಲಾಪ (ಜಾನಪದ)
ಪಾಟೀಲ (ಸದಾನಂದ)
ಸಂ: ೧೮, ಸಂ: ೪, ಪು: ೧೧೭–೧೨೦, ಮೇ ೮೬

೧೮೩ ಜಾನಪದ ಸಾಹಿತ್ಯಸಂಪಾದನೆ (ಜಾನಪದ)
ಕಲಬುರ್ಗಿ (ಎಂ.ಎಂ.)
ಸಂ: ೧೧, ಸಂ: ೨, ಪು: ೯೨–೧೧೯, ನವಂಬರ ೭೮

೧೮೪. ಜಿನಸೇನ ಮತ್ತು ಪಂಪ: ಆಕರ–ಸ್ವೀಕಾರ–ಸಾಧನೆಗಳ ಸಮಸ್ಯೆಗಳು (ಸಾಹಿತ್ಯಚರಿತ್ರೆ)
ವೃಷಭೇಂದ್ರ ಸ್ವಾಮಿ (ಎಸ್.ಎಂ.)
ಸಂ: ೧೮, ಸಂ: ೧, ಪು: ೧-೧೨, ಆಗಸ್ಟ ೮೫

೧೮೫. ಜೀವನಚಿತ್ರಗಳು–ವಿದ್ಯಾಧೀಶ ಉಪಾಧ್ಯೆ ಹಾಗೂ ಎಸ್.ಆರ್. ಹೆಗಡೆ (ಪುಸ್ತಕ ವಿಮರ್ಶೆ)
ಮಧು ವೆಂಕಾರೆಡ್ಡಿ
ಸಂ: ೧೯, ಸಂ: ೩, ಪು: ೨೨೩–೨೨೬, ಜನೆವರಿ ೮೭

೧೮೬. ಜೈವಿಕ ಅನಿಲಶಕ್ತಿ (ವಿಜ್ಞಾನ)
ಸೇತುರಾಮು (ಎಂ.ಎ.)
ಸಂ: ೧೭, ಸಂ: ೨, ಪು: ೪೬–೪೮, ನವಂಬರ ೮೪

೧೮೭ ಜೋಸೆಫ್ ಕಾನ್ರಾಡನ ಕಾದಂಬರಿ: ವಿಕ್ಟರಿ (ವಿಮರ್ಶೆ)
ನಾಯ್ಕರ (ಬಸವರಾಜ)

ಸಂ: ೧೭, ಸಂ: ೩, ಪು: ೧೬–೨೫, ಜನೆವರಿ ೮೫

೧೮೮. ಜಂಗಮತತ್ವ: ಒಂದು ಅಧ್ಯಯನ (ಧರ್ಮ ತತ್ವ)
ಜವಳಿ (ಬಿ ಸಿ.)
ಸಂ: ೧೭, ಸಂ: ೩, ಪು: ೬೨–೮೧, ಜನವರಿ ೮೫

೧೮೯. ಜಂಬಾನಿಯ ಒಂದು ಹೊಸವೀರಗಲ್ಲು: ಶಾಸನ ಶೋಧನೆ (ಶಾಸನ)
ರಘುನಾಥ ಭಟ್ (ಎಚ್.ಆರ್.)
ಸಂ: ೨೦, ಸಂ: ೪, ಪು: ೧೫೩–೧೫೮, ಮೇ ೮೮

೧೯೦. ಟಿ.ಎಸ್. ಎಲಿಯಟ್‌ನ ವ್ಯಕ್ತಿನಿರಪೇಕ್ಷ ಸಿದ್ಧಾಂತ (ಕಾವ್ಯಮೀಮಾಂಸೆ)
ಕೊಟ್ರಶೆಟ್ಟಿ (ಎಂ.ಬಿ.)
ಸಂ: ೧೨, ಸಂ: ೪, ಪು: ೧–೮, ಮೇ ೮೦

೧೯೧. ಡಾ|| ಅಂಬೇಡ್ಕರ ಮತ್ತು ಬೌದ್ಧಧರ್ಮ (ಧರ್ಮ ತತ್ವ)
ಅಭಿಶಂಕರ (ಕೆ)
ಸಂ: ೧೯, ಸಂ: ೩, ಪು: ೮೦-೧೦೧, ಜನವರಿ ೮೭

೧೯೨. ಡಾ|| ಡಿ.ವಿ.ಜಿ. ಅವರ 'ಜೀವನ ದೃಷ್ಟಿ' (ವಿಮರ್ಶೆ)
ರಾಜಪ್ಪ (ಆರ್)
ಸಂ: ೨೦, ಸಂ: ೩, ಪು: ೧–೧೨, ಜನವರಿ ೮೮

೧೯೩. ಡಾ|| ದಿನಕರ ದೇಸಾಯಿ ಅವರ ಮಕ್ಕಳ ಪದಗಳು: ಒಂದು ಸಮೀಕ್ಷೆ (ಸಂಕೀರ್ಣ)
ಕಾಯ್ಕಿಣಿ (ಗೌರೀಶ)
ಸಂ: ೧೨, ಸಂ: ೧–೨, ಪು: ೮೪-೧೦೯, ಆಗಸ್ಟ್-ನವಂಬರ ೭೯

೧೯೪. ಡಾ|| ಹಿರೇಮಲ್ಲೂರ ಈಶ್ವರನ್ ಅವರ "ಲಿಂಗಾಯತ ಧರ್ಮ, ಸಂಸ್ಕೃತಿ ಮತ್ತು ಸಮಾಜ" (ಕೃತಿವಿಮರ್ಶೆ)
ಕೊಟ್ರಶೆಟ್ಟಿ (ಎಂ.ಬಿ.)
ಸಂ: ೧೪, ಸಂ: ೨–೪, ಪು: ೧೧೭-೧೨೧. ಜನವರಿ–ಮೇ ೮೨

೧೯೫. ತದ್ಧಿತ-ತಾತ್ಸಮ್ಯ ಶಬ್ದಗಳಲ್ಲಿ ಪ್ರಥಮ ಸ್ವರಾದೇಶ: ಒಂದು ಅನ್ವಯಿಕ ವಿಶ್ಲೇಷಣೆ (ವ್ಯಾಕರಣ)
ಅನ್ಬನ್ (ಕೆ)
ಸಂ: ೧೭, ಸಂ: ೩, ಪು: ೧೬೨-೧೬೫, ಜನವರಿ ೮೫

೧೯೬. ತಮಿಳು ಸಾಹಿತ್ಯದಲ್ಲಿ ಬಸವಪುರಾಣ (ಸಾಹಿತ್ಯಚರಿತ್ರೆ)
ಕುಲಕರ್ಣಿ (ಪಿ.ವಿ.)

ಸಂ: ೧೫, ಸಂ: ೧–೨, ಪು: ೩೩–೩೮, ಅಗಸ್ಟ–ನವಂಬರ ೮೨

೧೯೭. ತಂತ್ರದ ಮೂಲಕ ಅನುಭವ ಶೋಧನೆ (ವಿಮರ್ಶೆ)
ನಾಯ್ಕರ (ಬಸವರಾಜ)
ಸಂ: ೧೭, ಸಂ: ೧, ಪು: ೨೪–೩೧, ಅಗಸ್ಟ ೮೪

೧೯೮. ತಾಳಿಕೋಟಿ ದ್ಯಾಮವ್ವ (ಜಾನಪದ)
ಮೂಲಗತ್ತಿ (ಅರವಿಂದ)
ಸಂ: ೧೨, ಸಂ: ೪, ಪು: ೮೩–೮೬; ಮೇ ೮೦

೧೯೯. ತಿರುನೀಲಕಂಠಯ್ಯನ ಚರಿತ್ರೆ (ಸಂಪಾದನೆ)
ರಾಜೂರ (ವೀರಣ್ಣ)
ಸಂ: ೨೦, ಸಂ: ೩, ಪು: ೫೮-೭೦, ಜನವರಿ ೮೮

೨೦೦ ತ್ರಿಭುವನತಾತನ ಪಗಲ್ಯೋಳ ರಗಳೆ (ಸಂಪಾದನೆ)
ಶಿವಣ್ಣ (ಎಸ್)
ಸಂ: ೧೮, ಸಂ: ೨–೩, ಪು: ೯೧-೯೭, ನವಂಬರ ೮೮-ಜನವರಿ ೮೬

೨೦೧. ತುಮಕೂರ ಜಿಲ್ಲೆಯ ಶಾಸನಗಳು: ಒಂದು ಅಧ್ಯಯನ (ಶಾಸನ)
ಶಿವತಾರಕ (ಕೆ.ಬಿ.)
ಸಂ: ೧೮, ಸಂ: ೪, ಪು: ೯೦–೯೨, ಮೇ ೮೬

೨೦೨. ತುಳುವಿನ ಎರಡು ಕಾದಂಬರಿಗಳು: ಒಂದು ಅಧ್ಯಯನ (ವಿಮರ್ಶೆ)
ಹರಿಕೃಷ್ಣ (ಭರಣ್ಯ)
ಸಂ: ೨೦, ಸಂ: ೪, ಪು: ೧೦೫–೧೨೬, ಮೇ ೮೮

೨೦೩. ತೆಲುಗಿನಲ್ಲಿ ಸಹಾಯಕ ಕ್ರಿಯಾಪದಗಳು (ವ್ಯಾಕರಣ)
ಕಿಲಾರಿ (ಎನ್.ಪಿ.)
ಸಂ: ೧೫, ಸಂ: ೩–೪–ಪು: ೭೭–೮೭, ಜನವರಿ–ಮೇ ೮೩

೨೦೪. ತೋಟಪಟ್ಟಿ: ಕನ್ನಡ ವೃತ್ತಿಪದಕೋಶ-೨ (ಜಾನಪದ)
ಶಿವಾನಂದ (ವಿ)
ಸಂಪುಟ: ೧೧, ಸಂ: ೧, ಪು: ೯೦–೧೦೯, ಅಗಸ್ಟ ೭೯

೨೦೫. ದಕ್ಕುಂದಲೆ–ಒಂದು ಅರ್ಥ ವಿವೇಚನೆ (ಒರೆಗಲ್ಲು-ಸಂಶೋಧನೆ)
ಸುಬ್ಬಕೃಷ್ಣ (ಆರ್)
ಸಂ: ೧೨, ಸಂ: ೩, ಪು: ೧೨೫–೧೨೬, ಜನವರಿ ೮೦

೨೦೬. ದಲಿತ ಸಾಹಿತ್ಯ : ನಿಂತ ಬದುಕಿಗೊಂದು ಹೊಸಸೆಲೆ (ವಿಮರ್ಶೆ)
ಕಟ್ಟೀಮನಿ (ತೇಜಸ್ವಿ)
ಸಂ: ೧೮, ಸಂ: ೨-೩, ಪು: ೧೯-೩೭, ನವಂಬರ ೮೫-ಜನವರಿ ೮೬

೨೦೭. ದಸ್ತಯೇವಸ್ಕಿಯ ಮೇರುಕೃತಿ: ದ ಕ್ರೈಂ ಆ್ಯಂಡ ಪನಿಶ್‌ಮೆಂಟ್ (ವಿಮರ್ಶೆ
ನಾಯ್ಕರ (ಬಸವರಾಜ)
ಸಂ: ೨೦, ಸಂ: ೪, ಪು: ೮೧-೯೦, ಮೇ ೮೮

೨೦೮. 'ದಾರಿ ಯಾವುದಯ್ಯಾ ವೈಕುಂಠಕೆ' ನಾಟಕ: ಒಂದು ವಿಶ್ಲೇಷಣೆ (ವಿಮರ್ಶೆ)
ದಿಬ್ಬದ (ಶಾಂತಿನಾಥ)
ಸಂ: ೧೫, ಸಂ: ೧–೨, ಪು: ೧೦೧-೧೧೩, ಅಗಸ್ಟ-ನವಂಬರ ೮೨

೨೦೯. ದಿಗಂಬರ ಸಾಧು (ಧರ್ಮ ತತ್ವ)
ಮಹೀಶವಾಡಿ (ಬಿ.ಬಿ.)
ಸಂ: ೧೪, ಸಂ: ೧.೨, ಪು: ೧೪೦–೧೪೧, ಅಗಸ್ಟ-ನವಂಬರ ೮೧

೨೧೦. ದಿವ್ಯಪದ್ಧತಿ ಮತ್ತು ವೀರಶೈವ ಪುರಾಣಗಳಲ್ಲಿ ದಿವ್ಯದ ಕಥೆಗಳು (ಧರ್ಮ ತತ್ವ)
ಪೂಜಾರ (ವ್ಹಿ.ಜಿ.)
ಸಂ: ೨೦, ಸಂ: ೨, ಪು: ೨೭–೩೬, ನವಂಬರ ೮೭

೨೧೧. ದುರ್ಗಸಿಂಹನ ಪಂಚತಂತ್ರದ ಪಾಠಪರಿಷ್ಕರಣ (ಗ್ರಂಥಸಂಪಾದನೆ)
ಐತಾಳ (ಚಂದ್ರಶೇಖರ ಗುಂಡ್ಮಿ)
ಸಂ: ೧೧, ಸಂ: ೨, ಪು: ೧–೧೨, ನವಂಬರ ೭೮

೨೧೨. ದೇವಚಂದ್ರನ 'ಭಕ್ತಿಸಾರ ಶತಕತ್ರಯ' (ಒರೆಗಲ್ಲು-ಸಂಶೋಧನೆ)
ಶಿವಣ್ಣ (ಎಸ್)
ಸಂ: ೧೧, ಸಂ: ೩, ಪು: ೧೫೨-೧೫೪, ಫೆಬ್ರುವರಿ ೭೯

೨೧೩. ದೇವರೆಂಬ ಸರ್ವಶಕ್ತನ ದಿ ಲಾಸ್ಟ ಟೆಸ್ಟಾಮೆಂಟ್ (ಕವನ)
ಕಮ್ಮಾರ (ಈಶ್ವರ)
ಸಂ: ೧೨, ಸಂ: ೩, ಪು: ೯೩-೯೭, ಜನವರಿ ೮೦

೨೧೪. ದೇವಾಲಯ ಸಂಕೇತಾರ್ಥ ಮತ್ತು ದಕ್ಷಿಣದ ದೇವಾಲಯಗಳು (ಇತಿಹಾಸ)
ಅಯ್ಯರ (ಸೂರ್ಯನಾರಾಯಣ ಎಸ್.)
ಸಂ: ೧೨, ಸಂ: ೪, ಪು: ೯೩-೯೮, ಮೇ ೮೦

೨೧೫. ದೈವೀ ಆರಾಧನೆಗೆ ಸಂಬಂಧಿಸಿದ ಕೆಲವು ಜನಪದ ಆಚರಣೆಗಳು (ಜಾನಪದ)
ಸಿದ್ಧಲಿಂಗಪ್ಪ (ಎಚ್.ಎಸ್)
ಸಂ: ೧೧, ಸಂ: ೧, ಪು: ೩೮-೪೮, ಅಗಸ್ಟ ೭೮

೨೧೬. ಧರ್ಮದ ಸ್ವರೂಪ ಲಕ್ಷಣಗಳು (ಧರ್ಮ ತತ್ವ)
ರೆವರೆಂಡ್ ಫಾದರ ಸಿ.ಸಿ.ಎ ಪೈ (ಎಸ್.ಜೆ)
ಸಂ: ೨೦, ಸಂ: ೧, ಪು: ೧-೨೦, ಅಗಸ್ಟ ೮೭

೨೧೭. 'ಧ್ವನಿ' ಸಂ: ಎಸ್.ಪಿ. ಪಾಟೀಲ (ಪುಸ್ತಕ ವಿಮರ್ಶೆ)
ಹೆಗಡೆ (ಜಿ.ಎಂ.)
ಸಂ: ೧೫, ಸಂ: ೧-೨, ಪು: ೧೩೭-೧೩೮, ಆಗಸ್ಟ-ನವಂಬರ ೮೨

೨೧೮. ಧೃತಿ (ಕವನ)
ದೊಡ್ಡರಂಗೇಗೌಡ
ಸಂ: ೧೨, ಸಂ: ೪, ಪು: ೧೪೩-೧೪೪, ಮೇ ೮೦

೨೧೯. ಧಾರ್ಮಿಕ ಪರಿಸರದಲ್ಲಿ ಕವಿ ರನ್ನ (ವಿಮರ್ಶೆ)
ಪಾಟೀಲ (ಎಸ್.ಪಿ)
ಸಂ: ೧೩, ಸಂ: ೩-೪, ಪು: ೨೦-೩೨, ಜನವರಿ-ಮೇ ೮೧

೨೨೦. ನನಗೆ ಬೇಕು-ಗೊಮ್ಮಟ (ಕವನ)
ಹೆಗಡೆ (ಶ್ರೀಪಾದ ಕಣ್ಣಿ)
ಸಂ: ೧೩, ಸಂ: ೩-೪, ಪು: ೬೪-೬೫, ಜನವರಿ-ಮೇ ೮೧

೨೨೧. ನನ್ನಿಯೊಳನತನಯಂ (ವಿಮರ್ಶೆ)
ಕಲಬುರ್ಗಿ (ಎಂ.ಎಂ)
ಸಂ: ೧೩, ಸಂ: ೩-೪, ಪು: ೭೪-೮೧, ಜನವರಿ-ಮೇ ೮೧

೨೨೨. ನಮ್ಮ ದೇಶದಲ್ಲಿ ಶಕ್ತಿಯ ಬಳಕೆ ಮತ್ತು ಆರ್ಥಿಕ ಅಭಿವೃದ್ಧಿ (ವಿಜ್ಞಾನ)
ಕೊಡ್ಲಿ (ಎಂ.ಸಿ.)
ಸಂ: ೧೭, ಸಂ: ೨, ಪು: ೬೩-೬೮, ನವಂಬರ ೮೪

೨೨೩. ನಮ್ಮ ಮಕ್ಕಳು ಮತ್ತು ಭಾಷೆ (ಭಾಷಾವಿಜ್ಞಾನ)
ಮಾಡ್ತ (ವಿಲ್ಯಂ)
ಸಂ: ೧೨, ಸಂ: ೩, ಪು: ೧-೬ ಜನವರಿ ೮೦

೨೨೪. ನಯಸೇನ ಕವಿಯ ಇತಿವೃತ್ತ (ಸಾಹಿತ್ಯಚರಿತ್ರೆ)
ಕೊಟ್ರಶೆಟ್ಟಿ (ಎಂ.ಬಿ.)
ಸಂ: ೧೭, ಸಂ: ೧, ಪು: ೧-೮, ಅಗಸ್ಟ ೮೪

೨೨೫ ನಯಸೇನನ ಕಥನಕಲೆ (ವಿಮರ್ಶೆ)
ಹಿರೇಮಠ (ಬಿ.ಆರ್)
ಸಂ: ೧೮, ಸಂ: ೨-೩, ಪು: ೮-೧೮, ನವಂಬರ ೭೫-ಜನವರಿ ೮೬

೨೨೬. ನರೆಯಂಗಲ್ಲು-ಪನ್ನೆರಡು (ಶಾಸನ)
ಶಿರೂರ (ಬಿ.ವ್ಹಿ.)
ಸಂ: ೧೮, ಸಂ, ೨-೩, ಪು: ೮೪-೯೦, ನವಂಬರ ೮೫-ಜನವರಿ ೮೬

೨೨೭. ನವಭಾರತ ನಿರ್ಮಾಪಕ: ಶ್ರೀ ಗೋವಿಂದ ಪೈ (ವಿಮರ್ಶೆ)
ವೃಷಭೇಂದ್ರಸ್ವಾಮಿ (ಎಸ್ ಎಂ.)
ಸಂ: ೧೫, ಸಂ: ೩-೪, ಪು: ೭೨-೭೬, ಜನವರಿ-ಮೇ೮೩

೨೨೮. ನಿರ್ಧಾರ (ಕವನ)
ಸಬರದ (ವಿಜಯಶ್ರೀ)
ಸಂ: ೧೧, ಸಂ: ೨, ಪು: ೪೩, ನವಂಬರ ೭೮

೨೨೯. ನಿಸಾರ್ ಅಹಮದ್ ಅವರ 'ಕುರಿಗಳು ಸಾರ್ ಕುರಿಗಳು'-ಒಂದು ವಿಶ್ಲೇಷಣೆ (ವಿಮರ್ಶೆ)
ಸೊಂಡೂರು (ಸುಶೀಲಾ)
ಸಂ: ೧೨, ಸಂ: ೪, ಪು: ೧೩೬-೧೪೨, ಮೇ ೮೦

೨೩೦. ನ್ಯೂಕ್ಲೀಯ ಸಂಯೋಗ ರಿಯಾಕ್ಟರ (ವಿಜ್ಞಾನ)
ನಾಯಿಕ (ಆರ್.ಸಿ.) ಮತ್ತು ದೀಕ್ಷಿತ (ಆರ್.ಎಂ.)
ಸಂ: ೧೭, ಸಂ: ೨, ಪು: ೧೫-೨೪, ನವಂಬರ ೮೪

೨೩೧. ನೆರಳು (ಕವನ)
ಹಕಾರಿ (ದೇವೇಂದ್ರಕುಮಾರ)
ಸಂ: ೧೪, ಸಂ: ೩-೪, ಪು: ೮೦-೮೧, ಜನವರಿ-ಮೇ ೮೨

(ಮುಂದುವರಿಯುವುದು)

■ ■

ಒರೆಗಲ್ಲು :

ಎರಡು ಅಪ್ರಕಟಿತ ವಚನಗಳು

ಅಕ್ಕಗಳ ವಚನ :

ಪೃಥ್ವಿಯಲ್ಲಿ ಗುರೂಪದೇಶವೆಂಬ ನೇಗಿಲ ಪಿಡಿದು
ಅಂತಃಕರಣ ಚತುಷ್ಟಯವೆಂಬ ಪಶುವಂ ಕಟ್ಟಿ
ಓಂಕಾರವೆಂಬ ಕಿಣಿಗೋಲಂ ಪಿಡಿದು
ವ್ರತಕ್ರಿಯವೆಂಬ ಸಾಲನೆತ್ತಿ
ನಿರಾಶೆಯೆಂಬ ಕುಂಟೆಯಂ ತುಱುಗಿ
ದುಷ್ಕರ್ಮಂಗಳೆಂಬ ದುರ್ಮಲರಿಗಳಂ ಕಳಿದು
ನಾನಾ ಮೂಲದ ಬೇರಂ ಕಿತ್ತು
ಜ್ಞಾನಾಗ್ನಿಯೆಂಬ ಬೆಂಕಿಯಿಂ ಸುಟ್ಟು
ಈ ಹೊಲನ ಹಸನ ಮಾಡಿ ಬಿತ್ತುವ ಪರ್ಯಾಯವೆಂತೆಂದೊಡೆ-
ನಾದ ಬಿಂದು ಕಳೆ ಮೊಳೆ ಹದಬೆದೆಯನಱಿದು
ಸ್ಥೂಲವೆಂಬ ದಿಂಡಿಂಗೆ ಶ್ರೀದೇವರೆಂಬ ತಾಳ ನಟ್ಟು
ಸುಷುಮ್ನಾನಾಳವೆಂಬ ಕೋವಿಯಂ ಜೋಡಿಸಿ
ಮೇಲೆ ತ್ರಿಕೂಟಸ್ಥಾನವೆಂಬ ಬಟ್ಟಯಂ ಬಲಿದು
ಕುಂಡಲಿಯ ಸರ್ಪನ ಹಗ್ಗವಂ ಬಿಗಿದು
ಹಂಸನೆಂಬ ಎತ್ತಂ ಕಟ್ಟಿ
ಪ್ರಣವವೆಂಬ ಬೀಜವ ಪಶ್ಚಿಮ ಮುಖಕ್ಕೆ ಬಿತ್ತಿ
ಸಂತೋಷವೆಂಬ ಬೆಳೆಯಂ ಬೆಳೆದು
ಈ ಬೆಳೆಯ ಕೊಯಿದುಂಬ ಪರ್ಯಾಯವೆಂತೆಂದೊಡೆ
ಬಾಗುಚಂದನೆಂಬ ಕುಡುಗೋಲಂ ಪಿಡಿದು
ಜನನದ ನಿಲವಂ ಕೊಯಿದು
ಮರಣದ ಸೂಡಂ ಕಟ್ಟಿ
ಆಕಾಶವೆಂಬ ಬಣಬೆಯಂ ಒಟ್ಟಿ
ಅಷ್ಟಾಂಗಯೋಗವೆಂಬ ಜೀವಧನದಿಂದಮೊಕ್ಕಿ
ತಾಪತ್ರಯವೆಂಬ ಮೆಟ್ಟನಂ ಮೆಟ್ಟಿಸಿ
ಪಾಪದ ಹೊಟ್ಟು ತೂಱಿ

ಪುಣ್ಯದಜರ ಹಮ್ಮನುಳಿಯೆ
ನಿರ್ಮಲನೆಂಬ ಘನರಾಸಿಯಂ ಮಾಡಿ
ಚಿತ್ರಗುಪ್ತರೆಂಬ ಶಾನಭೋಗರ ಸಂಪುಟಕ್ಕೆ ಬರಹಂ ಬರಸದೆ
ವ್ಯವಹಾರಂ ಕದ್ದು
ನಮ್ಮ ಶ್ರೀಶೈಲ ಚೆನ್ನಮಲ್ಲಿಕಾರ್ಜುನನಲ್ಲಿ
ಭಾನುಗೆ ಒಂದೆ ಮುಖವಾದ
ಒಕ್ಕಲಮಗನ ತೋಱಿಸಯ್ಯ ನಿಮ್ಮ ಧರ್ಮ
ಶ್ರೀಶೈಲ ಚೆನ್ನಮಲ್ಲಿಕಾರ್ಜು[ನ] ಪ್ರಭುವೇ.*

ಚೆನ್ನಬಸವಣ್ಣನವರ ವಚನ :

ಕಾಯವೆಂಬ ಭೂಮಿಯ ಮೇಲೆ ಆರಂಬವ ಮಾಡಬಂದ
ಗೌಡನ ಪರ್ಯಾಯವ ನೋಡಿರಣ್ಣ ?
ಶಿವಜ್ಞಾನವೆಂಬ ಕೊಡಲಿಗೆ
ನಿಶ್ಚಿತವೆಂಬ ಕಾವನಿಕ್ಕಿ
ಅಷ್ಟದುಡಿಯೆಂಬ ಅಡವಿಯನೆ ಕಡಿದು
ಕುಟಿಲ ಕುಹಕವೆಂಬ ಕಿಚ್ಚ ಹತ್ತಿಸಿ ಸುಟ್ಟು
ಲೋಭತ್ವವೆಂಬ ಬಟ್ಟೆಯನೆ ಕಟ್ಟಿ
ಶಿವಭಕ್ತರ ನುಡಿಯೆಂಬ ಹಿಂಗಲ್ಲನಿಕ್ಕಿ
ವೈರಾಗ್ಯವೆಂಬ ಹಡಗಂ ಹತ್ತಿಸಿ
ದೃಷ್ಟ ಮುಟ್ಟೆಯೆಂಬ ನೇಗಿಲಿಗೆ
ಅವಧಾನವೆಂಬ ಮೇಣಿಯನಳವಡಿಸಿ
ಜೀವಭಾವವೆಂಬ ಎರಡೆತ್ತುಗಳ ಹೂಡಿ
ಅಱುಹೆಂಬ ಹಗ್ಗವನೆ ಹಿಡಿದು
ಎಚ್ಚಱಿಕೆಯೆಂಬ ಬಾರುಕೋಲ ತಳೆದುಕೊಂಡು
ಒತ್ತಿನೂಕಿ ಭೂಮಿಯ ಹಸನ ಮಾಡಿ ಬಂದ
ಗೌಡನ ಪರ್ಯಾಯವ ನೋಡಿರಣ್ಣ
ಅನೀತಿಯೆಂಬ ಗಾಳಿ ಬೀಸಿ
ವಿಷಯವೆಂಬ ಮಳೆ ಸುರಿದು
ಹದನಾರದ ಮುಂದೆ
ಅಱುಹೆಂಬ ಬೀಜವನೆ ಬಿತ್ತಿ
ಪ್ರಸಾದವೆಂಬ ಗೊಬ್ಬರವನೆ ತಳೆದು
ಆಚಾರವೆಂಬ ಸಸಿಹುಟ್ಟಿ
ಪ್ರಪಂಚೆಂಬ ಹಕ್ಕಿ ಬಂದು

ಆಕರ : [ಓ] ೮೦೧/೧ (೧ನೇ ಗರಿ), ಬೃಹನ್ಮಠ, ಚಿತ್ರದುರ್ಗ.

ಹಕ್ಕಲ ಮಾಡದ ಮುನ್ನ
ನೆನಹೆಂಬ ಕವಣೆಯನೆ ತೆಕ್ಕೊಂಡು
ನಾಲ್ಕು ದಿಕ್ಕಿನಲ್ಲಿ ನಿಂತು
ಓಂ ನಮಃ ಶಿವಾಯ ಓಂ ನಮಃ ಶಿವಾಯ ಓಂ ನಮಃ ಶಿವಾಯ
ಓಂ ನಮಃ ಶಿವಾಯಯೆಂದು ಆರ್ಭಟಿಸುತಿರ್ದೆನಯ್ಯ
ಇಂತು ಈ ಬೆಳಸು ಎನಗೆ ಸಾಧ್ಯವಾಯಿತ್ತು.
ಉಳಿದವರಿಗಸಾಧ್ಯಕಾಣಾ, ಕೂಡಲ ಚೆನ್ನಸಂಗಮದೇವ.*

* * ಸಂ. ಎಸ್. ಶಿವಣ್ಣ

ಸೋದೆಯ ಸದಾಶಿವರಾಯನ 'ನಂದೀಶ್ವರ ಅಷ್ಟಕಗಳು'

ಮತ್ತೇಭವಿಕ್ರೀಡಿತ :

ವರವನ್ನಿತ್ತು ಸಮಸ್ತ ಭಕ್ತಜನರಂ ಕಾರುಣ್ಯದಿಂ ಪಾಲಿಪೇ
ಶ್ವರ ನೀನೆಂದು ಸುರಾಸುರೇಂದ್ರ ಗಣಗಳ್ಕೊಂಡಾಡಲ್ಲೋ(ಕ)ದೊಳ್ ।
ಕರದೊಳ್ನೀ ನೆಲೆಗೊಂಡು ಷೋಡಶ ವಿಧಾನಗಳಿಂ ಪೂಜೆಯಂ
ಮರವೇನಿಲ್ಲದ ರೀತಿಯಿಂ ತೆಗೆದುಕೋ ಶ್ರೀಸೋದೆ ನಂದೀಶ್ವರಾ ॥೧॥
ನೆನೆವವರ್ಮಾನಸ ಪದ್ಮ ಭೃಂಗ ಗಿರಿಜಾವಕ್ತ್ರೇಂದು ಭಾನುಪ್ರಿಯಾ
ಮನುಜರ್ಗುತ್ತಮನಾದ ಕೃಷ್ಣನವತಾರಾರಣ್ಯ ದಾವಾನಲಾ ।
ಮುನಿಸದ್ಬರ್ಹಿ ಕುಲಾಂಬುದಾತ ದನುಜ ಧ್ವಾಂತೌಘ ತೀಕ್ಷ್ಣಾರ್ಕನೆ ॥
ಘನ ಭಕ್ತಿಯಂಎನಗಿತ್ತು ಪಾಲಿಸುವುದಾ ಶ್ರೀ ಸೋದೆ ನಂದೀಶ್ವರಾ ॥೨॥
ನಿಗಮ ವ್ಯಾಕರಣಾಗಮೋಕ್ತಿವೀ ಸತ್ಪ್ರಾಕ್ತಂತ್ರತರ್ಕಂಗಳಿಂ
ಭೃಗು ವಾಸಿಷ್ಠ ಪರಾಶರಂಗಳಿಗೆ ನಿನ್ನಾದ್ಯಂತ ಕಣ್ಗಾಣದು ।
ಜಗದೊಳ್ ವ್ಯಾಸ ಸುಭಾಷಿತಾಗಣಿತವಪ್ಪೈಶ್ವರ್ಯ ಉಳ್ಳಾತನೆ
ಮೃಗಹಸ್ತಾಂಬುಜ ರಕ್ಷಿಸೆನ್ನ ದಯದಿಂಶ್ರೀಸೋದೆ ನಂದೀಶ್ವರಾ ॥೩॥
ಗಜ ಚರ್ಮಾಂಬರನಾದರೂ ಕರದಿ ನೀ ಕಪಾಲಮಂ ಪಿಡ್ದರೂ
ಭುಜಗಾಲಂಕೃತನಾದರೂ ತನುವಿನೊಳ್ನೀ ಭಸ್ಮ ಪೂಸಿರ್ದರೂ ।
ಅಜಕಂಜಾಕ್ಷ ಸುರೇಶ ಯೋಗಿಗಳಿಗೂ ನೀ ದೇವನೆಂದುಂ ಸದಾ
ಸುಜನರ್ಪೇಳ್ವರು ಸರ್ವಲೋಕದೊಳಗೂ ಶ್ರೀಸೋದೆ ನಂದೀಶ್ವರಾ ॥೪॥
ಜಲವಾಕಾಶವು ತೇಜ ವಾಯುಃಧರೆ ಸತ್ಸೂರ್ಯಾಗ್ನಿ ಚಂದ್ರಂಗಳೂ
ಮಲೆ ಮಂದಾರ ಮಹೇಂದ್ರ ಸಾಗರ ನದಿ ಪ್ರಾಣಾಣುಕಾಷ್ಠಂಗಳೂ ।
ಪುಲಿ ನಾಗೇಂದ್ರ ಮೃಗೇಂದ್ರ ಪಕ್ಷಿ ಪಶುಗಳ್ದಿಗ್ದೇಶಕಾಲಂಗಳೂ
ಕಲೆ ಮುಂತಾದದು ನಿನ್ನ ರೂಪು ಸಲಹೈ ಶ್ರೀಸೋದೆ ನಂದೀಶ್ವರ ॥೫॥

* ಆಕರ : [ಓ] ೮೦೧/೭ (೨ನೇ ಗರಿ), ಬೃಹನ್ಮಠ, ಚಿತ್ರದುರ್ಗ.

ಮದನವ್ಯಾಘ್ರ ಮಖಾಂಕ ಕಾಂತಕ ಪುರಾಪಸ್ಮಾರ ಸಂಹಾರನೆ
ಇದಿರಾರೀ ಜಗದೊಳ್ಮಹೇಶ ರಜನೀನಾಥಾವತಂಸ ಪ್ರಭೂ |
ಕದನೋದ್ದಂಡ ಕರೀಂದ್ರವಕ್ತ್ರಪಿತನೆ ಮಂದಾಕಿನೀಕಾಂತನೆ
ಪದವಂ ಪೂಜಿಪಗೀವೆ ಮುಕ್ತಿಯನು ಶ್ರೀಸೋದೆ ನಂದೀಶ್ವರಾ ||೬||

ಪರವಾದಿಭ ಸಮೂಹಕಂಕುಶನೆ ನೀ ದುರ್ವಾದಿಕೋಕಾಬ್ಜನೆ
ದುರಿತವ್ಯೂಹ ಮಹೀಧರಕ್ಕೆ ಪವಿಯೀ ಮಾಯಾ ವಿನಿರ್ಮುಕ್ತನೆ |
ಪರಮಾಕಾಶದ ಮಧ್ಯದಲ್ಲಿ ತಿಳಿವಗಾನಂದವೀವಾತನೆ
ನಿರುತಂ ಎನ್ನನು ಕಾಯೊ ನೀನು ಕೃಪೆಯಿಂ ಶ್ರೀಸೋದೆ ನಂದೀಶ್ವರ ||೭||

ಭವವೆಂಬಬ್ಧಿಯ ಮಧ್ಯದಲ್ಲಿ ಬಿಡದೆ ಬಿದ್ದಿಹ ಮರ್ತ್ಯಸಂಗಳಂ
ಶಿವದೀಕ್ಷಾಮಯ ನಾವೆಯಿಂದ ದಡವಂ ಸದ್ಭಕ್ತಿಗೊಂಡೈದಿಸಿ |
ನವಸತ್ಕೀರ್ತಿ ವಿಲಾಸದಿಂ ಮೆರವನೆ ಮಂತ್ರೋಪ ಮಂತ್ರಾತ್ಮನೆ
ಭುವನೋತ್ತುಂಗ ಗುರು ಪ್ರಚಂಡ ಮಹಿಮಾ ಶ್ರೀಸೋದೆ ನಂದೀಶ್ವರಾ ||೮||

ಗುರು ನಂದೀಶ್ವರಃ ಸ್ತೋತ್ರಂ
ನಿರುತಂ ಪೇಳ್ವನಾವನು |
ಪರಮೋತ್ಕೃಷ್ಟ ಸಾಯುಜ್ಯಂ
ಕರದೊಳಿಪ್ಪುದಾತಗಂ|| ||೯||

೨

ಈಶಾಧೀಶ್ವರ ಚಂದ್ರಶೇಖರ ಮೃಗಿ ಸ್ಥಾಣೋಗ್ರ ಸರ್ವೇಶ್ವರ
ದ್ವೇಷ ಕ್ಲೇಶ ಹರಾಗ್ರಗಣ್ಯ ಗಿರೀಶಾ ಶ್ರೀಕಂಠ ಗಂಗಾಧರಾ |
ಶೇಷಾಭೂಷಿತ ಶೂಲಿ ಮಂಗಳ ಶಿವಾತ್ರ್ಯಗುಣ್ಯ ಗೌರೀಶ್ವರಾ
ಆಶಾಪಾಲಕ ಪಾಲಿಸೆನ್ನ ಗುರುವೆ ಸೋದಾಸು ನಂದೀಶ್ವರಾ ||೧||

ಭೂತೇಶಾಂಬರ ಕೇಶ ಶಂಭು ಮೃಡನೆ ಖಟ್ವಾಂಗಿ ಸರ್ವೇಶ್ವರಾ
ಖ್ಯಾತಾನಂತ ಮಹೇಶ ಸಾಂಬಶಿವನೆ ಸರ್ವಜ್ಞ ಚರ್ಮಾಂಬರ |
ದಾತಾದಾಂತ ದಯಾಕರಃ ಸ್ಮೃತಿ ನುತ ಪ್ರಾಣಾತ್ಮ ಕಾಂತಿಕರ
ಜಾತಾ ಶಂಕರ ಪಾಲಿಸೆನ್ನ ಗುರುವೆ ಸೋದಾಸು ನಂದೀಶ್ವರಾ ||೨||

ಕಾಮಾರಿ ಪ್ರಣವಾತ್ಮಕ ಪ್ರಭು ವಿಭೂ ಪ್ರಾಜ್ಞ ಪ್ರತಾಪಾಪರಾ
ಸೋಮಾರ್ಕಾಗ್ನಿ ವಿಲೋಚನಾಮೃತ ಧವಾ ಪ್ರಾಚೀನ ಪುಣ್ಯಾಕರಾ |
ರಾಮಾರ್ಚಾಕೃತ ಪಾದಪಂಕಜಯುಗಾ ತ್ರೈಮೂರ್ತಿವಾಂಛಾ ಪರಾ
ಪ್ರೇಮಾಧಿಕ್ಯನೆ ಪಾಲಿಸೆನ್ನ ಗುರುವೆ ಸೋದಾಸು ನಂದೀಶ್ವರಾ ||೩||

ದಕ್ಷಾರಿ ತ್ರಿಪುರಾಂಧಕಾಂಧಕ ರಿಪೋ ಕೈಲಾಸ ಸನ್ಮಂದಿರಾ
ಕುಕ್ಷಿಸ್ಥಾಖಿಲ ಲೋಕಪಾಲಕ ನರತಾಂ ಪ್ರಜ್ಞಾನ ಪಂಚಾಕ್ಷರಾ |
ನಕ್ಷತ್ರಾರಿ ಕರೋಟಿ ಹಾರಯುತನೀ ಓಂಕಾರ ಮಂತ್ರೋತ್ತರಾ
ರಕ್ಷಿಣ್ಯಾಕರ ಪಾಲಿಸೆನ್ನ ಗುರುವೆ ಸೋದಾಸು ನಂದೀಶ್ವರಾ ||೪||

ಏಕಾತ್ಮಾ ಭವರೋಗ ವೈದ್ಯಭವನೆ ಮಾದೇವ ರುದ್ರೇಶ್ವರಾ
ನೇಕಬ್ರಹ್ಮ ಮುಕುಂದ ಶಕ್ರಪಿತನೆ ಪ್ರಸಾದ ವಿಶ್ವಂಭರಾ |
ಸಾಕಾರ ಕೃತಿಶೂನ್ಯ ಭಸ್ಮ ಧವಳಾನಿರ್ದೇಶ ಪೂರ್ವಾಪರಾ
ಶೋಕಾನುತ್ತಮ ಪಾಲಿಸೆನ್ನ ಗುರುವೆ ಸೋದಾಸು ನಂದೀಶ್ವರಾ ||೫||

ಪಂಚಬ್ರಹ್ಮ ಸಹಸ್ರಲೋಚನ ಜಯಾ ಕ್ಷೇತ್ರಜ್ಞ ವಿಶ್ವೇಶ್ವರಾ
ಚಂಚದ್ದೇವ ನದೀತರಂಗಜನಕಾದೇಯನ್ಮನೋಗೋಚರಾ |
ಕಿಂಚಾನೇಕಮನೂಪದೇಶ ವರದಾ ಪ್ರಾಮಾಣ್ಯಲೋಕೋದರಾ
ಸಿಂಚಿತ್ಪಾಲಕ ಪಾಲಿಸೆನ್ನ ಗುರುವೆ ಸೋದಾಸು ನಂದೀಶ್ವರಾ ||೬||

ನಾದಬ್ರಹ್ಮ ಕಲಾಪ ಬಿಂದು ಸಗುಣ ಪ್ರಾಣಾಂಗ ಭೂತೇಶ್ವರಾ
ಕ್ರೋಧಾಮೋದ ಸಹಸ್ರನಾಮ ಪರಮ ಪ್ರತ್ಯಕ್ಷ ಧರ್ಮೋದ್ಧರಾ |
ಪಾದಾದ್ಯಂತ ಪವಿತ್ರ ಪಾವನ ಶುಭಾ ಸ್ವಾಂತಾತ್ಮದಾನೋತ್ತರಾ
ವೇದೋತ್ಸಾಹನೆ ಪಾಲಿಸೆನ್ನ ಗುರುವೆ ಸೋದಾಸು ನಂದೀಶ್ವರಾ ||೭||

ಗಾಯತ್ರೀ ಪತಿ ಸಾಂಬ ಸರ್ವಫಲದಾ ಶ್ರೀಪ್ವರ್ಧನಾರೀಶ್ವರಾ
ಪ್ರಾಯ ಸ್ವರ್ಣಗಿರೀಂದ್ರ ಧನ್ವ ವಿರುಪಾ ಶೃಂಗಾರ ಶೋಭಾಧರಾ |
ಛಾಯಾ ಮಾಯ ಸಹಾಯ ಶತ್ರು ಶಬರಾಜ್ಞಾನಪ್ರದಾತ್ರೀಕರಾ
ಕಾಯಾ ಪಾಲಕ ಪಾಲಿಸೆನ್ನ ದಯದಿಂ ಸೋದಾಸು ನಂದಿಶ್ವರಾ * ||೮||

—ಸಂ. ಎಸ್. ಉಮಾಪತಿ

**

* ಈ ಎರಡೂ ಅಷ್ಟಕಗಳನ್ನು ಚಿತ್ರದುರ್ಗದ ಶ್ರೀ ಮುರುಘಾಮಠದಲ್ಲಿ ದೊರೆತ ತಾಳೆ ಗರಿಕಟ್ಟು ನಂ. ೬೪೬, ಗರಿ ನಂ. ೫೦–೫೦B ಮತ್ತು ೫೦B–೫೦AB ದಿಂದ ಪ್ರತಿಮಾಡಲಾಗಿದೆ. ಸಹಾಯ ಮಾಡಿದ ಶ್ರೀ ಎಸ್. ಶಿವಣ್ಣನವರಿಗೆ ನನ್ನ ವಂದನೆಗಳು.

ಲೇಖನಸೂಚಿ*

(ಕರ್ನಾಟಕ ಭಾರತಿ ಸಂಪುಟ : ೨೪)

ಅಂಬೇಡಕರರು ಕಂಡಂತೆ–ಬೌದ್ಧಧರ್ಮ, ಮಾರ್ಕ್ಸ್‌ನ ವರ್ಗಹೋರಾಟ ಮತ್ತು ಸಾಮಾಜಿಕ ಸಮಾನತೆ.

–ಇಂಗ್ಲೀಷಮೂಲ : ಬಿ. ಕೃಷ್ಣಮೂರ್ತಿ;
–ಕನ್ನಡಕ್ಕೆ: ಡಾ. ಎ. ಮುರಿಗೆಪ್ಪ (೨೪-೩) ಪು ೫೦

ಅನುವಾದದ ರೂಪರೇಷೆ.

–ಡಾ.ಎಚ್.ಎಂ. ಮಹೇಶ್ವರಯ್ಯ, (೨೪-೪), ಪು. ೭೬

ಅವಧೇಶ್ವರಿ: ಒಂದು ವಿಮರ್ಶಾತ್ಮಕ ಅಧ್ಯಯನ.

–ಡಾ. ಶಾಲಿನಿ ರಘುನಾಥಭಟ್ (೨೪–೧) ಪು. ೯೮

ಎಜ್ರಾಫೌಂಡ್ ಅವರ ಎರಡು ಕವಿತೆಗಳು (ಕವನ)

–ಅನು: ಡಾ. ಬುದ್ದಣ್ಣ ಹಿಂಗಮಿರೆ (೨೪–೪), ಪು. ೧

ಎರಡು ಅಪ್ರಕಟಿತ ವಚನಗಳು (ಒರೆಗಲ್ಲು)

–ಎಸ್. ಶಿವಣ್ಣ (೨೪–೪), ಪು. ೧೬೪

ಒರೆಯೂವು ಮತ್ತು ವಾಳಿಯಾವು: ಅರ್ಥವಿವೇಚನೆ

–ಬಿ. ಆರ್. ಹೂಗಾರ (೨೪–೪), ಪು. ೯೨

ಔದ್ಯೋಗಿಕ ಕಾರ್ಮಿಕರಿಗಾಗಿ ಜನಸಂಖ್ಯಾ ಶಿಕ್ಷಣ

–ಡಾ. ಸಿ.ಎಸ್. ಹಳ್ಯಾಳ (೨೪–೪), ಪು. ೭೧

ಕದಂಬ ಕೀರ್ತಿದೇವರಸನ ಮುಗದೂರ ವೀರಗಲ್ಲು ಶಾಸನ

–ಡಾ. ಶ್ರೀನಿವಾಸ ಪಾಡಿಗಾರ (೨೪–೧) ಪು. ೧೧೮

ಕಪ್ಪೊಡಲಿನ ಕೂಗು (ಗ್ರಂಥಾವಲೋಕನ)

–ಸರ್ವಜಿತ (೨೪–೧) ಪು. ೧೫೯

ಕರ್ನಾಟಕ-ಭಾರತಿಯ ಲೇಖನ ಸೂಚಿ. (ಸಂಪುಟ ೧೧ ರಿಂದ ೨೦ ರವರೆಗೆ)

– ಶ್ರೀಮತಿ ಹನುಮಾಕ್ಷಿ ಗೋಗಿ (೨೪–೪). ಪು. ೧೩೯

---

* ಇದು, 'ಕರ್ನಾಟಕ ಭಾರತಿ'ಯ ೨೪ ನೆಯ ಸಂಪುಟದ ಸಂಚಿಕೆ ೧ ರಿಂದ ೪ ರಲ್ಲಿ ಪ್ರಕಟವಾದ ಒಟ್ಟು ಲೇಖನಗಳ ಸೂಚಿ. ಲೇಖನಗಳನ್ನು ಅಕಾರಾದಿಯಾಗಿ ಜೋಡಿಸಿ, ಮುಂದೆ ಲೇಖಕರ ಹೆಸರು, ಸಂಪುಟ, ಸಂಚಿಕೆ ಮತ್ತು ಪುಟ ಸಂಖ್ಯೆಯನ್ನು ಕ್ರಮವಾಗಿ ಕೊಡಲಾಗಿದೆ.

ಸಂಗ್ರಹ : —ವೀರಣ್ಣ ರಾಜೂರ
—ಬಿ.ಆರ್. ಹಿರೇಮಠ

* *

ಗ್ರಂಥಾವಲೋಕನ

'ಪುನರಾವಲೋಕನ' (ಲೇಖನಗಳು) : ಎಚ್. ವಿ. ನಾಗೇಶ್
ಪ್ರಕಾಶನ : ಸುಜಾತಾ ಪ್ರಕಾಶನ, ಧಾರವಾಡ-೪, ಪುಟ : ೯೦, ಬೆಲೆ : ೧೫ ರೂ.
ಮೊದಲ ಮುದ್ರಣ : ೧೯೯೧

ಗ್ರಾಮವ್ಯಾಸಂಗ, ಭಾರತದಲ್ಲಿ ರೈತ ಹೋರಾಟಗಳು, ಭಾರತೀಯ ಗ್ರಾಮ, ಗ್ರಾಮಾಂತರ, ಪ್ರಬಂಧ ಪ್ರಪಂಚ-ಹೀಗೆ ಹಲವಾರು ಕೃತಿಗಳನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅರ್ಪಿಸಿದ ಪ್ರೊ. ಎಚ್. ವ್ಹಿ. ನಾಗೇಶ್ ಅವರು ಇದೀಗ "ಪುನರಾವಲೋಕನ" ಗ್ರಂಥವನ್ನು ನೀಡಿದ್ದಾರೆ. ಪ್ರಸ್ತುತ ಗ್ರಂಥದಲ್ಲಿ ಒಟ್ಟು ಎಂಟು ಲೇಖನಗಳನ್ನು ಅಳವಡಿಸಲಾಗಿದೆ.

"ಮಿರ್ಜಿ ಅಣ್ಣಾರಾಯರ ಕಥೆಗಳು : ವಿನ್ಯಾಸ ಮತ್ತು ಕಾಳಜಿ" ಎಂಬ ಪ್ರಾರಂಭದ ಲೇಖನದಲ್ಲಿ ಗ್ರಾಮೀಣ ಜನತೆಯ ಬದುಕು, ದೇಶಪ್ರೇಮ, ಧರ್ಮ ಹಾಗೂ ಆಧ್ಯಾತ್ಮ, ಪ್ರೇಮ-ಪ್ರಣಯ, ಶೋಷಣೆ ಮತ್ತು ಕ್ರೌರ್ಯ ಹಾಗೂ ಜಾನಪದೀಯ ಅಂಶ, ಇಂತಹ ವಿಷಯಗಳನ್ನು ಒಳಗೊಂಡ ಮಿರ್ಜಿ ಅಣ್ಣಾರಾಯರ ಕಥೆಗಳನ್ನು ಆಯ್ಕೆಮಾಡಿಕೊಂಡು ಅವುಗಳ ಸಂಕ್ಷಿಪ್ತ ಪರಿಚಯ ನೀಡುವದರ ಜೊತೆಗೆ ತಮ್ಮವೇ ಆದ ಹಲ-ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

'ಎನ್ಕೆ ಅವರ ಮೂರು ತಲೆಮಾರು-ಪರಿವರ್ತನೆಗಳ ಕಥೆ' ಎಂಬ ಎರಡನೆಯ ಲೇಖನ, 'ಕರ್ಮವೀರ'ದಲ್ಲಿ ಪ್ರಕಟಗೊಂಡ 'ಎನ್ಕೆ' ಅವರ 'ಮೂರು ತಲೆಮಾರು' ಧಾರಾವಾಹಿಯನ್ನು ಕುರಿತು ಹೇಳುತ್ತ ಸಮುದಾಯ ಜೀವನದಲ್ಲಿ ಸಂಪ್ರದಾಯ, ಮೂಢನಂಬಿಕೆಗಳು ತಲೆಮಾರಿನಿಂದ ತಲೆಮಾರಿಗೆ ಹೇಗೆ ಪರಿವರ್ತನೆಯಾಗುತ್ತ ಹೋಗುತ್ತವೆ ಎಂಬುದನ್ನು ವಿವರಿಸುತ್ತಾರೆ.

'ಡಾ. ಹಂಪನಾ ಅವರ ವಿ. ಕೃ. ಗೋಕಾಕ' ಎಂಬ ಲೇಖನದಲ್ಲಿ ಗೋಕಾಕರ 'ಭಾರತಸಿಂಧುರಶ್ಮಿ' ಕೃತಿಗಿಂತ 'ಸಮುದ್ರ ಗೀತೆಗಳು' ಕೃತಿಗೆ ಇದ್ದ ಡಾ. ಹಂಪನಾ ಅವರ ಅಂತರಂಗದ ಅಭಿಪ್ರಾಯವನ್ನು ಪ್ರೊ. ನಾಗೇಶ ಅವರು ಈ ಗ್ರಂಥದಲ್ಲಿ ಪ್ರಕಟಿಸಿ ಬಹಿರಂಗಗೊಳಿಸಿದ್ದಾರೆ. ಹಂಪನಾ ಅವರು ವ್ಯಕ್ತಪಡಿಸಿದ ಗೋಕಾಕರ ಸಾಹಿತ್ಯಿಕ ವ್ಯಕ್ತಿತ್ವವನ್ನು ಹಾಗೂ ಅವರು ನಾಟಕ ಕ್ಷೇತ್ರಕ್ಕೆ ಸಲ್ಲಿಸಿದ ಹಲವು ನಾಟಕಗಳು

ಪ್ರೇಕ್ಷಕರ ಗಮನವನ್ನು ಸೆಳೆಯದೇ ಇದ್ದುದನ್ನು ಪ್ರೊ. ನಾಗೇಶ ಅವರು ಸಹೃದಯರ ಗಮನಕ್ಕೆ ತಂದಿದ್ದಾರೆ.

'ಮಕ್ಕಳಿಗಾಗಿ ಸಮಾಜ ವಿಜ್ಞಾನ' ಲೇಖನದಲ್ಲಿ 'ಹಳ್ಳಿಯ ಜೀವನದ ಮೇಲೆ ಬರೆದ ಗ್ರಂಥಗಳಿಗಿಂತ ಹಲ್ಲಿ ಶಕುನದ ಮೇಲೆ ಬರೆದ ಗ್ರಂಥಗಳು ಕನ್ನಡ ಸಾಹಿತ್ಯದಲ್ಲಿ ಸಾಕಷ್ಟಿವೆ' ಎಂದು ಹೇಳುವದರೊಂದಿಗೆ ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಸಮಾಜ ವಿಜ್ಞಾನ ಸಾಹಿತ್ಯ ಅತೀ ಬರಡು ಎಂದು ಹೇಳುತ್ತಾರೆ. ಶಿವರಾಮ ಕಾರಂತರ ಬಾಲ ಪ್ರಪಂಚ ದಲ್ಲಿಯೂ, ನಿರಂಜನರ "ಜ್ಞಾನ ಗಂಗೋತ್ರಿ"ಯಲ್ಲಿಯೂ ಹಾಗೂ "ಮಕ್ಕಳ ಪುಸ್ತಕ" 'ಭಾರತ-ಭಾರತಿ' ಗ್ರಂಥಗಳಲ್ಲಿಯೂ ಪ್ರಕಟಗೊಂಡ ಮಕ್ಕಳ ಸಮಾಜ ವಿಜ್ಞಾನವನ್ನು ಕುರಿತಾದ ಹಲವಾರು ಲೇಖನಗಳನ್ನು ಪರಿಚಯಿಸಿದ್ದಾರೆ. ಈ ವಿಷಯದಲ್ಲಿ ಬೆಂಗ ಳೂರಿನ "ಇಂಡಿಯಾ ಬುಕ್ ಹೌಸ್"ನವರು ಮಾಡಿದ ಸೇವೆಯನ್ನು ಸ್ಮರಿಸುತ್ತ, ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿದ 'ಕಲಿಯುವ ಮಕ್ಕಳಿಗೆ-ಕಲಿಯುವ ಪುಸ್ತಕ' ಗ್ರಂಥದಲ್ಲಿಯ ಲೇಖನಗಳ ಉಪಯುಕ್ತತೆಯನ್ನು ಕುರಿತು ಹೇಳಿದ್ದಾರೆ ಕೊನೆಯಲ್ಲಿ ಯಾವ-ಯಾವ ಮೂಲದಿಂದ ಮಕ್ಕಳಲ್ಲಿ ಸಮಾಜವಿಜ್ಞಾನದ ಬಗ್ಗೆ ಆಸಕ್ತಿ, ಅಭಿರುಚಿ ಬೆಳೆಸಲು ಸಹಾಯವಾಡಬಹುದು ಎಂಬ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.

"ಯಾವ ಕಾರ್ಯವನ್ನೂ ಮಾಡದೇ ಪರರ ಗಳಿಕೆಯನ್ನೇ ಬಳಸಿಕೊಳ್ಳುತ್ತ ಬದುಕಿರುವವರ ಬಾಳುವೆ ಕೀಳು" ಎಂದು ಸಾರಿದ ಹರ್ಡೇಕರ ಮಂಜಪ್ಪನವರ ಪ್ರಾರಂಭಿಕ ಜೀವನವನ್ನು ಚಿತ್ರಿಸುವದರೊಂದಿಗೆ ಅವರ ಸಾಹಿತ್ಯವನ್ನು ಕುರಿತಾಗಿ "ಧನುರ್ಧಾರಿ", 'ಉದ್ಯೋಗ', 'ಶರಣಸಂದೇಶ' ಪತ್ರಿಕೆಗಳ ಮುಖಾಂತರ ಸಮಾಜ ಸುಧಾರಕ ಸಾಹಿತ್ಯವನ್ನು ಪ್ರಚುರಪಡಿಸಿದ್ದನ್ನು ನೆನೆಯುತ್ತ, ಅಸ್ಪೃಶ್ಯರ ಸಮಸ್ಯೆಯ ಕುರಿತಾದ 'ಪತಿತೋದ್ಧಾರ', 'ಆದಿಜನಸುಧಾರಣೆ' ಗ್ರಂಥಗಳನ್ನು ಕುರಿತು ಹೇಳಿ ದ್ದಾರೆ. ಮಂಜಪ್ಪನವರ ಇತರ ಕೃತಿಗಳಾದ "ಸ್ವಕರ್ತವ್ಯ ಸಿದ್ಧಾಂತ", 'ಸ್ತ್ರೀ ನೀತಿ ಸಂಗ್ರಹ', 'ದಾಂಪತ್ಯಧರ್ಮ', 'ದಾಂಪತ್ಯ ಜೀವನ', 'ಜಾತ್ರೆಗಳ ಸುಧಾರಣೆ'- ಹೀಗೆ ಹಲವಾರು ಪ್ರಮುಖ ಕೃತಿಗಳನ್ನು ಆಧರಿಸಿದ ಮಂಜಪ್ಪನವರ ಸಾಹಿತ್ಯ ಕೃಷಿಯ ಪರಿಚಯದ ಲೇಖನ 'ಹರ್ಡೇಕರ ಮಂಜಪ್ಪನವರ ವೈಚಾರಿಕ ಸಾಹಿತ್ಯ' ಎಂಬುದು.

ಮುಂದೆ "ಅಂತರ್ ಶಿಸ್ತೀಯ ಅಧ್ಯಯನಗಳು" ಎಂಬ ಲೇಖನದಲ್ಲಿ ಡಾ. ಚಿದಾ ನಂದ ಮೂರ್ತಿಯವರ "ಪಗರಣ" ಕೃತಿಯನ್ನು ಅನುಲಕ್ಷಿಸಿ ವ್ಯಕ್ತಿಯ ಅಥವಾ ಸಮಾಜದ ಅಂತರ್‌ಶಿಸ್ತಿಗೆ ಕಾರಣವಾದ ಜಾನಪದ ಅಂಶಗಳನ್ನು ಒಳಗೊಂಡ ಹಲವಾರು ಲೇಖನಗಳನ್ನು ಕುರಿತು ದೀರ್ಘವಾಗಿ ಚರ್ಚಿಸಿದ್ದಾರೆ.

ಉದಾಹರಣೆಗೆ ಜಾನಪದ ಶಾಸ್ತ್ರ-ಸಮೂಹ ಸ್ಮರಣೆಯ ಕತೆಗಳು ಇತ್ಯಾದಿ, ಜಾನಪದ ಶಾಸ್ತ್ರದ ಅಂತರ್‌ಶಿಸ್ತೀಯ ಅಧ್ಯಯನ ಎಂಬ ಲೇಖನಗಳು, ಜಾನಪದ

ಸಾಹಿತ್ಯದಲ್ಲಿ ಬರುವ ಕಲಾಪ್ರಕಾರಗಳ ಚಿತ್ರಣ, ವರ್ಗಹೋರಾಟ, ದುರಂತ ಗೀತೆಗಳು, ಗುಲಾಮಗಿರಿ, ಹೀಗೆ ಕೆಳವರ್ಗದ ಜನತೆಯ ಚಿತ್ರಣವನ್ನು ಬಿಂಬಿಸುವ ಡಾ. ಮೂರ್ತಿಯವರ ಹಲವಾರು ಲೇಖನಗಳನ್ನು ಕುರಿತು ವಿವರಿಸಿದ್ದಾರೆ. ಒಟ್ಟಾರೆ ಸಾಹಿತ್ಯದಿಂದ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ವ್ಯಕ್ತಿಗತವಾಗಿ ಅಂತರ್‌ಶಿಸ್ತೀಯ ದೃಷ್ಟಿ ಬೆಳೆಸಿಕೊಂಡವರಿಗೆ 'ತ್ರಿ-ಡಿ' ಚಿತ್ರನೋಡಿದ ಅನುಭವವಾಗುತ್ತದೆ ಎಂಬ ಅಭಿಪ್ರಾಯವನ್ನು ಪ್ರೊ. ನಾಗೇಶ ಅವರು ವ್ಯಕ್ತಪಡಿಸಿದ್ದಾರೆ.

'ಪ್ರಬಂಧ ಪ್ರಪಂಚ-ನಾಲ್ಕು ಪೀಠಿಕೆಗಳು' ಎಂಬ ಲೇಖನದಲ್ಲಿ ಪ್ರಬಂಧ ಸಾಹಿತ್ಯದ ಹುಟ್ಟು ಹಾಗೂ ಬೆಳವಣಿಗೆಯನ್ನು ಕುರಿತು 'ಗೋಕಾಕರ ಮುನ್ನುಡಿಯೊಂದಿಗೆ ರಂಗಪ್ರವೇಶ ಮಾಡಿದ ಪ್ರಬಂಧ ಸಾಹಿತ್ಯ, ಗೊರೂರರ ಮುನ್ನುಡಿಯಲ್ಲಿ ಪ್ರಬುದ್ಧತೆಯನ್ನು ಪಡೆಯಿತು' ಎಂದು ಹೇಳುತ್ತಾರೆ. ಬೇರೆ ಬೇರೆ ಪ್ರಬಂಧಕಾರರನ್ನು ಹೆಸರಿಸುವದರೊಂದಿಗೆ ಈ ಲೇಖನದಲ್ಲಿ ನಾಲ್ಕು ಭಾಗಗಳಿದ್ದು, ಮೊದಲನೆಯ ಭಾಗವನ್ನು ಪ್ರೊ. ನಾಗೇಶ ಅವರು ಬರೆದರೆ, ಇನ್ನುಳಿದ ಮೂರು ಭಾಗಗಳನ್ನು ಪ್ರೊ. ಶ್ಯಾಮಸುಂದರ ಬಿದರಕುಂದಿ, ಹಾಗೂ ಪ್ರೊ. ನಾಗೇಶ ಅವರು ಸೇರಿ ಬರೆದಿದ್ದಾರೆ.

ಇನ್ನು ಕೊನೆಯ ಲೇಖನದಲ್ಲಿ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದು ಕನ್ನಡ ಸಾಹಿತ್ಯಕ್ಷೇತ್ರಕ್ಕೆ, ಕನ್ನಡನಾಡಿಗೆ ಕೀರ್ತಿ ತಂದ ಡಾ. ವಿ. ಕೃ. ಗೋಕಾಕರ 'ಸುಳುವು-ಹೊಳವು' ಎಂಬ ಪ್ರಬಂಧ ಸಂಕಲನದಲ್ಲಿ ಬರುವ ಹಲವಾರು ಪ್ರಬಂಧಗಳ ಬಗ್ಗೆ ಅಂದರೆ "ಕೋಗಿಲ", "ಜೀವನದಲ್ಲಿ ಆನಂದ", "ದೈವ", ಸ್ತ್ರೀರೂಪ-೧-ರೂಪದ ಬಗ್ಗೆ ಸಂಯಮ; ಸ್ತ್ರೀರೂಪ-೨-ರೂಪದ ಶಕ್ತಿ; ಸಾಹಿತ್ಯದಲ್ಲಿ ಸೌಂದರ್ಯ; ಚಲುವಿನ ಪರಂಪರೆ; ದೃಷ್ಟಿದೋಷ; ಸೌಂದರ್ಯವೇ ಸತ್ಯ-ಹೀಗೆ ಹಲವಾರು ಪ್ರಬಂಧಗಳ ಬಗ್ಗೆ ವಿವರಣೆ ನೀಡಿದ್ದಾರೆ. ಮತ್ತೊಂದು ಭಾಗದಲ್ಲಿ ಎಂಟು ಓಲೆಗಳೂ, ಹನ್ನೆರಡು ಪ್ರಬಂಧಗಳೂ ಇರುವ "ಜೀವನ ಪಾಠಗಳು" ಎಂಬ ಗ್ರಂಥವನ್ನು ಕುರಿತು "ವನಮಾಲಿ" ಅಂಕಿತದಿಂದ ಗೋಕಾಕರು "ಲಲಿತೆ"ಯನ್ನು ಕುರಿತಾಗಿ ಬರೆದ ಹಲವಾರು ಕೌಟುಂಬಿಕ ಪತ್ರಗಳನ್ನು ಓದುಗರಿಗೆ ಪರಿಚಯಿಸಿದ್ದಾರೆ.

ಈ ರೀತಿ ಒಟ್ಟು ಎಂಟು ಲೇಖನಗಳನ್ನು ಸೇರಿಸಿ ಪ್ರಕಟಿಸಿದ ಗ್ರಂಥಕ್ಕೆ "ಪುನರಾವಲೋಕನ" ಎಂದು ಹೆಸರಿಸುವದರ ಮೂಲಕ ಬೇರೆ ಬೇರೆ ಲೇಖಕರ ವ್ಯಕ್ತಿಗತ ಹಾಗೂ ಸಾಹಿತ್ಯಿಕ ಅಂಶಗಳನ್ನು ಪ್ರೊ. ಎಚ್. ವ್ಹಿ. ನಾಗೇಶ್ ಅವರು ಮೆಲುಕು ಹಾಕುವದರೊಂದಿಗೆ ಕನ್ನಡ ಸಾಹಿತ್ಯಕ್ಕೂ, ಸಹೃದಯರಿಗೂ ಆಯಾ ಲೇಖಕರನ್ನು ಪರಿಚಯ ಮಾಡಿಕೊಟ್ಟಿದ್ದಾರೆ.

—ಜೆ. ಎ. ಹಡಗಲಿ

**

ಪ್ರಸ್ತುತ

‘ಕರ್ನಾಟಕ ಭಾರತಿ’, ಈ ಸಂಚಿಕೆಯ ಮೂಲಕ ತನ್ನ ಸಾರ್ಥಕವಾದ ೨೪ ವರ್ಷಗಳನ್ನು ಪೂರ್ಣಗೊಳಿಸಿ, ೨೫ ನೆಯ ವರ್ಷದ ‘ಬೆಳ್ಳಿಹಬ್ಬ’ದ ಹೊಸ್ತಿಲನ್ನು ಪ್ರವೇಶಿಸುತ್ತಲಿದೆ. ಈ ದೀರ್ಘ ಅವಧಿಯಲ್ಲಿ “ಭಾರತಿ” ತನ್ನದೇ ಆದ ವಿಶಿಷ್ಟ ಹೆಜ್ಜೆಗಳನ್ನು ಇಡುತ್ತ, ಹೊಸ ಉಪಕ್ರಮಗಳನ್ನು ಅನಾವರಣಗೊಳಿಸುತ್ತ ಬಂದಿದೆ. ಇದು ವಿದ್ವತ್‌ಪತ್ರಿಕೆಯೊಂದರ ನಿರಂತರ ಬದುಕಿನ ಸಫಲತೆಯ ಪ್ರತೀಕವೆನಿಸಿದೆ. ಈ “ರಜತವರ್ಷ”ದ ಸವಿನೆನಪಿಗಾಗಿ ‘ಕರ್ನಾಟಕ ಭಾರತಿ’ಯ ವಿಶೇಷ ಸಂಪುಟವನ್ನು ಹೊರತರಲು ನಿರ್ಧರಿಸಲಾಗಿದೆ. ವಿಶ್ವವಿದ್ಯಾಲಯದ ಘನತೆ, ಗೌರವ, ವಿದ್ವತ್ ಪರಂಪರೆಗಳಿಗೆ ತಕ್ಕಂತೆ ಲೇಖನಗಳನ್ನು ನೀಡಿ ಸಹಕರಿಸಿದ ವಿದ್ವಾಂಸರಿಗೆ ಕೃತಜ್ಞತೆ ಸಲ್ಲಿಸುತ್ತೇವೆ. ವಿದ್ವಾಂಸರು ಹಾಗೂ ವಾಚಕರು ಈ ಮೊದಲಿನಂತೆಯೇ ‘ಕರ್ನಾಟಕ ಭಾರತಿ’ಯ ಮೇಲಿನ ತಮ್ಮ ಅಭಿಮಾನ, ಸಹಕಾರಗಳನ್ನು ಮುಂದುವರೆಸುವಂತಾಗಲಿ.

ಇದು “ಕರ್ನಾಟಕ ಭಾರತಿ”ಯ ೨೪ ನೆಯ ಸಂಪುಟದ ಕೊನೆಯ ಸಂಚಿಕೆ. “ಸರಿಯಾದ ಸಮಯಕ್ಕೆ ಸರಿಯಾದ ಕೆಲಸ”ವೆಂಬ ಶೈಕ್ಷಣಿಕ ಶಿಸ್ತಿನ ಅಡಿಯಲ್ಲಿ ಈ ವರ್ಷದುದ್ದಕ್ಕೂ ನಿಗದಿತ ಸಮಯದಲ್ಲಿಯೇ “ಭಾರತಿ”ಯ ಎಲ್ಲ ಸಂಚಿಕೆಗಳು ಹೊರ ಬಂದಿವೆ. ಈ ಒಂದು ವರ್ಷದ ಅವಧಿಯಲ್ಲಿಯೇ ‘ಡಾ. ವಿ. ಕೃ. ಗೋಕಾಕ ವಿಶೇಷಾಂಕ’, ‘ಡಾ. ಬಿ. ಆರ್. ಅಂಬೇಡಕರ ವಿಶೇಷಾಂಕ’ಗಳನ್ನು ಹೊರತಂದ ಶ್ರೇಯಸ್ಸು “ಕರ್ನಾಟಕ ಭಾರತಿ”ಯದಾಗಿದೆ. ಪ್ರತಿಯೊಂದು ಸಂಪುಟದ ನಾಲ್ಕನೆಯ ಸಂಚಿಕೆಯಲ್ಲಿ ಆ ಸಂಪುಟದ ನಾಲ್ಕೂ ಸಂಚಿಕೆಗಳ “ಲೇಖನಸೂಚಿ” ಸೇರಿಸುವ ಹೊಸ ಉಪಕ್ರಮವನ್ನು ಈ ವರ್ಷದ ಸಂಪುಟದ ಮೂಲಕ ಪ್ರಾರಂಭಿಸಲಾಗಿದೆ. ಹೀಗಾಗಿ ಈ ಸಂಚಿಕೆಯಲ್ಲಿ “ಭಾರತಿ”ಯ ೨೪ ನೆಯ ಸಂಪುಟದ ನಾಲ್ಕೂ ಸಂಚಿಕೆಗಳ “ಲೇಖನ ಸೂಚಿ”ಯನ್ನು ಜೋಡಿಸಲಾಗಿದೆ.

ಶ್ರದ್ಧಾಂಜಲಿ :

ಡಾ. ವಿ. ಕೃ. ಗೋಕಾಕ

ಡಾ. ವಿನಾಯಕ ಕೃಷ್ಣ ಗೋಕಾಕರು ಆಧುನಿಕ ಕನ್ನಡಸಾಹಿತ್ಯದ ಮಹಾಚೇತನ. “ಜ್ಞಾನಪೀಠ ಪ್ರಶಸ್ತಿ”ಯನ್ನು ಪಡೆದ ಗೋಕಾಕರನ್ನು ಇತ್ತೀಚೆಗೆ ಕರ್ನಾಟಕ ವಿಶ್ವವಿದ್ಯಾಲಯ ಸನ್ಮಾನಿಸಿದ ಭವ್ಯ ಚಾರಿತ್ರಿಕ ಸಮಾರಂಭದ ನೆನಪು ಇನ್ನೂ ಹಚ್ಚಹಸಿರಾಗಿರುವಾಗಲೇ ಅವರು (೨೮-೪-೯೨ ರಂದು ಮುಂಬಯಿಯಲ್ಲಿ) ನಿಧನ

ಹೊಂದಿರುವುದು ಕನ್ನಡ ಸಾಹಿತ್ಯಕ್ಕೆ, ಕರ್ನಾಟಕಕ್ಕೆ ದೊಡ್ಡ ನಷ್ಟವನ್ನುಂಟು ಮಾಡಿದೆ. ಭವ್ಯವ್ಯಕ್ತಿತ್ವದ ವಿನಾಯಕರು ಕವಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ, ದಾರ್ಶನಿಕ, ಶಿಕ್ಷಣತಜ್ಞ, ಭಾಷಾಶಾಸ್ತ್ರಜ್ಞ ಹಾಗೂ ವಾಗ್ಮಿಗಳಾಗಿ ನಾಡು, ನುಡಿಗಳಿಗೆ ಸಲ್ಲಿಸಿದ ಸೇವೆ ಗಣನೀಯವಾದುದಾಗಿದೆ. ನವ್ಯಕಾವ್ಯದ ಆದ್ಯರಾದ ಗೋಕಾಕರು ತಮ್ಮ ಮೌಲಿಕವಾದ ಸಾಹಿತ್ಯ ಕೃತಿಗಳ ಮೂಲಕ ಹೊಸಗನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಕನ್ನಡ-ಕನ್ನಡಿಗ-ಕರ್ನಾಟಕದ ಕೀರ್ತಿಯನ್ನು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳಗಿಸಿದ ಗೋಕಾಕರ ನಿಧನದಿಂದ ಕನ್ನಡ ಭಾಷೆ, ಸಾಹಿತ್ಯಗಳು ಬಡವಾಗಿವೆ.

ಪ್ರಾಧ್ಯಾಪಕ, ಪ್ರಾಚಾರ್ಯ, ನಿರ್ದೇಶಕ, ಅಧ್ಯಕ್ಷ, ಕುಲಪತಿ-ಹೀಗೆ ನಾಡಿನ, ರಾಷ್ಟ್ರದ ಉನ್ನತ ಹುದ್ದೆಗಳನ್ನು ಅಲಂಕರಿಸಿದ ಗೋಕಾಕರು ದಕ್ಷ ಆಡಳಿತಗಾರರಾಗಿ ಮನಮುಟ್ಟಿ ಕಾರ್ಯಮಾಡಿದ್ದಾರೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಪೆಸಿಫಿಕ್ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಐ.ಬಿ.ಎಚ್. ಪ್ರಶಸ್ತಿ, ಭಾರತೀಯ ವಿದ್ಯಾಭವನದ ರಾಜಾಜಿ ಪ್ರಶಸ್ತಿ-ಹೀಗೆ ಗೋಕಾಕರಿಗೆ ಹಲವಾರು ಪ್ರಶಸ್ತಿ, ಗೌರವ ಸಂದಿವೆ. ಇವು ಗೋಕಾಕರ ಸಾಹಿತ್ಯಸೇವೆ, ಕಾರ್ಯನಿಷ್ಠೆಗಳಿಗೆ ಪ್ರಾಪ್ತವಾದ ಪುರಸ್ಕಾರಗಳಾಗಿವೆ. ಗೋಕಾಕರಿಗೆ ಸಂದ ದೇಶದ ಅತ್ಯುನ್ನತ ಪ್ರಶಸ್ತಿಯಾದ 'ಜ್ಞಾನಪೀಠ ಪ್ರಶಸ್ತಿ', ಈ ಎಲ್ಲ ಪ್ರಶಸ್ತಿಗಳಿಗೂ ಕಿರೀಟಪ್ರಾಯವಾದುದಾಗಿದೆ. ಇದು ಕನ್ನಡಕ್ಕೆ, ಕರ್ನಾಟಕಕ್ಕೆ ದೊರೆತ ಗೌರವ, ಮನ್ನಣೆಯಾಗಿದೆ. 'ಇಲ್ಲೇ ಇರು ಅಲ್ಲಿ ಹೋಗಿ ಮಲ್ಲಿಗೆಯನು ತರುವೆ' ಎಂದು ಹೇಳಿದ ಗೋಕಾಕರ ಅಗಲಿಕೆ ಕನ್ನಡಿಗರಿಗೆ ಅಪಾರ ದುಃಖವನ್ನುಂಟುಮಾಡಿದೆ. 'ಕರ್ನಾಟಕ ಭಾರತಿ', ಗೋಕಾಕರ ಈ ನಿಧನ ದುಃಖದಲ್ಲಿ ಪಾಲುಗೊಂಡು, ದಿವಂಗತರ ಆತ್ಮಕ್ಕೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ಶ್ರೀ ಪಾ. ವೆಂ. ಆಚಾರ್ಯ

ದಿನಾಂಕ ೫-೫-೯೨ ರಂದು ಕನ್ನಡ ಸಾರಸ್ವತ ಪ್ರಪಂಚ ಕಳೆದುಕೊಂಡ ಮತ್ತೊಂದು ಹಿರಿಯ ಚೇತನ ಶ್ರೀ ಪಾ. ವೆಂ. ಆಚಾರ್ಯ ಅವರು. ಖ್ಯಾತ ಪತ್ರಿಕಾ ಸಂಪಾದಕ, ಭಾಷಾತಜ್ಞ, ಶ್ರೇಷ್ಠ ಚಿಂತಕ, ಹಾಸ್ಯಬರಹಗಾರರಾಗಿ ಆಚಾರ್ಯರು ಕನ್ನಡಕ್ಕೆ ಸಲ್ಲಿಸಿದ ಸೇವೆ ಅನುಪಮವಾದುದು. "ಗೊಯಂಕಾ ಪ್ರಶಸ್ತಿ" ಅವರ ಅಪೂರ್ವ ಪ್ರತಿಭೆ-ಪರಿಶ್ರಮಗಳಿಗೆ ಸಂದ ಪ್ರತಿಷ್ಠಿತ ಪುರಸ್ಕಾರಗಳಲ್ಲಿ ಒಂದಾಗಿದೆ. ಶ್ರೀಯುತರ ಆತ್ಮಕ್ಕೆ 'ಭಾರತಿ' ಚಿರಶಾಂತಿಯನ್ನು ಕೋರುತ್ತದೆ.

-ಸಂಪಾದಕರು

ಲೇಖಕರ ವಿಳಾಸ

ಡಾ. ಬಿ. ಬಿ. ಹಿಂಗಮಿರೆ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಜಿ ಎ. ಶಿವಲಿಂಗಯ್ಯ
ನಿವೃತ್ತ ಕನ್ನಡ ಅಧ್ಯಾಪಕರು
ಮರಿಮಲ್ಲಪ್ಪನವರ ಜ್ಯೂನಿಯರ ಕಾಲೇಜು, ಮೈಸೂರು

ಡಾ. ಬಿ. ಎಸ್. ಶೇಠೆ
ಕನ್ನಡ ಅಧ್ಯಾಪಕರು
ನೂತನ ಕಲಾ ಮಹಾವಿದ್ಯಾಲಯ, ವಿಜಾಪುರ

ಶ್ರೀ ಎಚ್. ವಿ. ನಾಗೇಶ್
ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ
ಜೆ. ಎಸ್. ಎಸ್. ಕಾಲೇಜು, ಧಾರವಾಡ

ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲ, ಧಾರವಾಡ

ಶ್ರೀ ಆರ್. ವಾಯ್. ಕುಲಕರ್ಣಿ
ಇಂಗ್ಲೀಷ ಅಧ್ಯಾಪಕರು,
ಕಲಾ ವಾಣಿಜ್ಯ ಮಹಾವಿದ್ಯಾಲಯ ಕಲಘಟಗಿ

ಶ್ರೀ ಚೆನ್ನಬಸವ ಹಿರೇಮಠ
ಕನ್ನಡ ಅಧ್ಯಾಪಕರು
ಎಲ್. ವಿ. ಡಿ. ಕಾಲೇಜು, ರಾಯಚೂರು

ಡಾ. ಪಿ. ಎಸ್. ಹಳ್ಯಾಳ
ಪ್ರವಾಚಕರು, ಮನೋವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಎಚ್. ಎಂ. ಮಹೇಶ್ವರಯ್ಯ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಬಿ. ಆರ್. ಹೂಗಾರ
ಸಂಶೋಧನ ಸಹಾಯಕರು
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ರು. ಮ. ಷಡಕ್ಷರಯ್ಯ
ಕಾರ್ಯನಿರ್ವಾಹಕ ನಿರ್ದೇಶಕರು
ಕನ್ನಡ ಸಂಶೋಧನ ಸಂಸ್ಥೆ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಎಸ್. ಕೆ. ಕಲ್ಲೋಳಿಕರ
ಅಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಎಂ. ಎಸ್. ಯಾದವ
ಸಂಶೋಧನ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀಮತಿ ದೀಪಾ ಗೌಡರ
ಸಂಶೋಧನ ವಿದ್ಯಾರ್ಥಿನಿ, ವಿದೇಶಿ ಭಾಷಾ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಅ. ಸುಂದರ
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಬಿ. ಪಿ. ಪಾಟೀಲ
ಹಿರಿಯ ಅಧ್ಯಾಪಕರು,
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀಮತಿ ಹನುಮಾಕ್ಷಿ ಗೋಗಿ
ಸಹಾಯಕ ನಿಬಂಧಕರು
ಸಹಕಾರಿ ಸಂಘಗಳ ಕಾರ್ಯಾಲಯ
ಹಾವೇರಿ (ಜಿಲ್ಲೆ : ಧಾರವಾಡ)

ಶ್ರೀ ಎಸ್. ಶಿವಣ್ಣ
ಸಂಪಾದಕರು, ಹಸ್ತಪ್ರತಿ ವಿಭಾಗ
ಕನ್ನಡ ಅಧ್ಯಯನಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಶ್ರೀ ಎಸ್. ಉಮಾಪತಿ
ನಿವೃತ್ತ ಕನ್ನಡ ಅಧ್ಯಾಪಕರು
ನಂ ಸಿ-೨, ವಿದ್ಯಾನಗರ, ದಾವಣಗೆರೆ

ಡಾ. ವೀರಣ್ಣ ರಾಜೂರ
ರೀಡರ್, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ

ಡಾ. ಬಿ. ಆರ್. ಹಿರೇಮಠ
ರೀಡರ್, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಜೆ. ಎ. ಹಡಗಲಿ
ಕನ್ನಡ ಅಧ್ಯಾಪಕರು,
ಜೆ. ಎಸ್. ಎಸ್. ಕಾಲೇಜು, ಧಾರವಾಡ